ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನಕಾರಾತ್ಮಕ, ಜಗಳಗಂಟ, ಒರಟು ಸ್ವಭಾವದ ಮತ್ತು ಟೀಕಾತ್ಮಕ ವ್ಯಕ್ತಿಗಳಿಗೆ ನೀವು ಎಷ್ಟು ಕಡಿಮೆ ಪ್ರತಿಕ್ರಿಯೆ ನೀಡುವುದನ್ನು ರೂಢಿಸಿಕೊಳ್ಳುತ್ತೀರೋ, ಅಷ್ಟು ತಿಳಿ, ಶಾಂತ ಮನಸ್ಸನ್ನು ಹೊಂದಿರುತ್ತೀರಿ. ಅಂಥ ವ್ಯಕ್ತಿಗಳ ಜತೆ ಆಡುವ ಒಂದು ಮಾತು ನಿಮ್ಮ ಮನಸ್ಸಿನ ನೆಮ್ಮದಿಯನ್ನು ಹಾಳುಗೆಡವೀತು.

ವಕ್ರತುಂಡೋಕ್ತಿ

ಪ್ರೀತಿಯಲ್ಲಿ ಸುಖವಿದೆ ಎಂದು ಯಾರೇ ಹೇಳಿದರೂ ನಂಬಬೇಕು. ಆದರೆ ಪ್ರೀತಿ ಒಬ್ಬಳು ಹುಡುಗಿಯ ಹೆಸರಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

ಟಿಎಸ್‌ಆರ್, ಮೊಹರೆ ಹಣಮಂತರಾಯ ಪ್ರಶಸ್ತಿ ಪ್ರಕಟ

ಬೆಂಗಳೂರು: ಟಿ.ಎಸ್.ರಾಮಚಂದ್ರರಾವ್ (ಟಿಎಸ್‌ಆರ್) ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿದೆ. ಟಿಎಸ್‌ಆರ್ ಪ್ರಶಸ್ತಿಗೆ ಶಿವಾಜಿ ಗಣೇಶನ್ (2019), ಎಸ್.ಆರ್.ಮಣೂರ (2020), ಡಾ. ಆರ್.ಪೂರ್ಣಿಮಾ (2021), ಡಾ.ಪದ್ಮರಾಜ ದಂಡಾವತಿ (2022), ಡಾ.ಸರಜೂ ಕಾಟ್ಕರ್ (2023) ಭಾಜನ ರಾಗಿದ್ದಾರೆ. ಮೊಹರೆ ಹಣಮಂತರಾಯ ಪ್ರಶಸ್ತಿಗೆ ರಾಜೀವ್ ಕಿದಿಯೂರ (2019), ಇಂದೂಧರ ಹೊನ್ನಾಪುರ (2020), ಎನ್. ಮಂಜುನಾಥ(2021), ಚಂದ್ರಶೇಖರ್ ಪಾಲೆತ್ತಾಡಿ (2022), ಶಿವಲಿಂಗಪ್ಪ ದೊಡ್ಡಮನಿ (2023) ಭಾಜನರಾಗಿದ್ದಾರೆ.

ಆರ್.ಪೂರ್ಣಿಮಾ ಎಸ್.ಆರ್.ಮಣೂರ ಪದ್ಮರಾಜ ದಂಡಾವತಿ

ವಿಶೇಷ ಪುಟ 5

ಮಾಲ್ಡೀವ್ಸ್ ದೇಶದ ನಾಟಿಕಾ ಎಂಬ ನಡುಗಡ್ಡೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಾಡಿನ 13 ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನ್ಯಾಯಾಧೀಶರ ಮುಂದೆ ಶಾಸಕ ಮುನಿರತ್ನ ಅಳಲು

ಹದಿನಾಲ್ಕು ದಿನಗಳ ಕಾಲ ನ್ಯಾಯಾಂಗ ಬಂಧನ

ಎಸ್‌ಐಟಿ ರಚನೆಗೆ ಆದೇಶ

ಬೆಂಗಳೂರು: ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಪ್ರಕರಣಗಳ ಸಮಗ್ರ ತನಿಖೆಗೆ ರಾಜ್ಯ ಸರಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ ಆದೇಶ ಹೊರಡಿಸಿದೆ.

ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ಅವರು ಎಸ್‌ಐಟಿ ತಂಡದ ಮುಖ್ಯಸ್ಥರಾಗಿದ್ದು, ಕೇಂದ್ರ ವಲಯದ ಐಜಿಪಿ ಲಾಬುರಾಮ್, ರೈಲ್ವೆ ಎಸ್‌ಪಿಗಳಾದ ಸೌಮ್ಯಲತಾ, ಸಿ.ಎ.ಸೈಮನ್ ತನಿಖಾ ತಂಡದಲ್ಲಿದ್ದಾರೆ.

→ 4

ರಾಜೀನಾಮೆ ನೀಡುತ್ತೇನೆ: ಮುನಿರತ್ನ

ವಿಚಾರಣೆ ವೇಳೆ ಕೆಲ ಕಾಲ ಭಾವುಕರಾದ ಮುನಿರತ್ನ ಅವರು 'ಸರಕಾರ ತಮಗೆ ಕಿರುಕುಳ ನೀಡುತ್ತಿದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವೆ' ಎಂದು ಅಲವತ್ತುಕೊಂಡಿದ್ದಾರೆ. 'ಎರಡು ನಿಮಿಷ ಮಾತನಾಡುತ್ತೇನೆ ಸಾರ್' ಎಂದು ಮಾತು ಆರಂಭಿಸಿದ ಮುನಿರತ್ನ ಅವರು, 'ತಮ್ಮನ್ನು ಜೈಲಿನಲ್ಲಿರಿಸಲು ವ್ಯವಸ್ಥಿತವಾದ ಷಡ್ಯಂತ್ರ ರೂಪಿಸಲಾಗಿದೆ. ಲೋಕಸಭಾ ಚುನಾವಣೆಯ ನಂತರ ಈ ಸಂಚು ಶುರುವಾಗಿದೆ. ಜತೆಗಿದ್ದವರನ್ನೇ ಬಳಸಿಕೊಂಡು ಒಂದರ ಹಿಂದೊಂದು ದೂರು ಕೊಡಿಸಲಾಗುತ್ತಿದೆ. ಐದು ವರ್ಷಗಳ ಹಿಂದಿನದ್ದು ಎಂದು ಅತ್ಯಾಚಾರದ ದೂರು ಕೊಡಿಸಿದ್ದಾರೆ. ಆಕೆ ಮೊದಲೇ ದೂರು ಕೊಡಬಹುದಿತ್ತಲ್ಲವೇ? ಜನಪ್ರತಿನಿಧಿಯಾದ ನನಗೆ ಜನರ ಬಳಿ ಹೇಗೆ ನಡೆದುಕೊಳ್ಳಬೇಕು ಎಂದು ಗೊತ್ತಿದೆ. ಬೇಕಿದ್ದರೆ ನಾನು ನ್ಯಾಯಾಲಯದಲ್ಲೇ ನನ್ನ ರಾಜೀನಾಮೆ ಕೊಡುತ್ತೇನೆ. ಆದರೆ ಈ ರೀತಿಯ ಹಿಂಸೆ ತಡೆದುಕೊಳ್ಳಲು ಸಾಧ್ಯವಿಲ್ಲ' ಎಂದು ನ್ಯಾಯಾಧೀಶರೆದುರು ಅಳಲು ತೋಡಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು 'ನೀವು ಎಲ್ಲಿ ಕೊಡಬೇಕೋ ಅಲ್ಲಿ ರಾಜೀನಾಮೆ ಕೊಡಿ' ಎಂದರು.

ಟಿಬಿ ಡ್ಯಾಂಗೆ ಇಂದು ಸಿಎಂ, ಡಿಸಿಎಂ ಬಾಗಿನ ಸಮರ್ಪಣೆ

ಕೊಪ್ಪಳ: ತುಂಗಭದ್ರಾ ಆಣೆಕಟ್ಟು ಮತ್ತೆ ಭರ್ತಿಯಾಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬೆಳಗ್ಗೆ 11.15ಕ್ಕೆ ಬಾಗಿನ ಅರ್ಪಿಸಲಿದ್ದಾರೆ. ಕಳೆದ ತಿಂಗಳು ಬಾಗಿನ ಅರ್ಪಿಸುವ ಕಾರ್ಯಕ್ರಮ ನಡೆಯ ಬೇಕಿತ್ತು. ಆಗ ಕ್ರಸ್ಟ್‌ಗೇಟ್ ಕೊಚ್ಚಿಹೋಗಿದ್ದರಿಂದ ಆಗಿರಲಿಲ್ಲ. ಉತ್ತಮ ಮಳೆಯಾಗಿ ಮತ್ತೆ ಜಲಾಶಯ ತುಂಬಿದ್ದರಿಂದ ಈಗ ಸಿಎಂ ಹಾಗೂ ಡಿಸಿಎಂ ಬಾಗಿನ ಅರ್ಪಿಸಲಿದ್ದಾರೆ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವ ರಾಜ ತಂಗಡಗಿ ತಿಳಿಸಿದ್ದಾರೆ.

ನಾಯ್ಡುಗೆ ಸನ್ಮಾನ

ಹಲವು ದಿನಗಳ ಹಿಂದೆ 19ನೇ ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿದ್ದರಿಂದ ದೊಡ್ಡ ಪ್ರಮಾಣದಲ್ಲಿ ನೀರು ಪೋಲಾಗುವುದನ್ನು ಕನ್ನಯ್ಯ ನಾಯ್ಡು ಹಾಗೂ ಅವರ ತಂಡ ತಡೆದಿತ್ತು. ಅವರಿಗೆ ಕೊಪ್ಪಳ ತಾಲೂಕಿನ ಮುನಿರಾಬಾದ್‌ನ ಸರಕಾರಿ ಪ್ರೌಢಶಾಲಾ ಮೈದಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲಾಗುತ್ತಿದೆ.

ಅಮರ್ ಪ್ರೀತ್ ವಾಯುಸೇನೆ ಮುಖ್ಯಸ್ಥ

ದೆಹಲಿ: ವಾಯು ಸೇನೆಯ ಮುಖ್ಯಸ್ಥರಾಗಿ ಏರ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ನೇಮಕಗೊಂಡಿದ್ದಾರೆ. ಹಾಲಿ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಅವರು ಸೆ. 30ರಂದು ನಿವೃತ್ತರಾಗಲಿದ್ದು, ಅವರಿಂದ ಸಿಂಗ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ದೆಹಲಿ ಸಿಎಂ ಆಗಿ ಆತಿಶಿ ಪ್ರಮಾಣ

ದೆಹಲಿ: ಎಎಪಿ ನಾಯಕಿ ಆತಿಶಿ ಮರ್ಲೇನಾ ಅವರು ದೆಹಲಿಯ ನೂತನ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣವಚನ ಸ್ವೀಕರಿಸಿದರು. ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಪ್ರಮಾಣವಚನ ಬೋಧಿಸಿದರು. ಇದೇ ವೇಳೆ ಸೌರಭ್ ಭಾರದ್ವಾಜ್, ಗೋಪಾಲ್ ರಾಯ್, ಇಮ್ರಾನ್ ಹುಸ್ಸೇನ್, ಕೈಲಾಶ್ ಗೆಹ್ಲೋತ್ ಮತ್ತು ಮುಖೇಶ್ ಅಹ್ಲಾವತ್ ಅವರೂ ಸಚಿವರಾಗಿ ಪ್ರಮಾಣ ಮಾಡಿದರು.

ನೇಪಾಳ ಯುವತಿಯ ಬರ್ಬರ ಹತ್ಯೆ

ಬೆಂಗಳೂರು: ಬೆಂಗಳೂರಿನ ವಯಾಲಿ ಕಾವಲ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಬರ್ಬರ ಹತ್ಯೆ ನಡೆದಿದೆ. ನೇಪಾಳ ಮೂಲದ ಮಹಾಲಕ್ಷ್ಮೀ(29) ಕೊಲೆಯಾದ ಮಹಿಳೆ. ಮಹಿಳೆಯನ್ನು ಕೊಂದು ನಂತರ 30 ತುಂಡುಗಳಾಗಿ ಕತ್ತರಿಸಿ ಬಳಿಕ ಫ್ರಿಡ್ಜ್ ನಲ್ಲಿಟ್ಟು ಆರೋಪಿ ಪರಾರಿಯಾಗಿದ್ದಾನೆ. 19 ದಿನಗಳ ಹಿಂದೆ ಕೊಲೆ ನಡೆದಿದೆ ಎಂದು ಶಂಕಿಸಲಾಗಿದೆ. ಡಾಗ್ ಸ್ಕ್ವಾಡ್, ಬೆರಳಚ್ಚು, ಎಫ್‌ಎಸ್‌ಎಲ್ ತಂಡ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಿದೆ.

ಅನಂತ ನಮನ 65
ವಿಶಾಲ ಮನಸ್ಕ ಪ್ರಜಾಪ್ರಭುತ್ವ ಪ್ರತಿಪಾದಕ, ರಾಜಕೀಯ ವಿಶಾರದ,
ಅಪ್ಪಟ ದೇಶಪ್ರೇಮಿ, ಚಾಣಾಕ್ಷ ವ್ಯಾಖ್ಯಾನಕಾರ,
ನಮ್ಮ ನಿಮ್ಮೆಲ್ಲರ ನೆಚ್ಚಿನ ನಾಯಕ
ಶ್ರೀ ಎಚ್ ಎನ್ ಅನಂತಕುಮಾರ್
(22 Sept.1959 - 12 Nov. 2018)



ನಮ್ಮ ಹೃದಯಪೂರ್ವಕ ನಮನಗಳು
ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್
ಶ್ರೀಮತಿ ಐಶ್ವರ್ಯಾ ಅನಂತಕುಮಾರ | ನಂದಕುಮಾರ
ಕುಮಾರಿ ವಿಜೇತಾ ಅನಂತಕುಮಾರ | ವಿಭವ ಸಮೂಹ ಸಂಸ್ಥೆಗಳು
ಅನಂತಕುಮಾರ ಪ್ರತಿಷ್ಠಾನ, ಬೆಂಗಳೂರು
www.akp.org.in www.adamyachetana.org

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಜೀವಾಳ
ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ
ಕರ್ನಾಟಕ ಸರ್ಕಾರ

ಸ್ವಾತಂತ್ರ್ಯ - ಸಮಾನತೆ - ಭ್ರಾತೃತ್ವ

29,85,921 ಜನರು | 59,71,842 ಕೈಗಳು | 2,500 ಕಿ. ಮೀ. | 1 ಉದ್ದೇಶ
ಪ್ರಜಾಪ್ರಭುತ್ವವನ್ನು ಬೆಂಬಲಿಸುವ ಏಕೈಕ ಧ್ಯೇಯದೊಂದಿಗೆ 2,500 ಕಿ. ಮೀ. ಉದ್ದದ ಮಾನವ ಸರಪಳಿ ರಚಿಸಿದ
ಕರ್ನಾಟಕ ಜನತೆಗೆ ಧನ್ಯವಾದ
ಅಂದ ಹಾಗೆ ಇದು
ಹೊಸ ವಿಶ್ವದಾಖಲೆ!

ಮಾನವ ಸರಪಳಿ ರೂಪಿಸುವ ಮೊದಲು, ಸನ್ಮಾನ್ಯ ವಿಧಾನ ಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಜೊತೆಗೆ ರಾಯಭಾರಿಗಳಾದ ಪದ್ಮಶ್ರೀ ಹರೇಕಳ ಹಾಜಬ್ಬ ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವಾದ ಸೆಪ್ಟೆಂಬರ್ 15, 2024 ರಂದು ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಸಹಸ್ರಾರು ಜನರೊಂದಿಗೆ ಸಂವಿಧಾನ ಪೀಠಿಕೆ ವಾಚನ.
ಸಮಾಜ ಕಲ್ಯಾಣ ಇಲಾಖೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ನಗರಾಭಿವೃದ್ಧಿ ಇಲಾಖೆ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಉನ್ನತ ಶಿಕ್ಷಣ ಇಲಾಖೆ | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | # ಸಂವಿಧಾನ_ಮರುಪಡೆಯುವ | ರೋಟರಿ ಇಂಟರ್‌ನ್ಯಾಷನಲ್ | ಕೆನರಾ ಬ್ಯಾಂಕ್ | ಸಿವಿಲ್ ಸೊಸೈಟಿ / ಎನ್‌ಜಿಒ ಗಳು ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳು
ಸಂವಿಧಾನವನ್ನು ಪಾಲಿಸುವುದು, ಅದರ ಆಶಯಗಳನ್ನು ಗೌರವಿಸುವುದು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
-ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ
केनरा बैंक Canara Bank | LIDKAR | MSIL | #RECLAIM CONSTITUTION
ConstitutionGok
https://www.democracydaykarnataka.in
9482 300 400

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಶ್ರೀಮತಿ. ರತ್ನ, ಕೋಂ ಶ್ರೀ. ಚಿಕ್ಕೇಗೌಡ ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ. ಎ.ಎನ್ ರಾಜಶೇಖರ್ ರವರು ಶ್ರೀ. ಎಸ್. ಕೃಷ್ಣ ರವರ ಹೆಸರಿಗೆ ಬರೆದುಕೊಟ್ಟಿರುವ ದಸ್ತಾವೇಜು ನಂ. 8898/1994-95, 1ನೇ ಪುಸ್ತಕ, ಪುಟ 1099, ಸಂಪುಟ 91-33 ರಂತೆ ಬೆಂಗಳೂರು ಕೆಂಗೇರಿ, ಉಪ-ನೋಂದಣಿಗಳ ಕಛೇರಿಯಲ್ಲಿ ನೋಂದಣಿಯಾಗಿರುವ ದಿನಾಂಕ 3/12/1994 ರ ಮೂಲ ಅಸಲಿ ಕ್ರಯ ಪತ್ರವನ್ನು ಕಳೆದು ಕೊಂಡಿರುತ್ತಾರೆ. ಯಾರಿಗಾದರೂ ತಿಳಿಸಿರುವ ಷೆಡ್ಯೂಲ್ ಸ್ವತ್ತಿನ ಮೇಲೆ ಕ್ಲೇಮುಗಳು ಅಥವಾ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ನಾಗದೇವನಹಳ್ಳಿ, ಇಲ್ಲಿ ಬರುವ ಮನೆ ಸ್ವತ್ತಿನ ಖಾತ ನಂ. 86, ಮನೆ ಪಟ್ಟಿ ನಂ.106 ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ : 30 ಅಡಿ, ಮತ್ತು ಇದರ ಸಂಪೂರ್ಣ ಚಕ್ಕುಬಂದಿ ಈ ಕೆಳಕಂಡಂತಿರುವುದು:
ಪೂರ್ವಕ್ಕೆ : ಸೈಟ್ ನಂ. 119; **ಪಶ್ಚಿಮಕ್ಕೆ** : 34ಅಡಿ ರಸ್ತೆ;
ಉತ್ತರಕ್ಕೆ : ಸೈಟ್ ನಂ. 107; **ದಕ್ಷಿಣಕ್ಕೆ** : ಸೈಟ್ ನಂ. 105.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್ ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019, ಮೊ: 9341261700.

PUBLIC NOTICE

This to inform the General Public that, my clients **Mr. Masud Mohammed Arsiwala** S/o Mohammed Arsiwala and his wife Mrs. Amina M Arsiwala, both being the residents of Flat No.311, BBMP Katha No.457/22/125/1/F-No.A-311, Block -A in Third Floor of Aspen Woods Apartment situate at Dodda Kammanahalli Village, Begur Hobli, Bangalore South Taluk have misplaced and lost two original sale deeds viz., **1)** Original sale deed dated 26.06.2013 registered jointly in the name of Mr.Bharath Kumar and his wife Mrs.Jayashree Shetty and registered as Document No.BGR-1-02740-2013-14 of Book I, recorded on CD No.BGRD216 in the office of Sub-Registrar, Jayanagar (Begur),Bengaluru **2)** Original Sale deed dated 05.08.2021 executed by one Mr.Bharath Kumar and his wife Mrs.Jayashree Shetty in favour of the aforesaid clients and the same has been registered as Document No.JPN-1-02523-2021-22 of Book I, stored in CD No.JPND1170 in the office of the Sub-Registrar, Jayanagar (J.P.Nagar), Bengaluru and both the aforesaid sale deeds are in relation to Residential Flat No. 311, BBMP Katha No.457/22/125/1/F-No. A-311, Block -A in the Third Floor of Aspen Woods Apartment, situate at Dodda Kammanahalli Village, Begur Hobli, Bangalore South Taluk. Since the said two original documents could not be traced in spite of the best efforts of the aforesaid clients, they recently lodged a police complaint through online portal **E-Lost** in this regard. Hence, the general public through this public notice are hereby requested that if the aforesaid original documents are found or traced by anybody, the same shall be handed over to my clients at the abovementioned address or contact them on their mobile Number.9886178664. It is further informed to the General public that except my clients mentioned above, no other person/s is/are authorized to deal with said documents in any manner and an appropriate legal action/proceeding shall be initiated against any such person/s in case of any misuse of the aforesaid original documents.

Sd/-
A.T. Manohar, Advocate,
No. 55, 'SAI SADANA', 13th 'A' Cross, Sarakki Gate, 1st Phase, J.P.Nagar, Bangalore-78.
Mobile No: 9902936363
Date 21.09.2024

ಯುವತಿಯ ಬರ್ಬರ ಹತ್ಯೆ

ಕೊಲೆ ನಂತರ 30 ತುಂಡು ಮಾಡಿ ಫ್ರಿಡ್ಜ್‌ನಲ್ಲಿಟ್ಟಿದ್ದ ಆರೋಪಿ | ದೆಹಲಿ ಶ್ರದ್ಧಾ ಕೇಸ್ ಮಾದರಿಯ ಭಯಾನಕ ಘಟನೆ | ಮನೆ ಬೀಗ ಹೊಡೆದು ಒಳಗೆ ಹೋದಾಗ ಶವದಲ್ಲಿ ಹುಳುಗಳು ಪತ್ತೆ

ಬೆಂಗಳೂರು: ಕಳೆದೆರಡು ವರ್ಷಗಳ ಹಿಂದೆ ದೆಹಲಿಯಲ್ಲಿ ನಡೆದ ಶ್ರದ್ಧಾ ವಾಕರ್ ಎಂಬ ಯುವತಿಯ ಭಯಾನಕ ಹತ್ಯೆ ಮಾದರಿಯಲ್ಲೆ ಬೆಂಗಳೂರಿನಲ್ಲಿ ಮಹಿಳೆಯೋರ್ವರ ಬರ್ಬರ ಹತ್ಯೆ ನಡೆದಿದೆ.

ನೇಪಾಳ ಮೂಲದ ಮಹಾಲಕ್ಷ್ಮೀ (29) ಕೊಲೆಯಾದ ಮಹಿಳೆ. ಕೆಲ ವರ್ಷಗಳಿಂದ ನೆಲಮಂಗಲದಲ್ಲಿದ್ದರು ಎನ್ನಲಾಗಿದೆ. ವೈಯಾಲಿಕಾವಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮುನ್ನೇಶ್ವರ ಬ್ಲಾಕ್‌ನಲ್ಲಿ ಘಟನೆ ನಡೆದಿದೆ. ಮಹಿಳೆಯನ್ನು ಕೊಂದು ನಂತರ ಮೃತದೇಹ 30 ತುಂಡುಗಳಾಗಿ ಕತ್ತರಿಸಿ ಬಳಿಕ ಫ್ರಿಡ್ಜ್‌ನಲ್ಲಿಟ್ಟು ಆರೋಪಿ ಪರಾರಿಯಾಗಿದ್ದಾನೆ. ಹತ್ಯೆ ಬಳಿಕ ಮಾಂಸದ ಗುಡ್ಡೆ ಮಾಡಿ ತರಕಾರಿ ಜೋಡಿಸುವಂತೆ ಮೃತದೇಹದ ಭಾಗಗಳನ್ನು ಫ್ರಿಡ್ಜ್‌ನಲ್ಲಿ ಇರಿಸಿ ಆರೋಪಿ ಪರಾರಿಯಾಗಿದ್ದಾನೆ. 19 ದಿನಗಳ ಹಿಂದೆ ಕೊಲೆ ನಡೆದಿದೆ ಎಂದು ಶಂಕಿಸಲಾಗಿದೆ. ಡಾಗ್ ಸ್ಕ್ವಾಡ್, ಬೆರಳಚ್ಚು ತಜ್ಞರು ಹಾಗೂ ಎಫ್‌ಎಸ್‌ಎಲ್ ತಂಡ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಿದೆ.

ಗಂಡನನ್ನುಬಿಟ್ಟು ಒಬ್ಬಂಟಿ ವಾಸ: ಮಹಾಲಕ್ಷ್ಮೀ ಕರ್ನಾಟಕದಲ್ಲಿ ನೆಲೆಸಿದ್ದರು. ಗಂಡನಿಂದ ದೂರವಾಗಿದ್ದ ಮಹಾಲಕ್ಷ್ಮೀ ಒಬ್ಬಳೇ ಕಳೆದ ಮೂರು ತಿಂಗಳಿಂದ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಆದರೆ ಪಿಕಪ್ ಡ್ರಾಪ್ ಎಂದು ಒಬ್ಬ ಯುವಕ ಆಕೆಯನ್ನು ಕರೆದೊಯ್ಯುತ್ತಿದ್ದ. ಹೀಗಾಗಿ ಆತನೇ ಕೊಲೆ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. 10 ರಿಂದ 15 ದಿನಗಳ ಹಿಂದೆ ಕೊಲೆ ನಡೆದಿದೆ. ಯುವಕನೋರ್ವ ಆಕೆಯನ್ನು ಪಿಕ್ ಅಪ್ ಮತ್ತು ಡ್ರಾಪ್ ಮಾಡುತ್ತಿದ್ದ. ಆತನೇ ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿದೆ. 30ಕ್ಕೂ ಹೆಚ್ಚು ತುಂಡುಗಳನ್ನಾಗಿ ದೇಹವನ್ನು ಕತ್ತರಿಸಿ ಬಳಿಕ ಫ್ರಿಡ್ಜ್‌ನಲ್ಲಿ ಇಟ್ಟು ಕೊಲೆಗಾರ ಪರಾರಿಯಾಗಿದ್ದಾನೆ. ಪೊಲೀಸರು ಸ್ಥಳೀಯರಿಂದ ಮಾಹಿತಿ ಕಲೆ ಹಾಕಿದ್ದು, ಅಕ್ಕ ಪಕ್ಕದ ಮನೆಗಳ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ನಡೆಸಿದ್ದಾರೆ.

ಫ್ರಿಡ್ಜ್‌ನಿಂದ ಹೊರಬಂದ ಹುಳಗಳು: ಮಹಾಲಕ್ಷ್ಮೀ ನೆಲಮಂಗಲದಲ್ಲಿರುವ ಪತಿಯಿಂದ ದೂರಾಗಿ ಒಂಟಿಯಾಗಿ ವೈಯಾಲಿಕಾವಲ್‌ನಲ್ಲಿ ವಾಸವಿದ್ದಳು. ಈ ದಂಪತಿಗೆ ನಾಲ್ಕು ವರ್ಷದ ಮಗು ಕೂಡ ಇದೆ. ಹಲವು ದಿನದಿಂದ ಕರೆ ಮಾಡಿದ್ದರು ಪತ್ನಿ ಮಹಾಲಕ್ಷ್ಮೀ ಸ್ವೀಕರಿಸುತ್ತಿರಲಿಲ್ಲ. ಶನಿವಾರ ಪತಿ ಬಂದು ಬಾಗಿಲು ತೆರೆದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಬಾಗಿಲಯ ತರೆದಾಗ ಫ್ರಿಡ್ಜ್‌ನಿಂದ ಹುಳಗಳು ಹೊರಬರುತ್ತಿತ್ತು. ಈ ಕೃತ್ಯದ ಕುರಿತು ಮಾಹಿತಿ ನೀಡಿದ ಸ್ಥಳೀಯರು, ಸ್ವಲ್ಪ ಸಮಯದ ಕಾಲ ಮಹಾಲಕ್ಷ್ಮೀ ಅಣ್ಣ ಜತೆಗಿದ್ದರು. ಮಹಿಳೆಯ ಬಗೆಗೆ ಯಾವುದೇ ರೀತಿಯ ಮಾಹಿತಿ ಗೊತ್ತಿಲ್ಲ. ನಮ್ಮ ಬಳಿ ಮಾತನಾಡುವಾಗ ಕನ್ನಡದಲ್ಲೇ ಮಾತನಾಡುತ್ತಿದ್ದರು. ಸ್ಥಳೀಯ ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ 5 ಭೀಕರ ಹತ್ಯೆಗಳು

1 ರೇಣುಕಾಸ್ವಾಮಿ ಹತ್ಯೆ ಪ್ರಕರಣ: ಚಿತ್ರದುರ್ಗದ 33 ವರ್ಷದ ಎಸ್. ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ನಟ ದರ್ಶನ್ ಅವರ ಗೆಳತಿ ಸೇರಿದಂತೆ 17 ಆರೋಪಿಗಳು ಜೈಲು ವಾಸ ಅನುಭವಿಸುತ್ತಿದ್ದಾರೆ. ರೇಣುಕಾಸ್ವಾಮಿಗೆ ಚಿತ್ರಹಿಂಸೆ ನೀಡಿ ದೇಹವನ್ನು ಚರಂಡಿಗೆ ಎಸೆಯಲಾಗಿತ್ತು.

2 ನೇಹಾ ಹಿರೇಮಠ ಕೊಲೆ ಪ್ರಕರಣ: ಏಪ್ರಿಲ್ 18, 2024 ರಂದು ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಬಿವಿಬಿ ಕ್ಯಾಂಪಸ್‌ನಲ್ಲಿ 24 ವರ್ಷದ ಎಂಸಿಎ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಬರ್ಬರ ಹತ್ಯೆ ನಡೆದಿತ್ತು. ಆಕೆಯ ದೇಹದಲ್ಲಿ 10 ಚಾಕು ಇರಿತದ ಗಾಯಗಳಿದ್ದವು.

3 ಬಿಜೆಪಿ ಕಾರ್ಯಕರ್ತನ ಪುತ್ರ ಸೇರಿ ನಾಲ್ವರ ಹತ್ಯೆ: ಗದಗ ಪಟ್ಟಣದಲ್ಲಿ ಏಪ್ರಿಲ್ 19ರಂದು ಮುಂಜಾನೆ ಬಿಜೆಪಿ ಕಾರ್ಯಕರ್ತನ ಪುತ್ರ ಸೇರಿ ನಾಲ್ವರ ಹತ್ಯೆ ನಡೆದಿತ್ತು. ಗದಗದ ಚನ್ನಮ್ಮ ವೃತ್ತದ ಬಳಿಯ ದಾಸರ ಓಣಿಯಲ್ಲಿ ಮನೆಯ ಮೊದಲ ಮಹಡಿಯ ಕಿಟಕಿ ಒಂದನ್ನು ಒಡೆದು ಮನೆಗೆ ನುಗ್ಗಿದ ದುಷ್ಕರ್ಮಿಗಳು ನಾಲ್ವರನ್ನು ಹಲವು ಬಾರಿ ಚಾಕುವಿನಿಂದ ಇರಿದು ಕೊಂದಿದ್ದರು. ಕೊಪ್ಪಳದ ಜಿಲ್ಲೆಯ ಭಾಗ್ಯ ನಗರದ ಗದಗ ಬೆಟಗೇರಿ ನಗರಸಭೆ ಉಪಾಧ್ಯಕ್ಷೆ (ಬಿಜೆಪಿ) ಸುನಂದಾ ಬಾಕಳೆ ಅವರ ಪುತ್ರ ಕಾರ್ತಿಕ ಬಾಕಳೆ, ಪರುಶೂರಾಮ ಜಗನ್ನಾಥ ಸಾ ಹಾದಿಮನಿ, ಅವರ ಪತ್ನಿ ಲಕ್ಷ್ಮಿ ಬಾಯಿ ಪರಶುರಾಮ ಹಾದಿಮನಿ, ಪುತ್ರಿ ಆಕಾಂಕ್ಷಾ ಪರಶುರಾಮ ಮೃತಪಟ್ಟವರು.

4 ಅಂಜಲಿ ಕೊಲೆ ಪ್ರಕರಣ: 2024 ರ ಮೇ 15 ರಂದು ಧಾರವಾಡದಲ್ಲಿ ಗಿರೀಶ್ ಸಾವಂತ್ ಅಲಿಯಾಸ್ ವಿಶ್ವ ಎಂಬ 21 ವರ್ಷದ ಆಟೋ ರಿಕ್ಷಾ ಚಾಲಕನು ತನ್ನ ಮಾಜಿ ಸಹಪಾಠಿ ಅಂಜಲಿ ಅಂಬಿಕಗೇರ್ ಅವರನ್ನು ಮಾರಣಾಂತಿಕವಾಗಿ ಕೊಲೆ ಮಾಡಿದ್ದನು. ಕುತ್ತಿಗೆ, ಹೊಟ್ಟೆಗೆ ಚಾಕುವಿನಿಂದ ಇರಿದಿದ್ದನು.

5 ಉಜ್ಬೆಕ್ ಮಹಿಳೆ ಕೊಲೆ ಪ್ರಕರಣ: ಮೇ 14, 2024 ರಂದು ಉಜ್ಬೇಕಿಸ್ತಾನ್‌ನ 27 ವರ್ಷದ ಮಹಿಳೆ ಜರೀನಾ ಉಟ್ಕಿರೋವ್ನಾ ಹೋಟೆಲ್ ಕೊಠಡಿಯೊಂದರಲ್ಲಿ ಕೊಲೆಯಾಗಿದ್ದಳು.

ಹಂತಕನ ಮಾಸ್ಟರ್ ಪ್ಲಾನ್



ಮಹಾಲಕ್ಷ್ಮೀ ಕೊಲೆ ಮಾಡುವ ಮುನ್ನ ಹಂತಕ ಮಾಸ್ಟರ್ ಪ್ಲಾನ್ ಮಾಡಿರಬಹುದಾ ಎಂಬ ಪ್ರಶ್ನೆಗಳು ಕೂಡ ಪೊಲೀಸರನ್ನು ಕಾಡುತ್ತಿದೆ. ಇದಕ್ಕಾಗಿ ಫ್ರಿಡ್ಜ್‌ನಲ್ಲಿ ಮೃತ ದೇಹದ ತುಂಡು ಕತ್ತರಿಸಿ ಇಟ್ಟರೆ ಅಷ್ಟು ಸುಲಭದಲ್ಲಿ ಗೊತ್ತಾಗೊಲ್ಲ ಎಂದು ಭಾವಿಸಿರಬಹುದು ಎಂದು ಶಂಕಿಸಲಾಗಿದೆ. ಕೊಲೆ ಮಾಡಿ ತಪ್ಪಿಸಿಕೊಳ್ಳಲು ಸಮಯ ಸಿಗುತ್ತದೆ ಎಂದು ಈ ಸಂಚು ಹೂಡಿರಬಹುದು. 19 ದಿನದ ಹಿಂದೆ ಕೊಲೆ ಅಗಿದ್ದರೂ ವಾಸನೆ ಬಂದಿರಲಿಲ್ಲ. ಇದಕ್ಕಾಗಿ ಫ್ರಿಡ್ಜ್ ಕೂಡ ಆನ್ ಮಾಡಿ ಇಟ್ಟುಹೋಗಿದ್ದ ಹಂತಕ. ಇನ್ನು ಆರೋಪಿಯ ಜಾಡು ಪತ್ತೆ ಮಾಡೋದೆ ಪೊಲೀಸರಿಗೆ ಇದೀಗ ಸವಾಲಾಗಿದೆ. ಮೃತ ಮಹಾಲಕಮಿ ಜತೆ ಓರ್ವ ನಿರಂತರ ಸಂಪರ್ಕ ಇದ್ದ ಎಂದು ಹೇಳಲಾಗಿದ್ದು, ಆತನ ಮೇಲೆಯೇ ಹೆಚ್ಚಿನ ಅನುಮಾನಿಸಲಾಗಿದೆ. ಇನ್ನು ಮೃತಳ ಸೋಷಿಯಲ್ ಮೀಡಿಯಾದಲ್ಲಿ ಬೇರೆ ಬೇರೆ ಖಾತೆಗಳಿದ್ದು, ಹಾಗೆಯೇ ಬೇರೆ ಬೇರೆಯವರೊಂದಿಗೆ ಫೋಟೊಗಳು ಪತ್ತೆಯಾಗಿವೆ.

ವೈಯಾಲಿಕಾವಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರ ಮೊದಲ ಮಹಡಿಯಲ್ಲಿ ಸುಮಾರು 26 ವರ್ಷದ ಯುವತಿಯ ಮೃತದೇಹವನ್ನು ತುಂಡರಿಸಿ 165 ಲೀಟರ್ಸ್ ಫ್ರಿಡ್ಜ್‌ನಲ್ಲಿ ಇಟ್ಟಿರುವ ಘಟನೆ ನಡೆದಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಇದು ಸಂಭವಿಸಿ ನಾಲ್ಕೈದು ದಿನಗಳು ಆಗಿರಬಹುದು. ಕೊಲೆಯಾಗಿರುವ ಯುವತಿಯ ಗುರುತು ಪತ್ತೆಯಾಗಿದೆ.

-ಸತೀಶ್ ಕುಮಾರ್
ಹೆಚ್ಚುವರಿ ಪೊಲೀಸ್ ಆಯುಕ್ತ

ಐಪಿಎಸ್ ಅಧಿಕಾರಿ ಮಗನ ಮೇಲೆ ಹಲ್ಲೆ

ಅಪರಾಧ ಸುದ್ದಿಗಳು

ಬೆಂಗಳೂರು: ರಸ್ತೆ ಸಿಗ್ನಲ್‌ನಲ್ಲಿ ವಿನಾಕಾರಣ ಕಾರಿನ ಎಕ್ಸಲರೇಟರ್ ಹೆಚ್ಚಿಸಿ ಸೌಂಡ್ ಮಾಡಿದ್ದನ್ನು ಪ್ರಶ್ನಿಸಿದ ಐಪಿಎಸ್ ಅಧಿಕಾರಿಯ ಪುತ್ರನಿಗೆ ಅವಾಚ್ಯ ಪದಗಳಿಂದ ನಿಂದಿಸಿ ಹಲ್ಲೆ ಮಾಡಿರುವ ಘಟನೆ ನಡೆದಿದೆ.

ತಮ್ಮ ಮೇಲೆ ಹಲ್ಲೆ ನಡೆದಿರುವ ಕುರಿತು ಹಿರಿಯ ಐಪಿಎಸ್ ಅಧಿಕಾರಿ ರಮೇಶ್ ಬಾನೋತ್ ಅವರ ಪುತ್ರ ಶ್ರೀಸಾಯಿ ಪ್ರೀತಂ ಬಾನೋತ್ ಅವರು ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸೆಪ್ಟೆಂಬರ್ 16ರಂದು ಕೆಲಸ ಮುಗಿಸಿದ್ದ ಶ್ರೀಸಾಯಿ ಪ್ರೀತಂ ಬಾನೋತ್ ಎಂ.ಜಿ.ರಸ್ತೆಯಿಂದ ಹೆಬ್ಬಾಳ ಮಾರ್ಗವಾಗಿ ತಮ್ಮ ಕಾರಿನಲ್ಲಿ ಹೊರಟಿದ್ದರು. ಈ ವೇಳೆ ಬ್ಯಾಟರಾಯನಪುರ ಸಿಗ್ನಲ್ ಬಳಿ ಕಾರಿನ ಚಾಲಕನೊಬ್ಬ ಎಕ್ಸಲರೇಟರ್ ರೈಸ್ ಮಾಡುತ್ತಾ ಶಬ್ದವುಂಟು ಮಾಡುತ್ತಿದ್ದ. ಯಾಕೆ ವಿನಾಕಾರಣ ಎಕ್ಸಲರೇಟರ್ ಬಳಸುತ್ತಿದ್ದೀಯಾ ಎಂದು ಶ್ರೀಸಾಯಿ ಅವರು ಪ್ರಶ್ನಿಸಿ ಮುಂದೆ ಸಾಗಿದ್ದರು. ಆದರೆ ಹಿಂಬಾಲಿಸಿಕೊಂಡು ಬಂದಿದ್ದ ಆರೋಪಿ, ಸ್ವಲ್ಪ ದೂರದಲ್ಲೇ ಶ್ರೀಸಾಯಿ ಅವರ ಕಾರನ್ನು ಅಡ್ಡಗಟ್ಟಿದ್ದ. ಬಳಿಕ ಆರೋಪಿ ಕಾರುಚಾಲಕ ಹಾಗೂ ಆತನ ಸ್ನೇಹಿತ ಅವಾಚ್ಯವಾಗಿ ನಿಂದಿಸಿ, ಸಾಯಿ ಪ್ರೀತಂ ಅವರ ಮುಖ ಹಾಗೂ ರಟ್ಟೆಗೆ ಹೊಡೆದು ಹಲ್ಲೆ ಮಾಡಿದ್ದಾರೆ. ಬಳಿಕ ಕಾರಿನ ಮಿರರ್ ಒಡೆದು ಪರಾರಿಯಾಗಿದ್ದಾರೆ ಎಂದು ದೂರು ದಾಖಲಾಗಿದೆ.

ಹುಡುಗಿ ವಿಚಾರಕ್ಕೆ ಯುವಕನ ಕೊಲೆ

ಬೆಂಗಳೂರು: ಸಂಜಯನಗರ ವ್ಯಾಪ್ತಿಯಲ್ಲಿ ಹುಡುಗಿ ವಿಚಾರಕ್ಕೆ ಯುವಕನ ಕೊಲೆಯಾದ ಘಟನೆ ಸಂಜಯ ನಗರದಲ್ಲಿ ಶನಿವಾರ ನಡೆದಿದೆ.

ವರುಣ್ ಕೊಲೆಯಾದವನು. ಸಂಜಯ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ. ರೂಮ್‌ಮೇಟ್‌ನಿಂದಲೇ ವರುಣ್ ಕೊಲೆಯಾಗಿದ್ದಾನೆ. ವರುಣ್ ಹಾಗೂ ದಿವೇಶ್ ಇಬ್ಬರು ಒಂದೇ ಹುಡುಗಿಯನ್ನು ಪ್ರೀತಿಸುತ್ತಿದ್ದರು. ಮೇಲ್ನೋಟಕ್ಕೆ ಇದೇ ವಿಚಾರಕ್ಕೆ ಕೊಲೆಯಾಗಿರುವ ಮಾಹಿತಿ ಲಭ್ಯವಾಗಿದೆ. ಶನಿವಾರ ಇಬ್ಬರ ನಡುವೆ ಪ್ರೀತಿ ವಿಚಾರಕ್ಕೆ ಗಲಾಟೆ ಆಗಿದ್ದು, ಗಲಾಟೆ ವಿಕೋಪಕ್ಕೆ ತಿರುಗಿದೆ. ಸಿಟ್ಟಿನಲ್ಲಿ ದಿವೇಶ್ ವರುಣ್‌ಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ.

ಕೊಲೆಯಾದ ಸ್ಥಳಕ್ಕೆ ಪೊಲೀಸರು ಆಗಮಿಸಿದ್ದು, ಕೊಲೆಮಾಡಿ ಸ್ಥಳದಲ್ಲೇ ಇದ್ದ ಕೊಲೆ ಆರೋಪಿ ದಿವೇಶ್‌ನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಪ್ರಾಥಮಿಕ ತನಿಖೆ ವೇಳೆ ಕೊಲೆಗೆ ಕಾರಣ ಹುಡುಗಿ ವಿಚಾರ ಎಂದು ತಿಳಿದು ಬಂದಿದೆ. ವರುಣ್ ಬಾಗಲೂರಿನಲ್ಲಿ ಸೇಫ್ಟಿ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದ. ಕಳೆದ ಒಂದು ವರ್ಷದಿಂದ ಇವರಿಬ್ಬರು ಸಂಜಯ್ ನಗರದ ಗೆದ್ದಲಹಳ್ಳಿ ಬಾಡಿಗೆ ಮನೆಯಲ್ಲಿ ವಾಸವಿದ್ದರು.

ಒಂದೇ ಹುಡುಗಿ ಜತೆಗೆ ಇಬ್ಬರು ಡೇಟಿಂಗ್: ಸ್ಥಳಕ್ಕೆ ಎಫ್‌ಎಸ್‌ಎಲ್ ತಂಡ ಹಾಗೂ ಎಸಿಪಿ ಮನೋಜ್ ಕುಮಾರ್ ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿ ದಿವೇಶ್ ವರುಣ್ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾನೆ. ಯುವತಿ ಮೊದಲು ದಿವೇಶ್‌ನನ್ನು ಪ್ರೀತಿಸುತ್ತಿದ್ದಳು. ಬಳಿಕ ಅದೇ ಯುವತಿ ವರುಣ್ ನನ್ನು ಪ್ರೀತಿಸಲು ಶುರು ಮಾಡಿದ್ದಳು. ಈ ವಿಚಾರಕ್ಕೆ ಶುಕ್ರವಾರ ರಾತ್ರಿ ಇಬ್ಬರ ನಡುವೆ ಜಗಳವಾಗಿದೆ. ಶನಿವಾರ ಬೆಳಗ್ಗೆಯೂ ಜಗಳವಾಡಿಕೊಂಡು ಇಬ್ಬರು ಹೊರಬಂದಿದ್ದಾರೆ. ಬಳಿಕ ಕಲ್ಲು ಎತ್ತಿಹಾಕಿ ಆರೋಪಿ ದಿವೇಶ್ ಕೊಲೆ ಮಾಡಿದ್ದಾನೆ. ಆರೋಪಿ ದಿವೇಶ್‌ನನ್ನು ವಶಕ್ಕೆ ಪಡೆದು ಸಂಜಯ ನಗರ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಉತ್ತರ ವಿಭಾಗ ಡಿಸಿಪಿ ಸೈದುಲ್ ಅಡಾವತ್ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿದ್ದು, ಸಂಜಯನಗರ ಠಾಣಾ ವ್ಯಾಪ್ತಿಯಲ್ಲಿ ಈ ಕೃತ್ಯ ನಡೆದಿದೆ. ವರುಣ್ ಹಾಗೂ ದಿವೇಶ್ ಇಬ್ಬರೂ ಮೂಲತಃ ಉಡುಪಿಯವರು ಎಂದು ತಿಳಿದು ಬಂದಿದೆ. ಒಟ್ಟಾರೆ ನಾಲ್ವರು ಗೆಳೆಯರು ಒಂದೇ ಮನೆಯಲ್ಲಿ ವಾಸವಿದ್ದರು. ಮೂವರು ಉಡುಪಿ ಮೂಲದವರು, ಇನ್ನೊಬ್ಬ ಬೆಂಗಳೂರಿನವನು. ವರುಣ್ ಹಾಗೂ ದಿವೇಶ್ ಇಬ್ಬರು ಸಹ ಒಂದೆ ಹುಡುಗಿಯ ಜತೆ ಡೇಟ್ ಮಾಡುತ್ತಿದ್ದರು. ಹುಡುಗಿ ವಿಚಾರಕ್ಕೆ ಜಗಳವಾಡಿ ಶನಿವಾರ ಬೆಳಗ್ಗೆ ಸುಮಾರು 8 ಗಂಟೆಗೆ ಕೊಲೆ ಮಾಡಿದ್ದಾನೆ. ಮರಣೋತ್ತರ ಪರೀಕ್ಷೆ ಬಳಿಕ ಇನ್ನಷ್ಟು ಮಾಹಿತಿ ತಿಳಿಯಲಿದೆ ಎಂದು ತಿಳಿಸಿದರು.

ನ್ಯಾಯಾಲಯದ ಕಲಾಪದ ವೇಳೆ ಹೇಳಿಕೆ

ವಿಷಾದ ವ್ಯಕ್ತಪಡಿಸಿದ ಹೈಕೋರ್ಟ್ ಜಡ್ಜ್

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: ಮಹಿಳಾ ವಕೀಲರು ಹಾಗೂ ಒಂದು ಸಮುದಾಯದ ಜನ ನೆಲೆಸಿರುವ ಪ್ರದೇಶದ ಬಗ್ಗೆ ಹೇಳಿಕೆ ನೀಡಿದ್ದ ಸಂಬಂಧ ಹೈಕೋರ್ಟ್ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಷಾನಂದ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ಶನಿವಾರ ನಡೆದ ನ್ಯಾಯಾಲಯದ ಕಲಾಪದ ವೇಳೆ ಅವರು, ವಿಚಾರಣೆ ಸಂದರ್ಭದಲ್ಲಿ ತಾವು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಯಾವುದೇ ಉದ್ದೇಶ ಪೂರ್ವಕವಾಗಿದ್ದಲ್ಲ. ಇದರಿಂದ ಯಾವುದೇ ವ್ಯಕ್ತಿ, ಸಮುದಾಯಕ್ಕೆ ನೋವುಂಟಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ತಿಳಿಸಿದರು.

ಇತ್ತೀಚೆಗೆ ನಡೆದಿದ್ದ ಕಲಾಪದ ವೇಳೆ ನ್ಯಾಯಮೂರ್ತಿ ವಿ.ಶ್ರೀಷಾನಂದ ಅವರು ನೀಡಿದ್ದ ಹೇಳಿಕೆಗಳ ಕುರಿತಂತೆ ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಪರಿಗಣಿಸಿದ್ದ ಸುಪ್ರೀಂಕೋರ್ಟ್, ಈ ಸಂಬಂಧ ವರದಿ ಸಲ್ಲಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಸೂಚಿಸಿತ್ತು. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್.ಗವಾಯಿ, ಸೂರ್ಯಕಾಂತ್ ಮತ್ತು ಹೃಷಿಕೇಶರಾಯ್ ಅವರನ್ನೊಳಗೊಂಡ ಐದು ನ್ಯಾಯಾಧೀಶರ ಪೀಠ ಸಭೆ ನಡೆಸಿ ಈ ಆದೇಶ ನೀಡಿದೆ.

ಅಲ್ಲದೆ, ಕರ್ನಾಟಕ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಕಲಾಪದ ನೇರ ಪ್ರಸಾರವನ್ನು ಕೆಲ ದಿನಗಳ ಕಾಲ ಸ್ಥಗಿತಗೊಳಿಸುವಂತೆ ಬೆಂಗಳೂರು ವಕೀಲರ ಸಂಘ ಹೈಕೋರ್ಟ್‌ನ ಮುಖ್ಯ ನ್ಯಾ. ಎನ್.ವಿ.ಅಂಜಾರಿಯಾ ಅವರಿಗೆ ಮನವಿ ಸಲ್ಲಿಸಿತ್ತು. ಬಳಿಕ, ಪೂರ್ವಾನುಮತಿ ಪಡೆಯದೇ ಲೈವ್ ಸ್ಟ್ರೀಮಿಂಗ್‌ನ ಮರು ಪ್ರಸಾರ, ವರ್ಗಾವಣೆ, ಅಪ್ಲೋಡ್ ಮಾಡುವುದು, ಪೋಸ್ಟ್ ಮಾಡುವುದು, ಮಾರ್ಪಾಡು ಮಾಡುವುದು ಪ್ರಸಾರ ಅಥವಾ ಮರು ಪ್ರಸಾರ ಮಾಡುವಂತಿಲ್ಲ ಎಂದು ಹೈಕೋರ್ಟ್ ಸೂಚಿಸಿತ್ತು.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು–575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಬಾಣಸವಾಡಿ
ನಂ. 963, 5ಎ–ಸಿ, ಔಟರ್ ರಿಂಗ್ ರಸ್ತೆ
HRBR ಲೇಔಟ್, ಬ್ಲಾಕ್–1, ಕಲ್ಯಾಣನಗರ,
ಬೆಂಗಳೂರು–560043.

ದೂ: 080–22955914–915
ಇ–ಮೇಲ್: blr.banaswadi@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ

ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿಗಳು ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 4 (ನಾಲ್ಕು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು **ದಿನಾಂಕ 30.09.2024 ರಂದು** ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ + ಜಿ.ಎಸ್.ಟಿ. ಮೊತ್ತವು ಸೇರಿ (ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಹಾಗೂ ಸಂಪರ್ಕಿಸಬೇಕಾದ ಸಂಖ್ಯೆ
01.	ಎಸ್2–77	05.06.2015	1) ಶ್ರೀಮತಿ ವಿನೀತ ರೋಹನ್ ಮಸುರೇಕರ್ 2) ರೋಹನ್ ಅಶೋಕ್ ಮಸುರೇಕರ್ ಸಿ–008, ಕೇಮನ್ ಬ್ಲಾಕ್ ದಿ ಕ್ಯಾನೋಪಿ ಅಪಾರ್ಟ್‌ಮೆಂಟ್, ಅಗರ ಮುಖ್ಯರಸ್ತೆ, ಬಾಬುಸಾಪಾಳ್ಯ, ಹೊರಮಾವು ಬೆಂಗಳೂರು–560043.	ರೂ.10,124/–	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಬಾಣಸವಾಡಿ ನಂ. 963, 5ಎ–ಸಿ, ಔಟರ್ ರಿಂಗ್ ರಸ್ತೆ HRBR ಲೇಔಟ್, ಬ್ಲಾಕ್–1, ಕಲ್ಯಾಣನಗರ, ಬೆಂಗಳೂರು–560043. ಲಾಕರ್ ಒಡೆಯುವ ದಿನಾಂಕ: 30.09.2024 ಮಧ್ಯಾಹ್ನ 3.00 ಗಂಟೆಗೆ ದೂ: 080–22955914–915
02.	ಎಮ್3–599	10.12.2013	ಶ್ರೀ ಚನ್ನಕೇಶವುಲು ನಂ. 148ಸಿ, ಬೃಂದ ಬಾರ್ ರಸ್ತೆ, ದೇವಸಂದ್ರ ಕೆ.ಆರ್. ಪುರಂ, ಬೆಂಗಳೂರು–560036.	ರೂ.41,418/–	
03.	ಎಮ್2–629	19.10.2015	1) ಶ್ರೀ ಗೋವಿಂದ ಎ.ಆರ್. 2) ಶ್ರೀಮತಿ ಅಂಕಿತ ನಂ. 14, ಅಗಪೆ ಹೌಸ್ ಸೀರಿಕ ಅಪ್ಪ ಬಡಾವಣೆ, ಆರ್.ಎಂ. ನಗರ ಬೆಂಗಳೂರು–560043.	ರೂ.14,868/–	
04.	ಎಸ್2–129	16.06.2012	ಶ್ರೀ ಕನ್ಹಯ್ಯಲಾಲ್ ಜೈನ್ 201, 1ನೇ ಅಡ್ಡರಸ್ತೆ, 3ನೇ ಬ್ಲಾಕ್ H R B R ಬಡಾವಣೆ, ಕಮ್ಮನಹಳ್ಳಿ ಬೆಂಗಳೂರು–560043.	ರೂ.10,124/–	
05.	ಎಸ್2–49	20.06.2006	1) ಶ್ರೀಮತಿ ಮೊನಿಕ ಮಹೇಶ್ವರಿ 2) ಶ್ರೀ ಅನಿಲ್ ಮಹೇಶ್ವರಿ ನಂ. ಎ–2, ಎಸ್‌ಎಸ್‌ವಿ ನಿವಾಸ, P & T ಬಡಾವಣೆ, ದೇವ ಮಾತಾ ಸ್ಕೂಲ್ ಹತ್ತಿರ, ಹೊರಮಾವು, ಬೆಂಗಳೂರು–560043.	ರೂ.10,124/–	
06.	ಎಸ್2–135	23.11.2006	1) ಶ್ರೀಮತಿ ಇಂದಿರಾ ವಿಜಯಕುಮಾರ್ 2) ಶ್ರೀ ಪಿ. ಅಜಯ್ ಕುಮಾರ್ 3) ಶ್ರೀಮತಿ ಸುವಿ ಅಜಯ್ ಕುಮಾರ್ C/o ಪಿ. ಅಜಯ್ ಕುಮಾರ್, ನಂ. 101 ರೆಜೆಂಟ್ ಮಂದಿರ, ನಂ. 51/52, ಹೊರಮಾವು, ಬೆಂಗಳೂರು–560043.	ರೂ.10,124/–	
07.	ಎಮ್3–444	27.07.2012	ಶ್ರೀ ಎಮ್. ರವಿ ಕುಮಾರ್ ನಂ. 196/1, 'ಮಂಜುನಾಥ ನಿಲಯ' ಪೋಸ್ಟ್ ಆಫೀಸ್ ಎದುರು ಹೊರಮಾವು, ಬೆಂಗಳೂರು–560038.	ರೂ.41,418/–	
08.	ಎಮ್3–426	06.03.2012	1) ಶ್ರೀಮತಿ ಸರಸ್ವತಿ ಎಸ್.ವಿ. 2) ಶ್ರೀ ವಿನೋದ್ ಕುಮಾರ್ ನಂ. 116, ಬೈರತಿ ಗ್ರಾಮ, ಕೊತನೂರು ಪೋಸ್ಟ್, ಬೆಂಗಳೂರು–560077.	ರೂ.41,418/–	
09.	ಎಮ್3–438	30.06.2011	ಶ್ರೀಮತಿ ದೇದಿಪ್ಯ ರಾಣಿ ಕಟಸಾನಿ ನಂ. 86, 2ನೇ ಅಡ್ಡರಸ್ತೆ, ನೆಹರು ರಸ್ತೆ ಕಮ್ಮನಹಳ್ಳಿ, ಬೆಂಗಳೂರು–560043.	ರೂ.41,418/–	
10.	ಎಮ್3–249	25.04.2012	ಶ್ರೀ ರಾಘವೇಂದ್ರ ಎಸ್. ನಂ. 93, ರಾಯಲ್ ಶೆಲ್ಟರ್ಸ್ ದೇವರಚಿಕ್ಕನಹಳ್ಳಿ, IIM ಪೋಸ್ಟ್ ಬೆಂಗಳೂರು–560076.	ರೂ.41,418/–	
11.	ಎಮ್2–500	25.04.2013	ಶ್ರೀ ಮಂಜುನಾಥ ವಿ. ನಂ. 1, 'ಮಾರುತಿ ನಿಲಯ' 1ನೇ ಬ್ಲಾಕ್ 2ನೇ ಅಡ್ಡರಸ್ತೆ, ಅಕ್ಷಯನಗರ ಕೌದೇನಹಳ್ಳಿ ಬಡಾವಣೆ, ಬೆಂಗಳೂರು–560016.	ರೂ.18,408/–	
12.	ಎಮ್2–587	26.10.2013	ಶ್ರೀಮತಿ ದೀಪಾ ಆರ್. ನಂ. 110, ಕೆ.ಕೆ. ಹಳ್ಳಿ, ಸೆಂಟ್ ಥಾಮಸ್ ಟೌನ್ ಪೋಸ್ಟ್ ಬೆಂಗಳೂರು–560084.	ರೂ..18,408/–	
13.	ಎಮ್3–617	17.03.2014	1) ಶ್ರೀ ರಾಮಯ್ಯ ಬಿ.ಎಮ್. 2) ಶ್ರೀ ನಾಗೇಶ್ ಆರ್. ನಂ. 32, ಬೈರತಿ ಕೊತನೂರು ರಾಮಾಂಜನೇಯ ಕಲ್ಯಾಣ ಮಂಟಪದ ಎದುರು, ಡಾ. ಶಿವರಾಮ ಕಾರಂತ ನಗರ ಬೆಂಗಳೂರು–560077.	ರೂ.41,418/–	
14.	ಎಮ್3–109	21.04.2006	ಶ್ರೀ ರವೀಂದ್ರ ಜಿ. ಬಿನ್ ಎನ್. ಗೋಪಾಲ್ ನಂ. 71, ಫರ್ಸ್ಟ್ ಮೆಡೊವ್ಸ್, ಬಿಲೆಶಿವಲೆ ಡಾ. ಶಿವರಾಮ ಕಾರಂತ ನಗರ ಪೋಸ್ಟ್ ಬೆಂಗಳೂರು–560043.	ರೂ.41,418/–	

ದಿನಾಂಕ: 21.09.2024
ಸ್ಥಳ: ಬೆಂಗಳೂರು
ಸಹಿ/– ಹಿರಿಯ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಬಾಣಸವಾಡಿ ಶಾಖೆ, ಬೆಂಗಳೂರು

ಹೆಬ್ಬಾಳ ಮೇಲುಸೇತುವೆಯ ನಿರ್ಮಾಣ ಕಾಮಗಾರಿ ಪರಿಶೀಲಿಸಿದ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್. ಆಯುಕ್ತ ಎನ್. ಜಯರಾಮ್, ಅಭಿಯಂತರ ಸದಸ್ಯ ಹೆಚ್.ಆರ್. ಶಾಂತರಾಜಣ್ಣ ಹಾಗೂ ಪ್ರಾಧಿಕಾರದ ಅಧಿಕಾರಿಗಳು ಪಾಲ್ಗೊಂಡಿದ್ದರು.

ನಿಪಾ: 41 ಜನರಿಗೆ ಐಸೋಲೇಷನ್

ಬೆಂಗಳೂರು: ರಾಜ್ಯದಲ್ಲಿ ನಿಪಾ ಜತೆಗೆ ಮಂಕಿಪಾಕ್ಸ್ ಆತಂಕ ಹೆಚ್ಚಾಗಿದ್ದು, ಮತ್ತೆ ಹೋಮ್ ಕ್ವಾರಂಟೈನ್ ಶುರುವಾಗಲಿದೆ.

ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕೇರಳದ ಯುವಕ ನಿಪಾಗೆ ಬಲಿಯಾಗಿದ್ದು, ಯುವಕನ ಅಂತ್ಯಸಂಸ್ಕಾರಕ್ಕೆ ಬೆಂಗಳೂರಿನಿಂದ ತೆರಳಿದ್ದ ಸ್ನೇಹಿತರು ಹಾಗೂ ಪ್ರಾಥಮಿಕ ಸಂಪರ್ಕಿತರಿಗೆ ಹೋಂ ಐಸೋಲೇಷನ್ ಮಾಡಲಾಗಿದೆ. 41 ಪ್ರಾಥಮಿಕ ಸಂಪರ್ಕಿತರು ಪತ್ತೆಯಾಗಿದ್ದು 41 ಜನರಿಗೂ ಕಡ್ಡಾಯ ಹೋಂ ಐಸೋಲೇಷನ್ ಮಾಡಲಾಗಿದೆ. ಎಲ್ಲಾ ಸಂಪರ್ಕಿತರ ಮೇಲೆ ಆರೋಗ್ಯಾಧಿಕಾರಿಗಳು ನಿಗಾವಹಿಸಿದ್ದಾರೆ.

ಇನ್ನು 41 ಸಂಪರ್ಕಿತರ ಪೈಕಿ ಒಬ್ಬರಿಗೆ ನಿಪಾ ಗುಣಲಕ್ಷಣ ಕಂಡುಬಂದಿದ್ದು, ಗುಣಲಕ್ಷಣಗಳಿರುವ ವ್ಯಕ್ತಿಯ ರಕ್ತವನ್ನು ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಎಲ್ಲಾ ಸಂಪರ್ಕಿತರ ಮೇಲೆ ಆರೋಗ್ಯಾಧಿಕಾರಿಗಳು ನಿಗಾ ಇಟ್ಟಿದ್ದಾರೆ.

ದರ್ಶನ್ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಪ್ರಕರಣದಲ್ಲಿ ಜಾಮೀನು ಕೋರಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು 57ನೇ ಸಿಟಿ ಸಿವಿಲ್ ನ್ಯಾಯಾಲಯ ಸೋಮವಾರಕ್ಕೆ ಮುಂದೂಡಿದೆ. ಪ್ರಕರಣದ ಕುರಿತು ಪೊಲೀಸರು ಚಾರ್ಜ್ ಶೀಟ್ ಸಲ್ಲಿಸಿ ಎರಡು ವಾರದ ಬಳಿಕ ದರ್ಶನ್ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

ದರ್ಶನ್ ಸಲ್ಲಿಸಿದ್ದ ಅರ್ಜಿಗೆ ಪ್ರತಿಯಾಗಿ ಆಕ್ಷೇಪಣೆ ಸಲ್ಲಿಸುವಂತೆ ಸರಕಾರಿ ವಿಶೇಷ ಅಭಿಯೋಜಕರಿಗೆ ನೋಟಿಸ್ ಜಾರಿಗೊಳಿಸಿರುವ ಸಿಟಿ ಸಿವಿಲ್ ಕೋರ್ಟ್ 57ರ ನ್ಯಾಯಾಧೀಶರಾದ ಜೈಶಂಕರ್, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾಗಿ 100 ದಿನಗಳ ಬಳಿಕ ಜಾಮೀನು ಕೋರಿ ನಟ ದರ್ಶನ್ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿದ್ದರು. ಹತ್ಯೆ ಪ್ರಕರಣದಲ್ಲಿ ಬಳ್ಳಾರಿ ಜೈಲಿನಲ್ಲಿರುವ ದರ್ಶನ್ ಇತ್ತೀಚೆಗೆ ವಕೀಲರೊಂದಿಗೆ ಚರ್ಚೆ ನಡೆಸಿದ್ದರು. ಪ್ರಕರಣ ಸಂಬಂಧ ದರ್ಶನ್ ಒಳಗೊಂಡಂತೆ 17 ಮಂದಿ ಆರೋಪಿಗಳ ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು 3,991 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದರು. ದೋಷಾರೋಪ ಪಟ್ಟಿ ಸಲ್ಲಿಕೆಯಾದ ಬೆನ್ನಲ್ಲೇ ನ್ಯಾಯಾಲಯಕ್ಕೆ ದರ್ಶನ್ ಜಾಮೀನು ಅರ್ಜಿ ಸಲ್ಲಿಸುವ ಸಾಧ್ಯತೆಗಳಿದ್ದವು. ಇದೀಗ ವಕೀಲರೊಂದಿಗೆ ಚರ್ಚಿಸಿದ ಬಳಿಕ ಅಂತಿಮವಾಗಿ ನ್ಯಾಯಾಲಯಕ್ಕೆ ಶನಿವಾರ ಜಾಮೀನು ಅರ್ಜಿ ಸಲ್ಲಿಸಿದ್ದಾರೆ.

ಇತ್ತೀಚೆಗೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಪವಿತ್ರಾಗೌಡ ಸೇರಿದಂತೆ ಕೆಲ ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿತ್ತು. ಸೆಪ್ಟೆಂಬರ್ 30ರವರೆಗೆ ನ್ಯಾಯಾಂಗ ಬಂಧನ ಅವಧಿ ಹಿನ್ನೆಲೆಯಲ್ಲಿ ಕೆಲ ಆರೋಪಿಗಳು ಜಾಮೀನಿಗೆ ಅರ್ಜಿ ಸಲ್ಲಿಕೆ ಮಾಡುವ ಸಾಧ್ಯತೆಯಿದೆ. ಜಾಮೀನು ನಿರಾಕರಣೆ ಕೋರಿ ಸರಕಾರಿ ಪರ ಅಭಿಯೋಜಕರು ಆಕ್ಷೇಪಣೆ ಸಲ್ಲಿಸುವ ಸಾಧ್ಯತೆಯಿದೆ ಎನ್ನಲಾಗಿದೆ. ಸದ್ಯ ದರ್ಶನ್ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿದ್ದಾರೆ. ಕೋರ್ಟ್ ಆದೇಶದ ಮೇರೆಗೆ ಇತ್ತೀಚೆಗೆ ಅವರನ್ನು ಪರಪ್ಪನ ಅಗ್ರಹಾರ ಜೈಲಿನಿಂದ ಬಳ್ಳಾರಿಗೆ ಸ್ಥಳಾಂತರ ಮಾಡಲಾಗಿದೆ.

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 278/2024

ಅರ್ಜಿದಾರರು: ಶ್ರೀ ಶಿವನಯ್ಯ ಮತ್ತು 3 ಜನ ಇತರರು ಬಿನ್ ಕೋಂ ಲೇಟ್ ಮಾದಪ್ಪ ವಾಸ: ಚಿಕ್ಕಮುಕೂಡ್ಲು ಗ್ರಾಮ, ಬನ್ನಿಮುಕೂಡ್ಲು ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಂದೆ, 2ನೇ ಅರ್ಜಿದಾರರ ಮಾವ ಮತ್ತು 3 ಹಾಗೂ 4ನೇ ಅರ್ಜಿದಾರರ ತಾತನವರಾದ ಶ್ರೀ ಮಾದಪ್ಪ ಬಿನ್ ಲೇಟ್ ಮಳ್ಳಪ್ಪ ಇವರು ದಿನಾಂಕ: 20–04–1993 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಬನ್ನಿಮುಕೂಡ್ಲು ಅಂಚೆ, ಕೋಡಿಹಳ್ಳಿ ಹೋಬಳಿ, ಚಿಕ್ಕಮುಕೂಡ್ಲು ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಹಾಗೂ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿರುವುದು ಸರಿಯಷ್ಟೆ, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 29/10/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ 10ನೇ ಸೆಪ್ಟಂಬರ್ 2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ರಾಮಚಂದ್ರ
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 10/09/2024

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 95/2024

ಅರ್ಜಿದಾರರು: ಶ್ರೀ ಮಾದೇಶ ಬಿನ್ ಲೇಟ್ ಪೆರುಮಾಳೇಗೌಡ ವಯಸ್ಸು 50 ವರ್ಷ ವಾಸ: ಕೋಡಿಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, [illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 66/2024

ಅರ್ಜಿದಾರರು: ಶ್ರೀ ಬೊಮ್ಮೇಗೌಡ ಬಿನ್ ಲೇಟ್ ಚಿಕ್ಕೇಗೌಡ [illegible] ಮಂಡೇಗೌಡ ವಯಸ್ಸು 63 ವರ್ಷ ವಾಸ: ಕಾಡುಶಿವನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, [illegible] ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, [illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 65/2024

ಅರ್ಜಿದಾರರು: ಶ್ರೀ ಬೊಮ್ಮೇಗೌಡ ಬಿನ್ ಲೇಟ್ ಚಿಕ್ಕೇಗೌಡ ಉ॥ ಮಂಡೇಗೌಡ ವಯಸ್ಸು 63 ವರ್ಷ ವಾಸ: ಕಾಡುಶಿವನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, [illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 64/2024

ಅರ್ಜಿದಾರರು: ಶ್ರೀ ಬೊಮ್ಮೇಗೌಡ ಬಿನ್ ಲೇಟ್ ಚಿಕ್ಕೇಗೌಡ ಉ॥ ಮಂಡೇಗೌಡ ವಯಸ್ಸು 63 ವರ್ಷ ವಾಸ: ಕಾಡುಶಿವನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಗಟ್ಟಿಗುಂದ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ 1 ರಿಂದ 6ನೇ ಅರ್ಜಿದಾರರ ತಾತನವರಾದ ಚಿಕ್ಕೇಗೌಡ ಬಿನ್ ಲೇಟ್ ಚಿಕ್ಕೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕಾಡುಶಿವನಹಳ್ಳಿ ಗ್ರಾಮದಲ್ಲಿ ದಿನಾಂಕ 05.05.1962 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 29/10/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಸೆಪ್ಟಂಬರ್ 11ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಎಂ ಚೇತನ್
ವಕೀಲರು
ಕನಕಪುರ
ಸ್ಥಳ : ಕನಕಪುರ
ದಿನಾಂಕ: 11/09/2024

ಸಮಾಚಾರ ಸಣ್ಣದಲ್ಲ

ಶಿರೂರು ಗುಡ್ಡ ಕುಸಿತ: ಕೇರಳದ ಲಾರಿ ಪತ್ತೆ

ಅಂಕೋಲಾ: ತಾಲೂಕಿನ ಶಿರೂರು ಗುಡ್ಡ ಕುಸಿತ ಸ್ಥಳದಲ್ಲಿ ಮೂರನೇ ಹಂತದ ಕಾರ್ಯಾಚರಣೆ ನಡೆಯುತ್ತಿರುವ ಸಂದರ್ಭ ದಲ್ಲಿ ನಾಪತ್ತೆಯಾಗಿದ್ದ ಕೇರಳದ ಅರ್ಜುನನ ಲಾರಿ ಶನಿವಾರ ಮಧ್ಯಾಹ್ನ (ಸೆ.21) ಪತ್ತೆಯಾಗಿದೆ. ಮುಳುಗುತಜ್ಞ ಈಶ್ವರ ಮಲ್ಪೆ ಕಾರ್ಯಾಚರಣೆ ನಡೆಸಿದ ವೇಳೆ ಲಾರಿ ಚಕ್ರ ಕಂಡುಬಂದಿದೆ. ಲಾರಿ ತಲೆಕೆಳಗಾದ ಸ್ಥಿತಿಯಲ್ಲಿ ನೀರಿನಲ್ಲಿ ಮುಳುಗಿದ್ದು, ಅದರ ಚಕ್ರಕ್ಕೆ ಈಶ್ವರ ಮಲ್ಪೆ ಹಗ್ಗ ಕಟ್ಟಿ ಬಂದಿದ್ದಾರೆ. ಜುಲೈ 16ರಂದು ನಡೆದಿದ್ದ ಗುಡ್ಡಕುಸಿತ ದುರಂತದಲ್ಲಿ ಕೇರಳ ಮೂಲದ ಲಾರಿ ನಾಪತ್ತೆಯಾಗಿತ್ತು. ಲಾರಿ ಯಲ್ಲಿದ್ದ ಚಾಲಕ ಅರ್ಜುನ ಸಹ ನಾಪತ್ತೆಯಾಗಿದ್ದರು. ಆ ವೇಳೆ ಹಲವು ತಂಡಗಳಿಂದ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ತೀವ್ರ ನೀರಿನ ಸೆಳೆತ ಇದಕ್ಕೆ ಅಡ್ಡಿಯಾಗಿತ್ತು. ಗುಡ್ಡ ಕುಸಿತದ ಕಾರಣದಿಂದ ಹೆದ್ದಾರಿ ಬದಿಯಲ್ಲಿದ್ದ ಹೋಟೆಲ್ ಸಮೇತ ಲಾರಿಯೂ ಗಂಗಾವಳಿ ನದಿಯ ಪಾಲಾಗಿತ್ತು. ಎನ್‌ಡಿಆರ್‌ಎಫ್ ತಂಡ ಡ್ರೋನ್ ಮೂಲಕ ಸ್ಕ್ಯಾನಿಂಗ್ ನಡೆಸಿ ಲಾರಿ ಇರುವ ಸ್ಥಳ ಗುರುತು ಮಾಡಿತ್ತು.

ಮೈಸೂರಿನಲ್ಲಿ ಪತ್ರಿಕಾ ದಿನಾಚರಣೆ | ಸಾಧಕ ಪತ್ರಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಪ್ರಶಸ್ತಿ ಪ್ರದಾನ

ಸುಳ್ಳುಸುದ್ದಿ ಸೃಷ್ಟಿಕರ್ತರಿಗೆ ಕಠಿಣ ಶಿಕ್ಷೆ: ಸಿಎಂ ಎಚ್ಚರಿಕೆ

ಮೈಸೂರು: ಸುಳ್ಳುಸುದ್ದಿಗಳಿಗೆ ಬ್ರೇಕ್ ಹಾಕದಿ ದ್ದರೆ ಸಮಾಜದ ಪ್ರತಿಯೊಬ್ಬರ ನೆಮ್ಮದಿ ಹಾಳಾ ಗುತ್ತದೆ. ಯಾರೊಬ್ಬರೂ ನೆಮ್ಮದಿಯಾಗಿ ಬದು ಕಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ. ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಜಿಲ್ಲಾ ಪತ್ರ ಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾ ಚರಣೆ ಹಾಗೂ ವಾರ್ಷಿಕ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮುಖ್ಯಮಂತ್ರಿ ಮಾತನಾಡಿದರು.

ವಾಕ್ ಸ್ವಾತಂತ್ರ್ಯ ನಮಗೆ ನಮ್ಮ ಸಂವಿಧಾನ ನೀಡಿರುವ ಅತ್ಯುನ್ನತ ಮೌಲ್ಯ ಎಂದ ಅವರು, ಸಂವಿಧಾನದ ಮೂರು ಅಂಗಗಳಿಗೆ ಅಪಾಯ ಬಂದರೆ ಸಮಾಜಕ್ಕೆ ಅಪಾಯ ಬಂದಂತೆ. ವಾಕ್ ಸ್ವಾತಂತ್ರ್ಯ ಆಚರಿಸುವ ಪತ್ರಿಕಾರಂಗಕ್ಕೆ ಯಾವ ನಿರ್ಬಂಧಗಳೂ ಇರಬಾರದು ಎನ್ನುವುದನ್ನು ಪಂಡಿತ್ ನೆಹರೂ ಅವರೂ ಪ್ರತಿಪಾದಿಸಿದ್ದರು ಎಂದು ವಿವರಿಸಿದರು.

ಮೈಸೂರಿನಲ್ಲಿ ಶನಿವಾರ ನಡೆದ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಸಾಧಕ ಪತ್ರಕರ್ತರಿಗೆ ಸಿಎಂ ಸಿದ್ದರಾಮಯ್ಯ ಪ್ರಶಸ್ತಿ ವಿತರಿಸಿದರು. ಸಚಿವ ಎಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್ ಹಾಗೂ ಇತರ ಗಣ್ಯರು ಹಾಜರಿದ್ದರು.

ಬಿಎಸ್‌ವೈ ಉದಾಹರಣೆ: ಸುಳ್ಳುಸುದ್ದಿಗಳ ಅನಾಹುತಗಳಿಗೆ ಉದಾಹರಣೆ ನೀಡಿದ ಮುಖ್ಯಮಂತ್ರಿಗಳು, ನಾನು ಸದನದಲ್ಲಿ ಮಾತನಾಡುವಾಗ ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಆಡಿದ ಮಾತನ್ನು ನಾನು ಉದಾಹರಿಸಿದ್ದೆ. ಸಾಲಮನ್ನಾ ಮಾಡೋದಕ್ಕೆ ನಮ್ಮ ಬಳಿ ಪ್ರಿಂಟಿಂಗ್ ಮಷೀನ್ ಇದೆಯಾ ಎಂದು ಯಡಿಯೂರಪ್ಪ ಅವರು ಸದನದಲ್ಲೇ ಹೇಳಿದ್ದರು. ಈ ಮಾತನ್ನು ನಾನು ಉದಾಹರಿಸಿದ್ದೆ. ಆದರೆ, ಸಾಮಾಜಿಕ ಜಾಲ ತಾಣಗಳಲ್ಲಿ ನಾನೇ ಆ ಮಾತು ಹೇಳಿದ್ದಾಗಿ ನಕಲಿ ಸುದ್ದಿ ಸೃಷ್ಟಿಸಿ, ಅದಕ್ಕೆ ಗ್ಯಾರಂಟಿ ಯೋಜನೆಗಳನ್ನು ಬೆರೆಸಿ ತಪ್ಪು ಸಂದೇಶ ಹರಡಿದರು. ಇದರಿಂದ ನಷ್ಟ ಆಗಿದ್ದು ಸಮಾಜಕ್ಕೇ ಹೊರತು ನನಗಲ್ಲ ಎಂದು ಸಿಎಂ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಕಠಿಣ ಕ್ರಮ: ಫೇಕ್‌ನ್ಯೂಸ್ ಸೃಷ್ಟಿಕರ್ತರಿಗೆ ಕಠಿಣ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ನಾವು ಕಾನೂನು ಮಾಡಿದ್ದೇವೆ. ಆದರೆ, ಕೇವಲ ಕಾನೂನಿನಿಂದ ಮಾತ್ರ ಫೇಕ್ ನ್ಯೂಸ್ ತಡೆಯಲು ಸಾಧ್ಯವಿಲ್ಲ. ಇಡೀ ಸಮಾಜ ಇದರ ವಿರುದ್ಧ ಧ್ವನಿ ಎತ್ತಿದರೆ ಮಾತ್ರ ಸಾಧ್ಯ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಪ್ರಜಾವಾಣಿ ಪತ್ರಿಕೆ ಸಂಪಾದಕ ರವೀಂದ್ರ ಭಟ್, ಗ್ಯಾರಂಟಿ ಅನುಷ್ಠಾನ ಸಮಿತಿಯ ಪುಷ್ಪಾ ಅಮರನಾಥ್, ಶಾಸಕರಾದ ರವಿಶಂಕರ್, ತನ್ವೀರ್ ಸೇಠ್, ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆಲೂರು: ಹೃದಯಾಘಾತಕ್ಕೆ ಬಾಲಕ ಬಲಿ

ಹಾಸನ: ಆಲೂರು ತಾಲೂಕಿನ ಚನ್ನಾಪುರ ಗ್ರಾಮದಲ್ಲಿ ಹನ್ನೊಂದು ವರ್ಷದ ಬಾಲಕನೊಬ್ಬ ಹೃದಯಾಘಾತದಿಂದಂದ ಪ್ರಾಣ ಕಳೆದುಕೊಂಡ ಆಘಾತಕಾರಿ ಘಟನೆ ನಡೆದಿದೆ.

ಕಾವ್ಯಶ್ರೀ ಎಂಬುವರ ಪುತ್ರ, ಸರ್ಕಾರಿ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಸಚಿನ್ (11) ಮೃತಪಟ್ಟ ಬಾಲಕ. ಶುಕ್ರವಾರ ಇದ್ದಕ್ಕಿದ್ದಂತೆ ಸಚಿನ್‌ಗೆ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಶಾಲೆಗೆ ಹೋಗದೇ ಮನೆಯಲ್ಲೇ ಟಿವಿ ವೀಕ್ಷಿಸುತ್ತಿದ್ದ. ಆಗ ಎದೆನೋವು ತೀವ್ರವಾಗಿ ಸಚಿನ್ ಸ್ಥಳದಲ್ಲೇ ಕುಸಿದು ಮೃತಪಟ್ಟಿದ್ದಾನೆ. ಸ್ವಲ್ಪ ಸಮಯದ ನಂತರ ಸಚಿನ್‌ನನ್ನು ಮಾತನಾಡಿಸಲು ಬಂದ ಮನೆಯವರು ಆತ ಮಾತನಾಡದೆ ಇರುವುದನ್ನು ಗಮನಿಸಿ ತಕ್ಷಣವೇ ಆಲೂರು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪರೀಕ್ಷೆ ನಡೆಸಿದ ವೈದ್ಯರು ಬಾಲಕ ಮೃತಪಟ್ಟಿದ್ದನ್ನು ದೃಢ ಪಡಿಸಿದರು. ಮಗನನ್ನು ಕಳೆದುಕೊಂಡ ಪಾಲಕರ ಆಕ್ರಂದನ ಮುಗಿಲುಮುಟ್ಟಿದ್ದು ಚಿಕ್ಕವಯಸ್ಸಿನಲ್ಲೇ ಬಾಲಕ ಹೃದಯಾಘಾತಕ್ಕೆ ಬಲಿಯಾದ ಘಟನೆ ಸಾರ್ವಜನಿಕ ವಲಯದಲ್ಲಿ ಆತಂಕ ಮೂಡಿಸಿದೆ.

ಜನರ ಅನುಕೂಲಕ್ಕೆ ಮುಡಾ ಹಣ ಬಳಸಿದರೆ ತಪ್ಪೇನು

ಮೈಸೂರು: ಮುಡಾಹಣವನ್ನು ಜನರ ಅನುಕೂಲ ಹಾಗೂ ಅಭಿವೃದ್ಧಿ ಕಾರ್ಯಕ್ಕೆ ಬಳಸುವುದು ತಪ್ಪಲ್ಲ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿ ದ್ದಾರೆ. ವರುಣಾ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲಾದ 387 ಕೋಟಿ ರು.ವೆಚ್ಚದ ಕಾಮಗಾರಿಗಳ ವಿವರ ನೀಡುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದ ಬಗ್ಗೆ ಶನಿವಾರ ಪ್ರತಿಕ್ರಿಯಿಸಿದ ಯತೀಂದ್ರ, ಮುಡಾ ವ್ಯಾಪ್ತಿಯ ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಹಣ ಬಳಸಲಾಗಿದೆ. ಅದರಲ್ಲಿ ತಪ್ಪೇನು ಎಂದು ಪ್ರಶ್ನಿಸಿದರು. ಆ ಪ್ರಾಧಿಕಾರದ ಹಣ ಇರುವುದೇ ಜನರ ಒಳಿತಿಗೆ ಬಳಸುವುದಕ್ಕೆ. ಎಲ್ಲದಕ್ಕೂ ವಿನಾಕಾರಣ ಆರೋಪ ಮಾಡುತ್ತಾ ಹೋದರೆ ಹೇಗೆ? ನಮ್ಮ ತಂದೆ ವಿರುದ್ಧ ಮಾಡುತ್ತಿರುವ ಎಲ್ಲ ಆರೋಪಗಳೂ ಸುಳ್ಳು. ಸರಕಾರದ ವಿರುದ್ಧ ಮಾತನಾಡಲು ಪ್ರತಿಪಕ್ಷ ನಾಯಕರಿಗೆ ಯಾವ ವಿಚಾರಗಳೂ ಸಿಗುತ್ತಿಲ್ಲ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638 / 86905 44544.

ಇ-ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ACCREDITED WITH GRADE A+ NAAC
KARNATAKA STATE OPEN UNIVERSITY

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/129/2024–25 ದಿನಾಂಕ: 20–07–2024

ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ.

ಯು.ಜಿ.ಸಿ. ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

2024–25 ರ ಜುಲೈ ಆವೃತ್ತಿಗೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಲಿಬ್.ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯು
- ಬಿ.ಎಸ್‌ಸಿ (ಸಂಯೋಜನೆಗಳು)

(• PCM • PMCs • BcBZ
• CBZ • BcBMi • BcMiFs
• CBMi • CZEs • BcZEs
• BcMiEs • BcBEs • CBEs • CMiEs)
[• P-Physics • C-Chemistry
• M-Mathematics
• Cs-Computer Science
• B-Botany • Mi-Microbiology
• Bc-Biochemistry • Z-Zoology
• Es-Environmental Science
• Fs-Food Science & Nutrition]

- ಬಿ.ಎಸ್‌ಸಿ – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

• ಎಂ.ಎ.
• ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

• ಎಂ.ಎಸ್.ಡಬ್ಲ್ಯು

• ಎಂ.ಬಿ.ಎ. – ಆನ್‌ಲೈನ್ ಪ್ರವೇಶ ಪರೀಕ್ಷೆಮೂಲಕ
ಸ್ಪೆಷಲೈಜೇಷನ್:
• ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣೆ ನಿರ್ವಹಣೆ.

• ಎಂ.ಕಾಂ.
ಡ್ಯುಯೆಲ್ ಸ್ಪೆಷಲೈಜೇಷನ್:
• ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ
• ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್

• ಎಂ.ಸಿ.ಎ.

• ಎಂ.ಲಿಬ್.ಐ.ಎಸ್‌ಸಿ.

• ಎಂ.ಎಸ್‌ಸಿ.
• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್ • ಅರ್ಥ್ ಸೈನ್ಸ್

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ

ONLINE PROGRAMS • B.A. • B.Com

• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17–08–2023, F.No.30-30/2023 (DEBIII) ದಿನಾಂಕ: 11–09–2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ. AICTE ಮೂಲಕ ಅನುಮೋದಿಸಿದೆ ಎಂಬಿಎ/ಎಂಸಿಎ/ಎಂಎಸ್‌ಸಿ ಡೇಟಾ ಸೈನ್ಸ್ ಪ್ರೋಗ್ರಾಂಗಳು ಅಧಿಸೂಚನೆ ಸಂಖ್ಯೆ: F.No.: ದಕ್ಷಿಣ: ಪಶ್ಚಿಮ/2023–24/1–43337817229, ದಿನಾಂಕ: 10.06.2023, ಅಡಿಯಲ್ಲಿ ಒದಗಿಸುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, **ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು.** ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು. ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಶಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು / ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು / ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ / ಕೆಎಸ್‌ಆರ್‌ಟಿಸಿ / ಬಿಎಂಟಿಸಿ / ಎನ್‌ಡಬ್ಲ್ಯೂಕೆಆರ್‌ಟಿಸಿ / ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ **ಶೇಕಡ 10%ರಷ್ಟು ರಿಯಾಯಿತಿಯನ್ನು** ಪಡೆಯಬಹುದು.
   - **ತೃತೀಯ ಲಿಂಗಕ್ಕೆ** ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಸರ್ಕಾರವು ಅಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (**ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ**).
4. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 77950 77377 / 99012 23043 / 96114 18726 / 9964 274173 / 98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, **ಬಾಪೂಜಿನಗರ,** ಬೆಂಗಳೂರು–560 026. ದೂ: 080–26603664, ಮೊಬೈಲ್: 9844965515 / 9844126625.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, **ಮಲ್ಲೇಶ್ವರಂ,** ಬೆಂಗಳೂರು–560 003. ದೂ: 080–23448811, ಮೊಬೈಲ್ : 97411 97921 / 94835 17160.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆಕ್ಸ್‌ಫರ್ಡ್ ಎಜುಕೇಷನಲ್ ಟ್ರಸ್ಟ್, ಶ್ರೀನಿವಾಸಪುರ, ಕೋಗಿಲು ಮುಖ್ಯ ರಸ್ತೆ, **ಯಲಹಂಕ,** ಬೆಂಗಳೂರು–560 064, ಮೊಬೈಲ್: 98805 26439 / 90195 26439.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, **ಮಡಿವಾಳ,** ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 068. ಮೊಬೈಲ್ : 8618821417 / 98445 56968.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ಕೆ.ಆರ್. ಪುರಂ,** ಬೆಂಗಳೂರು–560 036. ಮೊಬೈಲ್: 87227 88788.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಆವರಣ, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, **ಸುಂಕದಕಟ್ಟೆ,** ಬೆಂಗಳೂರು–560 091. ಮೊಬೈಲ್: 84534 58238.
8. **ಬೆಳಗಾಂ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ–590 010. ಮೊಬೈಲ್: 96634 51169.
9. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 9035143912 / 7892597159.
10. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನ್ಯುಯೆಲ್ ಕ್ರಿಶ್ಚಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 99803 02686.
11. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊಬೈಲ್: 80887 16236.
12. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು–ನಾಗನೂರು ರಸ್ತೆ ಹಿಂಭಾಗ, ದಾವಣಗೆರೆ–577 004, ಮೊಬೈಲ್: 99864 58055.
13. **ಧಾರವಾಡ ಪ್ರಾದೇಶಿಕ ಕೇಂದ್ರ :** ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್.ಐ.ಸಿ. ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊಬೈಲ್: 99168 94944.
14. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 81978 18807 / 94826 03060.
15. **ಕಲಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 99167 83555.
16. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 99006 67916.
17. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ಮೊಬೈಲ್: 89702 23247.
18. **ಮಂಡ್ಯ ಪ್ರಾದೇಶಿಕ ಕೇಂದ್ರ :** # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು, ಮೇಲುಕೋಟೆ ರಸ್ತೆ, ಮಂಡ್ಯ–571 401. ಮೊಬೈಲ್: 97419 90284.
19. **ಮಂಗಳೂರು ಪ್ರಾದೇಶಿಕ ಕೇಂದ್ರ :** ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, 3ನೇ ಮಹಡಿ, ಶಿರಡಿ ಸಾಯಿಬಾಬಾ ಮಂದಿರದ ಹತ್ತಿರ, ಉಡುಪಿ ಮುಖ್ಯ ರಸ್ತೆ, ಅಶೋಕನಗರ ಅಂಚೆ, ಲೇಡಿಹಿಲ್, ಮಂಗಳೂರು–575 006, ಮೊಬೈಲ್: 99450 58950 / 99721 96692.
20. **ರಾಮನಗರ ಪ್ರಾದೇಶಿಕ ಕೇಂದ್ರ :** ನಂ. 103, 'ಇ' ಬ್ಲಾಕ್, ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562 159, ಮೊಬೈಲ್: 94486 68880 / 88617 32487.
21. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಅಲ್ಕೋಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊಬೈಲ್: 91644 67131.
22. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 98445 06629.
23. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 99725 26647.
24. **ಬೀದರ್ ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್–585 402, ದೂ: 08482–232020, ಮೊಬೈಲ್: 99866 96487.
25. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ಮೊಬೈಲ್: 70222 22241 / 88610 40975.
26. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಕೊಡಗು ಜಿಲ್ಲೆ, ಮೊಬೈಲ್: 80733 42310 / 91419 38803.
27. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೇಡ್, 2ನೇ ಮಹಡಿ, ಸೌತ್ ಎಕ್ಸ್‌ಟೆನ್ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 99807 40048.
28. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 74066 12788.
29. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 97432 76734.
30. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ಮೊಬೈಲ್: 91643 00299.
31. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸಗೂರು ರಸ್ತೆ, ರಾಯಚೂರು–584101. ಮೊಬೈಲ್: 96866 19555.
32. **ಯಾದಗಿರಿ ಪ್ರಾದೇಶಿಕ ಕೇಂದ್ರ: ಸರ್ಕಾರಿ ಪದವಿ ಕಾಲೇಜು,** ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 98800 61361.
33. **ವಿಜಯಪುರ ಪ್ರಾದೇಶಿಕ ಕೇಂದ್ರ :** ವಿಎಸ್‌ಜಿ, ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣ, ನಂ.680/ಇ, ಆಕಾಶವಾಣಿ ಕೇಂದ್ರದ ಎದುರು, ರಿಂಗ್ ರಸ್ತೆ, ವಿಜಯಪುರ–586 103. ಮೊಬೈಲ್: 94836 28267.
34. **ಕೊಪ್ಪಳ ಪ್ರಾದೇಶಿಕ ಕೇಂದ್ರ :** ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, ಮೊದಲನೇ ಮಹಡಿ, ಗೊವನಕೊಪ್ಪ ಆಸ್ಪತ್ರೆ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ–583 231, ಮೊಬೈಲ್: 90085 88675.
35. **ಗದಗ ಪ್ರಾದೇಶಿಕ ಕೇಂದ್ರ :** ಕಲ್ಯಾಣ ಸೀರಿ ಕಾಲೇಜು, ಆವರಣ, ಎಲ್.ಎಲ್. ಬಿಲ್ಡಿಂಗ್, (ಹಳೆ ಡಿಸಿ ಅಫೀಸ್ ಸರ್ಕಲ್, ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 86189 29376.
36. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ :** ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 99451 71920.

ಪ್ರವೇಶಾತಿಯ ಪ್ರಾರಂಭದ ದಿನಾಂಕ: 22.07.2024

ಪ್ರವೇಶಾತಿಯ ಅಂತಿಮ ದಿನಾಂಕ: 15.11.2024

DIPR/Mys/601/AAPL/2024-25

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು

ತಲ್ವಾರ್ ಹಿಡಿದು ಶೋಭಾಯಾತ್ರೆ ನಡೆಸಿ

ಶಹಾಪುರ: ಸರಕಾರ ನಿಮ್ಮಗಳ ರಕ್ಷಣೆ ಮಾಡಲು ಬರೋದಿಲ್ಲ ಅದಕ್ಕೆ ಗಣೇಶ ಮೆರವಣಿಗೆಯಲ್ಲಿ ನಿಮ್ಮ ರಕ್ಷಣೆ ನೀವೇ ಮಾಡಿಕೊಳ್ಳಿ ಹಾಗಾಗಿ ನೀವು ಕೂಡಾ ಮುಸ್ಲಿಂ ಸಮುದಾಯರಂತೆ ಪೆಟ್ರೋಲ್ ಬಾಂಬ್, ತಲ್ವಾರ್ ಹಿಡಿದು ಶೋಭಾಯಾತ್ರೆಯಲ್ಲಿ ಭಾಗಿಯಾಗಬೇಕೆಂದು ಮಾಜಿ ಸಂಸದ ಪ್ರತಾಪಸಿಂಹ ಸಲಹೆ ನೀಡಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಮುಸ್ಲಿಂರು ಪೆಟ್ರೋಲ್ ಬಾಂಬ್ ಹಾಕಿದರೆ ನೀವು ಮರಳಿ ಹೂಗುಚ್ಛ ನೀಡಬೇಕಾಗಿಲ್ಲ ಎಂದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ. ದೂ:08232–225046,
ಇ–ಮೇಲ್:vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 06/2024–25
ದಿನಾಂಕ:10.09.2024 ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2024–25 ದಿನಾಂಕ: 10.09.2024 ರಲ್ಲಿ ಒಟ್ಟು 03 ಕಾಮಗಾರಿಗಳಿಗೆ (ಅಂದಾಜು ಮೊತ್ತ ಕನಿಷ್ಠ ಮೊತ್ತ 75.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ 95.00 ಲಕ್ಷ ರೂಪಾಯಿ) ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು.ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ:08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ (ನಿ), ಎ.ಸಿ ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/319/2024–25

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಹಡಲಗೇರಿ ರಸ್ತೆ,
ಮುದ್ದೇಬಿಹಾಳ. ಕಛೇರಿ ದೂರವಾಣಿ ಸಂ: 08356–200169,
ಇ–ಮೇಲ್: chcmbl@gmail.com

ಸಂ:ತಾ.ಸಾ.ಆ.ಮು/ /2024–25 ದಿನಾಂಕ:20.09.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: 2024–25 ನೇ ಸಾಲಿಗೆ ನಾನ್ ಕ್ಲಿನಿಕಲ್ ಸೇವಾ ಗುತ್ತಿಗೆ ಕಾರ್ಯ ನಿರ್ವಹಣೆಗೆ ಇ–ಪ್ರಕ್ಯುರಮೆಂಟ್ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ.

2024–25 ನೇ ಸಾಲಿನಲ್ಲಿ 100 ಹಾಸಿಗೆ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಮುದ್ದೇಬಿಹಾಳ ನಾನ್ ಕ್ಲಿನಿಕಲ್ ಸೇವೆಗಳ ಸ್ವಚ್ಛತಾ ಕಾರ್ಯ ನಿರ್ವಹಣೆಗೆ 09 ಜನ ಸ್ವಚ್ಛತಾ ಕಾರ್ಮಿಕರನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ದತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರಿನ ಅವಧಿಯು ಆದೇಶ ನೀಡಿದ ದಿನಾಂಕದಿಂದ 31.03.2025 ರ ವರೆಗೆ ಮಾತ್ರ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಟೆಂಡರನ ಅಂದಾಜು ಮೊತ್ತ ರೂ. 13,20,000/–. ಇ.ಎಂ.ಡಿ. ಮೊತ್ತ ರೂ. 33,300/– ಮಾತ್ರವನ್ನು ಇ–ಸಂಗ್ರಹಣೆ ಕರ್ನಾಟಕ ಸರ್ಕಾರ ಇವರ ಹೆಸರಿಗೆ ಪಾವತಿಸತಕ್ಕದ್ದು.ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಲಸದ ಅವಧಿಯಲ್ಲಿ ಕಾರ್ಯಾಲಯದಲ್ಲಿ ಪಡೆಯಬಹುದು.

ಟೆಂಡರ್ ವಿವರ:
1) ಟೆಂಡರ್‌ನ್ನು ಇ–ಪೋರ್ಟಲ್ ಮೂಲಕ ಅಪ್ಲೋಡ ಮಾಡುವ ದಿನಾಂಕ: 20.09.2024 ಬೆಳಿಗ್ಗೆ 11.00 ಘಂಟೆ.
2) ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 04.10.2024 ಸಂಜೆ 17.00 ಘಂಟೆ.
3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.10.2024 ಬೆಳಿಗ್ಗೆ 11.00 ಘಂಟೆ.
4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.10.2024 ಬೆಳಿಗ್ಗೆ 11.00 ಘಂಟೆ.
5) ಇ.ಎಂ.ಡಿ.: ಅನುಬಂಧ–1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವುದು.
6) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ: www.kppp.karnataka.gov.in ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಮುದ್ದೇಬಿಹಾಳ. ದೂರವಾಣಿ ಸಂಖ್ಯೆ: 9380747482, ಇ–ಮೇಲ್: **chcmbl@gmail.com**

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ತಾಲೂಕಾ ಮಟ್ಟದ ಸಾರ್ವಜನಿಕ ಆಸ್ಪತ್ರೆ ,ಮುದ್ದೇಬಿಹಾಳ
ವಾಸಾಸಂಇ/ವಿಜಯಪುರ/263/ಕೆಎಸ್‌ಎಂಸಿಎ/2024–25

ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ತುಮಕೂರು ಗ್ರಾಮಾಂತರ
ಕೆ.ಎಸ್.ಎಫ್.ಸಿ ಬ್ಯಾಂಕ್ ಹಿಂಭಾಗ, ಇಂಡಸ್ಟ್ರೀಯಲ್ ಏರಿಯಾ, ಬಿ.ಹೆಚ್.ರಸ್ತೆ, ತುಮಕೂರು.
Email ID:-cdpotrural@yahoo.in ದೂರವಾಣಿ ಸಂ: 0816–2955713
ಸಂ:ಶಿಅಯೋ:ತುಗ್ರಾ:ಬಾಮೂಸೇ:ಮರುಇ–ಟೆಂಡರ್:2024–25 ದಿನಾಂಕ: 19–09–2024

ಮರು ಇ–ಟೆಂಡರ್ ಪ್ರಕಟಣೆ

ತುಮಕೂರು ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ 01 ಕಂಪ್ಯೂಟರ್ ಆಪರೇಟರ್ ಹಾಗೂ 01 ಮೆಸೆಂಜರ್ ಹುದ್ದೆಗೆ ಬಾಹ್ಯಮೂಲದಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ–ಪೋರ್ಟಲ್ ಮುಖಾಂತರ **http://kppp.karnataka.gov.in** ದ್ವಿ–ಲಕೋಟೆ ಪದ್ಧತಿಯಲ್ಲಿ ಅರ್ಹ ನೊಂದಾಯಿತ ಸಂಸ್ಥೆಗಳಿಂದ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು **http://kppp.karnataka.gov.in** ನಲ್ಲಿ ಅರ್ಜಿ ಫಾರಂ ಹಾಗೂ ನಿಬಂಧನೆಗಳನ್ನು ಪಡೆದು ಸಂಬಂಧಿಸಿದ ದಾಖಲಾತಿಗಳೊಂದಿಗೆ ಆರ್ಥಿಕ ಮತ್ತು ತಾಂತ್ರಿಕ ಬಿಡ್‌ಗಳನ್ನು ನಿಗಧಿತ ದಿನಾಂಕದೊಳಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ಮರುಟೆಂಡರ್‌ನ ವಿವರಗಳು ಈ ಕೆಳಕಂಡಂತಿವೆ.

1	ಟೆಂಡರ್‌ನ ಅಂದಾಜು ಮೊತ್ತ	ರೂ.4.80ಲಕ್ಷ
2	ಇ.ಎಂ.ಡಿ. ಮೊತ್ತ	ರೂ.15,000–00
3	'ಇ' – ಪ್ರೊಕ್ಯೂರ್‌ಮೆಂಟ್' ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ	ದಿನಾಂಕ: 19–09–2024
4	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 03–10–2024 ರಂದು ಸಮಯ: ಸಂಜೆ 4.00 ಗಂಟೆಗೆ
5	Technical Bidಅನ್ನು ತೆರೆಯುವ ದಿನಾಂಕ	ದಿನಾಂಕ: 05–10–2024 ರಂದು ಸಮಯ: ಬೆಳಗ್ಗೆ: 11–00 ಗಂಟೆಗೆ
6	Financial Bid ಅನ್ನು ತೆರೆಯುವ ದಿನಾಂಕ	ದಿನಾಂಕ: 07–10–2024 ಸಮಯ ಬೆಳಗ್ಗೆ: 11–00 ಗಂಟೆಗೆ

ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಬೇಕಾದ ಹುದ್ದೆಗಳ ವಿವರ

ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
ಕಂಪ್ಯೂಟರ್ ಆಪರೇಟರ್ (ಕನಿಷ್ಠ ವೇತನ ಕಾಯ್ದೆ)	01	ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ, ಕಂಪ್ಯೂಟರ್‌ನಲ್ಲಿ ಬೇಸಿಕ್ ಟ್ಯಾಲಿ, ಡಿ.ಟಿ.ಪಿ., ಎಕ್ಸೆಲ್ ಪ್ರಮಾಣ ಪತ್ರ ಹೊಂದಿರಬೇಕು.
ಮೆಸೆಂಜರ್ (ಕನಿಷ್ಠ ವೇತನ ಕಾಯ್ದೆ)	01	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು, ಪ್ರೊಸೆಸ್ ಸರ್ವರ್ ಅನುಭವ ಉಳ್ಳವರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ
ತುಮಕೂರು ಗ್ರಾಮಾಂತರ
DIPR/TUM/RO-19/24-25/Oysters

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅಧ್ಯಕ್ಷತೆಯ ಆಯ್ಕೆ ಸಮಿತಿ

ಟಿಎಸ್‌ಆರ್, ಮೊಹರೆ ಹಣಮಂತರಾಯ ಪ್ರಶಸ್ತಿ ಪ್ರಕಟ


ದಂಡಾವತಿ

ಮಂಜುನಾಥ್


ಕಿದಿಯೂರು

ಡಾ। ಪೂರ್ಣಿಮಾ

ಇಂದೂಧರ

ಎಸ್.ಆರ್.ಮಣೂರ್

ಪಾಲೆತ್ತಾಡಿ


ಎಸ್.ದೊಡ್ಡಮನಿ

ಡಾ। ಕಾಟ್ಕರ್

ಬೆಂಗಳೂರು: ಕನ್ನಡ ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ನೀಡುವ ಟಿ. ಎಸ್. ರಾಮಚಂದ್ರರಾವ್ (ಟಿಎಸ್‌ಆರ್) ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಕನ್ನಡ ಪತ್ರಿಕೆ ಅಥವಾ ಪತ್ರಿಕಾ ಸಮೂಹ ಕಟ್ಟಿ ಬೆಳೆಸಿದ ಪತ್ರಕರ್ತರ ಸಾಧನೆ ಗುರುತಿಸಿ ನೀಡುವ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಕರ್ನಾಟಕ ಸರಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಕಟಿಸಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅಧ್ಯಕ್ಷತೆಯಲ್ಲಿ ರಚಿಸಲಾದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಹಿರಿಯ ಪತ್ರಕರ್ತರಾದ ಡಾ.ಈಶ್ವರ ದೈತೋಟ, ಶಾಂತಲಾ ಧರ್ಮರಾಜ್, ಎಂ.ಎಸ್.ಮಣಿ ಹಾಗೂ ಸದಸ್ಯ ಕಾರ್ಯದರ್ಶಿಗಳಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಒಳಗೊಂಡ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಿ ಪ್ರಶಸ್ತಿ ಘೋಷಿಸಲಾಗಿದೆ.

ಕನ್ನಡ ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸುವ ಪತ್ರಕರ್ತರಿಗೆ 1993ರಿಂದ ಪ್ರತಿ ವರ್ಷ ಟಿಎಸ್‌ಆರ್ ಪತ್ರಿಕೋದ್ಯಮ ಪ್ರಶಸ್ತಿ' ನೀಡುತ್ತದೆ. ಈ ಪ್ರಶಸ್ತಿ ಮೊತ್ತ 2 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. 2018 ರವರೆಗೆ 26 ಜನ ಹಿರಿಯ ಪತ್ರಕರ್ತರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. 2019 ರಿಂದ 2023 ರವರೆಗಿನ 5 ವರ್ಷಗಳ ಅವಧಿಯ ಪ್ರಶಸ್ತಿ ಪ್ರಕಟಿಸಿದೆ.

ಕನ್ನಡ ಪತ್ರಿಕೋದ್ಯಮವನ್ನು ಹೊಸ ಎತ್ತರಕ್ಕೊಯ್ದ ದಿಗ್ಗಜ ದಿ. ಟಿ.ಎಸ್. ರಾಮಚಂದ್ರ ರಾವ್. ಸಮಾಜ, ರಾಜಕಾರಣದ ಓರೆಕೋರೆಗಳಿಗೆ ಇವರ ಛೂ ಬಾಣ ದ ಮೂಲಕ ಪತ್ರಿಕಾ ಭಾಷೆಗೆ ಹೊಸ ರೂಪ ನೀಡಿದವರು. ಇಂಗ್ಲಿಷ್ ನಿಯತಕಾಲಿಕ ವೊಂದನ್ನು ಸಂಪಾದಿಸುತ್ತಿದ್ದ ಟಿಎಸ್‌ಆರ್ ಮೊನಚು ಬರಹಗಳಿಂದಲೇ ಓದುಗರ ಹೃದಯ ಗೆದ್ದವರು. ನಂತರ ಪ್ರಜಾವಾಣಿಯ ಮೂಲಕ ಕನ್ನಡ ಪತ್ರಿಕೋದ್ಯಮಕ್ಕೂ ಈ ಶೈಲಿಯ ಪರಿಚಯ ಮಾಡಿದರು.

ಟಿಎಸ್‌ಆರ್ ಪ್ರಶಸ್ತಿಗೆ ಆಯ್ಕೆಯಾದ ಪತ್ರಕರ್ತರು : 2019ನೇ ಸಾಲಿಗೆ ಶಿವಾಜಿ ಎಸ್. ಗಣೇಶನ್, 2020ನೇ ಸಾಲಿಗೆ ಶ್ರೀಕಾಂತಾಚಾರ್ಯ.ಆರ್.ಮಣೂರ, 2021ನೇ ಸಾಲಿಗೆ ಡಾ.ಆರ್.ಪೂರ್ಣಿಮಾ, 2022ನೇ ಸಾಲಿಗೆ ಡಾ.ಪದ್ಮರಾಜ ದಂಡಾವತಿ, 2023ನೇ ಸಾಲಿಗೆ ಡಾ.ಸರಜೂ ಕಾಟ್ಕರ್.

ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ: ಕನ್ನಡ ಪತ್ರಿಕಾರಂಗದ ಭೀಷ್ಮ ಎಂದೇ ಹೆಸರಾದ ಮೊಹರೆ ಹಣಮಂತ ರಾಯರು 1892 ರ ನವೆಂಬರ್ 12 ರಂದು ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ಜನಿಸಿದರು. ವಿಜಯಪುರದಲ್ಲೇ ಶಿಕ್ಷಣ ಪೂರೈಸಿದ ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸೆರೆಮನೆವಾಸ ಅನುಭವಿಸಿದ ವರು. ನಿಷ್ಠುರ ಪತ್ರಿಕೋದ್ಯಮಕ್ಕೆ ಹೆಸರಾದ ವರು.

ವಿಜಯಪುರದಲ್ಲಿ ಪ್ರಕಟವಾಗುತ್ತಿದ್ದ ಕರ್ನಾಟಕ ವೈಭವ' ವಾರ ಪತ್ರಿಕೆಯ ಉಪ ಸಂಪಾದಕ, ಸಂಪಾದಕರಾಗಿ ಕಾರ್ಯನಿರ್ವಹಿಸಿದ ಬಳಿಕ, 1934ರಲ್ಲಿ ಆಗ ಬೆಳಗಾವಿಯಲ್ಲಿ ಪ್ರಕಟವಾಗುತ್ತಿದ್ದ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ, ವ್ಯವಸ್ಥಾಪಕ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ನಂತರ ಕರ್ಮವೀರ ವಾರ ಪತ್ರಿಕೆ ಪ್ರಾರಂಭಿಸಿದರು. 1956ರ ಸೆಪ್ಟೆಂಬರ್‌ನಲ್ಲಿ ಕನ್ನಡದ ಪ್ರಥಮ ಡೈಜೆಸ್ಟ್ ಕಸ್ತೂರಿ ಮಾಸಿಕವನ್ನು ಲೋಕ ಶಿಕ್ಷಣ ಟ್ರಸ್ಟ್ ಪರವಾಗಿ ಪ್ರಾರಂಭಿಸಿದರು. 1958ರಲ್ಲಿ ನಿವೃತ್ತಿ ಹೊಂದಿದ ಮೊಹರೆ ಹಣಮಂತರಾಯರು 1960ರ ಜುಲೈ 27 ರಂದು ಇಹಲೋಕ ತ್ಯಜಿಸಿದರು. ಕನ್ನಡ ಪತ್ರಿಕೆ ಅಥವಾ ಪತ್ರಿಕಾ ಸಮೂಹವನ್ನು ಕಟ್ಟಿ ಬೆಳೆಸಿದ ಪತ್ರಕರ್ತರ ಸಾಧನೆ ಗುರುತಿಸಿ. ಇವರ ಸ್ಮರಣಾರ್ಥ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಯನ್ನು ಕರ್ನಾಟಕ ಸರಕಾರ 2010ರಿಂದ ಪ್ರತಿ ವರ್ಷ ನೀಡುತ್ತಿದೆ. ಈ ಪ್ರಶಸ್ತಿಯು 2 ಲಕ್ಷ ನಗದು ಪುರಸ್ಕಾರವನ್ನು ಒಳಗೊಂಡಿದೆ. ಈ ವರೆಗೆ 9 ಪತ್ರಕರ್ತರು ಈ ಪ್ರಶಸ್ತಿಗೆ ಭಾಜನರಾ ಗಿದ್ದಾರೆ. 2019ರಿಂದ 2023 ರವರೆಗಿನ 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು ಇದೀಗ ಸರಕಾರ ಪ್ರಕಟಿಸಿದೆ.

2019ನೇ ಸಾಲಿಗೆ ರಾಜೀವ್ ಕಿದಿಯೂರು
2020ನೇ ಸಾಲಿಗೆ ಇಂದೂಧರ ಹೊನ್ನಾಪುರ
2021ನೇ ಸಾಲಿಗೆ ಎನ್.ಮಂಜುನಾಥ
2022ನೇ ಸಾಲಿಗೆ ಚಂದ್ರಶೇಖರ್ ಪಾಲೆತ್ತಾಡಿ
2023ನೇ ಸಾಲಿಗೆ ಶಿವಲಿಂಗಪ್ಪ ದೊಡ್ಡಮನಿ

ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾ.ಪಂ.ಸದಸ್ಯನ ಕೊಲೆ: ಆರೋಪಿಗೆ ಗುಂಡು

ಆಳಂದ: ಸೆ.13ರಂದು ಪಡಸಾವಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವಿಶ್ವನಾಥ್ ಜಮಾದಾರ್‌ರನ್ನು ಕೊಲೆಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಮೇಲೆ ಆಳಂದ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ. ಆರೋಪಿ ಲಕ್ಷ್ಮಣ ಬೆಂಗಳೂರು ಮತ್ತು ಕಲಬುರಗಿಯ ವಿವಿಧೆಡೆ ಬಂದೂಕು ಸರಬರಾಜು ಮಾಡುತ್ತಿದ್ದ. ಈ ಹಿನ್ನೆಲೆಯಲ್ಲಿ ಲಕ್ಷ್ಮಣ ಪೂಜಾರಿ ವಿರುದ್ಧ ಅಕ್ರಮ ಶಸ್ತ್ರಾಸ್ತ್ರ ಪೂರೈಕೆ ಸೇರಿದಂತೆ 11 ಪ್ರಕರಣ ದಾಖಲಾಗಿದೆ. ಕೊಲೆ ಪ್ರಕರಣಕ್ಕೆ ಸಂಬಂಧ ಆಳಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಡಸಾವಳಿಯ ವಿಶ್ವನಾಥ್ ಜಮಾದಾರ್ ಖಾನಾಪುರ– ಜಮಗಾ ಕ್ರಾಸ್ ಬಳಿ ಬೈಕ್ ಮೇಲೆ ಬರುತ್ತಿದ್ದಾಗ ಇಬ್ಬರು ದುಷ್ಕರ್ಮಿಗಳು ಗುಂಡಿನ ದಾಳಿ ಮಾಡಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ–577501)
ಇ–ಮೇಲ್ :E-Mail-ka.chitradurga.dudc@gmail.com
ನಂ. ಜಿ.ನ.ಕೋ(2)ನಗರೋತ್ಥಾನ ಹಂತ 04/ಸಿ.ಆರ್ 65/2024–25 ದಿ: 20.09.2024

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರೂ. 90.00 ಲಕ್ಷಗಳ ಮೊತ್ತದಲ್ಲಿ 01 ಕಾಮಗಾರಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿದ ಪಿ.ಡಬ್ಲ್ಯೂ.ಡಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW 3 ಪ್ರಕಾರ ಐಟಂವಾರು ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ DMA/2024-25/BD/WORK_INDENT29467. ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ (http://ww.kppp.karnataka.gov.in). ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀ ಗಳನ್ನು ಆನ್‌ಲೈನ್‌ನಲ್ಲಿ (http://www.kppp.karnataka.gov.in). ಪಾವತಿಸತಕ್ಕದ್ದು.
ಟೆಂಡರ್ ವೇಳಾಪಟ್ಟಿ :– (1) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ 26–09–2024 ಸಂಜೆ 5.30 ಗಂಟೆ (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 07–10–2024 ಸಂಜೆ 5.30 ಗಂಟೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 08–10–2024 ಬೆಳಿಗ್ಗೆ 11.30 ಗಂಟೆ (4) ಹಣಕಾಸು ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯಾದರೂ ಅಥವಾ ದಿನಾಂಕ ಮುಂದೂಡಿದರು ಸಹ ಈ ಬಗ್ಗೆ ಮಾಹಿತಿಯನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.

DIPR/CTA/KSMCA/268/2024-25
ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಎಸ್‌ಐಟಿ ರಚನೆಗೆ ಆದೇಶ

← ಮೊದಲಪುಟದಿಂದ

ಮುನಿರತ್ನ ವಿರುದ್ಧ ಬೆಂಗಳೂರಿನ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎರಡು ಕ್ರಿಮಿನಲ್ ಪ್ರಕರಣಗಳು ಮತ್ತು ರಾಮನಗರ ಜಿಲ್ಲೆಯ ಕಗ್ಗಲೀಪುರದಲ್ಲಿ ದಾಖಲಾಗಿರುವ ಪ್ರಕರಣ ಹಾಗೂ ಮುಂದೆ ದಾಖಲಾಗಬಹುದಾದ ಪ್ರಕರಣಗಳ ಸಂಬಂಧ ಈ ತಂಡ ತನಿಖೆ ನಡೆಸಲಿದೆ.

14 ದಿನ ನ್ಯಾಯಾಂಗ ಬಂಧನ: ಮಹಿಳೆಯ ಮೇಲಿನ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಶಾಸಕ ಮುನಿರತ್ನ ಅವರನ್ನು ಶನಿವಾರ 42ನೇ ಎಸಿಎಂಎಂ ವಿಶೇಷ ಜನಪ್ರತಿನಿಧಿಗಳ ಕೋರ್ಟ್‌ನಲ್ಲಿ ಹಾಜರುಪಡಿಸಲಾಯಿತು. ಕೆಲಕಾಲ ಮುನಿರತ್ನ ಪರ ವಕೀಲರ ವಾದ ಆಲಿಸಿದ ನ್ಯಾಯಾಧೀಶರು ಆರೋಪಿಯನ್ನು ಅಕ್ಟೋಬರ್ 5 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಇದಕ್ಕೂ ಮೊದಲು ಮುನಿರತ್ನ ಪರ ವಕೀಲರಿಂದ ಜಾಮೀನು ಅರ್ಜಿಗೆ ಸಲ್ಲಿಸಿದರು. ಈ ವೇಳೆ 'ಯಾವಾಗ, ಎಲ್ಲಿ ಬಂಧಿಸಿದರು?' ಎಂದು ಮುನಿರತ್ನ ಅವರನ್ನು ನ್ಯಾಯಾಧೀಶರು ಪ್ರಶ್ನಿಸಿದರು.

'ಜೈಲಿನಿಂದ ಜಾಮೀನಿನ ಮೇಲೆ ಹೊರ ಬಂದಾಗ ಪೊಲೀಸರು ಬಂಧಿಸಿದರು ಸ್ವಾಮಿ' ಎಂದು ಮುನಿರತ್ನ ಉತ್ತರಿಸಿದರು. ಬಂಧನದ ಮೆಮೋ ಪ್ರಕ್ರಿಯೆಗಳನ್ನು ನಿಯಮಾನುಸಾರ ಪಾಲಿಸಿಲ್ಲ ಎಂದು ತನಿಖಾಧಿಕಾರಿಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ಬಂಧನ ದುರುದ್ದೇಶ: ವಕೀಲರ ವಾದ: ಶಾಸಕ ಮುನಿರತ್ನ ಅವರನ್ನು ದುರುದ್ದೇಶದಿಂದ ಬಂಧಿಸಿದ್ದಾರೆ. ಜಾತಿ ನಿಂದನೆ ಪ್ರಕರಣದಲ್ಲಿ ಜಾಮೀನು ಪಡೆದು ಹೊರ ಬಂದ ಕೂಡಲೇ ಪೊಲೀಸರು ಬಂಧಿಸಿದ್ದಾರೆ. ಇಲ್ಲಿ ಸಂತ್ರಸ್ತೆ ನೇರವಾಗಿ ದೂರು ನೀಡಿಲ್ಲ. ಎಸ್‌ಪಿ ಕಚೇರಿಯಿಂದ ಬಂದ ಟಪಾಲ್ ಆಧಾರದ ಮೇಲೆ ಎಫ್‌ಐಆರ್ ದಾಖಲು ಮಾಡಿದ್ದಾರೆ. ಹಾಗಾದರೆ ಎಫ್‌ಐಆರ್‌ನಲ್ಲಿ ಸಹಿ ಹೇಗೆ ಬಂತು? ಇನ್ನಷ್ಟು ಪ್ರಕರಣಗಳು ದಾಖಲಾದರೂ ಆಶ್ಚರ್ಯವಿಲ್ಲ. ಶುಕ್ರವಾರ ಬೆಳಗ್ಗೆ 9 ಗಂಟೆಗೆ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಹೇಳುತ್ತಿದ್ದಾರೆ.

ಆದರೆ ಮಾಧ್ಯಮಗಳಲ್ಲಿ ಬೆಳಗ್ಗೆಯಿಂದಲೇ ಬಂಧನ ಎಂಬ ಸುದ್ದಿ ಪ್ರಸಾರ ಮಾಡಿದ್ದಾರೆ. ಪೊಲೀಸರು ತನಿಖೆಯ ಮಾಹಿತಿ ಸೋರಿಕೆ ಮಾಡುತ್ತಿದ್ದಾರೆ. ಮುನಿರತ್ನ ಅವರನ್ನು ದುರುದ್ದೇಶದಿಂದ ಬಂಧಿಸಿದ್ದಾರೆ ಎಂದು ಮುನಿರತ್ನ ಪರ ವಕೀಲರು ವಾದ ಮಂಡಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸ್ಥಾವರ ಉದ್ಘಾಟನೆ

ಸೆ.24ರಂದು ಆವರ್ತ ವಿದ್ಯುತ್ ಸ್ಥಾವರ ಲೋಕಾರ್ಪಣೆ: ಜಾರ್ಜ್

ಬೆಂಗಳೂರು: ರಾಜ್ಯದ ಮೊಟ್ಟಮೊದಲ 370 ಮೆಗಾ ವ್ಯಾಟ್ ಸ್ಥಾಪಿತ ಸಾಮರ್ಥ್ಯದ ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರವನ್ನು ಸೆ. 24ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಕಟ್ರೈನ್ ರೈಸರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಎಲ್ ತನ್ನ ಅಂಗ ಸಂಸ್ಥೆಯಾದ 'ಕೆಪಿಸಿ ಗ್ಯಾಸ್ ಪರ್ವ ಕಾರ್ಪೊರೇಷನ್ ಲಿಮಿಟೆಡ್' ಮೂಲಕ ಯಲಹಂಕದ ಕೆಪಿಸಿಎಲ್ ಯೋಜನಾ ಪ್ರದೇಶದಲ್ಲಿ ಈ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದು, ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದ್ದಾರೆ.

ಒಟ್ಟು 370 ಮೆ.ವ್ಯಾ. ಸಾಮರ್ಥ್ಯದ ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ (ಕಂಬೈನ್ಡ್ ಸೈಕಲ್ ಪರ್ವ ಪ್ಲಾಂಟ್) ಅನ್ನು ಸುಮಾರು 2,500 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಗ್ಯಾಸ್ ಮತ್ತು ಸ್ಟೀಮ್ ಮೂಲಕ ವಿದ್ಯುತ್ ಉತ್ಪಾದನೆ ಮಾಡುತ್ತಿರುವುದು ಇದರ ವಿಶೇಷತೆ. ಗ್ಯಾಸ್ ಟರ್ಬೈನ್ ಮೂಲಕ 237 ಮೆ.ವ್ಯಾ. ಮತ್ತು ಸ್ಟೀಮ್ ಟರ್ಬೈನ್ ಮೂಲಕ 133 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರಕಾರ ಅಧಿಕಾರದಲ್ಲಿದ್ದಾಗ 2014ರ ಜು. 28ರಂದು ವಿದ್ಯುತ್ ಸ್ಥಾವರ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿತ್ತು. ಪ್ರಸ್ತುತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂಧನ ಸಚಿವರಾಗಿದ್ದಾಗ 2016ರಲ್ಲಿ ಸ್ಥಾವರಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಘಟಕದ ಕಾರ್ಯಾಚರಣೆಗೆ ಇದ್ದ ಅಡೆತಡೆ ನಿವಾರಿಸಲಾಗಿದ್ದು, ಕಳೆದ ಆಗಸ್ಟ್ 8ರಂದು ಪೂರ್ಣ ಲೋಡ್ 370 ಮೆ. ವ್ಯಾ. (20 ಗಂಟೆಗಳ) ನಿರಂತರ ಸಂಯುಕ್ತ ಆವರ್ತ ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ತಿಳಿಸಿದ್ದಾರೆ.

ಕಟ್ರೈನ್ ರೈಸರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ಇದ್ದರು.

ರಾಜ್ಯದ ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು ವಿಸ್ತರಿಸಲು ಬದ್ಧವಾಗಿ ಸರಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಸಚಿವ ಕೆ.ಜೆ.ಜಾರ್ಜ್ ಹಾಗೂ ಕೆಪಿಸಿಎಲ್‌ನ ಪ್ರಯತ್ನದಿಂದಾಗಿ ನೂತನ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರ ಸ್ಥಾಪನೆಯಾಗುತ್ತಿದೆ. ಇದರಿಂದ ರಾಜ್ಯದ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚಳದ ಜತೆಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ. ಸುಸ್ಥಿರ ಇಂಧನ ಭವಿಷ್ಯದ ಕಡೆಗೆ ಇದು ಪ್ರಮುಖ ಮೈಲಿಗಲ್ಲಾಗಲಿದೆ.
-ಗೌರವ್ ಗುಪ್ತಾ,
ಅಪರ ಮುಖ್ಯ ಕಾರ್ಯದರ್ಶಿ

ಹೈಕೋರ್ಟ್ ಮಧ್ಯಪ್ರವೇಶದಿಂದ ಪ್ರಕರಣ ಸುಖಾಂತ್ಯ

ರಸ್ತೆ ಜಮೀನು ರೈತನಿಗೆ ವಾಪಸ್

ಬೆಳಗಾವಿ: ಸ್ಮಾರ್ಟ್‌ಸಿಟಿ ಹೆಸರಿನಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ನಂತರ ಕಾನೂನು ಬಾಹಿರವಾಗಿ ರೈತನ ಜಮೀನು ಒತ್ತುವರಿ ಮಾಡಿಕೊಂಡು ಅವೈಜ್ಞಾನಿಕ ರೀತಿಯಲ್ಲಿ ಬೆಲೆ ನಿಗದಿ ಮಾಡಿದ್ದ ಪ್ರಕರಣ ಕೊನೆಗೂ ಹೈಕೋರ್ಟ್ ಮಧ್ಯಪ್ರವೇಶದಿಂದ ಸುಖಾಂತ್ಯ ಕಂಡಿದ್ದು ಕಾಮಗಾರಿ ನಡೆದ ನಂತರ ಪರಿಹಾರ ನೀಡಲು ಸಾಧ್ಯವಾಗದೆ ಜಮೀನು ವಾಪಸ್ ನೀಡಿದ ಅಪರೂಪದ ಘಟನೆ ಬೆಳಗಾವಿಯಲ್ಲಿ ನಡೆದಿದೆ.

ಹೈಕೋರ್ಟ್ ಆದೇಶದಂತೆ ಸೋಮವಾರದೊಳಗೇ ಸಂತ್ರಸ್ತರಿಗೆ ಮರಳಿ ಜಮೀನು ನೀಡಬೇಕು, ಇಲ್ಲದಿದ್ದರೇ 20 ಕೋಟಿ ರೂ.ದಂಡ ಕೊಡಬೇಕೆಂದು ನೀಡಿದ ಸೂಚನೆ ಹಿನ್ನೆಲೆಯಲ್ಲಿ ನ್ಯಾಯಾಲಯದ ನಿರ್ದೇಶನದಂತೆ ಸ್ಮಾರ್ಟ್ ಸಿಟಿಯಿಂದ ನಿರ್ಮಿಸಿದ ರಸ್ತೆಯಲ್ಲಿ ಜಾಗ ಕಳೆದುಕೊಂಡವರಿಗೆ ಅದೇ ರಸ್ತೆ ಬಂದ್‌ಮಾಡಿ ಜಾಗ ನೀಡುವ ಪ್ರಕ್ರಿಯೆ ಶನಿವಾರ ಬೆಳಗಾವಿ ಮಹಾನಗರ ಪಾಲಿಕೆಯಿಂದ ನಡೆಯಿತು.

ಕೋರ್ಟ್ ಮೆಟ್ಟಿಲೇರಿದ್ದ ಪ್ರಕರಣ: ಬೆಳಗಾವಿಯ ಶಹಾಪುರದ ಶಿವಾಜಿ ಉದ್ಯಾನವನದ ಎಸ್ ಬಿಎಂ ಬ್ಯಾಂಕ್ ವೃತ್ತದಿಂದ ಹಳೇ ಪಿ.ಬಿ. ರಸ್ತೆ ಅಗಲೀಕರಣ ಮಾಡುವ ಉದ್ದೇಶದಿಂದ 2021 ರಲ್ಲಿ ಕಾಮಗಾರಿ ಕೈಗೊಂಡು 9 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗಿತ್ತು.

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟ
ಸಂಖ್ಯೆ: ಲೋಇ:ಬಾವಿ:ಪಿಬಿ:ಕೆಡಬ್ಲು:2024–25/2022 ದಿನಾಂಕ: 19–09–2024

ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ ಆಹ್ವಾನಿಸಲಾಗಿದೆ.**

ವರ್ಕ ಇಂಡೆಂಟ್ ನಂ: ಸಾಮಾನ್ಯ: 15705, 9658

ಎಸ್‌ಸಿ: 7618/ಕಾಲ್3

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.100.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.30.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಆಹ್ವಾನಿಸಲಾಗಿದೆ.

ಅ) ಟೆಂಡರ ಆಕ್ಷೇಪಣೆಗಾಗಿ ನಿಗಧಿಪಡಿಸಿದ ದಿನಾಂಕ: 23–09–2024 ರಂದು ಸಂಜೆ 5–30 ಘಂಟೆಯವರೆಗೆ ಆ) ಟೆಂಡರ ಸ್ವೀಕರಿಸುವ ದಿನಾಂಕ: 03–10–2024 ರಂದು ಸಂಜೆ 4–00 ಘಂಟೆಯವರೆಗೆ ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–10–2024 ರಂದುಸಂಜೆ 4.30 ಘಂಟೆಯವರೆಗೆ ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ: 05–10–2024. ರಂದು ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ
ಡಿಐಪಿಆರ್/ಬಾಗಲಕೋಟೆ/245/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ರಾಯಚೂರು
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಯಚೂರು
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಷ್ಮೀಯ ಶಾಲೆ ಕಂಪೌಂಡ ಹಿಂದುಗಡೆ ಬಾಲಭವನ ಹತ್ತಿರ, ರಾಯಚೂರು.
Email: dominorityraichur@gmail.com
ಸಂಖ್ಯೆ:ಅಸಂಕಇರಾ/ಹೊ.ಸಂ.ಟೆಂಡರ್/ಸಿಆರ್–01/2024–25/439 ದಿ:20–09–2024

::ಇ – ಪ್ರೊಕ್ಯೂರ್‌ಮೆಂಟ್' ಟೆಂಡರ್ ಪ್ರಕಟಣೆ::

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರಾಯಚೂರು ಜಿಲ್ಲೆಯ ಅಧೀನದಲ್ಲಿ ಬರುವ ಮೆಟ್ರಿಕ ಪೂರ್ವ / ಮೆಟ್ರಿಕ್ ನಂತರ ಬಾಲಕ/ ಬಾಲಕಿಯರ ವಸತಿ ನಿಲಯಗಳು/ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳು/ಮೌಲಾನಾ ಆಜಾದ್ ಮಾದರಿ ಶಾಲೆಗಳು/ಡಾ:ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಸದರಿ ಶಾಲೆಗಳಿಗೆ/ ಜಿಲ್ಲಾ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಮಾನವಸೇವೆಯನ್ನು ನೀಡಲು ದ್ವಿ–ಲಕೋಟೆ ಪದ್ದತಿ ಪ್ರಕಾರ ಅರ್ಹ ನೋಂದಾಯಿತ ಎಜೆನ್ಸಿ / ಸಂಸ್ಥೆಗಳಿಂದ ನಿಬಂಧನೆಗಳಿಗೆ ಒಳಪಟ್ಟು 'ಕೆಪಿಪಿಪಿ ಪೋರ್ಟಲ್' ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇಲಾಖೆ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಯಚೂರು

1) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.427.00 (ಲಕ್ಷಗಳಲ್ಲಿ) **2) ಇ ಎಂ.ಡಿ ಮೊತ್ತ (ರೂ.ಗಳಲ್ಲಿ):** ರೂ.6,40,500/– (ರೂ.ಗಳಲ್ಲಿ). **3) "ಕೆಪಿಪಿಪಿ ಪೋರ್ಟ್‌ಲ್' ಮೂಲಕ ಅರ್ಜಿ ಸ್ವೀಕರಿಸುವ ದಿನಾಂಕ:** 20–09–2024. **4)** Pre-Bid Meeting/**ಪ್ರೀ ಬಿಡ್ ಮೀಟಿಂಗ್:** 26–09–2024@11.30 AM ಗಂಟೆಗೆ ಜಿಲ್ಲಾ ಕಛೇರಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಷ್ಮೀಯ ಶಾಲೆ ಕಂಪೌಂಡ ಹಿಂದುಗಡೆ ಬಾಲಭವನ ಹತ್ತಿರ, ರಾಯಚೂರು. **5) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ:** 04–10–2024 @ ಸಾಯಂಕಾಲ 5.30 ಗಂಟೆಗೆ. **6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 05–10–2024 @ ಬೆಳಗ್ಗೆ 5.30 ಗಂಟೆಗೆ. **7) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 09–10–2024 @ ಬೆಳಗ್ಗೆ 11.30 ಗಂಟೆಗೆ.

ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಬಯಸುವ ಆಸಕ್ತರು ನಿಗಧಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು www.KPPP.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು.

ಸಹಿ/– ಜಿಲ್ಲಾ ಅಧಿಕಾರಿಗಳು,
DIP/RCR/399/KSMCA/398/2024-25 ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಯಚೂರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–2/DMF/Ten.Nofi/2024–25/758
ದಿನಾಂಕ:20.09.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ –2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ **"Multi village Drinking water Project for Kuruvalli & Other 02 villages of Siruguppa taluk in Ballari District. (Indent No:2756/CALL-05)** ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ:21.09.2024 ರಿಂದ 04.10.2024 ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ:05.10.2024 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ: 30.09.2024 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂನ್ಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:30.09.2024 ರ ಸಂಜೆ 4.00 ಗಂಟೆಯವರೆಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/455/ಕೆಎಸ್‌ಎಂಸಿಎ/2024–25

ನಾಗಮಂಗಲ: ಯುವಕ ಬ್ರೈನ್ ಸ್ಟ್ರೋಕ್‌ಗೆ ಬಲಿ

ನಾಗಮಂಗಲ: ಇಲ್ಲಿನ ಬದ್ರಿಕೊಪ್ಪಲಿನಲ್ಲಿ ಗಜ ಪಡೆ ಯುವಕರ ಸಂಘದ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಉಂಟಾಗಿದ್ದ ಗಲಭೆಯ ಹಿನ್ನೆಲೆಯಲ್ಲಿ ಬಂಧನದ ಭೀತಿಯಲ್ಲಿ ಗ್ರಾಮ ತೊರೆದಿದ್ದ ಯುವಕ ಬ್ರೈನ್‌ಸ್ಟ್ರೋಕ್‌ನಿಂದ ಶನಿವಾರ ಮೃತಪಟ್ಟಿದ್ದಾನೆ.

ಕಿರಣ್(28)ಗೆ ಬ್ರೈನ್ ಸ್ಟ್ರೋಕ್‌ನಿಂದ ಸಾವನ್ನಪ್ಪಿದ ಯುವಕ. ಮೃತ ಕಿರಣ್ ಕಳೆದ ವಾರ ಗಲಭೆಯ ಹಿನ್ನೆಲೆಯಲ್ಲಿ ಗ್ರಾಮ ತೊರೆದಿದ್ದು, ಯುವಕನ ತಂದೆ ಕುಮಾರ್‌ನನ್ನು ಪೊಲೀಸರು ಬಂಧಿಸಿ 17ನೇ ಆರೋಪಿಯಾಗಿ ಜೈಲಿನಲ್ಲಿರಿಸಿ ದ್ದರು. ತಂದೆಯ ಬಂಧನದಿಂದಾಗಿ ತಾನೂ ಬಂಧನಕ್ಕೊಳಗಾಗುವ ಭೀತಿ ಮತ್ತು ಒತ್ತಡಕ್ಕೆ ಒಳಗಾಗಿ ಗುರುವಾರ ಕಿರಣ್‌ಗೆ ಬ್ರೈನ್ ಸ್ಟ್ರೋಕ್ ಸಂಭವಿಸಿತ್ತು.

ಮಾಲ್ಡೀವ್ಸ್ ದೇಶದ ನಾಟಿಕಾ ಎಂಬ ನಡುಗಡ್ಡೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಾಡಿನ 13 ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಹಿರಿಯ ನಟಿ ಜಯಮಾಲಾ, ಯುವ ನಟಿ ಸೌಂದರ್ಯ, ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ್, ವಿಶ್ವವಾಣಿ ಬಳಗದ ಸದಾನಂದ ಭಟ್, ವೆಂಕಟೇಶ ಹೆಗಡೆ ಹೊಸಬಾಳೆ, ನಂಜನಗೂಡು ಮೋಹನ್, ಸಿದ್ದೇಶ್ ಹಾರನಹಳ್ಳಿ, ಲೇಖಕ ರಾಜು ಅಡಕಳ್ಳಿ ಮತ್ತು ನಾಗಾರ್ಜುನ ಇದ್ದರು.

ದ್ವೀಪರಾಷ್ಟ್ರದಲ್ಲಿ ಕಳೆಗಟ್ಟಿದ ವಿಶ್ವವಾಣಿ ಗ್ಲೋಬಲ್ ಫೋರಂ ಕಾರ್ಯಕ್ರಮ | 13 ಸಾಧಕರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ

ಮಾಲ್ಡೀವ್ಸ್‌ನಲ್ಲಿ ಮೊಳಗಿದ ಕನ್ನಡದ ಕಹಳೆ

ಪ್ರತ್ಯಕ್ಷ ವರದಿ: ರಾಜು ಅಡಕಳ್ಳಿ

ದೇಶ ಸುತ್ತು ಕೋಶ ಓದು...

ಈ ಗಾದೆ ಮಾತನ್ನು ಅಕ್ಷರಶಃ ನಿಜಗೊಳಿಸುವಂತೆ 'ವಿಶ್ವವಾಣಿ'ಯು ತನ್ನ ಗ್ಲೋಬಲ್ ಫೋರಂ ಮೂಲಕ ಸಾವಿರಾರು ಮೈಲಿ ದೂರದ ಸುಂದರ ದ್ವೀಪವಾದ ಮಾಲ್ಡೀವ್ಸ್‌ನಲ್ಲಿ ಸಾಂಸ್ಕೃತಿಕ ಸಮ್ಮಿಲನ ಮತ್ತು ಕನ್ನಡ ನಾಡಿನ ಅಪರೂಪದ ಸಾಧಕರಿಗೆ ಜಾಗತಿಕ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಿ ಹೊಸ ಸಂಚಲನ ಮೂಡಿಸಿತು.

ಮಾಲ್ಡೀವ್ಸ್ ಎಂಬ ಮಾಯಾ ದ್ವೀಪದಲ್ಲಿರುವ 'ನಾಟಿಕಾ' ಎಂಬ ನಡುಗಡ್ಡೆಯಲ್ಲಿ ಈ ವರ್ಣರಂಜಿತ ಸಮಾರಂಭಕ್ಕಾಗಿ ಬೆಂಗಳೂರಿನಿಂದ ಬಂದಿರುವ 'ವಿಶ್ವವಾಣಿ'ಯ ವಿಶೇಷ ನಿಯೋಗವು ಇದನ್ನು ಸಂಪನ್ನಗೊಳಿಸಿದ್ದಲ್ಲದೇ, ಈ ಸಮುದ್ರ ದೇಶದ ಕಲೆ, ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಪ್ರತ್ಯಕ್ಷವಾಗಿ ಅರಿತುಕೊಳ್ಳಲು ಅರ್ಥಪೂರ್ಣ ಪ್ರಯತ್ನ ನಡೆಸಿದ್ದು ವಿಶೇಷವಾಗಿತ್ತು.

'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರ ನೇತೃತ್ವದಲ್ಲಿ ಪ್ರಸ್ತುತ ಮಾಲ್ಡೀವ್ಸ್‌ನಲ್ಲಿರುವ ಈ ನಿಯೋಗದಲ್ಲಿ ಬಾಗಲಕೋಟೆ-ಚಿತ್ರದುರ್ಗದ ಶ್ರೀಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿಯವರು ಸಾನ್ನಿಧ್ಯ ವಹಿಸಿದ್ದು, ಖ್ಯಾತ ಅಭಿನೇತ್ರಿ ಡಾ.ಜಯಮಾಲಾ ರಾಮಚಂದ್ರ ಮತ್ತು ಯುವ ನಟಿ ಸೌಂದರ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು. ಹೀಗೆ ಆಗಮಿಸಿದ ನಿಯೋಗದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ಸಂಗಮಿಸಿದ್ದರು.

ರಾಜಕೀಯ, ಸಮಾಜ ಸೇವೆ, ಆಯುರ್ವೇದ, ವಿಜ್ಞಾನ, ತಂತ್ರಜ್ಞಾನ, ಅಧ್ಯಾತ್ಮ, ಸರಕಾರಿ ಸೇವೆ, ವೈದ್ಯಕೀಯ, ಕಲೆ , ಸಾಹಿತ್ಯ, ಪತ್ರಿಕೋದ್ಯಮ, ಪ್ರವಾಸೋದ್ಯಮ, ಧಾರ್ಮಿಕ, ಚಲನಚಿತ್ರ, ಫ್ಯಾಷನ್ ಡಿಸೈನಿಂಗ್, ಕೃಷಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೋದ್ಯಮ...ಈ ಮುಂತಾದ ಹಲವು ರಂಗಗಳಲ್ಲಿ ಅದ್ವಿತೀಯ ಸಾಧನೆಗೈದ ಪ್ರಮುಖರು ಈ ನಿಯೋಗದಲ್ಲಿದ್ದು, ಈ ಅಂತಾರಾಷ್ಟ್ರೀಯ ಸಮಾರಂಭಕ್ಕೆ ಸಾಕ್ಷಿಯಾದರು. ಇವರ ಪೈಕಿ ಹದಿಮೂರು ಸಾಧಕರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಮಾಡಿ ಪುರಸ್ಕರಿಸಲಾಯಿತು.

ಇಳಿ ಸಂಜೆಯ ಹೊತ್ತು. ಸೂರ್ಯ ಸಮುದ್ರದಲ್ಲಿ ಮುಳುಗಿ ಅಸ್ತಮಿಸುವ ಸುಂದರ ದೃಶ್ಯ ವೈಭವ. ಗೋಧೂಳಿ ಮುಹೂರ್ತ ಬೇರೆ. ಹಕ್ಕಿ ಪಕ್ಕಿಗಳೆಲ್ಲ ಕಲರವಗಯ್ಯುತ್ತಾ ಗೂಡು ಸೇರುವ ಚೆಂದದ ನೋಟ. ಇಂಥ ಅಪರೂಪದ ಸನ್ನಿವೇಶದಲ್ಲಿ, ಮಾಲೆ ಸಮೀಪದ ನಾಟಿಕಾ ದ್ವೀಪದಲ್ಲಿ ನವ ವಧುವಿನಂತೆ ಕಂಗೊಳಿಸುವ ರೆಸಾರ್ಟಿನ ಜಗುಲಿಯಲ್ಲಿ ವಿಶ್ವವಾಣಿಯ ಈ ವಿಶಿಷ್ಟ ಸಮಾರಂಭ ಕಳೆಗಟ್ಟಿತ್ತು. ಮೊದಲಿಗೆ ಭಾರತ-ಮಾಲ್ಡೀವ್ಸ್ ಉಭಯ ದೇಶಗಳ ರಾಷ್ಟ್ರಗೀತೆ ಮೊಳಗಿಸಿ ಗೌರವ ಸೂಚಿಸುವುದರೊಂದಿಗೆ, ಗಣನಾಯಕ-ಗಜವದನನಿಗೆ ನಮಿಸುವ ಮೂಲಕ ಈ ಸಮಾರಂಭಕ್ಕೆ ಚಾಲನೆ ನೀಡಲಾಯಿತು.

ವಿಶ್ವೇಶ್ವರ ಭಟ್ಟರು ಆಗಮಿಸಿದ್ದ ಮಾಲ್ಡೀವ್ಸ್ ಮತ್ತು ಭಾರತದ ಅತಿಥಿಗಳನ್ನು, ನಿಯೋಗದ ಸದಸ್ಯರನ್ನು ಮತ್ತು ಪ್ರಶಸ್ತಿ ಪುರಸ್ಕೃತರನ್ನು ಸ್ವಾಗತಿಸಿ, ವಿಶ್ವವಾಣಿಯು ಈವರೆಗೆ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್

ಮತ್ತು ಪ್ರಸ್ತುತ ಮಾಲ್ಡೀವ್ಸ್‌ನಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಉದ್ದೇಶ ಮತ್ತು ಅನುಭವ ಹಂಚಿಕೊಂಡರು.

ಮಾಲ್ಡೀವ್ಸ್‌ನ ವಿಲ್ಲಾ ನಾಟಿಕಾ ಸಂಸ್ಥೆಯ ಹಿರಿಯ ಅಧಿಕಾರಿ ಮಹಮದೂನ್ ಅಬ್ದುಲ್ ಹಮೀದ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕಾರ್ಯಕ್ರಮಕ್ಕೆ ಶುಭ ಕೋರಿದರು. ಪ್ರಶಸ್ತಿ ಪುರಸ್ಕೃತರ ಪರವಾಗಿ ವಿಧಾನ ಪರಿಷತ್ ಸದಸ್ಯ ಡಾ. ಎಂ.ಜಿ.ಮುಳೆ, ಡಾ.ಎಚ್.ಎಸ್.ರಾಘವೇಂದ್ರ ರಾವ್, ಡಾ.ಕೃಷ್ಣಾ ರೆಡ್ಡಿ ಕೆ.ಎಸ್., ಡಾ.ಲೇಖನ ಪಂಡಿತ್, ಡಾ.ರವಿ ಮಾಕಳಿ ಮಾತನಾಡಿದರು.

ಈ ಸಮಾರಂಭದಲ್ಲಿ ಮೂವರು ಮಹಿಳೆಯರೂ ಸೇರಿದಂತೆ, ಒಟ್ಟು 13 ಸಾಧಕರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು. ಇದೇ ವೇದಿಕೆಯಲ್ಲಿ ಕೊಡಗಿನ ಲೇಖಕಿ ಫ್ಯಾನ್ಸಿ ಮುತ್ತಣ್ಣ ಅವರು ಬರೆದ 'ಒಡಲ ಉರಿ' ಎಂಬ ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಫ್ಯಾನ್ಸಿ ಮತ್ತು ಮುತ್ತಣ್ಣ ಅವರನ್ನು ಸನ್ಮಾನಿಸಲಾಯಿತು.

ನಂಜನಗೂಡು ಮೋಹನ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಫನ್‌ಸ್ಟೇ ಸಂಸ್ಥೆಯ ನಿತಿನ್ ಅಗರ್ವಾಲ್ ಅವರು ಈ ಪ್ರವಾಸದ ಸಂಯೋಜನೆಯಲ್ಲಿ ಮುಖ್ಯ ಪಾತ್ರವಹಿಸಿದ್ದರು. ಲೇಖಕ ರಾಜು ಅಡಕಳ್ಳಿ, ವಿಶ್ವವಾಣಿ ಪತ್ರಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ್ ಮತ್ತು ನಾಗಾರ್ಜುನ, ವಿಶ್ವವಾಣಿ ಬಳಗದ ಹಿತೈಷಿಗಳಾದ ವೆಂಕಟೇಶ್ ಹೆಗಡೆ ಹೊಸಬಾಳೆ, ಸದಾನಂದ ಭಟ್, ಸಿದ್ದೇಶ್ ಹಾರನಹಳ್ಳಿ, ಸುಮಾ ಕೃಷ್ಣಾ ರೆಡ್ಡಿ, ಭೋವಿ ಗುರುಪೀಠದ ಅನೇಕ ಭಕ್ತರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕನ್ನಡಿಗರ ಸಾಧನೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ನಿರಂತರ

ಪತ್ರಿಕೋದ್ಯಮವೆಂಬುದು ನಿಂತ ನೀರಲ್ಲ. ಇದು ಬದಲಾವಣೆಯ ಹರಿಕಾರನಾಗಬೇಕು. ಈ ನಿಟ್ಟಿನಲ್ಲಿ 'ವಿಶ್ವವಾಣಿ' ಚಿಂತಿಸಿ, ಕಾರ್ಯಶೀಲವಾದ ಫಲಶ್ರುತಿಯೇ ಈ ಅಂತಾರಾಷ್ಟ್ರೀಯ ಸಮಾರಂಭ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇದು ಐದನೇ ಅಂತಾರಾಷ್ಟ್ರೀಯ ಕಾರ್ಯಕ್ರಮ. ಕೇವಲ ಒಂಬತ್ತು ತಿಂಗಳುಗಳಲ್ಲಿಯೇ ಹೀಗೆ ಐದು ದೇಶಗಳಿಗೆ ಸಾಂಸ್ಕೃತಿಕ ನಿಯೋಗವನ್ನು ಕರೆದೊಯ್ದು, ಅಲ್ಲಿ ಕನ್ನಡದ ಅಪ್ರತಿಮ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸುವ ಮೂಲಕ 'ವಿಶ್ವವಾಣಿ'ಯು ಸಾಮಾಜಿಕ ಬದ್ಧತೆ ಪ್ರದರ್ಶಿಸುತ್ತಿದೆ. 'ವಿಶ್ವವಾಣಿ'ಯ ಈ ನೂತನ ಪ್ರಯೋಗಕ್ಕೆ ನಾಡಿನ ಮೂಲೆಮೂಲೆಗಳಿಂದ ಅಪಾರ ಪ್ರಶಂಸೆ ವ್ಯಕ್ತವಾಗಿರುವುದು, ಅನೇಕ ಪ್ರತಿಷ್ಠಿತ ವ್ಯಕ್ತಿಗಳು, ಸಂಘ ಸಂಸ್ಥೆಗಳು ನಮ್ಮ ಈ ಪ್ರಯತ್ನವನ್ನು ಪ್ರೋತ್ಸಾಹಿಸುತ್ತಿರುವುದು ನಮಗೆ ಹೆಮ್ಮೆಯ ಸಂಗತಿ. ಮುಂದೆಯೂ ಇನ್ನಷ್ಟು ದೇಶಗಳಲ್ಲಿ ಇದೇ ರೀತಿಯ ಸಮಾರಂಭಗಳನ್ನು ಏರ್ಪಡಿಸಿ ಕನ್ನಡಿಗರ ಸಾಧನೆಗಳ ಮೇಲೆ ವಿಶ್ವ ಮಟ್ಟದಲ್ಲಿ ಬೆಳಕು ಚೆಲ್ಲುವತ್ತ 'ವಿಶ್ವವಾಣಿ'ಯ ನಿರಂತರ ಪ್ರಯತ್ನ ಮುಂದುವರಿಯುತ್ತದೆ ಎಂದರು. ಇಮ್ಮಡಿ ಸಿದ್ಧರಾಮೇಶ್ವರ ಮಹಾ ಸ್ವಾಮೀಜಿಯವರು, ಡಾ. ಜಯಮಾಲಾ ಇವರಂಥ ಸಿನಿಮಾ ಲೋಕದ ದಿಗ್ಗಜರು ವಿಶ್ವವಾಣಿಯ ಪ್ರಯತ್ನದಲ್ಲಿ ಭಾಗಿಯಾಗಿರುವುದು ನಿಜಕ್ಕೂ ಅನುಪಮ ಅನುಭವ. ಡಾ.ಜಯಮಾಲಾ ಅವರು ವಿಶ್ವವಾಣಿಯ ಬಹುತೇಕ ಎಲ್ಲ ಅಂತಾರಾಷ್ಟ್ರೀಯ ಸಮಾರಂಭಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ತಾವು ಸಾಂಸ್ಕೃತಿಕ ರಾಯಭಾರಿಯಾಗಿರುವುದನ್ನು ಪ್ರಸ್ತುತಪಡಿಸಿರುವುದು ವಿಶೇಷ ಎಂದರು.

ವಿಶ್ವವಾಣಿಯ ಪ್ರಯತ್ನ ಪತ್ರಿಕೋದ್ಯಮದಲ್ಲಿ ಹೊಸ ದಾಖಲೆ

ವಿಶ್ವವಾಣಿಯ ಅಪೂರ್ವವಾದ ಈ ಪ್ರಯತ್ನ ನಿಜಕ್ಕೂ ಪತ್ರಿಕೋದ್ಯಮದಲ್ಲಿ ಹೊಸ ದಾಖಲೆ ಎಂದು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವವಾಣಿಯು ಸುದ್ದಿ, ವಿಶ್ಲೇಷಣೆ, ಅಂಕಣಗಳ ಮೂಲಕ ಹೇಗೆ ಹೊಸತನದ ಹರಿಕಾರನಾಗಿದೆಯೋ, ಅದೇ ರೀತಿ ವಿಶ್ವಮಟ್ಟದಲ್ಲೂ ಈ ರೀತಿಯ ಅರ್ಥಪೂರ್ಣ ಸಮಾರಂಭಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಸಂಘಟಿಸುವಲ್ಲಿ ಮುಂಚೂಣಿಯಲ್ಲಿದೆ. ಇದಕ್ಕಾಗಿ 'ವಿಶ್ವವಾಣಿ' ಬಳಗವನ್ನು ಮತ್ತು ವಿಶ್ವೇಶ್ವರ ಭಟ್ಟರನ್ನು ಅಭಿನಂದಿಸುತ್ತೇನೆ ಎಂದರು.

ಭಾರತೀಯ ಮೌಲ್ಯ, ಸಂಸ್ಕೃತಿಗಳನ್ನು ಜಾಗತಿಕವಾಗಿ ಪರಿಚಯಿಸಲು ಇಂಥ ಕಾರ್ಯಕ್ರಮಗಳು ನೆರವಾಗಲಿದೆ. ಹೊರಗೆ ಶಾಂತಿಯನ್ನು ಬೋಧಿಸುತ್ತಾ ಒಳಗೊಳಗೇ ಹಿಂಸೆ, ಭಯೋತ್ಪಾದನೆ ಪ್ರತಿಪಾದಿಸುವಂಥ ಕೆಲವು ಧಾರ್ಮಿಕ ಮುಖಂಡರಿಂದ ಸಮಾಜಕ್ಕೆ ಅಪಾಯ ಎಂದು ತಿಳಿಸಿದರು.

ಎಲ್ಲ ಧರ್ಮಗಳ ತಿರುಳು-ದಯವೇ ಧರ್ಮದ ಮೂಲವಯ್ಯ ಎಂಬುದನ್ನು ಜಗತ್ತಿನ ಎಲ್ಲ ದೇಶಗಳೂ, ಎಲ್ಲ ಧರ್ಮಗಳೂ ಅರ್ಥ ಮಾಡಿಕೊಳ್ಳಬೇಕು. ಸಕಾರಾತ್ಮಕ ಯೋಚನೆಗಳು ಮನುಷ್ಯನ ಬದುಕನ್ನು ಅರ್ಥಪೂರ್ಣಗೊಳಿಸುತ್ತೇವೆ. ಇಂಥ ಸಕಾರಾತ್ಮಕ ಕ್ರಿಯಾಶೀಲ ಯೋಚನೆಗಳನ್ನು ಸಮಾಜದಲ್ಲಿ ಬಿತ್ತಲು ವಿಶ್ವೇಶ್ವರ ಭಟ್ಟರು ತಮ್ಮ ಬರಹಗಳಲ್ಲಿ ಸದಾ ಪ್ರಯತ್ನಿಸುತ್ತಲೇ ಇರುವುದು ಪ್ರಶಂಸನಾರ್ಹ ಎಂದು ತಿಳಿಸಿದರು.

ಹಿಂದಿನಿಂದಲೂ ನಾನು ವಿಶ್ವೇಶ್ವರ ಭಟ್ಟರ ಪುಸ್ತಕ, ಬರಹಗಳ ಅಭಿಮಾನಿ. ಅವರ ಬರಹಗಳ ಪ್ರಭಾವ ನನ್ನ ಮೇಲೆಯೂ ಗಾಢವಾಗಿ ಆಗಿದೆ. ಈ ನಿಟ್ಟಿನಲ್ಲಿ ಅವರು ನನಗೆ ಮಾನಸ ಗುರುವಾಗಿದ್ದಾರೆ. ಇದು ನನ್ನಂತೆ ಇನ್ನೂ ಅನೇಕರ ಅನುಭವವಾಗಿರಲಿಕ್ಕೂ ಸಾಕು. ಒಬ್ಬ ಯಶಸ್ವಿ ಬರಹಗಾರ ಎನ್ನಿಸಿಕೊಳ್ಳುವುದಕ್ಕೆ ಭಟ್ಟರ ಈ ಸೃಜನಶೀಲ ಶಕ್ತಿಯೇ ಸೂಕ್ತ ನಿದರ್ಶನ ಎಂದು ಹೇಳಿದರು.

ಮನುಷ್ಯ ಸಂಬಂಧಗಳನ್ನು ಹೆಚ್ಚಿಸಲು ಇಂಥ ಕಾರ್ಯಕ್ರಮಗಳು ತೀರಾ ಅಗತ್ಯ. ಸಮಾಜ ಎಷ್ಟೇ ಆಧುನಿಕಗೊಂಡರೂ ಇಂದು ವ್ಯಕ್ತಿ- ವ್ಯಕ್ತಿಗಳ ನಡುವೆ ಸಮಾಜ-ಸಮಾಜದ ಮಧ್ಯೆ ಅಂತರ ಹೆಚ್ಚುತ್ತಲೇ ಇದೆ. ಇವುಗಳಿಗೆ ಪರಿಹಾರ ನೀಡಬಲ್ಲ ತಾಕತ್ತು ನಮ್ಮ ಸಾಂಸ್ಕೃತಿಕ ಕ್ಷೇತ್ರಗಳಿಗಿದೆ. ವಿಶ್ವವಾಣಿ ಸಮರ್ಥವಾಗಿ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

-ಸೌಂದರ್ಯ, ನಟಿ

ವಿಶ್ವವಾಣಿಯ ವಿಶ್ವ ಪ್ರವಾಸ ಸುವರ್ಣಾವಕಾಶ



ಮುಖ್ಯ ಅತಿಥಿ ನಟಿ ಡಾ.ಜಯಮಾಲಾ ಅವರು ಮಾತನಾಡಿ, ವಿದೇಶಗಳಿಗೆ ಕೇವಲ ಕುಟುಂಬ ಸಮೇತ ಬಂದರೆ ಹೆಚ್ಚಿನ ಅನುಭವ ದಕ್ಕುವುದಿಲ್ಲ. ಆದರೆ 'ವಿಶ್ವವಾಣಿ'ಯ ನಿಯೋಗದಲ್ಲಿ ಬೇರೆ ಬೇರೆ ದೇಶಗಳಿಗೆ ಭೇಟಿ ನೀಡುವುದೇ ವಿನೂತನ ಅನುಭವ .ಕಾರಣ ಹಲವು ಸಾಧಕರೊಂದಿಗೆ, ದಿಗ್ಗಜರೊಂದಿಗೆ ಅರ್ಥಪೂರ್ಣವಾಗಿ ಸಮಯ ಕಳೆಯಲು, ಹೊಸ ಹೊಸ ವಿಷಯಗಳನ್ನು ಅರಿತುಕೊಳ್ಳಲು 'ವಿಶ್ವವಾಣಿ'ಯ ವಿಶ್ವ ಪ್ರವಾಸ ಸುವರ್ಣಾ ವಕಾಶವಾಗಿದೆ ಎಂದು ತಿಳಿಸಿದರು. ಮಾಲ್ಡೀವ್ಸ್ ನಲ್ಲಿನ ಈ ಕಾರ್ಯಕ್ರಮ ಅಪರೂಪದ ಸಾಧಕರ ಸಂಗಮವಾಗಿದೆ. ನಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳಬೇಕೆಂದರೆ ಹೆಚ್ಚೆಚ್ಚು ಓದಬೇಕು ಮತ್ತು ಹೆಚ್ಚೆಚ್ಚು ದೇಶಗಳನ್ನು ಸುತ್ತಲೇಬೇಕು. ಇವೆರಡೂ ಬೌದ್ಧಿಕ ಚಟುವಟಿಕೆಗಳನ್ನು ಪ್ರಚೋದಿಸುವಂತೆ 'ವಿಶ್ವವಾಣಿ'ಯ ಕಾರ್ಯಕ್ರಮಗಳನ್ನು ರೂಪಿಸುತ್ತಿರುವ ವಿಶ್ವೇಶ್ವರ ಭಟ್ಟರು ಅಭಿನಂದನಾರ್ಹರು ಎಂದು ಹೇಳಿದರು.

ಈಗಾಗಲೇ ವಿಶ್ವವಾಣಿಯಿಂದ ಕನ್ನಡ ನಾಡಿನ ಐವತ್ತಕ್ಕೂ ಹೆಚ್ಚಿನ ವಿವಿಧ ಕ್ಷೇತ್ರಗಳ ಸಾಧಕರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕರಿಸಲಾಗಿದೆ. 'ವಿಶ್ವವಾಣಿ'ಯ ಈ ನೂತನ ಪ್ರಯೋಗಕ್ಕೆ ನಾಡಿನ ಮೂಲೆಮೂಲೆಗಳಿಂದ ಅಪಾರ ಪ್ರಶಂಸೆ ವ್ಯಕ್ತವಾಗಿದೆ. ಮುಂದೆಯೂ ಇನ್ನಷ್ಟು ದೇಶಗಳಲ್ಲಿ ಇದೇ ರೀತಿಯ ಸಮಾರಂಭಗಳನ್ನು ಏರ್ಪಡಿಸಿ ಕನ್ನಡಿಗರ ಸಾಧನೆಗಳ ಮೇಲೆ ವಿಶ್ವ ಮಟ್ಟದಲ್ಲಿ ಬೆಳಕು ಚೆಲ್ಲುವತ್ತ ವಿಶ್ವವಾಣಿಯ ನಿರಂತರ ಪ್ರಯತ್ನ ಮುಂದುವರಿಯುತ್ತದೆ.

- ವಿಶ್ವೇಶ್ವರ ಭಟ್, ವಿಶ್ವವಾಣಿ ಪ್ರಧಾನ ಸಂಪಾದಕ

ಮಾಲ್ಡೀವ್ಸ್‌ನ ಮಜಾ ಮಜಕೂರೇ ಬೇರೆ. ಇಲ್ಲಿ ಸಮಯ ಹೋಗಿದ್ದೇ ಗೊತ್ತಾಗುವುದಿಲ್ಲ. ಎಲ್ಲಿ ನೋಡಿದರೂ ಇಲ್ಲಿ ನೀರು, ನೀರೆಯರು, ನಿರ್ಲಿಪ್ತತೆ, ಪ್ರೀತಿ. ಇಂತಹ ಅವಿಸ್ಮರಣೀಯವಾದ ದ್ವೀಪ ತಾಣದಲ್ಲಿ ಬದುಕಿನ ಒಂದಷ್ಟು ಕ್ಷಣಗಳನ್ನು ಸುಂದರವಾಗಿ, ಪ್ರಶಾಂತವಾಗಿ ಕಳೆಯುವುದಕ್ಕೆ ವಿಶ್ವವಾಣಿಯು ಅವಕಾಶ ಮಾಡಿಕೊಟ್ಟಿದೆ. ಈ ಕಾರ್ಯಕ್ರಮಕ್ಕೆ ಮಾಲ್ಡೀವ್ಸ್‌ನ್ನೇ ಆಯ್ಕೆ ಮಾಡಿದ್ದು ನಿಜಕ್ಕೂ ಅರ್ಥಪೂರ್ಣ.

- ಡಾ.ಕೆ.ಎಸ್.ಕೃಷ್ಣಾರೆಡ್ಡಿ
ಕರ್ನಾಟಕ ಸ್ಟೇಟ್ ರೋಡ್ ರೆಗ್ಯುಲೇಟರಿ ಮತ್ತು ಡೆವಲಪ್‌ಮೆಂಟ್ ಅಥಾರಿಟಿಯ ಹಿರಿಯ ಅಧಿಕಾರಿ

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್

ಮಾಲ್ಡೀವ್ಸ್‌ನ ನಾಟಿಕಾದಲ್ಲಿ ಹಮ್ಮಿಕೊಂಡಿದ್ದ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಾಡಿನ 13 ಸಾಧಕರಿಗೆ ಭೋವಿ ಗುರು ಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಹಿರಿಯ ನಟಿ ಜಯಮಾಲಾ, ಯುವ ನಟಿ ಸೌಂದರ್ಯ ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿ ನೀಡಿ ಗೌರವಿಸಿದರು.

ಡಾ. ಲೇಖನ ಪಂಡಿತ್ ಎಲ್.

ಡಾ.ಕೃಷ್ಣಾ ರೆಡ್ಡಿ

ಡಾ.ಎಚ್.ಎಸ್.ರಾಘವೇಂದ್ರ ರಾವ್

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ವಾದಿರಾಜ ಭಾರದ್ವಾಜ್

ಪಿ.ಎಸ್. ಪ್ರಸಾದ್

ಗಂಧರ್ವ ಮಂಜು

ಸವಿತಾ ಜೈನ್

ಡಾ. ಎಚ್.ರವಿ ಮಾಕಳಿ

ಕೆ.ಆರ್.ನಾಗೇಂದ್ರ

ಡಾ. ಎಂ.ಜಿ. ಮುಳೆ

ಎಂ.ಸೋಮಶೇಖರ್

ರಚನಾ ವೇಣು

ಇಂದುಕುಮಾರ್ ಪಾಟೀಲ್

ಸ್ವರ್ಗದಲ್ಲಿ ಪತ್ರಕರ್ತರಿರುವುದು ಸಾಧ್ಯವೇ ಇಲ್ಲ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಬೇರೆಯವರ ಬಗ್ಗೆ ಬರೆದು ಬರೆದು ಬೇಸರವಾಗಿದೆ. ಎಷ್ಟು ದಿನ ಅಂತ ಬೇರೆಯವರನ್ನ ಟೀಕಿಸುವುದು, ಕಾಲೆಳೆಯುವುದು? ಈ ವಾರ, ಫಾರ್ ಎ ಚೇಂಜ್, ನಮ್ಮ ಬಗ್ಗೆ ಅಂದರೆ ಪತ್ರಕರ್ತರ ಕುರಿತು ಒಂದು ಕಾಲ್ಪನಿಕ ಪ್ರಸಂಗವನ್ನು ಹೇಳುತ್ತೇನೆ. ಒಮ್ಮೆ ಪತ್ರಕರ್ತ ನಿಧನನಾದ. ಆತ ನೇರವಾಗಿ ಸ್ವರ್ಗಕ್ಕೆ ಹೋದ. ಅಲ್ಲಿನ ಬಾಗಿಲು ಮುಚ್ಚಿತ್ತು. ಬಾಗಿಲು ಬಡಿದು ಅದನ್ನು ತೆರೆಯುವಂತೆ ಕೂಗಿದ. ಒಂದು ಸಣ್ಣ ಕಿಟಕಿಯ ಬಾಗಿಲು ಬಡಿದು ಅದನ್ನು ತೆರೆಯುವಂತೆ ಕೂಗಿದ. ಬಾಗಿಲು ತೆರೆಯಿತು. ಒಳಗಿನಿಂದ ಚಿತ್ರಗುಪ್ತ ಹೇಳಿದ 'ಕ್ಷಮಿಸು, ಸ್ವರ್ಗದಲ್ಲಿ ಪತ್ರಕರ್ತರಿಗೆ ಇಂತಿಷ್ಟು ಅಂತಾ ಕೋಟಾ ಇದೆ. ಅದು ಈಗ ಭರ್ತಿಯಾಗಿದೆ. ನಾವು ಇಲ್ಲಿ ಹನ್ನೆರಡು ಮಂದಿ ಪತ್ರಕರ್ತರನ್ನಷ್ಟೇ ಇಟ್ಟುಕೊಳ್ಳುತ್ತೇವೆ. ಅವರಿಗೂ ಇಲ್ಲಿ ಕೆಲಸ ಇಲ್ಲ. ಯಾಕೆಂದರೆ ಇದು ಸ್ವರ್ಗ. ಇಲ್ಲಿ ಯಾವ ಪಾಪಕಾರ್ಯ, ಅಹಿತಕರ ಘಟನೆ ನಡೆಯುವುದಿಲ್ಲವಲ್ಲ. ಹೀಗಾಗಿ ಅವರಿಗೆ ಇಲ್ಲಿ ಯಾವ ಸುದ್ದಿಯೂ ಸಿಗುವುದಿಲ್ಲ. ಪತ್ರಕರ್ತರು ಸ್ವರ್ಗದಲ್ಲಿ ಹೆಚ್ಚು ದಿನ ಇರಬಯಸುವುದಿಲ್ಲ. ಅವರಿಗೆ ಬೋರಾಗುತ್ತದೆ. ಹಾಗಾಗಿ ನಿನಗೇನು ಕೆಲಸ ಇಲ್ಲಿ?'.

ಆದರೆ ಆ ಪತ್ರಕರ್ತ ಕೇಳಬೇಕಲ್ಲ? 'ನನಗೊಂದು ಅವಕಾಶ ಕೊಡಿ. ಬೇಕಾದರೆ ಇಪ್ಪತ್ನಾಲ್ಕು ಗಂಟೆ ಕಾಯುತ್ತೇನೆ ಇಲ್ಲೇ' ಎಂದ. 'ಇಪ್ಪತ್ನಾಲ್ಕು ಗಂಟೆ ಸ್ವರ್ಗದ ಬಾಗಿಲಲ್ಲಿ ಏನು ಮಾಡ್ತೀಯಾ?' ಎಂದು ಚಿತ್ರಗುಪ್ತ ಕೇಳಿದ್ದಕ್ಕೆ, 'ನಾನು ಇಲ್ಲಿ ಸುಮ್ಮನೆ ಕುಳಿತಿರುವುದಿಲ್ಲ. ನಾನು ಒಳಗಿರುವ ಪತ್ರಕರ್ತನನ್ನು ನರಕಕ್ಕೆ ಹೋಗುವಂತೆ ಮನವೊಲಿಸುತ್ತೇನೆ. ಆ ಜಾಗಕ್ಕೆ ನಾನು ಬರುತ್ತೇನೆ. ಆಗ ನಿಮ್ಮ ಕೋಟಾ ಪ್ರಕಾರ ನನಗೆ ಇಲ್ಲಿರಲು ಅವಕಾಶ ಸಿಗುತ್ತದೆ' ಎಂದ ಪತ್ರಕರ್ತ.

ಅದಕ್ಕೆ ಚಿತ್ರಗುಪ್ತ ಸಮ್ಮತಿಸಿದ. ಸ್ವರ್ಗದ ಬಾಗಿಲನ್ನು ತೆರೆದು ಪತ್ರಕರ್ತನನ್ನು ಒಳಬಿಟ್ಟುಕೊಂಡ. ಇಪ್ಪತ್ನಾಲ್ಕು ಗಂಟೆ ಕಳೆಯುವುದರೊಳಗೆ ಪತ್ರಕರ್ತ ಎಲ್ಲರ ವಿಶ್ವಾಸ ಗಳಿಸಿ ತುರ್ತಾಗಿ ಸಭೆ ಕರೆದು ಅಲ್ಲಿ ಘೋಷಿಸಿದ 'ಸದ್ಯದಲ್ಲಿಯೇ ನರಕದಲ್ಲಿ ಹೊಸ ಪತ್ರಿಕೆಯೊಂದು ಆರಂಭವಾಗಲಿದೆ. ದೊಡ್ಡ ಬಂಡವಾಳ ಹೂಡಿ ಭಾರಿ ಪ್ರಮಾಣದಲ್ಲಿ ಪತ್ರಿಕೆ ಆರಂಭಿಸಲು ತಯಾರಿ ನಡೆದಿದೆ. ಆ ಪತ್ರಿಕೆಗೆ ಸಂಪಾದಕರು, ಉಪಸಂಪಾದಕರು, ವರದಿಗಾರರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಸವಲತ್ತುಗಳನ್ನು ನೀಡಲಾಗುವುದು'.

ಮರುದಿನ ಬೆಳಗಾಗುವುದರೊಳಗೆ ಸ್ವರ್ಗದ ಬಾಗಿಲ ಬಳಿ ಈ ಪತ್ರಕರ್ತ ಹೋದರೆ ಚಿತ್ರಗುಪ್ತ ತಡೆದ. 'ನೀನು ಇಲ್ಲಿಯೇ ಇರಬೇಕು. ನೀನು ನರಕಕ್ಕೆ ಹೋಗುವಂತಿಲ್ಲ' ಎಂದ. 'ಏಕೆ?' ಎಂದು ಪ್ರಶ್ನಿಸಿದ್ದಕ್ಕೆ ' ಇಲ್ಲಿರುವ ಎಲ್ಲ ಹನ್ನೆರಡು ಪತ್ರಕರ್ತರು ಈಗಾಗಲೇ ಕಾಲ್ಕಿತ್ತಿದ್ದಾರೆ. ಅವರೆಲ್ಲ ನರಕದಲ್ಲಿನ ಪತ್ರಿಕೆ ಸೇರಲು ಹೋಗುತ್ತಿರುವುದಾಗಿ ಹೇಳಿದ್ದಾರೆ. ನಾನು ಬೇರೆ ದಾರಿಯಿಲ್ಲದೇ ಸಮ್ಮತಿಸಿದ್ದೇನೆ. ಈಗ ಇಲ್ಲಿ ನೀನೊಬ್ಬನೇ ಪತ್ರಕರ್ತನಿರುವುದು. ಇಲ್ಲಿ ನಮಗೆ ಒಬ್ಬನಾದರೂ ಬೇಕೇ ಬೇಕು' ಎಂದ ಚಿತ್ರಗುಪ್ತ. ಆದರೆ ಪತ್ರಕರ್ತ 'ಬಿಲ್‌ಕುಲ್ ಸಾಧ್ಯವೇ ಇಲ್ಲ' ಎಂದ. ಅದಕ್ಕೆ ಚಿತ್ರಗುಪ್ತ 'ನೋಡು, ನೀನು ಸುಳ್ಳು ಹೇಳಿದೆ. ನರಕದಲ್ಲಿ ಯಾವ ಪತ್ರಿಕೆಯೂ ಆರಂಭವಾಗುತ್ತಿಲ್ಲ' ಎಂದ. ಈ ಮಾತನ್ನು ಕೇಳಿದ ಪತ್ರಕರ್ತ ನುಡಿದ 'ಹೌದು, ನಾನೊಂದು ಸುಳ್ಳನ್ನು ಸೃಷ್ಟಿಸಿದೆ. ಅದನ್ನು ಹನ್ನೆರಡು ಪತ್ರಕರ್ತರು ನಂಬಿದ್ದಾರೆ ಅಂದ್ರೆ, ಅದರಲ್ಲಿ ಏನೋ ಇರಲೇಬೇಕು? ನನಗೂ ಇಲ್ಲಿರಲು ಇಷ್ಟವಿಲ್ಲ. ದಯವಿಟ್ಟು ಸ್ವರ್ಗದ ಬಾಗಿಲನ್ನು ತೆರೆಯಿರಿ. ನಾನು ನರಕಕ್ಕೆ ಹೋಗಬಯಸುವೆ. ನಾನು ಇಲ್ಲಿಗೆ ಸೇರಿದವನಲ್ಲ. ನಾನಿರಬೇಕಾದ್ದು ನರಕದಲ್ಲೇ'.

ಅಂದರೆ ಸ್ವರ್ಗದಲ್ಲಿ ಪತ್ರಕರ್ತರಿರುವುದು ಸಾಧ್ಯವೇ ಇಲ್ಲ!

ಅಷ್ಟಕ್ಕೂ ಅಲ್ಲಿ ಅವರಿಗೆ ಕೆಲಸವೇನಿದೆ?

ಅವರಿಗೆ ಅದೇ ಜಗತ್ತು

ಅಮೆರಿಕದ ಪತ್ರಿಕೆಗಳಿಗೆ ಜಗತ್ತು ಅಂದ್ರೆ ಅಮೆರಿಕ! ಅಮೆರಿಕವೇ ಸರ್ವಸ್ವ! ಹೇಗೆ ಅಂತ ಕೇಳ್ತೀರಾ? ಹಾಗಿದ್ರೆ ಓದಿ.

ಒಮ್ಮೆ ಅಮೆರಿಕ ಅಧ್ಯಕ್ಷ ರೋನಾಲ್ಡ್ ರೇಗನ್ ಹಾಗೂ ರಷ್ಯಾ ಅಧ್ಯಕ್ಷ ಮಿಖಾಯಿಲ್ ಗೋರ್ಬಚೇವ್ ಭೇಟಿಯಾದರು. ಅವರಿಬ್ಬರ ಮಧ್ಯೆ ಮಾತಿಗೆ ಮಾತು ಬೆಳೆದು, ಯಾರ ದೇಶ ನಂಬರ್ 1 ಎಂಬ ಪ್ರಶ್ನೆ ಎದುರಾಯಿತು.

ಮ್ಯಾರಥಾನ್ ಓಟ ದಲ್ಲಿ ಯಾರು ಗೆಲ್ಲುತ್ತಾರೋ ಅವರ ದೇಶ ನಂಬರ್ 1 ಎಂದು ಅವರಲ್ಲಿ ತೀರ್ಮಾನವಾಯಿತು. ಆ ಮೂಲಕ ಮೂರನೆಯ ವಿಶ್ವಯುದ್ಧವನ್ನು ತಡೆಯುವುದು ಅವರ ಉದ್ದೇಶವಾಗಿತ್ತು.

ಮರುದಿನ ಬೆಳಗ್ಗೆ ಎಂಟು ಗಂಟೆಗೆ ಎರಡೂ ದೇಶಗಳ ನಾಯಕರು ಓಟಕ್ಕೆ ಸಿದ್ಧರಾಗಿ ನಿಂತರು. ಎರಡೂವರೆ ತಾಸಿನ ನಂತರ ಗೋರ್ಬಚೇವ್ ಗುರಿ ತಲುಪಿದರು. ಇದಾದ ಆರು ಗಂಟೆಗಳ ನಂತರ ರೇಗನ್ ಸಹ ಗುರಿ ತಲುಪಿದರು.

ಮರುದಿನ 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಹೀಗೆ ಬರೆಯಲಾಗಿತ್ತು- 'ವಿಶ್ವದೆಲ್ಲೆಡೆ ಕುತೂಹಲ ಮೂಡಿಸಿದ್ದ ಮ್ಯಾರಥಾನ್ ಓಟದ ಸ್ಪರ್ಧೆಯಲ್ಲಿ ಅಮೆರಿಕದ ಅಧ್ಯಕ್ಷರು ಅಭೂತಪೂರ್ವವೆಂಬಂತೆ ಎರಡನೇ ಸ್ಥಾನ ಗಿಟ್ಟಿಸಿದರು. ಈ ಓಟದಲ್ಲಿ ರಷ್ಯಾ ಅಧ್ಯಕ್ಷ ಗೋರ್ಬಚೇವ್ ಸಹ ಭಾಗವಹಿಸಿದ್ದರೆಂದು ತಿಳಿದುಬಂದಿದೆ. ಅವರು ಎರಡನೇ ಸ್ಥಾನ ಗಳಿಸಿದವರಿಗಿಂತ ಒಂದು ಸ್ಥಾನ ಹೆಚ್ಚು ಗಳಿಸಿದರೆಂದು ಗೊತ್ತಾಗಿದೆ'.

ಬಾಬುರಾವ್ ಪ್ರಶ್ನೋತ್ತರಗಳು

ಪತ್ರಕರ್ತ ಬಾಬುರಾವ್ ಪಟೇಲ್ ಬಗ್ಗೆ ಹಲವು ಬಾರಿ ಈ ಅಂಕಣದಲ್ಲಿ ಪ್ರಸ್ತಾಪಿಸಿದ್ದುಂಟು. 'ಮದರ್ ಇಂಡಿಯಾ' ಹಾಗೂ 'ಫಿಲ್ಮ್ ಇಂಡಿಯಾ' ಪತ್ರಿಕೆಗಳ ಸಂಪಾದಕರಾಗಿದ್ದ ಇವರ ಬಗ್ಗೆ ನಾನು 'ಬಾಬುರಾವ್ ಪಟೇಲ್: ಮತ್ತೊಬ್ಬ ಉಕ್ಕಿನ ಮನುಷ್ಯ' ಎಂಬ ಪುಸ್ತಕವನ್ನೇ ಬರೆದಿದ್ದೇನೆ, ಅದು ಬೇರೆ ಮಾತು. ಅವರ ಪತ್ರಿಕೆಗಳಲ್ಲಿ ಓದುಗರ ಪ್ರಶ್ನೆಗಳಿಗೆ ಪಟೇಲ್ ಉತ್ತರಿಸುತ್ತಿದ್ದ ಅಂಕಣ ಬಹಳ ಜನಪ್ರಿಯವಾಗಿತ್ತು. ಈ ಅಂಕಣದಲ್ಲಿ ಅವರು ಯಾರನ್ನೂ ಬಿಡುತ್ತಿರಲಿಲ್ಲ, ಎಲ್ಲರನ್ನೂ ಚುಚ್ಚುತ್ತಿದ್ದರು. ಅವರ ಪತ್ರಿಕೆಗಳ ಹಳೆಯ ಸಂಚಿಕೆಗಳನ್ನು ಇತ್ತೀಚೆಗೆ ಓದುತ್ತಿದ್ದೆ. ಕೆಲವು ಪ್ರಶ್ನೋತ್ತರಗಳನ್ನು ಚಪ್ಪರಿಸುವುದಾದರೆ...

- ರಷ್ಯಾದಲ್ಲಿ ದೇವರುಗಳು ಇಲ್ಲವೇ?
  - ಖಂಡಿತಾ ಇದ್ದಾರೆ. ಆದರೆ ಅವರಿಗೆ ಲೆನಿನ್, ಸ್ಟಾಲಿನ್ ಅಂತ ಕರೀತಾರೆ!
- ನಿಮಗೀಗ 52 ವರ್ಷ. ನಿಮಗೇನಾದರೂ ಕೆಟ್ಟ ಸ್ಥಳದಲ್ಲಿ ಹುಟ್ಟಿದೆ ಎಂದು ಪಶ್ಚಾತ್ತಾಪವಾಗಿದೆಯಾ?
  - ನಾನು ಯಾವುದೇ ಕೆಟ್ಟ ಸ್ಥಳಕ್ಕೆ ಹೋದರೂ ಅದನ್ನು ಸ್ವಚ್ಛಗೊಳಿಸುತ್ತೇನೆ. ಹೀಗಾಗಿ ಪಶ್ಚಾತ್ತಾಪವಾಗಿಲ್ಲ.
- ಕೃಷ್ಣ ಮೆನನ್ ಅವರಿಗೆ ಖಾತೆ ಇಲ್ಲದ ಮಂತ್ರಿಗಿರಿ ಕೊಟ್ಟಿದ್ದೇಕೆ?
  -ಕೆಲವು ಸಲ ಬೆಲ್ಟ್‌ನಿಂದ ನಾಯಿಯ ಜಾತಿ ಯಾವುದೆಂದು ತಿಳಿಯಬಹುದಂತೆ. ಇದು ಒಂಥರಾ ಹಾಗೆ!
- ಜೀವನದಲ್ಲಿ ಲತಾ ಮಂಗೇಶ್ಕರ್‌ಗೆ ಎಲ್ಲವೂ ಸಿಕ್ಕಿದೆಯಾ?
  - ಯಾವುದು ಸಿಗಬೇಕೋ ಅದೇ ಸಿಕ್ಕಿಲ್ಲ. ಉಳಿದವು ಸಿಕ್ಕಿ ಪ್ರಯೋಜನವೇನು?
- ಹೇಮಾಮಾಲಿನಿ ಬಗ್ಗೆ ನಿಮ್ಮ ಅಭಿಪ್ರಾಯವೇನು?
  - ಆಕೆಯ ಜತೆ ಏನೂ ಹಂಚಿಕೊಳ್ಳದೇ ಅಭಿಪ್ರಾಯ ಹೇಳುವುದು ತಪ್ಪಾಗುತ್ತದೆ. ಆದರೆ ನನಗೆ ಈ ಬಗ್ಗೆ ವಿಷಾದವಿಲ್ಲ.
- ನಾನೊಬ್ಬ ಮುಠ್ಠಾಳ ಎಂದು ರಾಜ್ ಕಪೂರ್ ಹೇಳಿದ್ದಾರಲ್ಲ?
  - ನಾನು ಅವರ ಈ ಮಾತನ್ನು ಸ್ವಲ್ಪವೂ ಪ್ರತಿಭಟಿಸದೇ ಸಮ್ಮತಿಸುತ್ತೇನೆ.
- ಕಪೂರ್‌ಗಳ ಬಗ್ಗೆ ನಿಮ್ಮ ಅನಿಸಿಕೆ?
  - ಎಲ್ಲ ಕಪೂರ್ ನಟರೂ ವಿಕಾರಿಗಳು. ಮಂಗಗಳ ಕೈಯಲ್ಲಿ ಮಾಣಿಕ್ಯ ಎಂಬುದು ಇವರನ್ನು ನೋಡಿದರೆ ತಿಳಿಯುತ್ತದೆ!
- ಸಿಮಿ ಗರೇವಾಲಳಿಗೆ ರಾಜ್‌ಕಪೂರ್ ಕಿಸ್ ಕೊಟ್ಟರಂತೆ?
  - ಅರಣ್ಯದಲ್ಲಿ ನೀವು ಒಂದು ಸಸಿ ನೆಟ್ಟರೆ ಏನೂ ವ್ಯತ್ಯಾಸವಾಗೊಲ್ಲ!
- ಕಾಶ್ಮೀರ ಭಾರತದಿಂದ ಕೈತಪ್ಪಿ ಹೋದರೆ?
  - ಮೂರ್ಖ! ಕಾಶ್ಮೀರ ಯಾವಾಗ ಭಾರತದಲ್ಲಿತ್ತು, ಕೈತಪ್ಪಿ ಹೋಗಲು?!
- ಏಸು ಏಕೆ ಚೀನಾಕ್ಕೆ ಹೋಗಲಿಲ್ಲ?
  - ಅವರಿಗೆ ಭಾಷೆ ಅರ್ಥವಾಗಲಿಲ್ಲವಂತೆ!

ಕಾರಂತರ ಅನುವಾದ ಜಿಜ್ಞಾಸೆ

ಒಮ್ಮೆ ಶಿವರಾಮ ಕಾರಂತರು 'ಗ್ನಾನ' ಎಂಬ ಜ್ಞಾನ ವಿಪರ್ಯಾಸವನ್ನು ಕುರಿತ ವ್ಯಂಗ್ಯಬರಹ ಬರೆದಿದ್ದರು. ಆನಂತರ ಕಾರಂತರ ಕೆಲವು ವ್ಯಂಗ್ಯಬರಹಗಳನ್ನು ಅದೇ ಶೀರ್ಷಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿತು. ಆ ಕೃತಿಗೆ ಮುನ್ನುಡಿ ಬರೆದು ಕೊಡುವಂತೆ ಕಾರಂತರು ವಿ. ಸೀತಾರಾಮಯ್ಯನವರನ್ನು ಕೋರಿದರು. ಅದಕ್ಕೆ ವಿ.ಸೀ ಅವರು ತಕ್ಷಣ 'It is an ass that kicks on all sides' ಎಂದು ಪ್ರತಿಕ್ರಿಯಿಸಿದರು.



'ಇದಕ್ಕೆ ಕನ್ನಡದಲ್ಲಿ ಏನಂತೀರಿ?' ಎಂದು ಕೇಳಿದ್ದಕ್ಕೆ 'ಎಲ್ಲ ಕಡೆಗಳಿಂದಲೂ ಒದೆಯುವ ಕತ್ತೆ' ಎಂದರು. ಕಾರಂತರಿಗೆ ಈ ಅನುವಾದ ಯಾಕೋ ಸರಿ ಎನಿಸಲಿಲ್ಲ. 'ಕನ್ನಡದಲ್ಲಿ ಈ ಸಾಲುಗಳನ್ನು ಸೊಗಸಾಗಿ ಹೇಗೆ ಅನುವಾದ ಮಾಡುವುದು? ನೋಡಿ, ಎಷ್ಟು ಸರಳವಾದ ವಾಕ್ಯ. ಇದನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಹೇಳಲು ನಾವು ತಿಣುಕಾಡುತ್ತೇವೆ' ಎಂದು ಕಾರಂತರು ತಮ್ಮನ್ನು ಭೇಟಿ ಮಾಡಲು ಬಂದವರ ಮುಂದೆ ಹೇಳುತ್ತಿದ್ದರು. ಏನಿಲ್ಲವೆಂದರೂ ಕನಿಷ್ಠ ಹದಿನೈದು-ಇಪ್ಪತ್ತು ಮಂದಿ ಮುಂದೆ ಈ ಬಗ್ಗೆ ಕೇಳಿದರೂ ಕಾರಂತರಿಗೆ ಸಮರ್ಪಕ ಉತ್ತರ ಸಿಗಲಿಲ್ಲ. ಹಾಗಂತ ಕಾರಂತರು ಸುಲಭಕ್ಕೆ ಬಿಡುವ ವ್ಯಕ್ತಿಯಲ್ಲ, ಮಹಾ ಜಿಗುಟ.

ಸುಮಾರು ಆರು ತಿಂಗಳ ನಂತರ ಕಾರಂತರಿಗೆ ಒಳ್ಳೆಯ ಅನುವಾದ ಹೊಳೆಯಿತು. ಅದಾದ ಬಳಿಕವೇ ಅವರು ಆ ಪುಸ್ತಕ ಪ್ರಕಟಣೆಗೆ ಅನುಮತಿ ನೀಡಿದರು. ಅಂದ ಹಾಗೆ ಕಾರಂತರು ಆ ಸಾಲನ್ನು ಹೀಗೆ ಅನುವಾದಿಸಿದ್ದರು- 'ಇದು ಸುತ್ತಲೂ ಲತ್ತೆ ಕೊಡುವ ಕತ್ತೆ!'

ಸೀರೆ ಉಡಿಸುವುದು ಹೇಗೆ?

ಈ ಘಟನೆ ನಡೆದದ್ದು 1948ರಲ್ಲಿ. ಭಾರತದ ಪ್ರಮುಖ ವ್ಯಕ್ತಿಯೊಬ್ಬರು ಲಂಡನ್‌ನಲ್ಲಿ ನಿಧನರಾದರು. ಅವರ ಅಂತ್ಯಕ್ರಿಯೆಯನ್ನು ಅಲ್ಲಿಯೇ ನೆರವೇರಿಸಲು ನಿರ್ಧರಿಸಲಾಯಿತು. ನಿಧನರಾದವರು ಮಂಡಿ ಪ್ರಾಂತದ ಮಹಾರಾಣಿ. ಹೀಗಾಗಿ ಸಕಲ ರಾಜಮರ್ಯಾದೆಗಳೊಂದಿಗೆ ಅಂತಿಮ ಸಂಸ್ಕಾರ ಮಾಡಬೇಕೆಂದು ಸೂಚಿಸಲಾಯಿತು. ಈ ಜವಾಬ್ದಾರಿಯನ್ನು 'ಕೆನ್ಯಾನ್ ಅಂಡರ್‌ಟೇಕರ್' ಎಂಬ ಸಂಸ್ಥೆಗೆ ವಹಿಸಲಾಯ್ತು. ಆ ಸಂಸ್ಥೆ ಅಂತ್ಯಕ್ರಿಯೆ ನೆರವೇರಿಸುವುದರಲ್ಲಿ ಪ್ರಸಿದ್ಧ.

ಮಹಾರಾಣಿ ತನ್ನ ಉಯಿಲಿನಲ್ಲಿ ಅಂತ್ಯಸಂಸ್ಕಾರದ ಸಮಯದಲ್ಲಿ ಕಳೇಬರಕ್ಕೆ ಮದುವೆಯಲ್ಲಿ ಧರಿಸಿದ ಸೀರೆಯನ್ನು ಉಡಿಸಬೇಕೆಂದು ಬರೆದಿದ್ದಳು. ಆ ಸೀರೆಯೇನೋ ಸಿಕ್ಕಿತು. ಆದರೆ ಪಾರ್ಥಿವ ಶರೀರಕ್ಕೆ ಹೇಗೆ ಸೀರೆ ಉಡಿಸುವುದು ಎಂಬ ಪ್ರಶ್ನೆ ಎದುರಾಯಿತು. ಆ ದಿನಗಳಲ್ಲಿ ಲಂಡನ್‌ನಲ್ಲಿ ಸೀರೆ ಉಡುವವರನ್ನು ಎಲ್ಲಿ ಹುಡುಕುವುದು? ಕೆನ್ಯಾನ್ ಅಂಡರ್‌ಟೇಕರ್ಸ್ ಸಂಸ್ಥೆಯ ಅಧಿಕಾರಿಗಳು ಬಹಳ ತಲೆ ಕೆಡಿಸಿಕೊಂಡರು. ಆನಂತರ ಲಂಡನ್‌ನಲ್ಲಿರುವ ಭಾರತೀಯ ಹೈ ಕಮಿಷನ್ ಕಚೇರಿಯ ಅಧಿಕಾರಿಗಳನ್ನು ಭೇಟಿ ಮಾಡಲು ನಿರ್ಧರಿಸಿದರು.

ಆ ದಿನಗಳಲ್ಲಿ ಖುಷವಂತ್ ಸಿಂಗ್ ಭಾರತೀಯ ಹೈ ಕಮಿಷನ್ ಕಚೇರಿಯಲ್ಲಿ ಪ್ರೆಸ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದರು. ಅಲ್ಲದೇ, ಪಬ್ಲಿಕ್ ರಿಲೇಶನ್ಸ್ ವಿಭಾಗದ ಉಸ್ತುವಾರಿಯನ್ನೂ ನಿರ್ವಹಿಸುತ್ತಿದ್ದರು. ಕೆನ್ಯಾನ್ ಅಂಡರ್‌ಟೇಕರ್ಸ್ ಅಧಿಕಾರಿಯೊಬ್ಬ ಖುಷವಂತ್ ಸಿಂಗ್ ಅವರನ್ನು ಭೇಟಿ ಮಾಡಿ, 'ಮಹಿಳೆಯೊಬ್ಬಳಿಗೆ ಸೀರೆ ಉಡಿಸಬೇಕಾಗಿದೆ. ಸೀರೆ ಉಡಿಸುವುದು ಹೇಗೆಂದು ನಮಗೆ ತಿಳಿಯುತ್ತಿಲ್ಲ. ಅದು ಹೇಗೆ ಎಂಬುದನ್ನು ತಿಳಿಸುತ್ತೀರಾ?' ಎಂದು ಕೇಳಿದ.

ಖುಷವಂತ್ ಸಿಂಗ್‌ಗೆ ಅವರು ಬಂದ ಹಿನ್ನೆಲೆ, ಅಂತ್ಯಕ್ರಿಯೆಯ ಶಿಷ್ಟಾಚಾರದ ಅಗತ್ಯ ಮುಂತಾದ ವಿವರಗಳೇನೂ ಗೊತ್ತಿರಲಿಲ್ಲ. 'ನೋಡಿ, ನೀವು ಒಬ್ಬ ರಾಂಗ್ ಪರ್ಸನ್ ಅನ್ನು ಭೇಟಿ ಮಾಡಿದ್ದೀರಿ. ನನಗೆ ಸೀರೆ ಬಿಚ್ಚುವುದು ಗೊತ್ತೇ ಹೊರತು, ಉಡಿಸುವುದು ಗೊತ್ತಿಲ್ಲ. ಕಾರಣ, ನಾನು ನನ್ನ ಜೀವನದಲ್ಲಿ ಒಂದು ಸಲವೂ ಸೀರೆ ಉಡಿಸಿಲ್ಲ. ಅವೆಷ್ಟೋ ಸಲ ಬಿಚ್ಚಿದ್ದೇನೆ' ಎಂದರು ಖುಷವಂತ್ ಸಿಂಗ್.

ಈ ಮಾತನ್ನು ಕೇಳಿದ ಕೆನ್ಯಾನ್ ಅಂಡರ್‌ಟೇಕರ್ಸ್ ಅಧಿಕಾರಿ ಸಿಟ್ಟಿಗೆದ್ದು, ಹೈ ಕಮಿಶನ್ ಆಫೀಸಿನ ಹಿರಿಯ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿ ದೂರು ನೀಡಿದ. ಖುಷವಂತ್ ಸಿಂಗ್‌ರನ್ನು ಅವರು ಕರೆಸಿದರು. ಅದಕ್ಕೆ ಸಿಂಗ್, 'ನಿಮಗೆ ಗೊತ್ತಿದೆಯಾ ಸರ್? ಜೀವನದಲ್ಲಿ ನೀವು ಎಂದಾದರೂ ನಿಮ್ಮ ಹೆಂಡತಿಗೆ ಅಥವಾ ಬೇರೆ ಹೆಂಗಸರಿಗೆ ಸೀರೆ ಉಡಿಸಿದ್ದೀರಾ? ನೀನು ರಾಂಗ್ ಪರ್ಸನ್ ಅನ್ನು ಭೇಟಿ ಮಾಡಿದೆ ಅಂತ ಅವನಿಗೆ ಹೇಳಿದೆ. ನನ್ನ ತಪ್ಪೇನು ಬಂತು ಹೇಳಿ? ಇರೋ ವಿಷಯವನ್ನು ನೇರವಾಗಿ ಹೇಳಿದೆ ಅಷ್ಟೇ' ಎಂದರು.

ಮೇಲಧಿಕಾರಿಯೂ ಜೋರಾಗಿ ನಕ್ಕರು.

ಅವರು ಕುಡಿದಿದ್ದೇನು?

ಐವರಿಗೆ ಜಾನಿವಾಕರ್ ಬ್ಲ್ಯಾಕ್‌ಲೇಬಲ್ ಕೊಡಿ ಹಾಗೂ ಅವರಿಗೆ ಇದು ಜಾನಿವಾಕರ್ ಬ್ಲ್ಯಾಕ್‌ಲೇಬಲ್ ಎಂದು ಹೇಳಿ. ಆನಂತರ ಆ ಐವರಿಗೆ ಜಾನಿವಾಕರ್ ಬ್ಲ್ಯಾಕ್‌ಲೇಬಲ್ ಕೊಟ್ಟು, ಅದು ಜಾಕ್ ಡೇನಿಯಲ್ಸ್ ಎಂದು ಹೇಳಿ. ಅವರು ಅದನ್ನು ಕುಡಿದ ನಂತರ 'ನಿಮಗೆ ಯಾವುದು ಇಷ್ಟವಾಯಿತು?' ಎಂದು ಕೇಳಿ. ಆ ಐವರೂ ಕುಡಿದಿದ್ದು ಒಂದೇ ಆದರೂ, ಎರಡು ಬೇರೆ ಬೇರೆ ಬ್ರ್ಯಾಂಡ್‌ಗಳ ವಿಸ್ಕಿಯನ್ನು ಕುಡಿದಿದ್ದೇವೆಂದು ಯೋಚಿಸಲಾರಂಭಿಸುತ್ತಾರೆ. ಅವರೆಲ್ಲ ಒಂದೇ ವಿಸ್ಕಿಯನ್ನು ಕುಡಿದು, ಎರಡು ಇಮೇಜ್‌ಗಳ ರುಚಿಯನ್ನು ಯೋಚಿಸಲಾರಂಭಿಸುತ್ತಾರೆ. Actually they are tasting images.

ಜಿರಳೆ ಕಲಿಸಿದ ಪಾಠ

ಸಮಸ್ಯೆಯ ನಿರ್ವಹಣೆಯ ಬಗ್ಗೆ ಗೂಗಲ್‌ನ ಸಿಇಒ ಭಾರತೀಯ ಮೂಲದ ಸುಂದರ್ ಪಿಚೈ ಹೇಳಿದ ಮಾತು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಿದೆ. ರೆಸ್ಟೋರೆಂಟ್ ಒಂದರಲ್ಲಿ ಎಲ್ಲಿಂದಲೋ ಒಂದು ಜಿರಳೆ ಹಾರಿ ಬಂದು ಒಬ್ಬ ಮಹಿಳೆಯ ಮೇಲೆ ಕುಳಿತುಕೊಂಡಿತು. ಗಾಬರಿಯಾದ ಆಕೆ ಒಂದೇ ಸಮನೇ ಸೂರು ಕಿತ್ತುಹೋಗುವ ಹಾಗೆ ಕಿರುಚಿಕೊಳ್ಳಲಾರಂಭಿಸಿದಳು. ಆ ಜಿರಳೆಯಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಎರಡೂ ಕೈಗಳನ್ನು ಎತ್ತಿ, ಜೋರಾಗಿ ಕೂಗಿ, ಬೊಬ್ಬಿರಿದು ಒಂದು ಸುತ್ತು ತಾನಿದ್ದ ಟೇಬಲ್ ಸುತ್ತೆಲ್ಲ ಓಡಾಡಿ ರಂಪ ಮಾಡಿದಳು. ಎಷ್ಟೆಂದರೂ ಹೆಣ್ಣು ಧ್ವನಿ, ಆ ಕಿಟಾರ್ ಧ್ವನಿಗೆ ಜನರು ಸಹಜವಾಗಿಯೇ ಬೆಚ್ಚಿಬಿದ್ದರು, ಹೋಟೆಲ್‌ನಲ್ಲಿರುವವರೆಲ್ಲರೂ ಏನಾಯ್ತು ಏನಾಯ್ತು ಎಂದು ಮುಖ ಮುಖ ನೋಡಿಕೊಂಡರು.

ಇತ್ತ ಆ ಮಹಿಳೆ ಅದು ಹೇಗೋ ಮಾಡಿ ಜಿರಳೆಯನ್ನು ದೂಡಿ ನಿರಾಳವಾದಳು. ಆದರೆ ಆ ಜಿರಳೆ ಹಾರಿ ಅದೇ ಗುಂಪಿನಲ್ಲಿದ್ದ ಮತ್ತೊಬ್ಬ ಮಹಿಳೆಯ ಮೇಲೆ ಕುಳಿತುಕೊಂಡಿತು. ಒಂದೇ ಗುಂಪೆಂದ ಮೇಲೆ ಕೇಳಬೇಕೆ? ಮತ್ತೊಬ್ಬ ಮಹಿಳೆಯೂ ಡ್ರಾಮಾ ಮುಂದುವರಿಸಿದಳು. ಈ ಗೌಜು ಬಹಳ ಜೋರಾಗಿದ್ದರಿಂದ ವೇಯ್ಟರ್ ಅಲ್ಲಿಗೆ ಬಂದ. ಆಗ ಮಹಿಳೆಯ ಮೇಲಿದ್ದ ಜಿರಳೆ ಆ ವೇಯ್ಟರ್ ಮೇಲೆ ಕುಳಿತುಕೊಂಡಿತು. ಆದರೆ ವೇಯ್ಟರ್ ಒಂದು ಕ್ಷಣ ಸ್ತಬ್ಧನಾದ. ಶರ್ಟ್ ಮೇಲಿಂದ ಜಿರಳೆ ಹೇಗೆ ಓಡಾಡುತ್ತಿದೆ ಎಂದು ಗಮನಿಸಿ ಅದನ್ನು ಗಬಕ್ಕನೆ ಹಿಡಿದು, ನಿಧಾನವಾಗಿ ತೆಗೆದುಕೊಂಡು ಹೋಗಿ ಹೊರಗೆ ಹಾಕಿದ. ಎಲ್ಲವೂ ಸಹಜ ಸ್ಥಿತಿಗೆ ಬಂತು. ನಾನು ಕಾಫಿ ಹೀರುತ್ತಾ ಇನ್ನೊಂದು ಟೇಬಲ್‌ನಲ್ಲಿ ಕುಳಿತಿದ್ದೆ. ನನ್ನ ತಲೆಯ ಆ್ಯಂಟೆನಾ ಈ ಘಟನೆಯಿಂದ ಒಂದೆರಡು ಅಂಶಗಳ ಬಗ್ಗೆ ಆಲೋಚಿಸಲು ಶುರು ಮಾಡಿತ್ತು. ಇಲ್ಲಿ ನಡೆದ ಈ ನಾಟಕೀಯ ಬೆಳವಣಿಗೆಗೆ ಆ ಜಿರಳೆ ಕಾರಣವಾ? ಹಾಗಾಗಿದ್ದರೆ, ಆ ಮಹಿಳೆಯರ ಹಾಗೆ ವೇಯ್ಟರ್ ಏಕೆ ವಿಚಲಿತನಾಗಲಿಲ್ಲ? ಏಕೆ ಕೂಗಾಡಿ ರಂಪ ಮಾಡಲಿಲ್ಲ? ಅಷ್ಟು ಪರ್ಫೆಕ್ಟ್ ಆಗಿ ಹೇಗೆ ಆತ ಆ ಸಂದರ್ಭವನ್ನು ನಿಭಾಯಿಸಿದ?

ಅಂದರೆ, ಅದರ ಅರ್ಥ ಆ ಸ್ಥಿತಿಗೆ ಕಾರಣ ಜಿರಳೆಯಲ್ಲ. ಬದಲಿಗೆ ಆ ಜಿರಳೆ ಸೃಷ್ಟಿ ಮಾಡಿದ್ದಂಥ ಸನ್ನಿವೇಶವನ್ನು ನಿಭಾಯಿಸುವುದಕ್ಕೆ ಆಗದೇ ಇರುವುದು. ಅದು ಆ ಮಹಿಳೆಯರನ್ನು ವಿಚಲಿತರನ್ನಾಗಿ ಮಾಡಿತು. ಇದರಿಂದ ನನಗೆ ಒಂದು ವಿಚಾರ ಅರ್ಥ ವಾಯಿತು. ಅದೇನೆಂದರೆ, ನನ್ನ ಅಪ್ಪ, ಆಫೀಸಿನಲ್ಲಿರುವ ಬಾಸ್, ನನ್ನ ಹೆಂಡತಿ ಅಥವಾ ಇನ್ಯಾರೇ ನನ್ನ ಮೇಲೆ ಕೂಗಾಡುವುದು ನನ್ನನ್ನು ವಿಚಲಿತನನ್ನಾಗಿ ಮಾಡುತ್ತಿಲ್ಲ. ಬದಲಿಗೆ ಆ ಕೂಗುವಿಕೆಯಿಂದ ನನ್ನ ಮೇಲಾಗುವ ಪರಿಣಾಮವನ್ನು ನಿಭಾಯಿಸುವುದು ನನ್ನಿಂದಾಗುತ್ತಿಲ್ಲ.

ರೋಡ್‌ನಲ್ಲಾಗುವ ಟ್ರಾಫಿಕ್ ಜ್ಯಾಮ್ ನನ್ನನ್ನು ತಾಳ್ಮೆ ಕಳೆದುಕೊಳ್ಳುವಂತೆ ಮಾಡುತ್ತಿಲ್ಲ, ಬದಲಿಗೆ ಟ್ರಾಫಿಕ್ ಜ್ಯಾಮ್‌ನಿಂದಾದ ಕಿರಿಕಿರಿಯನ್ನು ನನ್ನಿಂದ ತಡೆದುಕೊಳ್ಳುವುದಕ್ಕೆ ಆಗದೇ ಇರುವುದೇ ನನ್ನ ಅಶಾಂತಿ, ತಾಳ್ಮೆ ರಹಿತ ವರ್ತನೆಗೆ ಕಾರಣ. ಇಲ್ಲಿ ವಿಷಯ ಸ್ಪಷ್ಟ- ಸಮಸ್ಯೆಗಿಂತಲೂ ಹೆಚ್ಚಾಗಿ ಆ ಸಮಸ್ಯೆಗೆ ನಾವು ಸ್ಪಂದಿಸುವ ರೀತಿ ನಮ್ಮ ಜೀವನದಲ್ಲಿ ಅಶಾಂತಿ ಉಂಟುಮಾಡುತ್ತಿರುವುದು.

ಹೀಂಗಂದ್ರ, ಹ್ಯಾಂಗ?

ಆ್ಯಂಟಿಕ್ (antique) ಅಂದ್ರೆ, ಹಳೆ, ಪುರಾತನ ಎಂದು ತಾನೆ. ಆ್ಯಂಟಿಕ್ ಶಾಪ್ ಅಂದ್ರೆ, ಅಂಥ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿ ಎಂದರ್ಥ ತಾನೆ. ಇತ್ತೀಚೆಗೆ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಕಂಡ ವರ್ಗೀಕೃತ (classifieds) ಜಾಹೀರಾತಿನಲ್ಲಿ ಹೀಗೆ ಬರೆದಿತ್ತು- Selling new antique sofa sets....

ಕೆಲ ವರ್ಷಗಳ ಹಿಂದಿನ ಮಾತು. ಉತ್ತರಪ್ರದೇಶದಲ್ಲಿ ವಿಧಾನಸಭೆ ಚುನಾವಣೆಯ ಬಿಸಿ ಏರಿತ್ತು. ಆ ಸಂದರ್ಭದಲ್ಲಿ ಚುನಾವಣೆ ಆಯೋಗ ಹೊರಡಿಸಿದ ಪ್ರಕಟಣೆಯಲ್ಲಿ ಹೀಗೆ ಬರೆದಿತ್ತು- Do not accept any bride (bribe ಎನ್ನುವ ಬದಲು) or inducement in casting your vote'.

ಪ್ರಸೆನ್ಸ್ ಆಫ್ ಮೈಂಡ್

ಹೊಸದಾಗಿ ಕಾರ್ಪೊರೆಟ್ ಕಂಪನಿ ಸೇರಿದ ಟ್ರೇನಿ ಉದ್ಯೋಗಿ, ಇಂಟರ್‌ಕಾಮ್‌ನಲ್ಲಿ ಕ್ಯಾಂಟೀನ್‌ಗೆ ಫೋನ್ ಮಾಡಿ 'ಲೋ ಒಂದು ಕಪ್ ಕಾಫಿ ತೆಗೆದುಕೊಂಡು ಬಾ' ಎಂದು ಗಡಸು ದನಿಯಲ್ಲಿ ಹೇಳಿದ. ಅತ್ತ ಕಡೆಯಿಂದ 'ಈಡಿಯಟ್, ಇದು ರಾಂಗ್ ನಂಬರ್, ನೀನು ಯಾರ ಜತೆ ಮಾತಾಡುತ್ತಿದ್ದೀಯ ಎಂಬುದು ನಿನಗೆ ಗೊತ್ತಾ?' ಎಂಬ ದನಿ ಕೇಳಿತು.

'ಇಲ್ಲ, ಇಲ್ಲ' ಎಂದ ಟ್ರೇನಿ.

'ನಾನು ಈ ಕಂಪನಿಯ ಸಿಇಒ, ಮುಟ್ಠಾಳ' ಎಂದ. ಅಷ್ಟಕ್ಕೇ ಸುಮ್ಮನಾಗದ ಟ್ರೇನಿ ತುಸು ಜೋರಾಗಿ 'ನೀನು ಯಾರು ಹತ್ತಿರ ಮಾತಾಡುತ್ತಿದ್ದೀಯಾ ಎಂಬುದು ಗೊತ್ತೇನೋ ಈಡಿಯಟ್' ಎಂದು ರೋಪು ಹಾಕಿದ. ಆ ಮಾತಿಗೆ ತಕ್ಷಣ ಜರ್‍ರನೆ ಇಳಿದು ಹೋದ ಸಿಇಒ 'ಇಲ್ಲ ಸರ್, ನೀವು ಯಾರೋ ಗೊತ್ತಾಗಲಿಲ್ಲ, ಸಾರಿ ಸರ್' ಎಂದ. ಅದಕ್ಕೆ ಟ್ರೇನಿ, 'ನಾನು ಯಾರು ಅಂತ ಗೊತ್ತಾಗಲಿಲ್ಲ ತಾನೆ? ಬಿಡು' ಎಂದು ಧಡಕ್ಕನೆ ಫೋನಿಟ್ಟು, 'ಬಚಾವಾದೆ ಬಡಜೀವವೇ' ಎಂದು ನಿಟ್ಟುಸಿರು ಬಿಟ್ಟ!

ಗುಳಿಗೆ ರಸಘುಳಿಗೆ ಹರಟೆ ಮತ್ತೊಂದು ಲೆಕ್ಕ ಮಿದುಳಿಗೆ

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅವರೀಗ ಬರೀ ಮಾತ್ರೆಗಳ ಫಳ್ಹಾರ ಮಾಡಿಕೊಂಡೇ ಬದುಕಿರೋದು'- ಗಂಭೀರವಾದ ಯಾವುದೋ ಕಾಯಿಲೆ ಹತ್ತಿಸಿಕೊಂಡು ಕಟ್ಟುನಿಟ್ಟಿನ ಪಥ್ಯದಲ್ಲಿ ಮೂರುಹೊತ್ತೂ ಮಾತ್ರೆಗಳನ್ನು ತಿನ್ನಬೇಕಾದವರ ಅವಸ್ಥೆಯ ಬಗ್ಗೆ ಹೇಳುವಾಗಿನ ಮಾತಿದು. ಮಾತ್ರೆಗಳು ಈಗ ನಮ್ಮ ಜೀವನವನ್ನು ಎಷ್ಟು ವ್ಯಾಪಿಸಿವೆಯೆಂದರೆ, ಕಾಯಿಲೆ ಸಣ್ಣದಿರಲಿ ದೊಡ್ಡದಿರಲಿ ಅಥವಾ ಕಾಯಿಲೆಯೇ ಇಲ್ಲದಿರಲಿ ಜೀವನದಲ್ಲಿ ಒಮ್ಮೆಯೂ ಮಾತ್ರೆ ಸೇವಿಸದವರು ಸಿಗುವುದು ಬಹಳ ಕಷ್ಟವೇ. ಈಗೇನಾದರೂ ಗೌತಮಬುದ್ಧ ಉದ್ಭವಿಸಿ ಉಪದೇಶ ಮಾಡುತ್ತಿದ್ದರೆ ಸಾಸಿವೆ ಕಾಳನ್ನು ಸಾವಿಲ್ಲದ ಮನೆಯಿಂದ ತರಿಸುವುದಕ್ಕಿಂತ ಮಾತ್ರೆಗಳಿಲ್ಲದ ಮನೆಯಿಂದ ತರಿಸುವ ಚಾಲೆಂಜ್ ಹಾಕುತ್ತಿದ್ದನೇನೋ. ವ್ಯಂಗ್ಯವಾದರೂ ಕಟುಸತ್ಯವೇನೆಂದರೆ ಇಂದು ಪ್ರಪಂಚದಲ್ಲಿ ಅತಿಹೆಚ್ಚು ಸೇವನೆಯಾಗುವ 'ಟಾಪ್-3' ಆಹಾರ ಪದಾರ್ಥಗಳಲ್ಲಿ ಮಾತ್ರೆಗಳೂ ಸ್ಥಾನ ಗಿಟ್ಟಿಸಿವೆ (ಉಳಿದೆರಡು ಯಾವುವಿರಬಹುದು? ಐಸ್‌ಕ್ರೀಂ ಮತ್ತು ಚಾಕೋಲೇಟ್ ಎಂದು ನೀವು ಊಹಿಸಿದಿರಾದರೆ ನಿಮ್ಮ ಊಹೆ ಸರಿ ಇದೆ)!

ಈಗಿನ ಕಾಲದಲ್ಲಿ ಪ್ರತಿಯೊಂದಕ್ಕೂ ಮಾತ್ರೆಗಳ ಸಿದ್ಧೌಷಧವಿದೆ. 'ಮಗು ಹುಟ್ಟದಂತೆ ಮಾತ್ರೆ'ಯಿಂದ ಆರಂಭಿಸಿ, ಹುಟ್ಟಿದ ಮಗು ಆರೋಗ್ಯವಾಗಿ ಬೆಳೆದು ದೊಡ್ಡದಾಗಿ ಮುಂದೆ ವೃದ್ಧಾಪ್ಯವನ್ನು ಮುಂದೂಡುವುದಕ್ಕೂ ಮಾತ್ರೆಗಳಿವೆ. ಬಕ್ಕತಲೆ ನಿವಾರಣೆಗೆ ಮಾತ್ರೆ, ತಲೆಯೊಳಗೆ ಗೆದ್ದಲು ತುಂಬಿಕೊಳ್ಳದಂತೆ ಮಾತ್ರೆ; ಟೆನ್ಷನ್ ಹೆಚ್ಚಾಗದಂತೆ ಮಾತ್ರೆ, ಎಲ್ಲರ ಅಟೆನ್ಷನ್ ಗಳಿಸುವಂತೆ ಆಗಲಿಕ್ಕೂ ಮಾತ್ರೆ! ಸಂಕೀರ್ಣ ಕಾಯಿಲೆಗಳಿದ್ದಾಗ ನಾಲ್ಕೈದು ನಮೂನೆಯ ಮಾತ್ರೆಗಳನ್ನು ಬೇರೆಬೇರೆ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕಾಗಿ ಬಂದರೆ ಯಾವಾಗ ಯಾವ ಮಾತ್ರೆ ಎಂದು ನೆನಪಿಟ್ಟುಕೊಳ್ಳುವುದೇ ತಲೆಬಿಸಿಯ ವಿಚಾರ; ಅದರ ಶಮನಕ್ಕೆ ಆರನೇ ವಿಧದ ಮಾತ್ರೆ ತೆಗೆದುಕೊಳ್ಳಬೇಕಾಗಬಹುದು! ಮತ್ತೆ ಕೆಲವೊಮ್ಮೆ ಕಾಯಿಲೆ ಹದ್ದುಬಸ್ತಿನಲ್ಲಿಡಲಿಕ್ಕೆ ಇಂಜೆಕ್ಷನ್ ಚುಚ್ಚಿಸಿಕೊಳ್ಳಬೇಕು, ಆ ಇಂಜೆಕ್ಷನ್‌ನ ನೋವು ಕಡಿಮೆಯಾಗಲಿಕ್ಕೆ ಮಾತ್ರೆ ತಿನ್ನಬೇಕು. ಒಟ್ಟಿನಲ್ಲಿ ಮಾತ್ರೆ ಮಾತ್ರ ಮಸ್ಟ್.

ಫಾರ್ಮಸ್ಯೂಟಿಕಲ್ ಕಂಪನಿಗಳು ಒಡ್ಡುವ ಪ್ರಲೋಭನೆಯಿಂದ, ಮೆಡಿಕಲ್ ರೆಪ್‌ಗಳು ಪುಕ್ಕಟೆಯಾಗಿ ಕೊಡುವುದರಿಂದ, ವೈದ್ಯರ ಹತ್ತಿರ ಮಾತ್ರೆಗಳ ದೊಡ್ಡ ರಾಶಿಯೇ ಇರುತ್ತದೆ. ವೈದ್ಯರು ಮಾತ್ರೆ ಬರೆದುಕೊಟ್ಟರೇನೇ ಕಾಯಿಲೆ ವಾಸಿಯಾಗುವುದು ಎಂಬ ದೃಢವಿಶ್ವಾಸ ರೋಗಿಗೂ ಇರುತ್ತದೆ. ಅಂತೂ ಸಣ್ಣಪುಟ್ಟ ಕಾಯಿಲೆಗೂ ಮಾತ್ರೆಗಳನ್ನು ಶಿಫಾರಸು ಮಾಡುವ ಚಟ ವೈದ್ಯನಾದವನಿಗೆ ಬಹುಬೇಗ ಅಂಟಿಕೊಳ್ಳುತ್ತದೆ. Rx ಎಂದು ಬರೆದು ಕೆಳಗೆ ವೈದ್ಯಲಿಪಿಯಲ್ಲಿ ಏನನ್ನೋ ಗೀಚಿದ ಚೀಟಿಯಲ್ಲಿ 1-0-1 (ಬೆಳಗ್ಗೆ ಒಂದು, ರಾತ್ರಿ ಒಂದು) ಅಥವಾ 0-0-1 (ರಾತ್ರಿ ಮಾತ್ರ ಒಂದು) ಅಂತ ಮಾತ್ರೆಗಳ ಪ್ರಿಸ್ಕ್ರಿಪ್ಷನ್ ಇದ್ದರೇನೇ ರೋಗಿಗೆ ಸಮಾಧಾನ. ಇದೀಗ ವೈದ್ಯಲಿಪಿ ಕನ್ನಡದಲ್ಲಿ ಇರಬೇಕು ಎಂಬ ಆದೇಶ ಬಂದಿದೆಯಂತೆ. ವೈದ್ಯರ ಕನ್ನಡ ಅಕ್ಷರಗಳು ಮಾತ್ರೆಗಳಂತೆ ದುಂಡಗಿರಬೇಕು ಎಂದು ಆದೇಶದಲ್ಲಿ ತಿಳಿಸಿಲ್ಲ ಸದ್ಯ, ವೈದ್ಯರ ಪುಣ್ಯ. ಇನ್ನು, ವೈದ್ಯರ ಶಿಫಾರಸಿಲ್ಲದೆ ಸ್ವಂತಚಿಕಿತ್ಸೆಗೆ ತೊಡಗಿ ಯಾವ್ಯಾವುದೋ ಮಾತ್ರೆಗಳನ್ನು ತಿಂದು ಅವಘಡ ಮಾಡಿಕೊಂಡವರೆಷ್ಟಿಲ್ಲ? ಉದ್ದೀಪನ ಮಾತ್ರೆಗಳನ್ನು ಸೇವಿಸಿ ಸಿಕ್ಕಿಬೀಳುವ ಕ್ರೀಡಾಪಟುಗಳು, ನಿದ್ರೆ ಮಾತ್ರೆಗಳನ್ನು ವಿಪರೀತ ಸೇವಿಸಿ ಚಿರನಿದ್ರೆಗೆ ಜಾರುವ ನತದೃಷ್ಟರು ಅದೆಷ್ಟಿಲ್ಲ? ಮಾತ್ರೆಗಳ ಸೀರಿಯಸ್‌ನೆಸ್ಸನ್ನು ನೆನೆಸಿಕೊಂಡರೆ ನಿಜಕ್ಕೂ ಮೈ ಝುಮ್ಮೆನ್ನುತ್ತದೆ! ಆದರೆ ಗಾಬರಿಯಾಗಬೇಡಿ, ಈ ಲೇಖನದಲ್ಲಿರುವುದು ಸೀರಿಯಸ್ ವಿಚಾರವಲ್ಲ, ಇದು ಗುಳಿಗೆ-ರಸಘುಳಿಗೆ, ಹರಟೆ ಮತ್ತೊಂದು ಲೆಕ್ಕ. ಮಾತ್ರೆ ನುಂಗಿ ನೀರು ಕುಡಿದಂತೆ ಗಟಗಟನೆ ಓದಿ ಮುಗಿಸಬಹುದು.

ಚಿಕ್ಕ ಮಕ್ಕಳಿಗೆ ಅಪಸ್ಮಾರ, ಬಾಲಗ್ರಹ ಮುಂತಾದ ರೋಗಗಳು ಬಾರದಂತೆ 'ಚಿಹ್ನೆ ಮಾತ್ರೆ' ಅಂತೊಂದು ಮಾತ್ರೆಯನ್ನು ಅರೆದು ಕುಡಿಸುವ ಕ್ರಮ ನಮ್ಮ ಕರಾವಳಿಯ ಗ್ರಾಮೀಣ ಪ್ರದೇಶಗಳಲ್ಲಿತ್ತು. ಕನಿಷ್ಠಪಕ್ಷ ನಮ್ಮ ಬಾಲ್ಯದಲ್ಲಿತ್ತು, ಈಗಲೂ ಇದೆಯೋ ಗೊತ್ತಿಲ್ಲ. ಅಮಾವಾಸ್ಯೆ, ಹುಣ್ಣಿಮೆ ಅಥವಾ ಪ್ರತಿ ಭಾನುವಾರ- ಹೀಗೆ ನೆನಪಿಟ್ಟುಕೊಳ್ಳಲು ಸುಲಭವಾಗುವಂತೆ ಆವತ್ತು ಮಗುವಿಗೆ ಚಿಹ್ನೆ ಮಾತ್ರೆಯನ್ನು ಅರೆದು ಕುಡಿಸುವುದು. ನಮ್ಮೂರಿನಲ್ಲಿ ಆಣ್ಣಿನಾಯ್ಕ ಎಂಬುವವರ ಹೋಟೆಲ್-ಕಮ್-ಗೂಡಂಗಡಿಯಲ್ಲಿ ಚಿಹ್ನೆ ಮಾತ್ರೆಗಳು ಸಿಗುತ್ತಿದ್ದವು. ಆ ಮಾತ್ರೆಗಳು ದುಬಾರಿಯೇನಲ್ಲ, ಆಗಿನ ಕಾಲದಲ್ಲಿ ಒಂದು ರುಪಾಯಿಗೆ ಇಪ್ಪತ್ತು ಮಾತ್ರೆಗಳು. ಚಿಕ್ಕ ಕಾಗದದ ತುಂಡೊಂದನ್ನು ಶಂಕುವಿನಂತೆ ಮಡಚಿ, ಗಾಜಿನ ಜಾಡಿಯಿಂದ ಕಪ್ಪು ಬಣ್ಣದ ಚಿಹ್ನೆ ಮಾತ್ರೆಗಳನ್ನು ಕೈತುಂಬ ತೆಗೆದುಕೊಂಡು ಒಂದೊಂದಾಗಿ ಎಣಿಸುತ್ತ ಕಾಗದದಲ್ಲಿ ಹಾಕಿ ಪೊಟ್ಟಣ ಕಟ್ಟಿಕೊಡುತ್ತಿದ್ದ ಆಣ್ಣಿನಾಯ್ಕರ ಚಿತ್ರಣ ಈಗಲೂ ನನಗೆ ಕಣ್ಮುಂದೆ ಬರುತ್ತದೆ. ನಮ್ಮೂರಿನಿಂದ ಮದುವೆಯಾಗಿ ದೂರದೂರದ ಊರುಗಳಲ್ಲಿದ್ದ ಅಕ್ಕಂದಿರಿಗೆ, ಅಣ್ಣಂದಿರಿಗೆ ಅವರವರ ಮಕ್ಕಳ ಉಪಯೋಗಕ್ಕಾಗಿ ಚಿಹ್ನೆ ಮಾತ್ರೆಗಳನ್ನು ಅಂಚೆ ಲಕೋಟೆಯಲ್ಲಿಟ್ಟು ಕಳುಹಿಸುತ್ತಿದ್ದ ನೆನಪು ಕೂಡ ಇನ್ನೂ ಹಸುರಾಗಿಯೇ ಇದೆ. ನಾಗರಿಕತೆ ಕಾಲಿಟ್ಟಿರುವ ಹಳ್ಳಿಗಳಲ್ಲಿ ಚಿಕ್ಕ ಮಕ್ಕಳಿಗೆ ಕ್ಯಾಲ್ಸಿಯಂ ಸ್ಯಾಂಡೋಜ್ ಮಾತ್ರೆಗಳನ್ನೂ ದಿನಕ್ಕೊಂದರಂತೆ ಜಗಿಯಲು ಕೊಡುವ ಕ್ರಮವಿತ್ತು. ಸ್ಯಾಂಡೋಜ್ ಮಾತ್ರೆಗಳು ಮಕ್ಕಳಿಗೆ ಇಷ್ಟವಾಗಲೆಂಬ ಕಾರಣಕ್ಕಿರಬಹುದು, ಅದರ ಡಬ್ಬಿಯು ಒಂದು ಬಿಳಿ ಗೊಂಬೆ ಅಥವಾ ಆಟಿಕೆಯಂತೆ ಇರುತ್ತಿದ್ದುದು ನನಗೆ ನೆನಪಿದೆ. ಮಾತ್ರೆಗಳ ವಿಷಯದಲ್ಲಿ ಕಾಲಚಕ್ರದ ಕರಾಮತ್ತು ಹೇಗಿರುತ್ತದೆ ನೋಡಿ- ಮಕ್ಕಳ ಆರೋಗ್ಯದ ಕಾಳಜಿಯಿಂದ ಹಿರಿಯರು ನಿಯತವಾಗಿ ಮಾತ್ರೆಗಳನ್ನು ಮಕ್ಕಳಿಗೆ ತಿನ್ನಿಸಿದಂತೆಯೇ, ಮುಂದೆ ಆ ಮಕ್ಕಳು ದೊಡ್ಡವರಾದ ಮೇಲೆ ಅಜ್ಜ-ಅಜ್ಜಿಯಂದಿರಿಗೆ, ಅಷ್ಟೇಕೆ ತಂದೆ-ತಾಯಿಗಳಿಗೂ, ವೇಳೆಗೆ ಸರಿಯಾಗಿ ಮಾತ್ರೆ ಕೊಡಿಸುವಂಥವರಾಗುತ್ತಾರೆ. ಅಜ್ಜನಿಗೆ ಊಟದ ಬಳಿಕ ಮಾತ್ರೆ, ಜತೆಗೆ ಬಿಸಿನೀರಿನ ಲೋಟ ತಂದುಕೊಡುವ ಜಾಣ ಮೊಮ್ಮಕ್ಕಳ ಚಿತ್ರಣ ಸಿಗಬೇಕಾದರೆ ನೀವು ಯಾವುದಾದರೂ ಅವಿಭಕ್ತ ಕುಟುಂಬಕ್ಕೆ ಭೇಟಿ ಕೊಡಬೇಕು. ಅಲ್ಲಿ ಯಃಕಶ್ಚಿತ್ ಮಾತ್ರೆಯಲ್ಲೂ, ಮಾತ್ರೆ ಸೇವಿಸುವ ಪ್ರಕ್ರಿಯೆಯಲ್ಲೂ, ಪ್ರೀತಿಮಮತೆಗಳು ತುಂಬಿತುಳುಕುವುದು ನಿಮಗೆ ಗೋಚರಿಸುತ್ತದೆ.

ಪುರಾತನ ಭಾರತೀಯ ಆಯುರ್ವೇದ ಪದ್ಧತಿಯಲ್ಲಿ ಮಾತ್ರೆಗಳ ಹೆಸರುಗಳೇ ಬಹಳ ಚಂದವಾಗಿರುತ್ತವೆ. ಧನ್ವಂತರಿ, ಕಸ್ತೂರಿ, ಆಮೋದಿನಿ, ಚಂದ್ರಪ್ರಭ, ಸೂರ್ಯಪ್ರಭ, ಮಾನಸಾಮೃತ, ನವಾಯಾಸ, ಸ್ವರ್ಣಾನಂದ... ಹೀಗೆ ವಿಶೇಷ ಆಕರ್ಷಕ ಹೆಸರುಗಳು ನಿಮಗೂ ಕೇಳಿಗೊತ್ತಿರಬಹುದು. ಅವುಗಳ ಪೈಕಿ ಕಸ್ತೂರಿಮಾತ್ರೆ ಎಂದರೆ ಬಡವರ ಸಂಜೀವಿನಿ. ಹೊಟ್ಟೆನೋವು, ಹಲ್ಲುನೋವು, ಕಿವಿನೋವು, ಕೀಲುನೋವು ಆ ನೋವು ಈ ನೋವು ಎಲ್ಲದಕ್ಕೂ ರಾಮಬಾಣ. ಅದನ್ನು ವೈದ್ಯರಿಂದ ಅಥವಾ ಔಷಧದಂಗಡಿಯಿಂದಲೇ ಕೊಳ್ಳಬೇಕೆಂದೇನಿಲ್ಲ, ಅಳಲೆಪಂಡಿತರು ಬಸ್‌ಸ್ಟ್ಯಾಂಡ್‌ಗಳಲ್ಲಿ ಪ್ರಯಾಣಿಕರಿಗೆ ಕಸ್ತೂರಿಮಾತ್ರೆ ಮತ್ತು ಬಣ್ಣಬಣ್ಣದ ಔಷಧಿಗಳ ಶೀಶೆಗಳನ್ನು ಮಾರುವ ದೃಶ್ಯವನ್ನು ನಾವೆಲ್ಲ ಕಂಡವರೇ. ಇಲ್ಲಿ ವಿಷಯಾಂತರ ಅಂತ ನೀವು ಅಂದುಕೊಳ್ಳದಿದ್ದರೆ, ಮತ್ತು ವಾಕರಿಕೆ (ವ್ಯಾಕ್-ಕರಿಕೆ) ವ್ಯಕ್ತಪಡಿಸುವುದಿಲ್ಲವಾದರೆ ಇದನ್ನೂ ಉಲ್ಲೇಖಿಸುತ್ತೇನೆ: ಮೂಗು ಅಗೆಯುವ ಚಟವುಳ್ಳವರು ತಮ್ಮ ಗಣಿಗಾರಿಕೆಯ ಉತ್ಪನ್ನವನ್ನು ಗೋಲಾಕಾರವಾಗಿ ಮಾಡಿ ಬಿಸಾಡುವುದು, ಅದನ್ನೂ ಕಸ್ತೂರಿಮಾತ್ರೆ ಎಂದೇ ಕರೆಯುವುದು ಪರಿಪಾಠ. ಇರಲಿ ವಿಷಯಾಂತರವನ್ನು ಇಲ್ಲಿಗೇ ಬಿಟ್ಟುಬಿಡೋಣ.

ಆಯುರ್ವೇದದ ಮಾತ್ರೆಗಳಿಗೆ ಸುಸಂಸ್ಕೃತ ಹೆಸರುಗಳಿದ್ದಂತೆ ಅಲೋಪತಿ ಮಾತ್ರೆಗಳ ಹೆಸರುಗಳದೂ ಒಂದು ವೈಶಿಷ್ಟ್ಯವಿದೆ. ನೀವು ಇದನ್ನು ಗಮನಿಸಿದ್ದೀರೋ ಇಲ್ಲವೋ, ನಮಗೆಲ್ಲ ಚಿರಪರಿಚಿತವಿರುವ ಕೆಲವು ಮಾತ್ರೆಗಳ ಹೆಸರುಗಳನ್ನು ನೋಡಿ: ಆಸ್ಪಿರಿನ್, ಅನಾಸಿನ್, ಕೋಲ್ಡರಿನ್, ನೊವಾಲ್ಜಿನ್, ಬ್ರುಫೆನ್, ಕ್ಲೋರೊಕ್ವಿನ್, ಸಾರಿಡಾನ್, ಒವಮಿನ್... ಎಲ್ಲವೂ 'ನ್' ಎಂದು ಕೊನೆಗೊಳ್ಳುತ್ತವೆ. ನನ್ನದೊಂದು ತರಲೆ ತರ್ಕದ ಪ್ರಕಾರ ಈ ಮಾತ್ರೆಗಳ ಪೂರ್ವಜರು ಬಹುಶಃ ತಮಿಳುನಾಡಿನಲ್ಲೋ ಕೇರಳದಲ್ಲೋ ಹುಟ್ಟಿದ್ದಿರಬೇಕು. ಅದಕ್ಕೇ ಇಳಂಗೋವನ್, ವೇಲಾಯುಧನ್, ನೆಡುಮಾರನ್ ಇತ್ಯಾದಿ ಹೆಸರುಗಳನ್ನು ಹೋಲುತ್ತವೆ. ಇನ್ನೂ ಸ್ವಲ್ಪ ಸ್ಟ್ರಾಂಗ್ ಮಾತ್ರೆಗಳಾದರೆ ವೀರಪ್ಪನ್, ಪ್ರಭಾಕರನ್ ಎಂದು ಹೆಸರಿಡಬಹುದೇನೋ. 1990ರ ದಶಕದಲ್ಲಿ

ನಾನು ಉದ್ಯೋಗಕ್ಕಾಗಿ ಸಿಕಂದರಾಬಾದ್‌ನಲ್ಲಿದ್ದಾಗ ಅಲ್ಲಿ ನನ್ನೊಬ್ಬ ಸ್ನೇಹಿತನಿದ್ದ ಭಾಸ್ಕರನ್ ಎಂಬ ಹೆಸರಿನವನು. ಆತ ತಿರುಚಿರಾಪಳ್ಳಿ ಮೂಲದ ತಮಿಳಿಗ. ಭಾರತೀಯ ಬಾಹ್ಯಾಕಾಶ ವಿಭಾಗದ ಅಂಗಸಂಸ್ಥೆಯಾದ 'ಎಡ್ರಿನ್' (Advanced Data Research Institute) ಎಂಬ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ. ಅವನಿಗೆ ನಾನು 'ಏನಯ್ಯಾ ನಿನ್ನ ಹೆಸರೂ ನಿನ್ನ ಕಂಪನಿಯ ಹೆಸರೂ ಒಳ್ಳೇ ಮಾತ್ರೆಗಳ ಹೆಸರಿನಂತಿವೆಯಲ್ಲ!' ಎಂದು ತಮಾಷೆ ಮಾಡುತ್ತಿದ್ದೆ.

ಮಾತ್ರೆಗಳ ಬಗ್ಗೆ, ನಿಖರವಾಗಿ ಹೇಳುವುದಾದರೆ ಮಾತ್ರೆ ಎಂಬ ಪದದ ಬಗ್ಗೆಯೇ ಇನ್ನೂ ಒಂದು ಸ್ವಾರಸ್ಯಕರ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಅದೇನೆಂದರೆ, ಕನ್ನಡದಲ್ಲಿ ನಾವು ಮಾತ್ರೆ ಎಂಬ ಪದವನ್ನು ಔಷಧೀಯ ವಿಚಾರದಲ್ಲಿ ಇಷ್ಟೊಂದು ವ್ಯಾಪಕವಾಗಿ ಬಳಸುತ್ತೇವಷ್ಟೆ, ಮೂಲ ಸಂಸ್ಕೃತದಲ್ಲಿ 'ಮಾತ್ರಾ' ಎಂಬ ಪದಕ್ಕೂ ಔಷಧಕ್ಕೂ ಸಂಬಂಧವೇ ಇಲ್ಲ! ಸಂಸ್ಕೃತದಲ್ಲಿ ಮಾತ್ರಾ ಪದಕ್ಕಿರುವ ಹತ್ತಿಪ್ಪತ್ತಕ್ಕಿಂತಲೂ ಹೆಚ್ಚಿನ ಅರ್ಥಗಳನ್ನು ಬೇಕಿದ್ದರೆ ಒಮ್ಮೆ ನೋಡಿ: ಉಪಕರಣ, ಸಾಧನ, ಐಶ್ವರ್ಯ, ಸಂಪತ್ತು, ಅಂಶ, ಭಾಗ, ಅಕ್ಷರದ ಅವಯವ, ಅಕ್ಷರವನ್ನು ಉಚ್ಚರಿಸುವ ಕಾಲ, ಹ್ರಸ್ವವರ್ಣವನ್ನು ಉಚ್ಚರಿಸಲು ಬೇಕಾಗುವ ಕಾಲ, ಎಣಿಕೆ, ಪರಿಗಣನೆ, ಕಾಲ, ಉದ್ದ-ಅಗಲ-ಎತ್ತರ ಇತ್ಯಾದಿ ಮಾನ ಅಥವಾ ಅಳತೆ, ಸಂಗೀತಶಾಸ್ತ್ರದಲ್ಲಿ ಕಾಲದ ಅಳತೆ, ಪ್ರಗತಿ, ಅಭಿವೃದ್ಧಿ, ಮುನ್ನಡೆ, ಒಡವೆ, ಆಭರಣ (ವಿಶೇಷವಾಗಿ ಕರ್ಣಾಭರಣ), ಶಬ್ದಾದಿ ಇಂದ್ರಿಯವಿಷಯಗಳು, ಇಂದ್ರಿಯ, ಅವಯವ, ಅಂಗ ಮತ್ತು ರೂಪ. ನನಗೂ ಇಷ್ಟೆಲ್ಲ ಗೊತ್ತಿರಲಿಲ್ಲ, ಈ ಲೇಖನಕ್ಕಾಗಿ ಪ್ರೊ. ಜಿ.ಎನ್.ಚಕ್ರವರ್ತಿಯವರ ಸಂಸ್ಕೃತ-ಕನ್ನಡ ನಿಘಂಟು ತೆರೆದು ನೋಡಿ ಬರೆದಿದ್ದೇನೆ. ಅಂದಹಾಗೆ ಇದರಲ್ಲಿ ಸಾಹಿತ್ಯ ಮತ್ತು ಸಂಗೀತದಲ್ಲಿ ಬರುವ 'ಮಾತ್ರೆ'ಗಳು ನಮಗೆ ಪರಿಚಿತವೇ. ಈಗಿನ ಕಾಲದ ಕವಿಗಳೇನೋ ಮುಕ್ತ ಛಂದಸ್ಸಿನ ಪದ್ಯಗಳನ್ನೇ ಬರೆಯುವುದರಿಂದ ಮಾತ್ರೆಗಳ ಉಪಯೋಗವಿಲ್ಲ ನಿಜ. ಆದರೆ ಶಾಲೆಯಲ್ಲಿ ಹಳಗನ್ನಡದ ಪದ್ಯಗಳನ್ನೋದುವಾಗ, ಶರ-ಕುಸುಮ ಭೋಗ-ಭಾಮಿನೀ ಪರಿವರ್ಧಿನೀ-ವಾರ್ಧಕ ಷಟ್ಪದಿಗಳನ್ನು, ಶಾರ್ದೂಲವಿಕ್ರೀಡಿತ ಮತ್ತೇಭವಿಕ್ರೀಡಿತ ಸ್ರಗ್ಧರಾ ಮಂದಾಕ್ರಾಂತಾ ಇತ್ಯಾದಿ ವೃತ್ತಗಳನ್ನು ಸವಿಯುವಾಗ ಗುರು-ಲಘು ಮಾತ್ರೆಗಳಿಗೆ ಮನ್ನಣೆ ಕೊಡಲೇಬೇಕಿತ್ತು. ಗುರುಲಘು ಮೂರಿರೆ ಮನ ಗಣ, ಗುರುಲಘು ಮೊದಲಲ್ಲಿ ಬರೆ ಭಯಗಣ... ಎಂದು ಪರೀಕ್ಷೆಯಲ್ಲಿ ಪ್ರಶ್ನೆಯ ಭಯದಿಂದಾದರೂ ಕಂಠಪಾಠ ಮಾಡಲೇಬೇಕಿತ್ತು. ಇನ್ನು, ಸಾಹಿತ್ಯದಂತೆಯೇ ಸಂಗೀತದಲ್ಲೂ- ತಕಿಟ ತಕಧಿಮಿ ಎಂದು ತಾಳ ಹಾಕುತ್ತೇವಲ್ವಾ, ತಾಳದ ಅತಿ ಸಣ್ಣ ಯೂನಿಟ್ ಎಂದರೆ ಒಂದು ಮಾತ್ರಾ ಕಾಲ. ತಾಳವಾದ್ಯಗಳಲ್ಲಿ ಹೊಸಹೊಸ ಪ್ರಯೋಗ ಮಾಡುವವರು ಅರ್ಧ, ಮುಕ್ಕಾಲು, ಮೂರನೇ ಒಂದು ಮಾತ್ರಾ ಕಾಲದಷ್ಟು ನಿಖರತೆಯ ತಾಳಗಳನ್ನು ಸೃಷ್ಟಿಸಿದ್ದಾರಂತೆ. ಇರಲಿ, ಸಾಹಿತ್ಯ-ಸಂಗೀತಗಳ ಗಂಧಗಾಳಿ ಇಲ್ಲದವರಿಗೆ ಮಾತ್ರೆ ಅಂದರೆ ಔಷಧದ ರೂಪವೇ.

ಹಾಗಿದ್ದರೆ ಮಾತ್ರೆಗೆ ಅಚ್ಚಕನ್ನಡದ ಪದ ಯಾವುದು? 'ಗುಳಿಗೆ'. ಇದು ಕೂಡ ಬಂದಿರುವುದು ಸಂಸ್ಕೃತದ 'ಗುಟಿಕಾ' ಅಥವಾ 'ಗುಲಿಕಾ'ದಿಂದಲೇ. ಗೋಲಾಕಾರದ್ದು, ಸಣ್ಣ ಗಾತ್ರದ್ದು ಆದ್ದರಿಂದ ಗುಲಿಕಾ. ಹಿಂದಿಯಲ್ಲಾದರೆ ಗೋಲಿ (ವಿಕ್ಸ್ ಕೀ ಗೋಲಿ ಲೋ... ಖಿಚ್‌ಖಿಚ್ ದೂರ್ ಕರೋ). ಆಯುರ್ವೇದ ಮಾತ್ರೆಗಳು ಗೋಲಾಕಾರ ಆಗಿರುವುದರಿಂದ ಆ ಹೆಸರು ಸರಿಹೋಗುತ್ತದೆ. ಹೋಮಿಯೊಪತಿಯಲ್ಲೂ ಅಷ್ಟೇ, ಯಾವುದೇ ಕಾಯಿಲೆಯಾದರೂ ಎಲ್ಲದಕ್ಕೂ ಒಂದೇ ರೀತಿ ಕಾಣುವ ಸಣ್ಣಸಣ್ಣ ಬಿಳಿ ಮಣಿಗಳಂತೆ ಇರುವ ಮಾತ್ರೆಗಳು. ಅವುಗಳನ್ನೂ ಗೋಲಿ/ಗುಳಿಗೆ ಎನ್ನಲಡ್ಡಿಯಿಲ್ಲ. ಆದರೆ ಅಲೋಪತಿ ಅಥವಾ ಇಂಗ್ಲಿಷ್ ಮೆಡಿಸಿನ್‌ನ ವಿಧವಿಧ ಆಕಾರಗಳ ವಿಧವಿಧ ಬಣ್ಣಗಳ ಮಾತ್ರೆಗಳನ್ನು ಗೋಲಿ ಎನ್ನುವುದು ಸರಿಯಲ್ಲವೇನೋ ಎಂದು ನನ್ನ ಅನಿಸಿಕೆ. ಚಪ್ಪಟೆಯಾಕಾರ, ಚೌಕಾಕಾರ ಇತ್ಯಾದಿ ಹೊಸಹೊಸ ನಮೂನೆಯ ಮಾತ್ರೆಗಳು ಬಂದ ಮೇಲೆ ಬಹುಶಃ ಇಂಗ್ಲಿಷ್‌ನಲ್ಲೂ Pill ಬದಲು Tablet ಪದ ಬಂದಿದೆ. ಇನ್ನೂ ಮುಂದುವರಿದು Capsule ಬಂದಿದೆ. ಪದ ಯಾವುದೇ ಇದ್ದರೂ ಪದಾರ್ಥ ಮಾತ್ರ ಅದೇ- ಔಷಧದ ಸಾಂದ್ರ, ಘನೀಕೃತ, ಸಂಕ್ಷಿಪ್ತ ರೂಪ.

ಅಲಂಕಾರಿಕವಾಗಿ ಬಳಸುವಾಗ 'ಗುಳಿಗೆ' ಶಾರೀರಿಕ ಕಾಯಿಲೆಗಷ್ಟೇ ಔಷಧವಾಗಿರಬೇಕಿಲ್ಲ, ಸಮಾಜದ ಓರೆಕೋರೆ ತಿದ್ದುವುದನ್ನು ಹೊಸ ಚಿಂತನೆಗಳ ಗುಳಿಗೆಗಳು ಮಾಡಬಹುದು. ಪತ್ರಿಕೆಗಳಲ್ಲಿ ಚಾಟಿಯೇಟಿನಂಥ ಚುರುಕಿನ ಬರಹಗಳಿಗೆ, ಬಿಸಿ ತಾಗಬೇಕಾದಲ್ಲಿಗೆ ಬಿಸಿ ಮುಟ್ಟಿಸುವ ಓದುಗರ ಓಲೆಗಳಿಗೆ ಹೆಸರುವಾಸಿಯಾದ ಸನ್ಮಿತ್ರ ಎಚ್.ಆನಂದರಾಮ ಶಾಸ್ತ್ರಿಯವರು ಹಿಂದೊಮ್ಮೆ ಬ್ಲಾಗ್ ಬರೆಯುತ್ತಿದ್ದರು. ಅವರ ಬ್ಲಾಗ್‌ಗೆ 'ಗುಳಿಗೆ' ಎಂದೇ ಹೆಸರಿಟ್ಟಿದ್ದರು. ಮದ್ದು, ಜೀವಸತ್ವ ಎಂದು ಅದಕ್ಕೊಂದು ಉಪಶೀರ್ಷಿಕೆ ಕೂಡ ಇತ್ತು. ಸಮಕಾಲೀನ ರಾಜಕೀಯ ಸಾಮಾಜಿಕ ವಿದ್ಯಮಾನಗಳಿಗೆ ತಕ್ಕುದಾಗಿ ಗುಳಿಗೆಗಳ ಸರಬರಾಜು ಮಾಡುತ್ತಿದ್ದರು. ಚುನಾವಣೆಗಳ ವೇಳೆ ಸ್ಪೆಷಲ್ ಆಗಿ ಚುನಾವಣಾ-ಗುಳಿಗೆಗಳನ್ನು ಒದಗಿಸುತ್ತಿದ್ದರು. 'ನಿಮ್ಮ ಗುಳಿಗೆಗಳು ಪೇನ್‌ಕಿಲ್ಲರ್ ಇದ್ದಂತೆ ಎಲ್ಲ ಮರೆಸಿ ನಗಿಸುತ್ತವೆ ಎಂದು ಕೊಂಡಾಡುವ ಅಕ್ಷರರೋಗಿಗಳು ಆ ಬ್ಲಾಗ್‌ಗೆ ಬರುತ್ತಿದ್ದರು. ಕೊನೆಗೊಂದು ದಿನ 'ಪತ್ರಿಕೆಯೊಂದು ಹಾಸ್ಯ, ವಿಡಂಬನೆ ಮತ್ತು ಶ್ಲೇಷೆ ಕೃಷಿಯ ಬಗ್ಗೆ ನನ್ನನ್ನು ಮರುಚಿಂತನೆಗೆ ಹಚ್ಚಿದೆ; ಆದ್ದರಿಂದ ನಾನಿಂದು ಗುಳಿಗೆಯಂಗಡಿಯನ್ನು ಮುಚ್ಚಿದೆ!' ಎನ್ನುತ್ತ ಶಾಸ್ತ್ರಿಗಳು ಬ್ಲಾಗ್‌ನ ಬಾಗಿಲು ಹಾಕಿಬಿಟ್ಟರು.

ಈಗ ಕೊನೆಯಲ್ಲಿ ನಿಮಗೊಂದು ಜಾಣ್ಮೆಲೆಕ್ಕ. ಇದನ್ನು ಗುಳಿಗೆಗಳ ಲೆಕ್ಕ ಅನ್ನಿ ಅಥವಾ ಮಾತ್ರೆಗಳ ಲೆಕ್ಕ ಅನ್ನಿ. ಯಾವುದೂ ಆಗುತ್ತದೆ. ಇಂಗ್ಲಿಷ್ ಮತ್ತು ಹಿಂದಿ ಬಳಸಿ ಪನ್ ಮಾಡಬಹುದಾದರೆ- ಇದು ಪಿಲ್ಸ್‌ಬರಿ ಆಟ್ಟಾ ಅಲ್ಲ; ಬರೀ ಪಿಲ್ಸ್ ಆಟ ಅನ್ನಿ. ಪ್ರಶ್ನೆ ಹೀಗಿದೆ: ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಅತ್ಯಂತ ಆರೋಗ್ಯವಂತರಾದ ನಿಮಗೆ ಇನ್ನಾವುದೋ ಹೊಸ ಕಾಯಿಲೆ ಬಾರದಂತೆ ಮುಂಜಾಗ್ರತೆಗೆಂದು ಮಾತ್ರೆ ನುಂಗಬೇಕಾದ ಪರಿಸ್ಥಿತಿ ಬಂತು ಅಂತಿರಲಿ (ಈ ಲೆಕ್ಕಕ್ಕೋಸ್ಕರ ಮಾತ್ರ). ರಾತ್ರಿ ಊಟದ ನಂತರ ಮಲಗುವ ಮುನ್ನ ಎ-ವಿಟಮಿನ್ ಎಂಬ ಒಂದು ಮಾತ್ರೆ ಮತ್ತು ಬಿ-ವಿಟಮಿನ್ ಎಂಬ ಇನ್ನೊಂದು ಮಾತ್ರೆ ಇವೆರಡನ್ನೂ ಒಟ್ಟೊಟ್ಟಿಗೇ ತೆಗೆದುಕೊಳ್ಳಬೇಕೆಂದು ನಿಮಗೆ ವೈದ್ಯರು ಶಿಫಾರಸು ಮಾಡಿದ್ದಾರೆ. ಎರಡನ್ನೂ ಒಟ್ಟಿಗೇ ಸೇವಿಸಬೇಕು. ಎ-ವಿಟಮಿನ್ ಆಗಲಿ ಬಿ-ವಿಟಮಿನ್ ಆಗಲಿ ಒಂದು ದಿನಕ್ಕೆ ಒಂದಕ್ಕಿಂತ ಹೆಚ್ಚು ಸೇವಿಸಿದರೂ ತೊಂದರೆಯೇ. ಒಂದು ಇಲ್ಲದೆ ಇನ್ನೊಂದನ್ನು ಮಾತ್ರ ಸೇವಿಸಿದರೂ ತೊಂದರೆಯೇ. ಹೀಗಿರಲು ಒಮ್ಮೆ ರಾತ್ರಿ ಊಟವಾದ ಮೇಲೆ ನೀವು ಎ-ವಿಟಮಿನ್ ಬಾಟ್ಲಿಯಿಂದ ಒಂದು ಮಾತ್ರೆಯನ್ನೂ ಬಿ-ವಿಟಮಿನ್ ಬಾಟ್ಲಿಯಿಂದ ಇನ್ನೊಂದು ಮಾತ್ರೆಯನ್ನೂ ಅಂಗೈಗೆ ಹಾಕಿಕೊಳ್ಳಲು ಹೊರಟಿದ್ದೀರಿ. ಎ-ವಿಟಮಿನ್ ಮಾತ್ರೆಯನ್ನು ಕೈಗೆ ಉದುರಿಸಿ ಬಾಟ್ಲಿಯನ್ನು ಯಥಾಸ್ಥಾನದಲ್ಲಿ ಇಟ್ಟಿದ್ದೀರಿ. ಹಾಗೆಯೇ ಬಿ-ವಿಟಮಿನ್ ಕೂಡ. ಆದರೆ ಅಚಾತುರ್ಯದಿಂದ ಏನಾಯ್ತೆಂದರೆ ಬಿ-ವಿಟಮಿನ್‌ನ ಎರಡು ಮಾತ್ರೆಗಳು ಅಂಗೈಗೆ ಬಂದಿವೆ. ಅಂದರೆ ಒಂದು ಎ-ವಿಟಮಿನ್ ಮಾತ್ರೆ, ಮತ್ತೆರಡು ಬಿ-ವಿಟಮಿನ್ ಮಾತ್ರೆಗಳು ಒಟ್ಟುಸೇರಿವೆ. ಬಣ್ಣ, ಆಕಾರ, ಗಾತ್ರ, ತೂಕ ಯಾವುದೇ ವಿಧದಲ್ಲೂ ಆ ಮಾತ್ರೆಗಳಲ್ಲಿ ಒಂಚೂರೂ ವ್ಯತ್ಯಾಸವಿಲ್ಲ. ಈಗ ನೀವೇನು ಮಾಡಬಲ್ಲಿರಿ? ಆ ಮಾತ್ರೆಗಳೋ ಅತ್ಯಂತ ದುಬಾರಿ. ವೇಸ್ಟ್ ಮಾಡುವಂತಿಲ್ಲ, ಯಾವ ಮಾತ್ರೆ ಯಾವುದು ಅಂತ ಗೊತ್ತಿಲ್ಲವಾದ್ದರಿಂದ ಬಾಟ್ಲಿಗಳಿಗೆ ವಾಪಸ್ ಹಾಕುವಂತೆಯೂ ಇಲ್ಲ. ವೈದ್ಯರ ಶಿಫಾರಸಿನಂತೆ ಸರಿಯಾದ ಡೋಸ್ ನಿಮ್ಮ ಹೊಟ್ಟೆ ಸೇರಲೇಬೇಕು. ಅಂಥ ಪರಿಸ್ಥಿತಿಯಲ್ಲಿ ಕರಾರುವಾಕ್ಕಾಗಿ ಒಂದು ಎ-ವಿಟಮಿನ್ ಮತ್ತೊಂದು ಬಿ-ವಿಟಮಿನ್ ಮಾತ್ರೆ ನಿಮ್ಮ ಹೊಟ್ಟೆ ಸೇರುವಂತೆ, ಅಂಗೈಗೆ ಬಿದ್ದ ಮೂರು ಮಾತ್ರೆಗಳು ವೇಸ್ಟ್ ಆಗದಂತೆ ಹೇಗೆ ನಿಭಾಯಿಸುವಿರಿ? ನಿಮ್ಮ ಆರೋಗ್ಯದ ಪ್ರಶ್ನೆ, ನಿಮ್ಮ ಹಣಕಾಸಿನ ಪ್ರಶ್ನೆ, ನಿಮ್ಮ ಬುದ್ಧಿಶಕ್ತಿಯ ಪ್ರಶ್ನೆಯೂ ಹೌದು. ನಿಮ್ಮ ಉತ್ತರವೇನು, ಎಷ್ಟು ಮಾತ್ರೆಗಳ ಕಾಲದಲ್ಲಿ ಕಂಡುಕೊಂಡು ಬರೆದು ತಿಳಿಸುತ್ತೀರಿ, ನೋಡೋಣ! ಸುಳಿವು ಬೇಕಿದ್ದರೆ: ಅರ್ಥ ಮಾಡಲಿಕ್ಕಾಗುವಂತೆ ಸಾಮಾನ್ಯವಾಗಿ ಮಾತ್ರೆಗಳ ಮೇಲ್ಮೈಗೆ ಅಚ್ಚುಹಾಕಿದ್ದಿರುತ್ತದಲ್ಲ ಈ ಮಾತ್ರೆಗಳಿಗೂ ಅಂಥ ಅಚ್ಚು ಇದೆಯೆಂದು ನಿಮಗೆ ಗೊತ್ತಿರಲಿ. ಈಗ ಆಲೋಚಿಸಿ ಉತ್ತರಿಸಿ.

ಶಾಸ್ತ್ರ ಮತ್ತು ಶಿಷ್ಟಾಚಾರಗಳಲ್ಲಿ ಅಂತರವಿರುತ್ತದೆ

ಶಾಸ್ತ್ರ ಬೇರೆ, ಶಿಷ್ಟಾಚಾರ ಬೇರೆ. ಶಾಸ್ತ್ರವೆಂದರೆ, ಕಾನೂನಿನಂತೆ ವಿಧಿ ನಿಷಿದ್ಧಗಳಿಂದ ಕೂಡಿದ್ದು ಸಾರ್ವಕಾಲಿಕವಾಗಿರುತ್ತದೆ, ಸರ್ವಜನರಿಗೂ ಒಂದೇ ತೆರನಾಗಿರುತ್ತದೆ. ಆದರೆ ಶಿಷ್ಟಾಚಾರ ಹಾಗಲ್ಲ, ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ವ್ಯಕ್ತಿಗಳಿಗೆ ಅದು ಬೇರೆಯೇ ಆಗಬಹುದಾಗಿದೆ. ಹಾಗಾಗಿ, ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವುದಾದರೆ, ಶಿಷ್ಟಾಚಾರದ ಉಲ್ಲಂಘನೆ ತಪ್ಪಲ್ಲ.

ಕಳೆದ ವಾರ ದೇಶದ ಬೌದ್ಧಿಕ ವಲಯದಲ್ಲಿ ಕಂಪನ ಉಂಟುಮಾಡಿದ 2 ವಿಶಿಷ್ಟ ಘಟನೆಗಳು ಸದ್ದಿಲ್ಲದೆ ನಡೆದುಹೋದವು. ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಚಂದ್ರಚೂಡ್ ಅವರ ಆಮಂತ್ರಣದ ಮೇರೆಗೆ ಅವರ ನಿವಾಸಕ್ಕೆ ತೆರಳಿದ ಪ್ರಧಾನಿ ಮೋದಿಯವರು ಗಣಪತಿ ಪೂಜೆಯಲ್ಲಿ ಪಾಲ್ಗೊಂಡು, ಅವರ ಕುಟುಂಬದ ಆತಿಥ್ಯ ಸ್ವೀಕರಿಸಿದ್ದು ಮೊದಲನೆಯದು; ಸೆಪ್ಟೆಂಬರ್ 8ರಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಯೋಜಿಸಿದ್ದ ಚಿಂತನ ಸಮಾವೇಶದಲ್ಲಿ ಸುಪ್ರೀಂ ಕೋರ್ಟಿನ ಇಬ್ಬರು ಮಾಜಿ ನ್ಯಾಯಾಧೀಶರಾದ ನ್ಯಾ.ಆದರ್ಶ್ ಕುಮಾರ್ ಗೋಯೆಲ್ ಮತ್ತು ಹೇಮಂತ್ ಗುಪ್ತಾ ಸೇರಿದಂತೆ ಪ್ರಮುಖ 30 ನಿವೃತ್ತ ನ್ಯಾಯಾಧೀಶರು ಭಾಗಿಯಾಗಿದ್ದು ಎರಡನೆಯದು. 'ಸಿಜೆಐ ಡಿ.ವೈ.ಚಂದ್ರಚೂಡ್ ಅವರ ನಿವಾಸದಲ್ಲಿ ನಡೆದ ಗಣೇಶ ಪೂಜೆಯಲ್ಲಿ ಭಾಗವಹಿಸಿದೆ; ಭಗವಾನ್ ಶ್ರೀ ಗಣೇಶನು ನಮ್ಮೆಲ್ಲರಿಗೂ ಸಂತೋಷ, ಸಮೃದ್ಧಿ ಮತ್ತು ಅದ್ಭುತ ಆರೋಗ್ಯವನ್ನಿತ್ತು ಆಶೀರ್ವದಿಸಲಿ' ಎಂದು ಪ್ರಧಾನಿ ಮೋದಿಯವರು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿ, ಚಂದ್ರಚೂಡ್ ದಂಪತಿಯ ಜತೆಗೆ ಗಣೇಶನನ್ನು ಪ್ರಾರ್ಥಿಸುತ್ತಿರುವ ಫೋಟೋವನ್ನು ಸಹ ಹಂಚಿಕೊಂಡು ಸುಮ್ಮನಾಗಿ ಬಿಟ್ಟಿದ್ದರು. ಆದರೆ ಈ ಸಚಿತ್ರ ಶುಭಾಶಯ ಸಮಾಜದ ವಿವಿಧ ವರ್ಗದ ಜನರ ಹುಬ್ಬೇರುವಂತೆ ಮಾಡಿಬಿಟ್ಟಿತು. ಪಾಕಿಸ್ತಾನದ ಪ್ರಧಾನಿಯಾಗಿದ್ದವರ ಖಾಸಗಿ ಆಮಂತ್ರಣವನ್ನೇ ತಿರಸ್ಕರಿಸದ ಮೋದಿಯವರು, ಅಲ್ಲೇ 3 ಮಾರು ದೂರದ ಪಕ್ಕದ ರಸ್ತೆಯಲ್ಲಿರುವ ಸಿಜೆಐ ಕರೆದರೆ ಹೋಗದೇ ಇರಲುಂಟೇ? (ಅಫ್ಘಾನಿಸ್ತಾನದ ಪ್ರವಾಸದಲ್ಲಿದ್ದ ಮೋದಿಯವರು ತಿರುಗಿ ಬರುವಾಗ, ಪಾಕಿಸ್ತಾನದ ಪ್ರಧಾನಿಯಾಗಿದ್ದ ನವಾಜ್ ಷರೀಫರ ಆತ್ಮೀಯ ಆಮಂತ್ರಣಕ್ಕೆ ಸ್ಪಂದಿಸಿ, ಭದ್ರತೆಯ ಶಿಷ್ಟಾಚಾರವನ್ನೂ ಬದಿಗೊತ್ತಿ, ತಮ್ಮ ನೆಂಟರ ಮನೆಗೆ ಹೋಗಿಬಂದ ಹಾಗೆ ಷರೀಫರ ಮನೆಗೆ ಹೋಗಿ ಬಂದಿದ್ದರು). ಯಾರೂ ಮಾಡದಿರುವ ಕೆಲಸವನ್ನು ಮಾಡುವುದರಿಂದಲೇ ಅವರು 'ನರೇಂದ್ರ ಮೋದಿ' ಎಂದು ಕರೆಸಿಕೊಳ್ಳುವುದು ಎಂಬುದಕ್ಕೆ ಈ ಘಟನೆ ಮತ್ತೊಂದು ಉದಾಹರಣೆಯಾಯಿತು.

ನ್ಯಾಯಾಂಗ ಮತ್ತು ಶಾಸಕಾಂಗದ ಮುಖ್ಯಸ್ಥರಿಬ್ಬರ ಈ ಖಾಸಗಿ ಭೇಟಿಯು ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಮತ್ತು ಅನೇಕ ಸಂಶಯಗಳಿಗೆ ಆಸ್ಪದ ನೀಡಿ ಸಮಾಜಕ್ಕೆ ತಪ್ಪು ಸಂದೇಶವನ್ನು ಕೊಡುತ್ತದೆ ಎಂಬ ಅಭಿಪ್ರಾಯ ಕೆಲವು ವಲಯಗಳಿಂದ ವ್ಯಕ್ತವಾಯಿತು. ಇನ್ನು, 'ಚಂದ್ರಚೂಡ್ ಅವರು ತಮ್ಮ ಮನೆಯ ಗಣೇಶ ಪೂಜೆಗೆ ಮೋದಿಯವರನ್ನಷ್ಟೇ ಆಮಂತ್ರಿಸಿದ್ದೇಕೆ? ರಾಹುಲ್ ಗಾಂಧಿ ಸೇರಿದಂತೆ ಇತರ ನಾಯಕರನ್ನೂ ಆಮಂತ್ರಿಸಬಹುದಿತ್ತಲ್ಲಾ!' ಎನ್ನುವುದು ಕಾಂಗ್ರೆಸ್ಸಿನವರ ಬೇಗುದಿ. ಅದಕ್ಕೆ, 'ಭಾರತದ ಪ್ರಧಾನಿಯಾಗಿದ್ದವರೊಬ್ಬರು ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ನಿವಾಸಕ್ಕೆ ತೆರಳಿದ ಘಟನೆ ಇದೇ ಮೊದಲು ಇರಬಹುದು; ಆದರೆ ಪ್ರಧಾನಿಯಾದವರು ಮುಖ್ಯ ನ್ಯಾಯಮೂರ್ತಿಗಳ ಆಮಂತ್ರಣವನ್ನು ಗೌರವಿಸಿ ಅಲ್ಲಿಗೆ ಹೋಗಬಾರದು ಎಂದು ಯಾವುದೇ ಕಾನೂನಿಲ್ಲವಲ್ಲಾ' ಎನ್ನುವುದು ಬಿಜೆಪಿಗರ ಸಮರ್ಥನೆ.

'ಸುಪ್ರೀಂ ಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯಗಳು, ಕೇಂದ್ರ ಸರಕಾರವನ್ನು ಒಳಗೊಂಡಿರುವ ವಿವಿಧ ಪ್ರಕರಣಗಳ ವಿಚಾರಣೆ ನಡೆಸುತ್ತಿರುವಾಗ, ಮುಖ್ಯ ನ್ಯಾಯಮೂರ್ತಿ ಅಥವಾ ಇತರ ನ್ಯಾಯಾಧೀಶರ ಖಾಸಗಿ ಸಮಾರಂಭಗಳಿಗೆ ದೇಶದ ಪ್ರಧಾನಿ ಹಾಜರಾಗುವುದು ನೈತಿಕವಾಗಿ ಸೂಕ್ತವಲ್ಲ. ಇದು ಖಂಡಿತವಾಗಿಯೂ ಸಾರ್ವಜನಿಕರಿಗೆ ಮತ್ತು ನ್ಯಾಯಾಂಗ ವಲಯಕ್ಕೆ ತಪ್ಪು ಸಂದೇಶವನ್ನು ರವಾನಿಸುತ್ತದೆ. ಪ್ರಮುಖ ಸಾಂವಿಧಾನಿಕ ಹುದ್ದೆಯಲ್ಲಿರುವ ಈ ಇಬ್ಬರ ಗಣೇಶ ಪೂಜೆ ಪ್ರಸಂಗವು, ನ್ಯಾಯಾಂಗದಲ್ಲಿ ಧರ್ಮವನ್ನು ತುಂಬಲಾಗುತ್ತಿದೆಯೇ ಎಂಬ ಪ್ರಶ್ನೆ ಹುಟ್ಟಲು ಅವಕಾಶ ಮಾಡಿಕೊಡುತ್ತದೆ' ಎಂಬುದು ಹಿರಿಯ ನ್ಯಾಯವಾದಿ ಮತ್ತು ಸಾಮಾಜಿಕ ಕಾರ್ಯಕರ್ತೆ ಇಂದಿರಾ ಜೈಸಿಂಗ್ ಅವರ ಖಡಕ್ ಅಭಿಪ್ರಾಯ. ಚಂದ್ರಚೂಡ್ ಅವರು ಈ ವರ್ಷಾರಂಭದಲ್ಲಿ ದ್ವಾರಕಾಧೀಶ ದೇವಾಲಯಕ್ಕೆ ಭೇಟಿ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ನೀಡಿದ್ದನ್ನೂ ಅವರು ಉಲ್ಲೇಖಿಸಿ, 'ಸಿಜೆಐ ಹೀಗೆ ಸಾರ್ವಜನಿಕವಾಗಿ ಧಾರ್ಮಿಕ ನಿಲುವನ್ನು ಪ್ರದರ್ಶಿಸುತ್ತಿರುವುದು ಇದೇ ಮೊದಲಲ್ಲ; ಅವರು ಪದೇಪದೆ ಹಿಂದೂ ಆಚರಣೆಗಳು ಮತ್ತು ಚಿಹ್ನೆಗಳನ್ನು ಪ್ರದರ್ಶಿಸುತ್ತಿರುವಾಗ, ಹಿಂದೂಯೇತರ ಕಕ್ಷಿದಾರರು ಅವರಿಂದ ನಿಷ್ಪಕ್ಷಪಾತ ನ್ಯಾಯವನ್ನು ನಿರೀಕ್ಷಿಸಬಹುದೇ!' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಗಣಪತಿ ಪೂಜೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿಯವರು ಸಿಜೆಐ ನಿವಾಸಕ್ಕೆ ಭೇಟಿಯಿತ್ತ ಘಟನೆಯ ಜತೆಗೆ, ವಿಎಚ್‌ಪಿ ಆಯೋಜಿಸಿದ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕಾಗಿ ಕೇಂದ್ರ, ಕಾನೂನು ಸಚಿವರು, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟಿನ ಸುಮಾರು 30

ನಿವೃತ್ತ ನ್ಯಾಯಾಧೀಶರುಗಳು ದೇಶಾದ್ಯಂತದ ರಾಜಕಾರಣಿಗಳು, ಬುದ್ಧಿಜೀವಿಗಳು ಮತ್ತು ಹಿರಿಯ ವಕೀಲರುಗಳ ಟೀಕೆಗೆ ಗುರಿಯಾದರು. ಸಿಜೆಐ ನಿವಾಸದಲ್ಲಿನ ಪ್ರಧಾನಿ ಮೋದಿಯವರ ಉಪಸ್ಥಿತಿ ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿಯಾದರೆ, ವಿಎಚ್‌ಪಿಯ ಸಭೆಯಲ್ಲಿನ ನಿವೃತ್ತ ನ್ಯಾಯಾಧೀಶರುಗಳ ಹಾಜರಾತಿಯು ಹೆಚ್ಚಿನ ಗಮನವನ್ನು ಸೆಳೆಯಲಿಲ್ಲವಷ್ಟೇ. ಧಾರ್ಮಿಕ ಮತಾಂತರಗಳ ಕುರಿತು ಮತ್ತು ಮೂಲತಃ ದೇವಾಲಯಗಳಾಗಿದ್ದವು ಎಂದು ಹಿಂದೂ ಸಮಾಜ ಹೇಳಿಕೊಳ್ಳುವ ವಾರಾಣಸಿಯ ಜ್ಞಾನವಾಪಿ ಮತ್ತು ಮಥುರಾದ ಮಸೀದಿಗಳ ಬಗ್ಗೆ ಕಾನೂನು ಹೋರಾಟದ ರೂಪುರೇಷೆಯನ್ನು ಅಖೈರುಗೊಳಿಸಲು, ವಕ್ಫ್ ಕಾನೂನಿಗೆ ಬದಲಾವಣೆ ತರುವ ವಿಷಯವನ್ನು ಚರ್ಚಿಸಲು ವಿಎಚ್‌ಪಿ ಈ ಸಮಾರಂಭವನ್ನು ಆಯೋಜಿಸಿತ್ತು. ಹಾಗಾಗಿ ಈ ಕಾರ್ಯಕ್ರಮದಲ್ಲಿನ ನಿವೃತ್ತ ನ್ಯಾಯಾಧೀಶರುಗಳ ಹಾಜರಾತಿ ಹಲವರ ಕಣ್ಣುಗಳನ್ನು ಕೆಂಪಾಗಿಸಿತು. ಪ್ರಸ್ತುತ ಈ ಎರಡೂ ಮಸೀದಿಗಳು ಹಿಂದೂ ಸಮಾಜದಿಂದ ಮೊಕದ್ದಮೆಯನ್ನು ಎದುರಿಸುತ್ತಿರುವುದು ನಮಗೆ ಗೊತ್ತಿರುವಂಥದ್ದೇ. 'ಕಾನೂನುಬದ್ಧ ಸಮಾರಂಭಗಳಿಗೆ ಹಾಜರಾಗುವುದು ನಮ್ಮ ನಾಗರಿಕ ಹಕ್ಕಾಗಿದೆ' ಎಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಲ ನಿವೃತ್ತ ನ್ಯಾಯಾಧೀಶರು ಬಹಿರಂಗವಾಗಿಯೇ ಪ್ರತಿಕ್ರಿಯಿಸಿದರು. 'ನ್ಯಾಯಾಂಗ ಸುಧಾರಣೆಗಳ ಕುರಿತಾಗಿ ವಿಎಚ್‌ಪಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ನ್ಯಾಯಾಧೀಶರು ಭಾಗವಹಿಸುವುದು ಸರಿ; ಆದರೆ, ದೇವಾಲಯಗಳು ಎಂದು ಹೇಳಿಕೊಳ್ಳುವ ಎರಡು ಮಸೀದಿಗಳ ಬಗೆಗಿನ ಕಾನೂನು ಹೋರಾಟದ ಬಗ್ಗೆ ಅಲ್ಲಿ ಚರ್ಚಿಸುವುದು ಆಕ್ಷೇಪಾರ್ಹವಾಗಿದೆ. ಕಾನೂನು ಸಚಿವರು ಮತ್ತು ಮಾಜಿ ನ್ಯಾಯಾಧೀಶರುಗಳು ಅಲ್ಲಿ ಉಪಸ್ಥಿತರಿರುವುದು ಸೂಕ್ತವಲ್ಲ' ಎಂಬುದಾಗಿ ದೇಶದ ಕೆಲವು ಹಿರಿಯ ನ್ಯಾಯವಾದಿಗಳು ಅಭಿಪ್ರಾಯಪಟ್ಟರು.

ಈ ಎರಡೂ ಪ್ರಕರಣಗಳ ಸಾರಸಂಗ್ರಹ ಇಷ್ಟೇ- ಅದೆಂದರೆ, ರೂಢಿಯಲ್ಲಿರುವ ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಮತ್ತು ಈ ಎರಡೂ ಘಟನೆಗಳು ನ್ಯಾಯದಾನದ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರಿ ತಪ್ಪುಸಂದೇಶ ರವಾನೆಯಾಗಬಹುದು ಎಂಬುದು. ಹಾಗಂತ, ಸಾಂವಿಧಾನಿಕ ಹುದ್ದೆಯಲ್ಲಿದ್ದ ಅನೇಕ ಮಹಾನುಭಾವರುಗಳು ಸದ್ಭಾವನೆಯಿಂದ ಶಿಷ್ಟಾಚಾರದ ಮೇರೆ ಮೀರಿದ್ದು ಇದೇ ಮೊದಲೇನಲ್ಲ. ಸವೆಯದ ಹೊಸ ದಾರಿಯೊಂದನ್ನು ಸದಾ ಹುಡುಕುವ ಮೋದಿ, ಅಬ್ದುಲ್ ಕಲಾಂ ಮತ್ತು ವಾಜಪೇಯಿ ಅವರಂಥ ವಿಭಿನ್ನ ಚಿಂತನೆಯ ಅನೇಕ ನಾಯಕರನ್ನು ನಾವು ನೋಡಿದ್ದೇವೆ. ಹಾಗೆ ಶಿಷ್ಟಾಚಾರದಿಂದ ದೂರ ಸರಿದು ವರ್ತಿಸಿದ ನಾಯಕರ ಕೆಲವು ಉದಾಹರಣೆಗಳನ್ನು ನೋಡೋಣ. ಭಾರತದ ಮೊದಲ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಒಮ್ಮೆ ಪ್ರವಾಸದಲ್ಲಿದ್ದಾಗ ಹಿರಿಯ ಪೀಠಾಧಿಪತಿಗಳೊಬ್ಬರ ಆಶ್ರಮಕ್ಕೆ ಹೋಗುವ ಸಂದರ್ಭ ಬಂದಿತ್ತು. ಆಗ ಶುದ್ಧ ಭಾರತೀಯ ಪ್ರಜ್ಞೆಯನ್ನು ಮೆರೆದ ರಾಜೇಂದ್ರ ಪ್ರಸಾದರು, ಪೀಠಾಧಿಪತಿಗಳ ಚರಣಸ್ಪರ್ಶ ಮಾಡಿ ಸಾಷ್ಟಾಂಗ ಪ್ರಣಾಮ ಮಾಡಿದ್ದರು. ಈ ವಿಷಯ ಅಂದಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರನ್ನು ತಲುಪಿತು. ಮುಂದೊಂದು ದಿನ ನೆಹರು ಅವರು ರಾಷ್ಟ್ರಪತಿಗಳನ್ನು ಭೇಟಿಯಾದಾಗ, 'ನೀವು ಈ ಜಾತ್ಯತೀತ ದೇಶದ ಸರ್ವೋಚ್ಚ ಸ್ಥಾನದಲ್ಲಿದ್ದೀರಿ; ಹಿಂದೂ ಸಮಾಜದ ಯತಿಗಳೊಬ್ಬರ ಕಾಲಿಗೆ ನಮಸ್ಕರಿಸಿದ್ದು ಅನ್ಯಧರ್ಮೀಯರಿಗೆ ತಪ್ಪು ಸಂದೇಶವನ್ನು ರವಾನಿಸುತ್ತದೆ ಮತ್ತು ಶಿಷ್ಟಾಚಾರದ ಸ್ಪಷ್ಟ ಉಲ್ಲಂಘನೆಯಾಗುತ್ತದೆ' ಎಂದಾಗ ರಾಷ್ಟ್ರಪತಿಯವರು, 'ನಾನು ಏನು ಮಾಡಬೇಕು ಮತ್ತು ಏನು ಮಾಡಬಾರದು ಎನ್ನುವುದು ನನಗೆ ತಿಳಿದಿದೆ; ನಾಳೆ ನಾನು ನನ್ನ ತಾಯಿಗೆ ನಮಸ್ಕಾರ ಮಾಡುವುದನ್ನೂ ನೀವು ಶಿಷ್ಟಾಚಾರದ ಹೆಸರಿನಲ್ಲಿ ಪ್ರಶ್ನಿಸಬಹುದು' ಎಂದು ಹೇಳಿ ನೆಹರುರನ್ನು ಸುಮ್ಮನಿರಿಸಿದ್ದರಂತೆ!

ನಮ್ಮ ಹೆಮ್ಮೆಯ ಅಬ್ದುಲ್ ಕಲಾಂ ಅವರು ಈ ಹಿಂದೆ ಹಲವಾರು ಸಂದರ್ಭಗಳಲ್ಲಿ ಶಿಷ್ಟಾಚಾರದಿಂದ ದೂರಸರಿದು ವರ್ತಿಸಿದ್ದಿದೆ. ರಾಷ್ಟ್ರಪತಿಗಳಾದ ಹೊಸತರಲ್ಲಿ ಅವರ ಉಡುಗೆಯ ಮತ್ತು ಅವ್ಯವಸ್ಥಿತ ಕೂದಲು ಹಾಗೂ ಸರಳತನದ ಬಗ್ಗೆಯೂ ಶಿಷ್ಟಾಚಾರದ ಉಲ್ಲಂಘನೆಯ ಮಾತುಗಳು ಹೊಮ್ಮಿದ್ದಿದೆ. ಆಗಸ್ಟ್ 15ರಂದು ರಾಷ್ಟ್ರಪತಿ ಭವನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಯಾವುದೇ 'ಡ್ರೆಸ್ ಕೋಡ್' ಅನ್ನು ಪಾಲಿಸಬೇಕಾದ ಅಗತ್ಯವಿಲ್ಲ ಎಂದು ನಿರ್ದೇಶಿಸಿದ್ದ ಅವರು, ತಮ್ಮ ಬೂಟುಗಳನ್ನು ಕಾರಿನಲ್ಲೇ ಕಳಚಿಟ್ಟು ಬರಿಗಾಲಿನಲ್ಲಿ ನಡೆದು ಸುದ್ದಿಯಾಗಿದ್ದರು. ಕಲಾಂ ಅವರು ಭದ್ರತಾ ವಲಯದಿಂದ ಮುಕ್ತರಾಗಿ ಮಕ್ಕಳೊಂದಿಗೆ ಕುಳಿತುಕೊಂಡ, ರಾಷ್ಟ್ರಪತಿ ಭವನದ ಕಾವಲುಗಾರರೊಂದಿಗೆ ಸಾಮಾನ್ಯರಂತೆ ಹರಟೆ ಹೊಡೆದ ಸಂದರ್ಭಗಳೂ ಇವೆ.

ಯಾವುದೇ ಸರಕಾರವು ಮಾಜಿ ರಾಷ್ಟ್ರಪತಿಗಳ ಸೇವೆಯನ್ನು ಬಳಸಿಕೊಂಡಿರುವುದನ್ನು ನಾವು ಇಲ್ಲಿಯವರೆಗೆ ಕೇಳಿರಲಿಲ್ಲ ತಾನೆ? ಆದರೆ, 'ಒಂದು ದೇಶ, ಒಂದು ಚುನಾವಣೆ'ಯ ಸಾಧ್ಯಾಸಾಧ್ಯತೆಗಳ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸುವ ಕಾರ್ಯವನ್ನು ಇದೇ ಮೋದಿ ಸರಕಾರವು ರಾಮನಾಥ ಕೋವಿಂದರಿಗೆ ವಹಿಸಿ ಶಿಷ್ಟಾಚಾರ ಮೀರಿರುವುದನ್ನು ನೆನಪಿಸಿಕೊಳ್ಳಬಹುದು. ಹಾಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಧೀಶರಾದ ನ್ಯಾ.ಶ್ರೀಶಾನಂದ ಅವರು ತಮ್ಮ ಪೀಠದಲ್ಲಿ ಕುಳಿತು ಸುದೀರ್ಘವಾಗಿ ಪ್ರವಚನದ ಧಾಟಿಯಲ್ಲಿ ಧಾರ್ಮಿಕವಾಗಿ ಮಾತನಾಡಿರುವುದನ್ನೂ ನಾವು ನೋಡಿದ್ದೇವೆ.

ಶಾಸ್ತ್ರ ಬೇರೆ, ಶಿಷ್ಟಾಚಾರ ಬೇರೆ. ಶಾಸ್ತ್ರವೆಂದರೆ, ಕಾನೂನಿನಂತೆ ವಿಧಿ ನಿಷಿದ್ಧಗಳಿಂದ ಕೂಡಿರುತ್ತದೆ ಮತ್ತು ಅದು ಸಾರ್ವಕಾಲಿಕವಾಗಿದ್ದು ಸರ್ವಜನರಿಗೂ ಒಂದೇ ತೆರನಾಗಿರುತ್ತದೆ. ಆದರೆ ಶಿಷ್ಟಾಚಾರ ಹಾಗಲ್ಲ, ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ವ್ಯಕ್ತಿಗಳಿಗೆ ಅದು ಬೇರೆಯೇ ಆಗಬಹುದಾಗಿದೆ. ಹಾಗಾಗಿ, 'ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವುದಾದರೆ, ಶಿಷ್ಟಾಚಾರದ ಉಲ್ಲಂಘನೆ ತಪ್ಪಲ್ಲ' ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಹಿರಿಯ ಸೇನಾಧಿಕಾರಿಗಳು ನಿವೃತ್ತರಾದ ಮೇಲೆ ತಮ್ಮಾಯ್ಕೆಯ ರಾಜಕೀಯ ಪಕ್ಷವನ್ನು ಸೇರಬಹುದು, ವೈದ್ಯರು ತಮಗೆ ಬೇಕಾದ ರಾಜಕೀಯ ನಿಲುವು ತಳೆಯಬಹುದು. ಇನ್ನು ನ್ಯಾಯವಾದಿಗಳಂತೂ ನ್ಯಾಯಾಲಯದಲ್ಲಿ ಒಂದೇ ರಾಜಕೀಯ ಸಿದ್ಧಾಂತದ ಪರವಾಗಿ ನಿಲ್ಲಬಹುದು. ಮಂತ್ರಿ ಮಹೋದಯರುಗಳು ವಿವಿಧ ಧರ್ಮೀಯರನ್ನು ಓಲೈಸಲೆಂದು ಅವರ ವೇಷಭೂಷಣಗಳನ್ನು ಧರಿಸಿ ಪೋಸ್ ಕೊಡಬಹುದು, ಆದರೆ ಪ್ರಧಾನಮಂತ್ರಿ ಮತ್ತು ಸಿಜೆಐ ಮಾತ್ರ ಜೀವನಪೂರ್ತಿ ಅನಗತ್ಯ ಹಾಗೂ 'ಔಟ್ ಡೇಟೆಡ್' ಶಿಷ್ಟಾಚಾರಗಳನ್ನು ಪಾಲಿಸುತ್ತಿರಬೇಕು ಎನ್ನುವುದು ಎಷ್ಟರಮಟ್ಟಿಗೆ ಸರಿ? ಮಾತ್ರವಲ್ಲ, ಪ್ರಧಾನಿ ಹಾಗೂ ಸಿಜೆಐ ಇಫ್ತಾರ್ ಕೂಟದಲ್ಲಿ ಪಾಲ್ಗೊಂಡರೆ ಅದು ಸಮಾಜಕ್ಕೆ ಜಾತ್ಯತೀತ ಸಂದೇಶವನ್ನು ರವಾನಿಸುತ್ತದೆ; ಅದೇ, ಗಣೇಶೋತ್ಸವದಲ್ಲಿ ಒಟ್ಟಿಗೆ ಸೇರಿದರೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂದರೆ ಹೇಗೆ? ನ್ಯಾಯಮೂರ್ತಿಗಳು ದೇವಸ್ಥಾನಗಳಿಗೆ ಹೋದರೆ ಜಾತಿವಾದಿಗಳಾಗಿಬಿಡುತ್ತಾರೆ, ಅವರ ತೀರ್ಪು ಪ್ರಶ್ನಾರ್ಹವಾಗಿಬಿಡುತ್ತದೆ ಎಂದರೆ ಎಷ್ಟು ಸರಿ? ಆಡಳಿತ ಪಕ್ಷದ ಮಂತ್ರಿಗಳ ಮಗಳನ್ನು ವಿಪಕ್ಷದ ಹಿರಿಯ ನಾಯಕರ ಮಗನಿಗೆ ಕೊಟ್ಟು ಮದುವೆ ಮಾಡುವುದನ್ನು ನಾವು ಸಾಕಷ್ಟು ಕಂಡಿದ್ದೇವೆ; ಹೀಗೆ, ಸೈದ್ಧಾಂತಿಕವಾಗಿ ವಿರುದ್ಧ ಮನಸ್ಥಿತಿಯವರು ನೆಂಟಸ್ತಿಕೆ ಮಾಡಿದಾಗ, ಅವರ ಕಾರ್ಯಕರ್ತರಿಗೆ ಏನು ಸಂದೇಶ ರವಾನೆಯಾಗುತ್ತದೆ ಹೇಳಿ? ಹಾಗಾಗಿ, ಪ್ರಮುಖ ಸಾಂವಿಧಾನಿಕ ಹುದ್ದೆಯಲ್ಲಿರುವವರ ವೈಯಕ್ತಿಕ ಹಕ್ಕುಗಳನ್ನು ಸಮಾಜ ಗೌರವಿಸಬೇಕಾಗುತ್ತದೆ. ವಿಎಚ್‌ಪಿ ಆಯೋಜಿಸಿದ್ದ ಚಿಂತನ ಸಭೆಯಲ್ಲಿ ನಿವೃತ್ತ ನ್ಯಾಯಾಧೀಶರು ಪಾಲ್ಗೊಂಡ ಮಾತ್ರಕ್ಕೆ, 'ಅದು ನ್ಯಾಯಾಂಗ ವ್ಯವಸ್ಥೆಯ ವಿಶ್ವಾಸಾರ್ಹತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಮತ್ತು ಸಿಜೆಐ ನಿವಾಸಕ್ಕೆ ಪ್ರಧಾನಿ ನೀಡಿದ ಭೇಟಿಯು ಸಿಜೆಐ ಮುಂದೆ ನೀಡಲಿರುವ ತೀರ್ಪುಗಳ ಮೇಲೆ ಪರಿಣಾಮ ಬೀರಬಹುದು' ಎಂದು ಸಂಶಯಿಸುವ ಸ್ವಯಂಪ್ರಮಾಣಿತ ಬುದ್ಧಿಜೀವಿಗಳು ಮತ್ತು ರಾಜಕಾರಣಿಗಳು ಆತ್ಮವಿಮರ್ಶೆ ಮಾಡಿಕೊಳ್ಳುವುದು ಒಳಿತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಕ್ಷರಗಳು ಆಚೀಚೆ ಆದಾಗಿನ ಎಡವಟ್ಟುಗಳು

ಕಾಗುಣಿತದ ತಪ್ಪಿಲ್ಲದೆ ಅಕ್ಷರಗಳನ್ನು ಬರೆಯುವುದು ಎಷ್ಟು ಮುಖ್ಯವೋ, ಅಕ್ಷರದ ಸಾಲು ಮತ್ತು ಪ್ಯಾರಾಗಳಲ್ಲಿ ಯಥೋಚಿತ ಜಾಗಗಳಲ್ಲಿ ವಿರಾಮ ಚಿಹ್ನೆಗಳನ್ನು ಬಳಸಬೇಕಾದ್ದೂ ಅಷ್ಟೇ ಮುಖ್ಯ. ಕೆಲವೊಮ್ಮೆ ಈ ಎರಡೂ ಪರಿಪಾಠಗಳಿಗೆ 'ಎಳ್ಳು-ನೀರು' ಬಿಡುವುದರಿಂದಾಗಿ ಅಥವಾ ''ಅಲ್ಪವಿರಾಮ, ಅರ್ಧವಿರಾಮ, ಪೂರ್ಣವಿರಾಮ, ಆಶ್ಚರ್ಯಸೂಚಕ ಚಿಹ್ನೆ ತಾನೇ? ಎಲ್ಲೋ ಒಂದು ಕಡೆ ಹಾಕಿದರಾಯ್ತು'' ಎಂಬ ನಿರ್ಲಕ್ಷ್ಯ ಭಾವದಿಂದಾಗಿ ವಿಷಯ ಪ್ರಸ್ತುತಿಯಲ್ಲಿ ಎಡವಟ್ಟಾಗುವುದಿದೆ. 'ಡೆಡ್‌ಲೈನ್' ಎಂಬ 'ಲೈನ್ ಆಫ್ ಕಂಟ್ರೋಲ್'ನಲ್ಲೇ ದಿನದೂಡಬೇಕಾಗಿ ಬರುವ ಪತ್ರಕರ್ತರು ಗಡಿಬಿಡಿಯ ತೆಕ್ಕೆಗೆ ಕಸುಬನ್ನು ಒಪ್ಪಿಸಿ ಇಂಥ ಸಾಕಷ್ಟು ಎಡವಟ್ಟು ಪ್ರಸಂಗಗಳಿಗೆ ಕಾರಣೀಭೂತರಾಗುವುದುಂಟು.

ಇದು ಸುಮಾರು ಎರಡೂವರೆ ದಶಕದ ಹಿಂದಿನ ಕಥೆ. ರಾತ್ರಿ 11 ಗಂಟೆ. ಪತ್ರಿಕಾಲಯವೊಂದಕ್ಕೆ ಕೊನೇ ಕ್ಷಣದಲ್ಲಿ ಕ್ರೈಮ್ ಸುದ್ದಿಯೊಂದು ಬಂತು. ಆಗಿನ್ನೂ ಸುದ್ದಿಮನೆಗಳಿಗೆ ಇಂಟರ್‌ನೆಟ್/ಇ-ಮೇಲ್, ವಾಟ್ಸ್ಯಾಪ್, ಪ್ರತಿ ಮೇಜಿಗೂ ಕಂಪ್ಯೂಟರ್ ಇತ್ಯಾದಿ ಸೌಕರ್ಯಗಳು ಈಗಿರುವ ಪರಿಯಲ್ಲಿ ದಾಂಗುಡಿ ಇಟ್ಟಿರಲಿಲ್ಲ. ಯುಎನ್‌ಐ/ಪಿಟಿಐನಂಥ ಸುದ್ದಿಸಂಸ್ಥೆಗಳು ಇಂಗ್ಲಿಷ್‌ನಲ್ಲಿ ಕಳಿಸುತ್ತಿದ್ದ ಸುದ್ದಿಗಳು ಟೆಲಿಪ್ರಿಂಟರ್‌ನಲ್ಲಿ ಒಡಮೂಡುತ್ತಿದ್ದವು ಅಥವಾ ವರದಿಗಾರರು ಫ್ಯಾಕ್ಸ್ ಮೂಲಕ ತುರ್ತುಸುದ್ದಿಗಳನ್ನು ಕಳಿಸುತ್ತಿದ್ದರು. ಹಾಗೆ ಫ್ಯಾಕ್ಸ್‌ನಲ್ಲಿ ಬಂದ ಕ್ರೈಮ್ ಸುದ್ದಿಯ ಪ್ರತಿಯನ್ನು ತೆಗೆದುಕೊಂಡ ಸುದ್ದಿ ಸಂಪಾದಕರು, ಅಷ್ಟು ಹೊತ್ತಿಗಾಗಲೇ ಮನೆಗೆ ಹೊರಡಲು ಸಜ್ಜಾಗಿದ್ದ ಉಪಸಂಪಾದಕರೊಬ್ಬರಿಗೆ ಅದನ್ನು ಕೊಟ್ಟು ''ಬೇಗ ಇದನ್ನೊಂದು ಡಬಲ್ ಕಾಲಂ ಸುದ್ದಿಯಾಗಿ ಪರಿಷ್ಕರಿಸಿ ಬರೆದುಕೊಟ್ಟು ನಂತರ ಮನೆಗೆ ಹೊರಡಿ; ಇದು ಪತ್ರಿಕೆಯ ಇವತ್ತಿನ ಆವೃತ್ತಿಯಲ್ಲೇ ಹೋಗಬೇಕು'' ಎಂದು ತಾಕೀತು ಮಾಡಿದರು. ಅಂತೆಯೇ ನಿಯತ್ತಾಗಿ ಒಪ್ಪವಾಗಿ ಬರೆದುಕೊಟ್ಟ ಆ ಉಪಸಂಪಾದಕರು, ಕಂಪೋಸ್ ಮಾಡುವುದಕ್ಕೆಂದು ಅದನ್ನು ಕಂಪ್ಯೂಟರ್ ವಿಭಾಗಕ್ಕೆ ನೀಡಿ ಮನೆಗೆ ತೆರಳಿದರು. ಅದನ್ನು ಕಂಪೋಸ್ ಮಾಡಿದ ಮೇಲೆ ಪ್ರಿಂಟ್‌ಔಟ್ ತೆಗೆದುಕೊಂಡು ಕರಡು ತಿದ್ದಿ 'ಒಕೆ' ಮಾಡಲು ಸಮಯವಿರಲಿಲ್ಲ, ಹೀಗಾಗಿ ಸುದ್ದಿ ಸಂಪಾದಕರು ಪುಟ ವಿನ್ಯಾಸಕಾರನಿಗೆ, ''ಸುದ್ದಿಯನ್ನು ಕಂಪೋಸ್ ಮಾಡಿ ಅಪರಾಧ ಸುದ್ದಿಗಳ ಪುಟಕ್ಕೆ ತೆಗೆದುಕೊಂಡುಬಿಡಿ, ಪುಟದಲ್ಲೇ ಆ ಸುದ್ದಿಯ ಮೇಲೊಮ್ಮೆ ಕಣ್ಣಾಡಿಸುತ್ತೇನೆ, ಹೆಚ್ಚು ಸಮಯವಿಲ್ಲ'' ಎಂದರು. ಅಂತೆಯೇ ಆ ಸುದ್ದಿಯೊಂದಿಗೆ ವಿನ್ಯಾಸಗೊಂಡ ಪುಟ, ಅವಲೋಕನಕ್ಕೆಂದು ಸುದ್ದಿ ಸಂಪಾದಕರ ಬಳಿಗೆ ಬಂತು. ಎಲ್ಲ ಸುದ್ದಿಗಳ ಕಡೆಗೂ 'ಹದ್ದಿನಕಣ್ಣು' ಬೀರಿ ಪರಿಶೀಲಿಸಿ,

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಪುಟದಲ್ಲಿ ತಪ್ಪುಗಳು ಇಲ್ಲದಿದ್ದುದಕ್ಕೆ ಅವರು ಹೆಮ್ಮೆಯಿಂದ ಎದೆ ಸೆಟೆಸಿಕೊಂಡರು. ಕೊನೆಯ ಕ್ಷಣದಲ್ಲಿ ಬಂದ ಕ್ರೈಮ್ ಸುದ್ದಿಯ ಮೇಲೆ ಅವರ ದೃಷ್ಟಿ ಹರಿಯಿತು. ಸುದ್ದಿಯ ಹೂರಣವನ್ನೆಲ್ಲಾ ಒಂದಕ್ಷರ ಬಿಡದಂತೆ ಪರಿಶೀಲಿಸಿದ ಅವರಿಗೆ, ಶೀರ್ಷಿಕೆಯನ್ನು ನೋಡುತ್ತಿದ್ದಂತೆ ಎದೆ 'ಧಸಕ್' ಎಂದಿತು. ಅದು ಅತ್ಯಾಚಾರಕ್ಕೆ ಸಂಬಂಧಿಸಿದ ಒಂದು ಸುದ್ದಿಯಾಗಿತ್ತು, ಆದರೆ ಶೀರ್ಷಿಕೆಯಲ್ಲಿ ''ವಿವಾಹಿತೆಯ ಮೇಲೆ ಘೋರ ಅತ್ಯಾಚಾರ ನಮ್ಮ ವಿಶೇಷ ಪ್ರತಿನಿಧಿಯಿಂದ'' ಎಂದು ಅಕ್ಷರಗಳು ಮೂಡಿದ್ದವು! ವಾಸ್ತವವಾಗಿ, ''ವಿವಾಹಿತೆಯ ಮೇಲೆ ಘೋರ ಅತ್ಯಾಚಾರ'' ಎಂಬುದಷ್ಟೇ ಸುದ್ದಿ ಶೀರ್ಷಿಕೆಯಾಗಿದ್ದು, ''ನಮ್ಮ ವಿಶೇಷ ಪ್ರತಿನಿಧಿಯಿಂದ'' ಎಂಬುದು ಸುದ್ದಿ ಶೀರ್ಷಿಕೆಯ ಅಡಿಯಲ್ಲಿ ಮುದ್ರಿಸಲಾಗುವ 'ಬೈಲೈನ್' ಸ್ವರೂಪದ ಪದಗುಚ್ಛವಾಗಿತ್ತು. ಆದರೆ ಕಂಪ್ಯೂಟರ್ ವಿಭಾಗದ ಕಂಪೋಸಿಟರ್ ಮಹಾಶಯರು ಅವೆರಡನ್ನೂ ಒಟ್ಟಿಗೆ ಸೇರಿಸಿ ಕಂಪೋಸ್ ಮಾಡಿ, ಪುಟವಿನ್ಯಾಸ ಮಾಡಿಬಿಟ್ಟಿದ್ದರು!!

ಕೆಲವೊಮ್ಮೆ ತಲ್ಲಣದ ಕಾರಣದಿಂದಲೋ, ಅನ್ಯಮನಸ್ಕತೆಯಿಂದಲೋ, ಕೆಲವರು ಏನೋ ಹೇಳುವುದಕ್ಕೆ ಹೋಗಿ ಮತ್ತೇನನ್ನೋ ಒದರಿಬಿಟ್ಟು ಆಭಾಸ ಮಾಡಿಕೊಳ್ಳುವುದಿದೆ. ಅಂಥದೊಂದು ಎಡವಟ್ಟಿನ ಪ್ರಸಂಗ ಇಲ್ಲಿದೆ. ಇದು ದಶಕಗಳ ಹಿಂದೆ ಘಟಿಸಿದ್ದು. ಆ ಕಾಲಘಟ್ಟದಲ್ಲಿ ಆಕೆ ಕನ್ನಡದ ಅತ್ಯಂತ ಜನಪ್ರಿಯ ನಟೀಮಣಿ. ಸ್ಟುಡಿಯೋದಲ್ಲಿ ಚಲನಚಿತ್ರವೊಂದರ ಅಂದಿನ ಚಿತ್ರೀಕರಣ ಮುಗಿದು, ನಿರ್ದೇಶಕರು 'ಪ್ಯಾಕಪ್' ಎಂದು ಘೋಷಿಸಿದ್ದೂ ಆಯಿತು. ಕ್ಯಾಮರಾ ತಂತ್ರಜ್ಞರು ಹಾಗೂ ಬೆಳಕಿನ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದವರು ತಂತಮ್ಮ ಪರಿಕರಗಳನ್ನು ಬಿಚ್ಚಿ, ಪ್ಯಾಕ್ ಮಾಡಿ ವಾಹನಗಳಿಗೆ ತುಂಬುವ ಕಾರ್ಯದಲ್ಲಿ ವ್ಯಸ್ತರಾದರು. ಗ್ರೀನ್ ರೂಮ್‌ಗೆ ಹೋಗಿ ಮೇಕಪ್ ಅನ್ನು ತೊಡೆದುಕೊಂಡು ಬಂದ ಆ ನಟೀಮಣಿ, ನಿರ್ದೇಶಕರು ಕೂತಿದ್ದ ಕುರ್ಚಿಯ ಬಳಿಗೆ ತೆರಳಿದರು. ಮಾರನೆಯ ದಿನದ ಚಿತ್ರೀಕರಣಕ್ಕೆ ಸಂಬಂಧಿಸಿ ಮಾಹಿತಿ ಪಡೆಯುವುದು ಆಕೆಯ ಉದ್ದೇಶವಾಗಿತ್ತು. ಆದರೆ ಆ ನಿರ್ದೇಶಕರೋ, ಮರುದಿನ ಚಿತ್ರೀಕರಿಸಬೇಕಾದ ದೃಶ್ಯಗಳ ಕುರಿತು ತಲೆಕೆಡಿಸಿಕೊಂಡು ಸ್ಕ್ರಿಪ್ಟ್‌ನಲ್ಲಿ ಮುಖ ಹುದುಗಿಸಿಕೊಂಡು ಕೂತಿದ್ದರು. ಕೆಮ್ಮಿ ಗಂಟಲು ಸರಿಮಾಡಿಕೊಂಡ ನಟೀಮಣಿ, ತಾವು ಕೇಳಬೇಕೆಂದಿದ್ದ ಪ್ರಶ್ನೆಗಳನ್ನು ಕೇಳಿದರು, ನಿರ್ದೇಶಕರೂ ಅವಕ್ಕೆ ಉತ್ತರಿಸಿ, ಮತ್ತೆ ಸ್ಕ್ರಿಪ್ಟ್‌ನಲ್ಲಿ ಮುಖ ಹುದುಗಿಸಿಕೊಂಡರು.

ಕೆಲ ಕ್ಷಣದಲ್ಲೇ ಆ ನಟಿ ಸ್ಟುಡಿಯೋದ ಚಾವಣಿ ಕಿತ್ತುಹೋಗುವಂತೆ ಜೋರಾಗಿ ಕೂಗಾಡಲಾರಂಭಿಸಿದರು. ತಾಂತ್ರಿಕ ಸಾಧನಗಳನ್ನು ಪ್ಯಾಕ್ ಮಾಡಿ ವಾಹನಗಳಿಗೆ ತುಂಬಿಸಲು ಸಜ್ಜಾಗಿದ್ದ ತಂತ್ರಜ್ಞರು, ಸೆಟ್ ಬಾಯ್‌ಗಳು, ಸಹನಟ-ನಟಿಯರೆಲ್ಲರೂ ಆ ಕೋಪೋದ್ರಿಕ್ತ ನಟೀಮಣಿಯ ಅವತಾರವನ್ನು ಕಂಡು ಬೆಚ್ಚಿಬಿದ್ದರು. ನಿರ್ದೇಶಕರೂ ದಿಗಿಲುಗೊಂಡಿದ್ದರ ಜತೆಗೆ, ''ಅದು ಹಾಗಲ್ಲಮ್ಮಾ... ಹೀಗೆ'' ಎನ್ನುತ್ತಾ ಅದೇನೋ ಸಮಜಾಯಿಷಿ ನೀಡಲು ಹರಸಾಹಸ ಪಡುತ್ತಿದ್ದರೂ ಆ ನಟೀಮಣಿಯ ಕೋಪ ತಣ್ಣಗಾಗಿರಲಿಲ್ಲ. ಈ 'ಹವಾಮಾನ ವೈಪರೀತ್ಯ' ಮುಂದುವರಿದಿತ್ತು; ಅಲ್ಲಿದ್ದ ಕುರ್ಚಿಯಲ್ಲಿ ಕೆಲಕಾಲ ಕುಕ್ಕರಿಸಿದ ನಟೀಮಣಿ, ಕೋಪ ತಣ್ಣಗಾದ ಮೇಲೆ ಎದ್ದು ಕಾರನ್ನು ಹತ್ತಿ ಮನೆಗೆ ಹೊರಟರು.

ಇತ್ತ ನಿರ್ದೇಶಕರು ತಲೆಯ ಮೇಲೆ ಕೈಹೊತ್ತು ಕೂತುಬಿಟ್ಟರು. ತಾರಾ ಬಳಗದವರು ಮತ್ತು ತಂತ್ರಜ್ಞರೆಲ್ಲ ಅವರಲ್ಲಿಗೆ ಸಾಗಿ ಮೆಲುದನಿಯಲ್ಲಿ, ''ಏನಾಯ್ತು ಸರ್?'' ಎಂದು ಕೇಳಿದರು. ವಾಸ್ತವವಾಗಿ ಆಗಿದ್ದಿಷ್ಟು- ಮಾರನೆಯ ದಿನದ ಚಿತ್ರೀಕರಣಕ್ಕೆ ಎಷ್ಟು ಹೊತ್ತಿಗೆ ಬರಬೇಕು, ಯಾವ ಉಡುಪನ್ನು ಧರಿಸಿ ಬರಬೇಕು? ಎಂಬೆಲ್ಲ ಪ್ರಶ್ನೆಗಳನ್ನು ಕೇಳಿದ್ದರು ಆ ನಟೀಮಣಿ. ಅದಕ್ಕೆ ತಕ್ಕಂತೆಯೇ ನಿರ್ದೇಶಕರು ಉತ್ತರವನ್ನೂ ನೀಡಿದ್ದರು. ಆದರೆ ಹಾಗೆ ಉತ್ತರಿಸುವಾಗ ಆದ ಸಣ್ಣ ಎಡವಟ್ಟಿನಿಂದಾಗಿ ಆ ನಟೀಮಣಿ ಕೆರಳಿ ಕೆಂಡವಾಗಿ ಸೂರು ಕಿತ್ತುಹೋಗುವಂತೆ ಕಿರುಚಾಡಿದ್ದರು. ಆ ಸ್ಟುಡಿಯೋದಲ್ಲಿ ಮಾರನೆಯ ದಿನ ಕಥಾನಾಯಕಿಯ ಹುಟ್ಟುಹಬ್ಬದ ಸಂಭ್ರಮಾಚರಣೆಯ ದೃಶ್ಯದ ಚಿತ್ರೀಕರಣವಿತ್ತು. ಸ್ಟುಡಿಯೋ ಸೆಟ್‌ಗೆ ಎಷ್ಟು ಹೊತ್ತಿಗೆ ಬರಬೇಕೆಂಬುದನ್ನು ನಟೀಮಣಿಗೆ ಹೇಳಿದ ನಿರ್ದೇಶಕರು ಮತ್ತೆ ಸ್ಕ್ರಿಪ್ಟ್‌ನಲ್ಲಿ ಮುಖ ಹುದುಗಿಸಿಕೊಂಡಿದ್ದರು. ಅದಕ್ಕೆ ತಲೆಯಾಡಿಸಿದ ನಟೀಮಣಿ, ''ಅದು ಸರಿ ಸರ್, ಯಾವ ಡ್ರೆಸ್ ಹಾಕ್ಕೊಂಡು ಬರಬೇಕು?'' ಎಂದು ಮರುಪ್ರಶ್ನೆ ಹಾಕಿದ್ದರು. ಕೆಲಸದ ಒತ್ತಡದಲ್ಲಿದ್ದ ನಿರ್ದೇಶಕರು ಸ್ಕ್ರಿಪ್ಟ್‌ನಿಂದ ಮುಖ ಮೇಲೆತ್ತದೆಯೇ ಉತ್ತರಿಸಿದರು. ಅಲ್ಲೇ ಆಗಿದ್ದು ಎಡವಟ್ಟು! ''Birthday Dress ನಲ್ಲಿ ಬಾರಮ್ಮಾ'' ಅಂತ ಹೇಳೋಕ್ಕೆ ಹೋಗಿ ಆ ನಿರ್ದೇಶಕರು ''Birthsuit ನಲ್ಲಿ ಬಾರಮ್ಮಾ'' ಎಂದು ಹೇಳಿಬಿಟ್ಟಿದ್ದರು! ಅಂದರೆ, 'ಹುಟ್ಟುಹಬ್ಬದ ಉಡುಗೆ'ಯಲ್ಲಿ ಬನ್ನಿ ಅಂತ ಹೇಳೋಕ್ಕೆ ಹೋಗಿ ಆ ಟೆನ್ಷನ್ ಪಾರ್ಟಿ ನಿರ್ದೇಶಕರು 'ಹುಟ್ಟುಡುಗೆ'ಯಲ್ಲಿ ಬನ್ನಿ ಅಂತ ಹೇಳಿಬಿಟ್ಟಿದ್ದರು! ಹಾಗೆ, 'ಬೆತ್ತಲೆಯಾಗಿ ಬನ್ನಿ' ಅಂತ ಹೇಳಿದರೆ ಸಿಟ್ಟು ಬರೋದು ಸಹಜ ತಾನೇ? ಹೀಗಾಗಿ ಆ ನಟೀಮಣಿ ಕೂಗಾಡಿದ್ದರು!!

ಮತ್ತೊಂದು ಪುಟ್ಟ ಪ್ರಸಂಗವನ್ನು ನೋಡೋಣ. ಇದು ಕಾಗುಣಿತದಲ್ಲಿ ಮಾಡುವ ಸಣ್ಣ ಪುಟ್ಟ ಬದಲಾವಣೆಯಿಂದ ಏರ್ಪಡುವ 'ಕಚಗುಳಿ' ಸನ್ನಿವೇಶಕ್ಕೆ ಒಂದು ನಿದರ್ಶನ. ಇದು ಸಾಕಷ್ಟು ವರ್ಷಗಳ ಹಿಂದೆ 'ಮಯೂರ' ಮಾಸಪತ್ರಿಕೆಯ 'ಅಂಗೈಯಲ್ಲಿ ಅರಮನೆ' ಅಥವಾ 'ಬುತ್ತಿ ಚಿಗುರು' ಅಂಕಣಗಳ ಪೈಕಿ ಒಂದರಲ್ಲಿ ಓದುಗರೊಬ್ಬರು ಹಂಚಿಕೊಂಡಿದ್ದ ಕಾಲೇಜು ದಿನಗಳ ಅನುಭವ. ಅದರ ಸಾರಸಂಗ್ರಹ ರೂಪವಿದು: ಕನ್ನಡ ತರಗತಿಯಲ್ಲಿ ವಿದ್ಯಾರ್ಥಿಗಳೆಲ್ಲರೂ ಆಸೀನರಾಗಿದ್ದರು. ಅಂದು ಉಪನ್ಯಾಸಕರು ಬೋಧಿಸಬೇಕಿದ್ದ ಪದ್ಯದ ಹೆಸರು 'ನಿವೇದನ' ಅಂತ. ಅವರು ಬರುವುದಕ್ಕಿನ್ನೂ ಸಮಯವಿದ್ದುದರಿಂದ ಉತ್ಸಾಹಿ ಮತ್ತು ವಿಧೇಯ ವಿದ್ಯಾರ್ಥಿಯೊಬ್ಬ ಚಾಕ್‌ಪೀಸ್ ತೆಗೆದುಕೊಂಡು 'ನಿವೇದನ' ಎಂದು ಬೋರ್ಡ್ ಮೇಲೆ ಬರೆದು ತನ್ನ ಜಾಗಕ್ಕೆ ಮರಳಿದ. ಇದನ್ನು ನೋಡಿದ ಅವನ ತರಲೆ ಸ್ನೇಹಿತ ಸುಮ್ಮನಿರಲಾರದೆ ಬೋರ್ಡ್ ಬಳಿಗೆ ತೆರಳಿ ಅದರ ಮೇಲೆ ಬರೆದಿದ್ದ ಪದದ 'ನಿ' ಅಕ್ಷರದ ಪಕ್ಕದಲ್ಲಿ ಒಂದು ದೀರ್ಘವನ್ನು ಬರೆದು, ಪದವನ್ನು ಒಡೆದು, ತನ್ನ ಜಾಗದಲ್ಲಿ ಬಂದು ಕೂತ. ಹೀಗಾಗಿ, ಮುಂಚೆ 'ನಿವೇದನ' ಎಂದು ಇದ್ದುದು ಈಗ 'ನೀವೇ ದನ' ಎಂದಾಗಿತ್ತು! ಕೆಲ ಕ್ಷಣದಲ್ಲೇ ಕನ್ನಡ ಉಪನ್ಯಾಸಕರು ತರಗತಿಯೊಳಗೆ ಬಂದರು; ವಿದ್ಯಾರ್ಥಿಗಳೆಲ್ಲರೂ ಎಂದಿನಂತಿರದೆ ಮುಸುಮುಸು ನಗುತ್ತಿರುವುದನ್ನು ಕಂಡು, 'ಪ್ರಾರಬ್ಧಗಳು ಏನೋ ಎಡವಟ್ಟು ಮಾಡಿವೆ' ಅಂದುಕೊಂಡೇ ಬೋರ್ಡ್ ಕಡೆಗೆ ನೋಡಿದರು. ಅವರ ಊಹೆ ನಿಜವಾಗಿತ್ತು- 'ನೀವೇ ದನ' ಎಂಬ ಪದಗುಚ್ಛ ಅಲ್ಲಿ ರಾರಾಜಿಸುತ್ತಿತ್ತು! ಇದು ತರಗತಿಯ ತರಲೆಯೊಬ್ಬ ತಮ್ಮನ್ನುದ್ದೇಶಿಸಿ ಮಾಡಿದ ಕಿತಾಪತಿ ಎಂಬುದು ಅವರಿಗೆ ಗೊತ್ತಾಗಿಹೋಯ್ತು. ಆದರೆ ಅವರೂ ಸಾಕಷ್ಟು ಕೆರೆಗಳ ನೀರು ಕುಡಿದ ಅನುಭವಿಯೇ ಆಗಿದ್ದರಿಂದ ಕೊಂಚವೂ ವಿಚಲಿತರಾಗದೆ, ಚಾಕ್‌ಪೀಸ್ ಎತ್ತಿಕೊಂಡು 'ದನ'ದ ಪಕ್ಕದಲ್ಲಿ 'ಗಳು' ಎಂದು ಬರೆದುಬಿಟ್ಟರು. ಬೋರ್ಡ್ ಮೇಲಿನ ಅಂತಿಮ ಅಕ್ಷರಫಲಿತ- 'ನೀವೇ ದನಗಳು' ಎಂದಾಗಿತ್ತು! ಕಿತಾಪತಿ ಮಾಡಿದ್ದ ವಿದ್ಯಾರ್ಥಿಯು ತರಗತಿ ಮುಗಿಯುವವರೆಗೂ ತಲೆಯೆತ್ತಲಿಲ್ಲ!!

(ಲೇಖಕರು ಪತ್ರಕರ್ತರು)

ಹೆಂಗಸರು ವಟವಟ ಅನ್ನೋ ಜಾಗ- ವಠಾರ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಾವು ಅಂದ್ರೆ, ಅದು ಜೀವನದ ಅಂತ್ಯ ಮತ್ತು ತುಂಬಾ ಗಂಭೀರವಾದ ವಿಷಯ. ಆದರೆ ಕೆಲವರಿಗೆ ಮಾತ್ರ ಅದು, 'ಇದು ನನಗೇ ಮೊದಲು ಗೊತ್ತಾಯಿತು' ಅಂತ ಹೇಳಿಕೊಳ್ಳುವ ನ್ಯೂಸ್ ಐಟಂ. ಇದು ಸೆಲೆಬ್ರಿಟಿಗಳನ್ನಂತೂ ಇನ್ನಿಲ್ಲದಂತೆ ಕಾಡುತ್ತದೆ. ಹಾಗಾಗಿ ನಮ್ಮ ದೇಶದಲ್ಲಿ ಹಲವಾರು ಸೆಲೆಬ್ರಿಟಿಗಳು ಅದರಲ್ಲೂ ಸಿನಿಮಾ ನಟ-ನಟಿಯರು, ಕ್ರೀಡಾಪಟುಗಳು ಸಾಯೋಕೆ ಮುಂಚೆಯೇ ಅದೆಷ್ಟು ಬಾರಿ ಸತ್ತಿರುತ್ತಾರೋ ಗೊತ್ತಿಲ್ಲ. ಕಳೆದ ವರ್ಷ ನಟ ಶರತ್ ಬಾಬು, ಜಿಂಬಾಬ್ವೆ ಕ್ರಿಕೆಟ್ ಆಟಗಾರ ಹೀತ್ ಸ್ಟ್ರೀಕ್ ಕೂಡಾ ಸಾಯುವ 2 ವಾರ ಮುಂಚೆಯೇ ಸತ್ತುಹೋಗಿದ್ದರು. ನಮ್ಮ ಕನ್ನಡದ ನಟ ಅಂಬರೀಷ್, ದೊಡ್ಡಣ್ಣ ಅವರನ್ನು ಈ ಸುಡುಗಾಡು ಟ್ರೆಂಡ್ ಹಲವಾರು ಬಾರಿ ಕಾಡಿದ್ದಿದೆ. ಹಾಗಂತ ಇದನ್ನು ನ್ಯೂಸ್ ಚಾನೆಲ್‌ಗಳು ಮಾಡುತ್ತಿವೆ ಎಂದುಕೊಳ್ಳಬೇಡಿ; ಇದು ಸೋಷಿಯಲ್ ಮೀಡಿಯಾಗಳಲ್ಲಿ ಆ್ಯಕ್ಟಿವ್ ಆಗಿರುವ ಕೆಲವರು ಮಾಡುವ ಕೆಲಸ ಮತ್ತು ಇದಕ್ಕೆ ಚಿತ್ರರಂಗದ ದೊಡ್ಡ ಸೆಲೆಬ್ರಿಟಿಗಳೂ ಹೊರತಾಗಿಲ್ಲ ಅನ್ನೋದು ವಿಷಾದ. ಎಲ್ಲರಿಗೂ ನಾವೇ ಮೊದಲು ಸಾವಿನ ಸುದ್ದಿ ಕೊಟ್ಟೆವು ಎನ್ನುವ ಸಂಭ್ರಮದಲ್ಲಿ 'ಆರ್‌ಐಪಿ' ಅಂತ ಪೋಸ್ಟ್ ಹಾಕಿ ನಿಟ್ಟುಸಿರುಬಿಡುವ ಈ ಮಹಾನುಭಾವರು ಒಮ್ಮೆ, 'ಸ್ಯಾಂಡಲ್‌ವುಡ್ ಕ್ವೀನ್ ನಟಿ ರಮ್ಯಾ ಹೃದಯಾಘಾತದಿಂದ ನಿಧನ' ಅಂತ ಪೋಸ್ಟ್‌ಗಳನ್ನು ಹಾಕಿಕೊಂಡಿದ್ದರು. ಹೃದಯಾಘಾತ ಕಾಮನ್ ಆಗಿರುವ ಈ ಸಂದರ್ಭದಲ್ಲಿ ಎಷ್ಟೋ ಜನ ಅದನ್ನು ನಂಬಿಯೂಬಿಟ್ಟಿದ್ದರು. ಆದರೆ ಅಸಲಿಗೆ ಸತ್ತಿದ್ದು ಚಿಕ್ಕಪುಟ್ಟ ಪಾತ್ರ ಮಾಡುತ್ತಿದ್ದ ರಮ್ಯಾ ಎಂಬ ಇನ್ನೊಬ್ಬ ನಟಿ. ಇದು ಇನ್ನೊಂಥರ ಚೀಪ್ ಗಿಮಿಕ್. ಒಟ್ಟಿನಲ್ಲಿ, ಇನ್ನೊಬ್ಬರ ಸಾವು ಕೂಡಾ ನಮ್ಮ ಸಾವಿನಷ್ಟೇ ಗಂಭೀರ ವಿಷಯ ಅನ್ನೋದು ಅರಿವಾಗುವವರೆಗೂ ಇಂಥ ಅವಘಡಗಳು ನಡೆಯುತ್ತಲೇ ಇರುತ್ತವೆ ಅನ್ನೋದು ವಿಷಾದಕರ.

ಲೂಸ್ ಟಾಕ್

ಮುನಿರತ್ನ

- **ಎನ್ರೀ, ನಿಮ್ ಆಡಿಯೋ ಕೇಳ್ದೆ, ಭಾರಿ ಒಳ್ಳೊಳ್ಳೆ ಮಾತಾಡಿದ್ದೀರ ಬಿಡ್ರೀ...**

– ಮತ್ತೆ? ಯಾವಾಗ್ಲೂ ರಾಜರತ್ನಂ ಅವರ 'ರತ್ನನ್ ಪದ'ಗಳನ್ನೇ ಕೇಳಿದ್ರೆ, ಹೆಂಗೆ? ಆವಾಗಾವಾಗ 'ಮುನಿರತ್ನನ್ ಪದ'ಗಳನ್ನೂ ಕೇಳ್ಬೇಕು.

- **ಹೌದೌದು, ಎರಡು ಕಿವಿ ಸಾಲ್ದು. ಸರಿ, ಪರಪ್ಪನ ಅಗ್ರಹಾರ ಹೆಂಗಿದೆ?**

– ವಿಲ್ಸನ್ ಗಾರ್ಡನ್ ನಾಗ ಕೇಳ್ದ, 'ಅಣ್ಣಾ ಎರಡು ಚೇರು ಟೇಬಲ್ ಹಾಕ್ಸಿ ಕಾಫಿ, ಸಿಗರೇಟಿಗೆ ಅರೇಂಜ್ ಮಾಡಿಸ್ಲಾ' ಅಂತ. 'ಬ್ಯಾಡ ಬಳ್ಳಾರಿ ಜೈಲಿಗಿಂತ ಇದೇ ಚೆನ್ನಾಗಿದೆ' ಅಂದೆ.

- **ಒಳ್ಳೇದಾಯ್ತು, ಇಲ್ಲಾಂದ್ರೆ ದರ್ಶನ್ ಜತೆ ಇರ್ಬೇಕಾಗಿತ್ತು ಅಲ್ವಾ?**

– ನಿಜ ನಿಜ... ಮೊದ್ಲೇ ಇಬ್ರ ನಾಲಿಗೆನೂ ಸರಿ ಅಲ್ಲ. ಯಾಕ್ ಬೇಕು ದಾಸನ ಸಾವಾಸ..

- **ಅದ್ಸರಿ, ಜಾಮೀನು ಸಿಕ್ಕು, ಹೊರಗೆ ಬಂದ ತಕ್ಷಣ ಮತ್ತೆ ಇನ್ನೊಂದು ಕೇಸಲ್ಲಿ ಪೊಲೀಸ್ನೋರು ಅರೆಸ್ಟ್ ಮಾಡಿದ್ರಂತೆ?**

– ಹೌದು, ಜೈಲಲ್ಲಿರೋ ಖೈದಿಗಳೆಲ್ಲಾ, 'ಹೋದ್ಯಾ ಪಿಶಾಚಿ ಅಂದ್ರೆ, ಬಂದ್ಯಾ ಗವಾಕ್ಷಿಲಿ' ಅಂತ ಬೈತಾ ಇದ್ರು.

- **ನಿಮ್ಮ ಈ ಕರ್ಮಕಾಂಡ ನೋಡಿ ನಿಮ್ಮ ಪಕ್ಷದ ಹೈಕಮಾಂಡ್ ಏನು ಹೇಳ್ತು?**

– ಅಯ್ಯೋ, ಮೊದ್ಲು ಎಲೆಕ್ಷನ್ನಲ್ಲಿ ಟಿಕೆಟ್ ಕೊಟ್ಟಿದ್ರು, ಈಗ ಪಕ್ಷದಿಂದನೇ ಟಿಕೆಟ್ ಕೊಡ್ತೀವಿ ಅಂತ ಹೆದರಿಸ್ತಾ ಇದ್ದಾರೆ.

ನೆಟ್ ಪಿಕ್ಸ್

ಬಲ್ವಿಂದರ್ ಸಿಂಗ್ ಖೇಮು ಯಾವತ್ತೂ ಫೈವ್ ಸ್ಟಾರ್ ಹೋಟೆಲ್‌ಗಳ ಮುಖ ನೋಡಿದವನಲ್ಲ. ಒಂದು ಲಕ್ಕಿ ಡ್ರಾನಲ್ಲಿ ಅವನಿಗೆ ನಗರದ ಅತಿ ಪ್ರತಿಷ್ಠಿತ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಒಂದು ದಿನ ಕಳೆಯುವ ಉಚಿತ ಬಹುಮಾನ ಸಿಕ್ಕಿತು. ಫುಲ್ ಖುಷಿಯಾದ ಬಲ್ವಿಂದರ್ ಸಿಂಗ್ ಖೇಮು, ತನ್ನ ಹೆಂಡತಿ ಊರಿಗೆ ಹೋದ ದಿನ ಆ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಳ್ಳೋದು ಅಂತ ತೀರ್ಮಾನ ಮಾಡಿದ. ಅವತ್ತು ಬೆಳಗ್ಗೆ ಹೋಟೆಲಿಗೆ ಹೋಗಿ ಚೆಕ್ ಇನ್ ಆಗಿ, ರೂಮ್‌ನಲ್ಲಿ ಸ್ನಾನ, ಊಟ ಮಾಡಿ ಕಿಟಕಿಯಿಂದ ಹೊರಗೆ ನೋಡಿದವನಿಗೆ ಸ್ವಿಮ್ಮಿಂಗ್ ಪೂಲ್ ಕಾಣಿಸಿತು. ಸರಿ ಅಂತ ಅಲ್ಲಿಂದ ಸೀದಾ ಪೂಲ್ ಬಳಿಗೆ ಬಂದು ಅಲ್ಲಿ ಪೂಲ್ ಪಕ್ಕದಲ್ಲಿ ಹಾಕಿದ್ದ ಉದ್ದನೆಯ ಬೆಂಚ್ ಮೇಲೆ ಮೇಲೆ ಮಲಗಿಕೊಂಡ. ಆಗ ಅಲ್ಲಿಗೆ ಬಂದ ಒಬ್ಬ ಫಾರಿನರ್ ಇವನನ್ನು ನೋಡಿ, 'ಹಾಯ್, ಆರ್ ಯೂ ರಿಲ್ಯಾಕ್ಸಿಂಗ್?' ಅಂತ ಕೇಳಿದ. ಇಂಗ್ಲಿಷ್ ಸರಿಯಾಗಿ ಬರದ ಬಲ್ವಿಂದರ್ ಸಿಂಗ್ ಖೇಮು, 'ನೋ ಐ ಆಮ್ ಬಲ್ವಿಂದರ್ ಸಿಂಗ್' ಅಂದ. ಅದಕ್ಕೆ ಆ ವಿದೇಶಿಗ 'ಫನ್ನಿ ಗೈ' ಅಂತ ನಕ್ಕು ಹೊರಟ. ಆದ್ರೆ ಬಲ್ವಿಂದರ್ ಸಿಂಗ್ ಖೇಮುಗೆ ಅವನು ಯಾಕೆ ನಕ್ಕ ಅನ್ನೋದು ಅರ್ಥ ಆಗಲಿಲ್ಲ. ಅದೇ ಗೊಂದಲದಲ್ಲಿ ಅಲ್ಲಿಂದ ಎದ್ದು ಹೊರಟ. ಅಲ್ಲಿ ಸ್ವಲ್ಪ ಮುಂದೆ ಇನ್ನೊಬ್ಬ ಫಾರಿನರ್ ಅವನಂತೆಯೇ ಪೂಲ್ ಪಕ್ಕದ ಬೆಂಚ್‌ನಲ್ಲಿ ಮಲಗಿದ್ದ. ಅವನನ್ನು ನೋಡಿದ ಖೇಮು 'ಆರ್ ಯೂ ರಿಲ್ಯಾಕ್ಸಿಂಗ್?' ಅಂತ ಕೇಳಿದ. ಅದಕ್ಕೆ ಆತ 'ಎಸ್' ಅಂದ. ಇದ್ದಕ್ಕಿದ್ದಂತೆ ರಾಂಗ್ ಆದ ಖೇಮು ಹೇಳಿದ 'ಅಯ್ಯೋ ಮಂಗ್ ನನ್ಮಗನೇ, ನೀನ್ ಇಲ್ ಮಲ್ಕೊಂಡಿದ್ದೀಯಾ, ಅಲ್ಲಿ ನಿನ್ ಹುಡುಕ್ಕೊಂಡ್ ಯಾರೋ ಬಂದಿದ್ರು'.

ಲೈನ್ ಮ್ಯಾನ್

- **ಸೋಡಾ ಕುಡಿಯೋಕೆ ಕಂಪನಿ ಕೊಡೋ 'ಗೆಳೆಯ'**

– ಸೋಡಾ 'ಬಡ್ಡಿ'

- **ಕೆಲವರು ಸ್ವಿಮ್ಮಿಂಗ್ ಪೂಲ್‌ನಲ್ಲಿ ರಬ್ಬರ್ ಟ್ಯೂಬ್‌ನಲ್ಲಿ ಕುಳಿತು ಕುಡಿಯೋದು ಯಾಕೆ?**

– ತೇಲುತ್ತಾ ತೇಲೋಕೆ

- **ಇಬ್ಬನಿ ಬಿದ್ದ ಕಾರಣಕ್ಕೆ ಕ್ರಿಕೆಟ್ ಮ್ಯಾಚ್ ಸೋತ ಕ್ಯಾಪ್ಟನ್ ಏನು ಹೇಳ್ತಾನೆ?**

– We couldn't win due to dew

- **ಸಣ್ಣ ಮಕ್ಕಳೂ ಕೋಡಿಂಗ್ ಕಲಿಯುತ್ತಿರೋ ಈ ಸಮಯದಲ್ಲಿ ಅತಿಬುದ್ಧಿವಂತರಂತೆ ಮಾತಾಡೋರನ್ನ ಏನಂತ ಬಯ್ತಾರೆ?**

– ನಿಂಗೇನ್ ಎರಡ್ ಕೋಡಿದೆಯಾ?

- **ಭಾರತದಲ್ಲೇ ನಾವೇ ತಯಾರಿಸಿದ ಆಪ್‌ಗಳನ್ನ ಏನೆನ್ನಬಹುದು?**

– ಅಪ್ ನೇ ಆಪ್

- **ಬಹಳ ವರ್ಷಗಳವರೆಗೆ ರಸ್ತೆಯಲ್ಲಿ ಓಡಾಡಿ ಸವೆದು ಹೋಗಿರುವ ಕಾರಿನ ಟೈರ್**

– ಟೈರ್ಡ್

- **ಖಾರ ಸಂಸಾರ**

– 'ರೀ, ಸೊಳ್ಳೆ ಕಚ್ತಾ ಇದೆ, ಆವಾಗಿಂದ ಇಲ್ಲೇ ಹಾರಾಡ್ತಿದೆ, ಸ್ವಲ್ಪ ನೋಡ್ರಿ ಎದ್ದು'
'ಯಾಕೆ? ನಾನೇನ್ ಎಂದೂ ಸೊಳ್ಳೆ ನೋಡಿಲ್ವಾ?'

- **ಹೆಂಗಸರು ವಟವಟ ಅಂತ ಮಾತಾಡೋ ಜಾಗ**

– ವಠಾರ

- **ಹಾಕಿಕೊಳ್ಳಲು ಕಷ್ಟ ಆಗುವ ಟೈಟ್ ಫಿಟ್ಟಿಂಗ್ ಇರೋ ಬಟ್ಟೆ**

– ಹಾರ್ಡ್‌ವೇರ್

- **ಒಬ್ಬ ಶಿಲ್ಪಿಗೆ ಚಾಲೆಂಜ್ ಮಾಡೋದ್ ಹೆಂಗೆ?**

ನಿನ್ ಕೈಲಿ ಏನ್ 'ಕೆತ್ಕೊಳ್ಳೋಕಾಗುತ್ತೋ.. ಕೆತ್ಕೋ..!'

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988 /6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 272

ಸಮಾಚಾರ ಸಣ್ಣದಲ್ಲ

ಪಾದಚಾರಿ ವ್ಯಾಪಾರ ಹೊಸ ನಿಯಮ ಜಾರಿ

ಬೆಂಗಳೂರು: ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ನಡೆಸುವುದರಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎಂಬ ಹಲವು ದೂರುಗಳು ದಾಖಲಾದ ಹಿನ್ನೆಲೆಯಲ್ಲಿ ಎಚ್ಚೆತ್ತ ಬಿಬಿಎಂಪಿ ಕೆಲ ನಿಯಮ ರೂಪಿಸಲು ಮುಂದಾಗಿದೆ.

ಇತ್ತೀಚೆಗಷ್ಟೇ ಜಯನಗರ ಸುತ್ತಮುತ್ತ ಫುಟ್ ಪಾತ್ ವ್ಯಾಪಾರಿಗಳಿರುವ ಕಡೆ ಪರಿಶೀಲನೆ ನಡೆಸಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ನಗರದ ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿರುವವರ ಮೇಲೆ ಕ್ರಮ ಕೈಗೊಳ್ಳಲು ಆಯಾ ವಲಯದ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಪಾದಚಾರಿ ಮಾರ್ಗಗಳ ಒತ್ತುವರಿ ತೆರವಿಗೆ ಬಿಬಿಎಂಪಿ ಮುಂದಾಗಿದ್ದು, ಈ ನಿಟ್ಟಿನಲ್ಲಿ ಕೆಲ ನಿಯಮಗಳನ್ನು ರೂಪಿಸಿದೆ. ಸದ್ಯ ಪಾದಚಾರಿ ಮಾರ್ಗಗಳಲ್ಲಿ ತಾತ್ಕಾಲಿಕವಾಗಿ ಸಂಚರಿಸುವವರಿಗೆ ಸಮಸ್ಯೆಯಾಗದಂತೆ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿದ್ದು, ಅಂಗಡಿ ಹಾಕುವವರು, ಕಟ್ಟಡ ನಿರ್ಮಿಸುವವರ ಮೇಲೆ ಕ್ರಮ ಕೈಗೊಳ್ಳುವ ಕುರಿತಂತೆ ಸೂಚನೆ ನೀಡಿದೆ.

ನಗರದ ಕೆಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಹೆಣ್ಣೂರು ಉಪ-ಕೇಂದ್ರದಲ್ಲಿ 66/11ಕೆವಿ ತುರ್ತು ನಿರ್ವಹಣಾ ಕಾಮಗಾರಿ ನಡೆಯಲಿದ್ದು ನಗರದ ಕೆಲವೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಕೆಪಿಟಿಸಿಎಲ್ ತಿಳಿಸಿದೆ. ಸೋಮವಾರ (ಸೆ.23)ರಂದು ಬೆಳಗ್ಗೆ 10:30 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ನಗರದ ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ರಾಮ್ ಲೇಔಟ್, ವಡ್ಡರ ಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಬೈರತಿ ಹಳ್ಳಿ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಂಸ್ಥೆ ತಿಳಿಸಿದೆ.

ಪ್ರತಿಭಾ ಪುರಸ್ಕಾರ ಇಂದು

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 2023-24ನೇ ಸಾಲಿನ ಸರ್ವಸದಸ್ಯರ ಸಭೆ ಸೆಪ್ಟೆಂಬರ್ 22 (ಭಾನುವಾರ) ನಡೆಯಲಿದೆ. ಕಬ್ಬನ್ ಪಾರ್ಕ್ ಆವರಣದಲ್ಲಿರುವ ಪ್ರೆಸ್ ಕ್ಲಬ್‌ನಲ್ಲಿ ಬೆಳಿಗ್ಗೆ 10-00 ಗಂಟೆಗೆ ಸಭೆ ಆರಂಭಗೊಳ್ಳಲಿದೆ. ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಹಾಗೂ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಹರ್ಷದ್ ಭಾಗವಹಿಸಲಿದ್ದು, ಈ ವೇಳೆ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಿದ್ದಾರೆ. ಸಂಘದ ಸದಸ್ಯರು ಸಭೆಗೆ ಹಾಜರಾಗುವಂತೆ ಅಧ್ಯಕ್ಷ ರಮೇಶ್ (ಪಾಳ್ಯ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆ ಕೊನೆಗೊಳಿಸಿ: ನೇಸರ್ಗಿ

ಬೆಂಗಳೂರು: ಜಗತ್ತಿನ ಅನೇಕ ದೇಶಗಳು ಅಧಿಕಾರಿಗಳು ಅಥವಾ ಸಿಬ್ಬಂದಿಗೆ ವೇತನ ನೀಡಲಾಗದ ಸ್ಥಿತಿ ತಲುಪಿವೆ. ಕಾಂಗ್ರೆಸ್ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ಕೊನೆಗೊಳಿಸದಿದ್ದರೆ ನಮ್ಮ ರಾಜ್ಯದ ಜನರು ಸುರಕ್ಷಿತವಾಗಿರುವುದಿಲ್ಲ ಎಂದು ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರು ಶನಿವಾರ ಹೈಕೋರ್ಟ್‌ನಲ್ಲಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ವರುಣಾ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ನವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಮೈಸೂರಿನ ವರುಣಾ ಹೋಬಳಿಯ ಕೂಡನ ಹಳ್ಳಿ ನಿವಾಸಿ ಕೆ ಎಂ ಶಂಕರ್ ಸಲ್ಲಿಸಿರುವ ಚುನಾವಣಾ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರ ಏಕಸದಸ್ಯ ಪೀಠವು ನಡೆಸಿತು.

ಸಂವಿಧಾನಕ್ಕೆ ವಿರುದ್ಧ: ಅರ್ಜಿ ದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರು ಗ್ಯಾರಂಟಿ ಯೋಜನೆಗಳು ಮೂಲಭೂತ ಹಕ್ಕುಗಳು ಮತ್ತು ಸಂವಿಧಾನದ ನಿರ್ದೇಶಕ ತತ್ವಗಳಿಗೆ ವಿರುದ್ಧವಾಗಿವೆ. ಆ ಯೋಜನೆಗಳನ್ನು ಒಳಗೊಂಡ ಪ್ರಣಾಳಿಕೆಯು ನೋಂದಾಯಿತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್ಸಿ) ಪಕ್ಷದ ಪ್ರಣಾಳಿಕೆ ಅಲ್ಲ. ಅದು ಕೆಪಿಸಿಸಿಯ ಪ್ರಣಾಳಿಕೆಯಾಗಿದೆ. ಕೆಪಿಸಿಸಿಯು ನೋಂದಾಯಿತ ಪಕ್ಷವಲ್ಲ. ಹೀಗಾಗಿ, ಅದರ ಹೆಸರಿನಲ್ಲಿ ರೂಪಿಸಿರುವ ಪ್ರಣಾಳಿಕೆಯು ಭ್ರಷ್ಟಾಚಾರಕ್ಕೆ ಸಮ ಎಂದು ಆರೋಪಿಸಿದರು

{ಪ್ರಲ್ಹಾದ್ ಜೋಶಿ} ಕೇಂದ್ರ ಸಚಿವ

ಹಿಂದಿನ ಆಂಧ್ರಪ್ರದೇಶ ಸರಕಾರ ಹಾಗೂ ಕಾಂಗ್ರೆಸ್‌ನವರ ಹಿಂದೂ ವಿರೋಧಿ ನೀತಿಯಿಂದಾಗಿ ತಿರುಪತಿ ಲಡ್ಡುವಿನಲ್ಲಿ ಮಾಂಸದ ಕೊಬ್ಬು ಹಾಗೂ ಇತ್ಯಾದಿ ವಸ್ತುಗಳು ಪತ್ತೆಯಾಗಿರುವುದನ್ನು ಲ್ಯಾಬ್ ವರದಿ ವಿವರಿಸಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಬೇಕು. ನಂದಿನಿ ತುಪ್ಪ ಬಂದ್ ಮಾಡಿಸಿದ ನಂತರ ಈ ತರಹದ ವಸ್ತುಗಳನ್ನು ಖರೀದಿ ಮಾಡಿ ಲಡ್ಡು ತಯಾರಿಸಲಾಗಿದೆ.

ಕರ್ನಾಟಕ ದಲಿತ ಉದ್ಯಮಿಗಳ ಸಂಘಟನೆ ಏರ್ಪಡಿಸಿದ್ದ ಬೃಹತ್ ಸಮಾವೇಶದಲ್ಲಿ ಸಚಿವ ಎಂ.ಬಿ.ಪಾಟೀಲ ಹೇಳಿಕೆ

ಪರಿಶಿಷ್ಟ ಉದ್ಯಮಿಗಳಿಗೆ ಸೂಕ್ತ ತರಬೇತಿಗೆ ವ್ಯವಸ್ಥೆ

ಬೆಂಗಳೂರು: ಅಗತ್ಯ ತರಬೇತಿ ನೀಡಿದರೆ ಪರಿಶಿಷ್ಟ ಉದ್ಯಮಿಗಳ ಸಂಖ್ಯೆ ಹೆಚ್ಚಿಸಬಹುದು. ಈ ಸಂಬಂಧ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಜತೆ ಚರ್ಚಿಸಿ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಭರವಸೆ ನೀಡಿದ್ದಾರೆ.

ಕರ್ನಾಟಕ ದಲಿತ ಉದ್ಯಮಿಗಳ ಸಂಘಟನೆ (ಕೆಇಡಿಎ) ಏರ್ಪಡಿಸಿದ್ದ ಬೃಹತ್ ಪ.ಜಾತಿ ಮತ್ತು ವರ್ಗಗಳ ಎಂಎಸ್‌ಎಂಇ ಸಮಾವೇಶದಲ್ಲಿ ಮಾತನಾಡಿದ ಅವರು, ಉದ್ಯಮ ಕ್ಷೇತ್ರದಲ್ಲಿ ಪರಿಶಿಷ್ಟ ಉದ್ಯಮಶೀಲರ ಬೆಳವಣಿಗೆಗೆ ಸರಕಾರ ಒತ್ತಾಸೆಯಾಗಿದ್ದು, ಆರ್ಥಿಕ, ಮೂಲಸೌಕರ್ಯ, ಸ್ಟಾರ್ಟ್ ಅಪ್ ಹಾಗೂ ಎಂಎಸ್‌ಎಂಇ ಗಳಿಗೆ ನಿಯಂತ್ರಕ ವ್ಯವಸ್ಥೆ ಇತ್ಯಾದಿ ಉಪಕ್ರಮ ಜಾರಿಗೊಳಿಸಲಾಗಿದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕೆಎಸ್‌ಎಫ್‌ಸಿ, ಕೆಯುಎಂ, ಜಿಲ್ಲಾ ಕೈಗಾರಿಕಾ ಕೇಂದ್ರಗಳು ಉದ್ಯಮಿಗಳ ಅಹವಾಲುಗಳನ್ನು ನಿಯಮಿತವಾಗಿ ಆಲಿಸುತ್ತಿವೆ ಎಂದರು.

ಸರಕಾರದಿಂದ ಹೆಚ್ಚಿನ ನೆರವು: ಕೆಐಎಡಿಬಿ ಪ್ಲಾಟ್ ಹಾಗೂ ಕೆಎಸ್‌ಎಸ್‌ಐಡಿಸಿ ಶೆಡ್ ಗಳ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ/ವರ್ಗದ ಉದ್ಯಮಿಗಳಿಗೆ ಶೇ 24.1ರಷ್ಟು ಮೀಸಲು, ಭೂಮಿ ಮಂಜೂರಾತಿಯಲ್ಲಿ ಶೇ 75ರಷ್ಟು ಸಬ್ಸಿಡಿ, ಕೆಎಸ್‌ಎಫ್ ಸಿಯಿಂದ 10 ಕೋಟಿಯವರೆಗೆ ಶೇ 4ರಷ್ಟು ಬಡ್ಡಿದರದಲ್ಲಿ ಸಾಲ ನೆರವು, ನಿಗದಿತ ಮೊತ್ತದ ಶೇ. 50ರಷ್ಟು (ಗರಿಷ್ಠ ರೂ 75 ಲಕ್ಷ) ಬೀಜಧನದ ನೆರವು ಸೌಲಭ್ಯಗಳನ್ನು ಸರಕಾರ ನೀಡುತ್ತಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ದಲಿತ ಉದ್ಯಮಿಗಳ ಸಂಘಟನೆ (ಕೆಇಡಿಎ) ಏರ್ಪಡಿಸಿದ್ದ ಬೃಹತ್ ಪ.ಜಾತಿ/ವರ್ಗಗಳ ಎಂಎಸ್‌ಎಂಇ ಸಮಾವೇಶದಲ್ಲಿ ಪಾಲ್ಗೊಂಡ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಇದ್ದರು.

121 ಉದ್ಯಮಿಗಳಿಗೆ 130 ಎಕರೆ ಮಂಜೂರು: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ.ಜಾತಿ ಉದ್ಯಮಿಗಳಿಗೆ ಶೇ.75ರಷ್ಟು ಸಬ್ಸಿಡಿ ಬಾಬ್ತಿಗೆ 245.50 ಕೋಟಿ, ಹಾಗೆಯೇ ಪ.ವರ್ಗದವರಿಗೆ 62.24 ಕೋಟಿ ಬಿಡುಗಡೆಗೊಳಿಸಿದೆ. ಜತೆಗೆ, ಕೈಗಾರಿಕಾ ಪ್ರದೇಶಗಳ ಸಿಎ ಫ್ಲಾಟ್ ಗಳಲ್ಲಿ ಶೇ.24.1ರಷ್ಟನ್ನು ಈ ಸಮುದಾಯಗಳಿಗಾಗಿ ಮೀಸಲಾತಿ ನಿಗದಿಗೊಳಿಸಿ, ಹಂಚಿಕೆ ಮಾಡಲಾಗುತ್ತಿದೆ. ಕಳೆದ 15 ತಿಂಗಳ ಅವಧಿಯಲ್ಲಿ ಸರಕಾರ ಪರಿಶಿಷ್ಟ ಜಾತಿಯ 121 ಉದ್ಯಮಿಗಳಿಗೆ 130 ಎಕರೆ ಹಾಗೂ ಪರಿಶಿಷ್ಟ ವರ್ಗದ 39 ಉದ್ಯಮಿಗಳಿಗೆ 42 ಎಕರೆ ಭೂಮಿ ಮಂಜೂರು ಮಾಡಿದೆ ಎಂದು ತಿಳಿಸಿದರು.

ತಿರುಪತಿ ಲಡ್ಡುವಿಗೆ ಪ್ರಾಣಿ ಕೊಬ್ಬನ್ನು ಸೇರಿಸಿದ್ದಾರೆ ಎಂಬ ಆರೋಪ ನಿಜವೇ ಆಗಿದ್ದಲ್ಲಿ ಆಘಾತಕಾರಿ ವಿಚಾರ. ಈ ಬಗ್ಗೆ ತನಿಖೆ ನಡೆದು, ಶಿಕ್ಷೆ ಕೊಡಬೇಕು. ಮೊದಲೆಲ್ಲ ಕೆಎಂಎಫ್ ತಿರುಪತಿಗೆ ತುಪ್ಪ ಪೂರೈಸುತ್ತಿತ್ತು. ಆಗ ಕಲಬೆರಕೆ ಇತ್ಯಾದಿ ಏನೂ ಇರಲಿಲ್ಲ. ಈ ಬಗ್ಗೆ ನಾನು ಕೆಎಂಎಫ್ ಅಧ್ಯಕ್ಷರ ಜತೆ ಕೂಡ ಮಾತನಾಡಿದ್ದೇನೆ. ಯಾರೇ ಆದರೂ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಬಾರದು.

-**ಎಂ.ಬಿ.ಪಾಟೀಲ**, ಕೈಗಾರಿಕಾ ಸಚಿವ

₹ 900 ಕೋಟಿ ಬಾಕಿ

ಎಸ್‌ಸಿ-ಎಸ್‌ಟಿ ಉದ್ಯಮಿಗಳಿಗೆ ಮಾಡಿರುವ ನಿವೇಶನ ಹಂಚಿಕೆಯಡಿ ಕೆಐಎಡಿಬಿಗೆ ಸರಕಾರದಿಂದ 900 ಕೋಟಿ ರು. ಬಾಕಿ ಇದೆ. ಹಾಗೆಂದು, ನೆರವನ್ನು ನಿಲ್ಲಿಸಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಸಲಹೆಗಾರರಾಗಿರುವ ವೆಂಕಟಯ್ಯನವರಂಥವರು ಇತ್ತ ಗಮನ ಹರಿಸಿ, ಒತ್ತಡ ಹೇರಿದರೆ ಕೈಗಾರಿಕಾ ಇಲಾಖೆಗೂ ಒಳ್ಳೆಯದಾಗುತ್ತದೆ ಎಂದು ಎಂ.ಬಿ. ಪಾಟೀಲ್ ತಿಳಿಸಿದರು.

ಬೆಂಗಳೂರು ವಿಭಾಗೀಯ ವರ್ತುಲ ರೈಲು ಮಾರ್ಗ ನಿರೀಕ್ಷೆ ಮತ್ತು ಜೋಡಿಮಾರ್ಗದ ಯೋಜನೆ

ಬೆಂಗಳೂರು ಉಪನಗರ ರೈಲ್ವೆ ಯೋಜನೆ 142 ಕಿ.ಮೀ. ಮಾತ್ರ

ಬೆಂಗಳೂರು: ಭವಿಷ್ಯದಲ್ಲಿ ಬೆಂಗಳೂರು ವಿಭಾಗೀಯ ವರ್ತುಲ ರೈಲು ಮಾರ್ಗ ನಿರೀಕ್ಷೆ ಮತ್ತು ಜೋಡಿ ಮಾರ್ಗದ ಯೋಜನೆ ನಡೆಯುತ್ತಿದ್ದು, ಈ ಹಿಂದೆ ಪ್ರಸ್ತಾಪಿಸಿದಂತೆ 452ಕಿ.ಮೀ ವ್ಯಾಪ್ತಿಯ ಉಪನಗರ ರೈಲಿನ ಅಗತ್ಯವಿಲ್ಲ. ಹೀಗಾಗಿ ಬೆಂಗಳೂರು ಉಪನಗರ ರೈಲ್ವೆ ಯೋಜನೆಯ (ಬಿಎಸ್‌ಆರ್‌ಪಿ) 2ನೇ ಹಂತದ 142 ಕಿಲೋಮೀಟರ್ ಮಾತ್ರ ಕ್ರಮಿಸುವ ಸಾಧ್ಯತೆಯಿದ್ದು, ಈ ಸಂಬಂಧ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೆ-ರೈಡ್‌ಗೆ ಸೂಚಿಸಲಾಗಿದೆ ಎಂದು ರೈಲ್ವೆ ಮೂಲಗಳು ತಿಳಿಸಿದೆ.

ಕಳೆದ ವಾರ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಮತ್ತು ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್ ನಡೆದ ಸಭೆಯಲ್ಲಿ ನಿರ್ಧಾರಿಸಲಾಗಿದ್ದು, ರೈಲ್ವೆ ಸಂಪರ್ಕ ಇಲ್ಲದ ಕಡೆಗಳಲ್ಲಿ ಉಪ ನಗರ ರೈಲು ಯೋಜನೆ ವಿಸ್ತರಿಸಲು ಸೂಚಿಸಲಾಗಿದೆ ಎಂದು ಕೆ-ರೈಡ್ ನ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಕಳೆದ ವರ್ಷದ ಆರಂಭದಲ್ಲಿ ಕೆ-ರೈಡ್ ಹಂತದಲ್ಲಿ 452 ಕಿ.ಮೀ ಮಾರ್ಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. 148.17 ಕಿ. ಮೀ.ನ ಮೊದಲನೇ ಹಂತದ ಯೋಜನೆಯನ್ನು ಎಲ್ಲಾ ದಿಕ್ಕುಗಳಲ್ಲಿಯೂ ವಿಸ್ತರಿಸಲಾಗಿತ್ತು. ಇದು ದೇವನಹಳ್ಳಿಯಿಂದ ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರದಿಂದ ಕೋಲಾರ, ಚಿಕ್ಕಬಾಣಾವರದಿಂದ ತುಮಕೂರು, ಚಿಕ್ಕಬಾಣಾವರದಿಂದ ಮಾಗಡಿ, ಕೆಂಗೇರಿಯಿಂದ ಮೈಸೂರು, ವೈಟ್ ಫೀಲ್ಡ್ ನಿಂದ ಬಂಗಾರಪೇಟೆ; ಹೀಲಲಿಗೆಯಿಂದ ಹೊಸೂರು, ರಾಜಾನುಕುಂಟೆಯಿಂದ ಗೌರಿಬಿದನೂರಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಆದರೂ ನವೆಂಬರ್‌ನಲ್ಲಿ ಕೆ-ರೈಡ್‌ನಿಂದ ಪೂರ್ವ ಕಾರ್ಯಸಾಧ್ಯತೆ ಅಧ್ಯಯನ ನಡೆಸುವ ಮನವಿಯನ್ನು ನೈರುತ್ಯ ರೈಲ್ವೆ ತಿರಸ್ಕರಿಸಿತ್ತು.

ಇತರ ರೈಲ್ವೆ ಯೋಜನೆಗಳಿಂದಾಗಿ ಮೂಲ ಹಂತ-2 ಯೋಜನೆ ಅನಗತ್ಯವಾಗಿದೆ ಎಂದು ನೈರುತ್ಯ ರೈಲ್ವೆ ಮೂಲಕ ರೈಲ್ವೆ ಮಂಡಳಿಗೆ ಪತ್ರ ಬರೆದಿದ್ದೇವೆ. ಹೊಸ ಪ್ರಸ್ತಾವನೆಯನ್ನು ಸಲ್ಲಿಸಲು ಕೆ- ರೈಡ್‌ಗೆ ಸೂಚಿಸಿದ್ದೇವೆ.

23,000 ಕೋಟಿಗಳ ವರ್ತುಲ ರೈಲು ಯೋಜನೆಗೆ ವಿವರವಾದ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಇದು ವಡ್ಡರಹಳ್ಳಿ, ದೇವನಹಳ್ಳಿ, ಮಾಲೂರು, ಹೀಲಲಿಗೆ, ಹೆಜ್ಜಾಲ ಮತ್ತು ಸೋಲೂರನ್ನು ಸಂಪರ್ಕಿಸುತ್ತದೆ ಎಂದು ಮಾಹಿತಿ ನೀಡಿದ್ದಾರೆ.

- ಕಳೆದ ವರ್ಷದ ಆರಂಭದಲ್ಲಿ 452 ಕಿ.ಮೀ ಮಾರ್ಗಕ್ಕೆ ಪ್ರಸ್ತಾವನೆ
- ರೈಲ್ವೆ ಸಂಪರ್ಕ ಇಲ್ಲದ ಕಡೆಗಳಲ್ಲಿ ಉಪ ನಗರ ರೈಲು ಯೋಜನೆ

ಶೀಘ್ರದಲ್ಲೇ ಕೆ-ರೈಡ್ ರೈಲ್ವೆಗೆ ಪ್ರಸ್ತಾವಣೆ

ದೇವನಹಳ್ಳಿಯಿಂದ ಚಿಕ್ಕಬಳ್ಳಾಪುರ 18 ಕಿಮೀ, ಚಿಕ್ಕಬಾಣಾವರದಿಂದ ದಬ್ಬಾಸ್ ಪೇಟೆ 36 ಕಿ.ಮೀ. ಚಿಕ್ಕಬಾಣಾವರದಿಂದ ಮಾಗಡಿ ರಸ್ತೆ 45ಕಿ.ಮೀ; ಹೀಲಲಿಗೆಯಿಂದ ಆನೇಕಲ್ ರಸ್ತೆ- 24ಕಿಮೀ, ರಾಜಾನುಕುಂಟೆಯಿಂದ ಒಡೇರಹಳ್ಳಿ - 8 ಕಿ.ಮೀ, ಕೆಂಗೇರಿಯಿಂದ ಹೆಜ್ಜಾಲ-11ಕಿಮೀ. ಇರಲಿದೆ. ಇವುಗಳು ಅಸ್ತಿತ್ವದಲ್ಲಿರುವ ಉಪನಗರ ರೈಲಿನ ಸಣ್ಣ ವಿಸ್ತರಿತ ಮಾರ್ಗಗಳಾಗಿವೆ ಆದ್ದರಿಂದ ಮುಂಬರುವ ಹೊರ ವರ್ತುಲ ರೈಲು ಯೋಜನೆಗೆ ಸೇರಲಿದೆ. ಕೆ-ರೈಡ್ ಶೀಘ್ರದಲ್ಲೇ ರೈಲ್ವೆಗೆ ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಿ ಅವರ ಒಪ್ಪಿಗೆ ಪಡೆಯಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದರು.

ಆಂತರಿಕ ಹ್ಯಾಕಥಾನ್



ಬೆಂಗಳೂರು: ನವೀನ ಆಲೋಚನೆಗಳು ಮತ್ತು ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಎಂಬ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದಿತ್ಯ ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿ ಎಜುಕೇಶನ್ ಮತ್ತು ರಿಸರ್ಚ್ ವತಿಯಿಂದ ಸೆಪ್ಟೆಂಬರ್ 18 ರಂದು ಆಂತರಿಕ ಹ್ಯಾಕಥಾನ್ ಆಯೋಜಿಸಲಾಗಿತ್ತು. ಬಿ.ಫಾರ್ಮಾ, ಎಂ.ಫಾರ್ಮಾ, ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 13 ತಂಡಗಳು ಭಾಗವಹಿಸಿದ್ದವು. ತೀರ್ಪುಗಾರರ ತಂಡದಲ್ಲಿ ನರ್ಸಿಂಗ್ ಮತ್ತು ಎಐಐಎಂಎಸ್ ವಿಭಾಗದಿಂದ ಆಯ್ದ ಸದಸ್ಯರು ಪಾಲ್ಗೊಂಡಿದ್ದರು. 2024ರ ಆಂತರಿಕ ಹ್ಯಾಕಥಾನ್ ನಡೆಸಲು ಐಐಸಿಗೆ ಅನುಮೋದನೆ ದೊರೆತಿರುವುದಕ್ಕೆ ಐಐಸಿಯ ಪ್ರಾಂಶುಪಾಲರು, ಅಧ್ಯಕ್ಷರು, ಸಂಚಾಲಕರು ಮತ್ತು ಇತರ ಸದಸ್ಯರು ಕಾರ್ಯಕ್ರಮವನ್ನು ಸಂತಸ ವ್ಯಕ್ತಪಡಿಸಿದ್ದಾರೆ.

ಮೀಸಲು ಕುರಿತ ರಾಹುಲ್ ಹೇಳಿಕೆ ವಿರುದ್ಧ ಬಿಜೆಪಿ ಎಸ್ಸಿ ಮೋರ್ಚಾದಿಂದ ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು

ರಾಹುಲ್ ಗಾಂಧಿ ವಿರುದ್ಧ ದೂರು

ಬಿಜೆಪಿ ಎಸ್ಸಿ ಮೋರ್ಚಾದಿಂದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್, ಮೇಲ್ಮನೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಮೊದಲಾದ ಪ್ರಮುಖರು ಇದ್ದರು.

ಬೆಂಗಳೂರು: ಅಮೆರಿಕಾದಲ್ಲಿ ಮೀಸಲು ವಿಚಾರ ಕುರಿತದ ರಾಹುಲ್ ಗಾಂಧಿ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದು, ಬಿಜೆಪಿ ಇನ್ನು ಒಂದು ಹೆಜ್ಜೆ ಮುಂದಿಟ್ಟಿದ್ದು, ಎಸ್ಸಿ ಮೋರ್ಚಾದಿಂದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬಿಜೆಪಿಯ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್ ದೂರು ನೀಡಿದ್ದು, ತಕ್ಷಣ ಎಫ್‌ಐಆರ್ ದಾಖಲಿಸುವಂತೆ ಕೋರಿದ್ದಾರೆ. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಪ್ರಕರಣ ಜಾಮೀನುರಹಿತ ವಾರಂಟ್ ಆಗಿದೆ. ಹೀಗಾಗಿ ಅವರ ವಿರುದ್ಧ ಕ್ರಮ ಜರುಗಿಸಬೇಕಿದೆ. ಭಾರತದ ಬಗ್ಗೆ ಹೊರದೇಶದಲ್ಲಿ ಅಪಮಾನಕರ ಹೇಳಿಕೆ ನೀಡಿದ್ದಾರೆ. ಸಮುದಾಯಗಳನ್ನು ನಿಂದಿಸಿದ್ದಾರೆ. ರಾಹುಲ್ ಪ್ರಬುದ್ಧತೆ ಹೊಂದಿಲ್ಲ ಎಂದು ಈಗ ಗೊತ್ತಾಗುತ್ತಿದೆ ಎಂದು ವ್ಯಂಗ್ಯವಾಗಿ ನುಡಿದರು. ವಿಜಯಪುರ, ಬೆಳಗಾವಿ, ಬಾಗಲಕೋಟೆ ಯಲ್ಲೂ ದೂರು ದಾಖಲಾಗಿದೆ. ಬೇರೆ ರಾಜ್ಯ ಗಳಲ್ಲೂ ಕೂಡ ರಾಹುಲ್ ವಿರುದ್ಧ ದೂರುಗಳು ದಾಖಲಾಗಿವೆ. ಯಾವುದೇ ನೆಪ ಹೇಳದೆ ಎಫ್‌ಐಆರ್ ದಾಖಲಿಸಬೇಕು. ರಾಜ್ಯದಲ್ಲಿ ಕಾನೂನು- ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಹಿಂದೂಗಳ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಎಂದರು.

ಇಂದಿರಾ ಗಾಂಧಿಯನ್ನು ನೋಡಿ ಕಲಿಯಲಿ

1977-78ರಲ್ಲಿ ಮೊರಾರ್ಜಿ ದೇಸಾಯಿ ಸರಕಾರದಲ್ಲಿ ಇಂದಿರಾ ಗಾಂಧಿಯನ್ನು ಬಂಧಿಸಿದ್ದರು. ನಂತರ ಪ್ರಧಾನಿಯಾದ ಇಂದಿರಾ ಅಮೆರಿಕ ಪ್ರವಾಸದ ವೇಳೆ, ನೀವು ಎಲ್ಲರನ್ನು ತುರ್ತು ಪರಿಸ್ಥಿತಿ ವೇಳೆ ಜೈಲಿಗೆ ಕಳಿಸಿದ್ದು, ಈಗ ನಿಮ್ಮ ಜೈಲಿನ ಅನುಭವ ಹೇಳಿ ಎಂದು ಪತ್ರಕರ್ತರು ಪ್ರಶ್ನಿಸಿದ್ದರು. ಆಗ ನನ್ನ ದೇಶದ ವಿಚಾರ ಹೊರಗಡೆ ಪ್ರಸ್ತಾಪ ಮಾಡುವುದಿಲ್ಲ ಎಂದು ಹೇಳುವ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಆದರೆ ರಾಹುಲ್, ಅಜ್ಜಿಯನ್ನು ನೋಡಿ ಸಹ ಕಲಿತಿಲ್ಲ ? ಇನ್ನೇನು ಕಲೀತೀರಿ ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ಮುಂಚೂಣಿ: ಸಚಿವ ಜಿ.ಪರಮೇಶ್ವರ್

ಹೊಸ ಉದ್ದಿಮೆ ಸ್ಥಾಪನೆಗೆ ಎಲ್ಲ ರೀತಿ ಸಹಕಾರ

ಬೆಂಗಳೂರು: ನೆರೆಯ ರಾಜ್ಯಗಳ ಸವಾಲಿನ ನಡುವೆಯೂ ರಾಜ್ಯ ಬಂಡವಾಳ ಹೂಡಿಕೆಯಲ್ಲಿ ಮುಂಚೂಣಿಯಲ್ಲಿದ್ದು, ಹೊಸ ಉದ್ದಿಮೆ ಸ್ಥಾಪನೆಗೆ ಸರಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಭರವಸೆ ನೀಡಿದ್ದಾರೆ.

ಎಫ್‌ಕೆಸಿಸಿಐ ಸಂಸ್ಥಾಪಕರ ದಿನಾಚರಣೆಯಲ್ಲಿ ಭಾಗವಹಿಸಿ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಮೆಮೋರಿಯಲ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ರಾಜ್ಯ ಹಾಗೂ ಭಾರತ ದೇಶ ವಿಶ್ವದ ಆರ್ಥಿಕ ಹಾಗೂ ಕೈಗಾರಿಕಾ ಭೂಪಟದಲ್ಲಿ ತಮ್ಮದೇ ಆದ ವಿಶೇಷ ಸ್ಥಾನ ಪಡೆದುಕೊಂಡಿವೆ. ತೃತೀಯ ಹಂತದ ದೇಶಗಳಲ್ಲಿ ಗುರುತಿಸಲ್ಪಡುತ್ತಿದ್ದ ಭಾರತ ಇಂದು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಮೂರನೇ ಆರ್ಥಿಕತೆಯಾಗಿ ಬೆಳೆದು ನಿಂತಿದೆ. ದೇಶದಲ್ಲಿ ಸಿಗುವಂತಹ ಉತ್ತಮ ಕೌಶಲ್ಯ ಹೊಂದಿರುವ ಮಾನವ ಸಂಪನ್ಮೂಲ ಬೇರೆ ಯಾವುದೇ ದೇಶದಲ್ಲೂ ದೊರೆಯುವುದಿಲ್ಲ. ಕರ್ನಾಟಕ ರಾಜ್ಯ ಕೈಗಾರಿಕೆಗಳ ಅಭಿವೃದ್ಧಿಗೆ ನೀಡುತ್ತಿರುವ ಕೊಡುಗೆ ಅಪಾರ. ಎಫ್‌ಕೆಸಿಸಿಐ ನಂತಹ ಸಂಸ್ಥೆ ಸ್ಥಾಪಿಸುವ ಮೂಲಕ ಸರ್. ಎಂ.ವಿಶ್ವೇಶ್ವರಯ್ಯ ಉತ್ತಮ ಬುನಾದಿ ಹಾಕಿದ್ದಾರೆ ಎಂದು ಸ್ಮರಿಸಿದ್ದಾರೆ. ದೇಶದ ಶೇ.50 ರಷ್ಟು ಸಾಫ್ಟ್‌ವೇರ್ ಬೆಂಗಳೂರಿಫಿನಲ್ಲಿ ತಯಾರಾಗುತ್ತದೆ. ಕೈಗಾರಿಕೆಗಳ ಸ್ಥಾಪನೆಗೆ ಬಹಳಷ್ಟು ಉತ್ತಮ ಸೌಲಭ್ಯ ಒದಗಿ ಸಲಾಗುತ್ತಿದೆ. ನೆರೆಯ ರಾಜ್ಯಗಳು ನೀಡುತ್ತಿರುವ ಸವಾಲು ನಿಭಾಯಿಸಬೇಕು. ರಾಜ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗ ಬೇಕು. ಉದ್ಯೋಗಾಕಾಶ ಹೆಚ್ಚಾಗ ಬೇಕು ಹಾಗೂ ಯುವ ಜನರು ಉದ್ದಿಮೆ ಪ್ರಾರಂಭಿ ಸಲು ಮುಂದಾಗುವಂತಾಗಬೇಕು ಎನ್ನುವುದು ಗುರಿ ಯಾಗಿದೆ ಎಂದರು.

108 ವರ್ಷಗಳ ಇತಿಹಾಸ ಸಂಸ್ಥೆ ಹೊಂದಿದೆ. ಸರ್.ಎಂವಿ ಅವರು ಸ್ಥಾಪನೆ ಮಾಡಿದ ಸಂಸ್ಥೆ ಕಳೆದ ಶತಮಾನದಲ್ಲಿ ರಾಜ್ಯದ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದೆ. ರಾಜ್ಯದ ಕೈಗಾರಿಕಾ ಕ್ಷೇತ್ರವನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದೆ.

-**ರಮೇಶ್ ಚಂದ್ರ ಲಹೋಟಿ**, ಎಫ್‌ಕೆಸಿಸಿಐ ಅಧ್ಯಕ್ಷ

ಎಫ್‌ಕೆಸಿಸಿಐ ಸಂಸ್ಥಾಪಕರ ದಿನಾಚರಣೆಯಲ್ಲಿ ಭಾಗವಹಿಸಿ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ ಮೆಮೋರಿಯಲ್ ಪ್ರಶಸ್ತಿ ಪ್ರದಾನ ಮಾಡಿದ ಗೃಹ ಸಚಿವ ಜಿ.ಪರಮೇಶ್ವರ್. ಎಫ್‌ಕೆಸಿಸಿಐ ನಿಯೋಜಿತ ಅಧ್ಯಕ್ಷ ಎಂ.ಜಿ ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷ ಉಮಾ ರೆಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದೇವಾಲಯದ ಪ್ರಸಾದ ಪರೀಕ್ಷೆಗೆ ಒಳಪಡಿಸಲು ನಿರ್ದೇಶನ

ಬೆಂಗಳೂರು: ತಿರುಪತಿ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬಳಕೆ ಪ್ರಕರಣ ತೀವ್ರ ಸಂಚಲನ ಸೃಷ್ಟಿಯಾದ ಬೆನ್ನಲ್ಲೇ, ಎಚ್ಚೆತ್ತುಕೊಂಡ ಮುಜರಾಯಿ ಇಲಾಖೆ ಎಲ್ಲಾ ದೇವಾಲಯಗಳ ಪ್ರಸಾದ ಪರೀಕ್ಷೆಗೆ ಒಳಪಡಿಸಲು ಮುಂದಾಗಿದೆ.

ಕರ್ನಾಟಕದ ಮುಜರಾಯಿ ದೇವಾಲಯಗಳಲ್ಲಿ ನೀಡುವ ಪ್ರಸಾದದ ಗುಣಮಟ್ಟ ಉತ್ತಮವಾಗಿ, ಸುರಕ್ಷಿತವಾಗಿದೆ. ಆದರೂ, ಭಕ್ತರಿಗೆ ಯಾವುದೇ ಅನುಮಾನಕ್ಕೆ ಆಸ್ಪದ ನೀಡಬಾರದು ಎಂಬ ಕಾರಣಕ್ಕೆ ಎಲ್ಲಾ ದೇವಾಲಯಗಳ ಪ್ರಸಾದ ಪರೀಕ್ಷೆಗೆ ಒಳಪಡಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ.

ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಾಲಯಗಳಲ್ಲಿ ಪ್ರಸಾದ ತಯಾರಿಗೆ, ಸೇವೆಗೆ ನಂದಿನಿ ತುಪ್ಪ ಕಡ್ಡಾಯವಾಗಿ ಬಳಸುವಂತೆ ಆದೇಶ ಹೊರಡಿಸಿದೆ. ಇದೀಗ ಮುಜರಾಯಿ ಇಲಾಖೆ ಅಡಿಯಲ್ಲಿ ಬರುವ ದೇವಾಲಯಗಳ ಪ್ರಸಾದ ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ. ದೇವಾಲಯಗಳ ಪ್ರಸಾದ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಿ ಪರಿಶೀಲನೆಗೆ ಒಳಪಡಿಸಬೇಕು ಎಂದು ನಿರ್ದೇಶಿಸಲಾಗಿದ್ದು, ಮುಜರಾಯಿ ಇಲಾಖೆ ಅಡಿಯಲ್ಲಿ ರಾಜ್ಯದಲ್ಲಿ 34,000ಕ್ಕೂ ಹೆಚ್ಚು ದೇವಾಲಯಗಳಿದ್ದು, ಎಲ್ಲಾ ದೇವಾಲಯಗಳ ಪ್ರಸಾದ ಪರೀಕ್ಷೆ ನಡೆಸಬೇಕು. ದೇವಾಲಯದ ಪ್ರಸಾದದ ವಿಚಾರದಲ್ಲಿ ಜನರಿಗೆ ಯಾವುದೇ ಅನುಮಾನ ಇರಬಾರದು. ಹೀಗಾಗಿ ಪ್ರಸಾದಗಳ ಪರೀಕ್ಷೆ ನಡೆಸುವಂತೆ ಸುತ್ತೋಲೆ ಹೊರಡಿಸಲಾಗಿದೆ ಎಂದು ತಿಳಿಸಿದರು.

ಕೇರಳ, ಬಿಹಾರ, ಒಡಿಶಾ ರಾಜ್ಯಗಳ ನಂತರ ರಾಜ್ಯ ಸರಕಾರ ಕ್ರಾಂತಿಕಾರಿ ಹೆಜ್ಜೆಯನ್ನಿಡುವ ಬಗ್ಗೆ ಸಿದ್ಧತೆ | ಸರಕಾರಕ್ಕೆ ಸಮಿತಿ ಶಿಫಾರಸು

ವರ್ಷಕ್ಕೆ ಆರು ದಿನಗಳ ವೇತನ ಸಹಿತ ಮುಟ್ಟಿನ ರಜೆ?

ಬೆಂಗಳೂರು: ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಗೆ ಹಲವು ಭಾಗ್ಯಗಳನ್ನು ನೀಡಿದ್ದ ಕಾಂಗ್ರೆಸ್ ಸರಕಾರ ಇದೀಗ ಕರ್ನಾಟಕದ ಮಹಿಳೆಯರಿಗೆ ವೇತನ ಸಹಿತ ಮುಟ್ಟಿನ ರಜೆ ನೀಡಲು ಹೊಸ ನೀತಿ ರೂಪಿಸಲಿದೆ.

ಖಾಸಗಿ ಮತ್ತು ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮುಟ್ಟಿನ ರಜೆ ಅನಿವಾರ್ಯ, ಹೀಗಾಗಿ ವೇತನ ಸಹಿತ ಮುಟ್ಟಿನ ರಜೆ ನೀಡಬೇಕು ಎನ್ನುವುದು ಬಹುದಿನಗಳ ಬೇಡಿಕೆಯಾಗಿತ್ತು. ಮಹಿಳೆಯರ ಈ ಪ್ರಮುಖವಾದ ಬೇಡಿಕೆಯನ್ನು ಸರಕಾರ ಪರಿಗಣಿಸಿದ್ದು, ಮಹಿಳಾ ಉದ್ಯೋಗಿಗಳಿಗೆ ವಾರ್ಷಿಕವಾಗಿ 6 ದಿನಗಳ ವೇತನ ಸಹಿತ ಮುಟ್ಟಿನ ರಜೆ ನೀಡಲು ನೀತಿ ರೂಪಿಸಲು ಮುಂದಾಗುತ್ತಿದೆ. ಮಹಿಳಾ ಸಿಬ್ಬಂದಿಗೆ ಮುಟ್ಟಿನ ರಜೆ ನೀಡುವುದರ ಬಗ್ಗೆ ಗಮನಹರಿಸುವಂತೆ ಕೇಂದ್ರ ಸರಕಾರಕ್ಕೆ ಸುಪ್ರೀಂ ಕೋರ್ಟ್ ಕಳೆದ ಮೂರು ತಿಂಗಳ ಹಿಂದೆ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಎಲ್ಲಾ ರಾಜ್ಯದಲ್ಲಿಯೂ ಈ ವಿಚಾರ ಚರ್ಚೆಯಲಿದ್ದು, ಕರ್ನಾಟಕದಲ್ಲಿ ವೇತನ ಸಹಿತ ರಜೆ ನೀಡುವ ಸಾಧ್ಯತೆ ಹೆಚ್ಚಿದೆ. ಒಂದು ವೇಳೆ ಮುಟ್ಟಿನ ರಜೆ ನೀಡಿದರೆ ಅದರ ಸಾಧಕ ಹಾಗೂ ಬಾಧಕಗಳ ಬಗ್ಗೆ ಪರಿಶೀಲಿಸಲು ಈಗಾಗಲೇ ಸಮಿತಿ ರಚಿಸಲಾಗಿದ್ದು, ಈ ಸಮಿತಿ ನೀಡುವ ವರದಿ ಮೇಲೆ ಕರ್ನಾಟಕ ಸರಕಾರ ಮಹಿಳೆಯರಿಗೆ ಮುಟ್ಟಿನ ರಜೆ ನೀಡುವ ಬಗ್ಗೆ ಹಾಗೂ ಎಷ್ಟು ದಿನ ನೀಡಬೇಕು ಎನ್ನುವುದರ ಬಗ್ಗೆ ಅಂತಿಮ ನಿರ್ಧಾರಕ್ಕೆ ಬರಲಿದೆ. ಕೇರಳ, ಬಿಹಾರ ಮತ್ತು ಒಡಿಶಾ ರಾಜ್ಯಗಳ ನಂತರ ಇದೀಗ ಕರ್ನಾಟಕ ರಾಜ್ಯ ಸರಕಾರ ಕೂಡ ಕ್ರಾಂತಿಕಾರಿ ಹೆಜ್ಜೆಯನ್ನಿಡುವ ಬಗ್ಗೆ ಸಿದ್ಧತೆ ನಡೆಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಮಹಿಳೆ ಯರಿಗೆ ಮುಟ್ಟಿನ ರಜೆ ನೀಡುವ ಬಗ್ಗೆ ಸದ್ಯದಲ್ಲೇ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ.

18 ಸದಸ್ಯರ ಸಮಿತಿ ಶಿಫಾರಸು

ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿನ ಉದ್ಯೋಗಸ್ಥ ಮಹಿಳೆಯರಿಗೆ ವರ್ಷಕ್ಕೆ ಆರು ದಿನ ವೇತನ ಸಹಿತ ಮುಟ್ಟಿನ ರಜೆ ನೀಡಲು ಕ್ರೈಸ್ಟ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥೆ ಸಪ್ನಾ ಅವರ ಅಧ್ಯಕ್ಷತೆಯ 18 ಸದಸ್ಯರ ಸಮಿತಿ ಶಿಫಾರಸು ಮಾಡಿದೆ. ಮುಟ್ಟಿನ ಅವಧಿಯಲ್ಲಿ ಮಹಿಳೆಯರು ಹೇಗೆ ವಿವಿಧ ಶಾರೀರಿಕ ಬದಲಾವಣೆಗಳಿಗೆ ಒಳಗಾಗುತ್ತಾರೆ. ಉದ್ಯೋಗಸ್ಥ ಮಹಿಳೆಯರು ಅನುಭವಿಸುವ ಸಂಕಷ್ಟ, ಸವಾಲುಗಳು, ಕೆಲಸ ಮಾಡುವ ಸ್ಥಳಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ಅನುಸರಿಸಬೇಕಾದ ನಿಯಮಗಳು, ವಿಶ್ರಾಂತಿಯ ಅಗತ್ಯತೆ ಕುರಿತು ಸಮಿತಿ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಮುಟ್ಟಿನ ರಜೆ ನೀತಿ ಈಗಾಗಲೇ ಬಿಹಾರ, ಕೇರಳ, ಒಡಿಶಾದಲ್ಲಿದೆ. ಆ ರಾಜ್ಯಗಳು ಅನುಸರಿಸುತ್ತಿರುವ ನೀತಿಗಳೂ ಸೇರಿದಂತೆ ಮಹಿಳಾ ಸ್ನೇಹಿ ನಿಯಮ ರೂಪಿಸಲು ಅಗತ್ಯವಾದ ಇನ್ನಷ್ಟು ಮಾಹಿತಿ ಸಂಗ್ರಹಿಸಲಾಗುವುದು. ಸಮಿತಿಯು ವರ್ಷಕ್ಕೆ ಆರು ವೇತನ ಸಹಿತ ಹಾಗೂ ಆರು ವೇತನ ರಹಿತ ರಜೆ ನೀಡಲು ಶಿಫಾರಸು ಮಾಡಿದೆ. ತಿಂಗಳಿಗೆ ಒಂದು ಅಥವಾ ವರ್ಷಕ್ಕೆ ಆರು ರಜೆ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳಬೇಕಿದೆ. ಅದಕ್ಕಾಗಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು.

-**ಸಂತೋಷ್ ಲಾಡ್**, ಕಾರ್ಮಿಕ ಸಚಿವ

ಕರ್ನಾಟಕದಲ್ಲಿ ಮುಟ್ಟಿನ ರಜೆ ನೀತಿ ರೂಪಿಸುವ ಬಗ್ಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಕೂಡ ಸುಳಿವು ನೀಡಿದ್ದರು. ಮುಟ್ಟಿನ ರಜೆ ಪ್ರಸ್ತಾವನೆ ಚರ್ಚೆ ಹಂತದಲ್ಲಿದೆ. ಸಚಿವರು ಆ ಬಗ್ಗೆ ನೀತಿ ರೂಪಿಸಲು ಚಿಂತನೆ ನಡೆಸಿದ್ದರು. ಕಾರ್ಮಿಕ ಇಲಾಖೆಯು ಕೆಲವೇ ದಿನಗಳಲ್ಲಿ ಪ್ರಸ್ತಾವನೆ ಪರಿಶೀಲಿಸಲಿದೆ. ಆ ನಂತರ ಅದು ಇಲಾಖೆ ಮತ್ತು ಸರಕಾರಿ ಹಂತಗಳಲ್ಲಿ ಮುಂದುವರಿಯಲಿದೆ.

-**ಡಾ. ಎಚ್.ಎನ್.ಗೋಪಾಲಕೃಷ್ಣ**, ಕಾರ್ಮಿಕ ಆಯುಕ್ತ

ಸಮಾಚಾರ ಸಣ್ಣದಲ್ಲ

ಜಗನ್ನಾಥನ ಭಂಡಾರದ ಎರಡನೇ ಸುತ್ತಿನ ಸಮೀಕ್ಷೆ

ಪುರಿ: ಇಲ್ಲಿನ ಜಗನ್ನಾಥ ದೇವಾಲಯದ ರತ್ನ ಭಂಡಾರದ ಎರಡನೇ ಸುತ್ತಿನ ತಾಂತ್ರಿಕ ಸಮೀಕ್ಷೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಶನಿವಾರ ಮಧ್ಯಾಹ್ನ ಆರಂಭಿಸಿದೆ ಸಮೀಕ್ಷೆ ಕಾರ್ಯ ಮೂರು ದಿನ ನಡೆಯಲಿದೆ ಎಂದು ಶ್ರೀ ಜಗನ್ನಾಥ ದೇವಸ್ಥಾನ ಆಡಳಿತ (ಎಸ್‌ಜೆಟಿಎ) ಹೇಳಿದೆ. ಸಮೀಕ್ಷೆಯ ಕಾರಣ ಶನಿವಾರ ಮಧ್ಯಾಹ್ನ 1ರಿಂದ ಸಂಜೆ 6ರ ವರೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗಿಲ್ಲ. ಈ ನಿರ್ಬಂಧ ಸೆ.22 ಮತ್ತು 23ರಂದೂ ಮುಂದುವರಿಯಲಿದೆ. ದೇವಾಲಯದ ಮುಖ್ಯ ದ್ವಾರದ ಮೂಲಕ ಭಕ್ತರ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ ಎಂದು ಎಸ್‌ಜೆಟಿಎ ಮುಖ್ಯ ಆಡಳಿತಾಧಿಕಾರಿ ಅರವಿಂದ್ ಪಾಢಿ ತಿಳಿಸಿದ್ದಾರೆ. ರತ್ನ ಭಂಡಾರದ ಒಳಗೆ ಸುರಂಗ ಇದೆಯೇ ಎಂಬುದನ್ನು ಪತ್ತೆಹಚ್ಚಲು ಸಮೀಕ್ಷೆ ಕೈಗೆತ್ತಿಕೊಳ್ಳಲಾಗಿದೆ. ಅದಕ್ಕಾಗಿ ಅತ್ಯಾಧುನಿಕ ರೇಡಾರ್ ಬಳಸಲಾಗಿದೆ ಎಂದು ರತ್ನ ಭಂಡಾರದ ಮೇಲುಸ್ತುವಾರಿ ಸಮಿತಿ ಮುಖ್ಯಸ್ಥ ಬಿಸ್ವನಾಥ್ ರಥ್ ಹೇಳಿದ್ದಾರೆ. ಮೊದಲ ಸುತ್ತಿನ ಸಮೀಕ್ಷೆ ಸೆ.18ರಂದು ನಡೆದಿತ್ತು. ಎಎಸ್‌ಐನ 17 ಸದಸ್ಯರ ತಂಡವು ಸಮೀಕ್ಷೆ ಕಾರ್ಯ ನಡೆಸಿತ್ತು.ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀಲಂಕಾ ಚುನಾವಣೆ ಶೇ.60ರಷ್ಟು ಮತದಾನ

ಕೊಲಂಬೊ: ಆರ್ಥಿಕ ಬಿಕಟ್ಟಿನಿಂದ ಸುಧಾರಿಸಿಕೊಳ್ಳುತ್ತಿರುವ ಶ್ರೀಲಂಕಾದಲ್ಲಿ ಹೊಸ ಅಧ್ಯಕ್ಷರ ಆಯ್ಕೆ ಸಂಬಂಧ ಶನಿವಾರ ನಡೆದ ಚುನಾವಣೆಯಲ್ಲಿ ಶೇ 60ಕ್ಕೂ ಹೆಚ್ಚು ಮತದಾನವಾಗಿದ್ದು, ಎಣಿಕೆ ಕಾರ್ಯ ಆರಂಭವಾಗಿದೆ. ಮತದಾನ ಪ್ರಕ್ರಿಯೆ ವೇಳೆ ಹಿಂಸಾಚಾರ ಸೇರಿದಂತೆ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ. ಸುಮಾರು 1.7 ಕೋಟಿ ಜನರು ಮತ ಚಲಾಯಿಸಲು ಅರ್ಹತೆ ಹೊಂದಿದ್ದರು. ಒಟ್ಟು 13,400 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಚುನಾವಣೆ ನಡೆಸಲು 2 ಲಕ್ಷಕ್ಕೂ ಹೆಚ್ಚು ಅಧಿಕಾರಿಗಳನ್ನು ಮತ್ತು ಬಂದೋಬಸ್ತ್‌ಗಾಗಿ 63 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. 1982ರ ಚುನಾವಣೆಯ ಬಳಿಕ ಇದೇ ಮೊದಲ ಬಾರಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ತೀವ್ರ ಪೈಪೋಟಿ ಎದುರಾಗಿತ್ತಲ್ಲದೇ, 38 ಅಭ್ಯರ್ಥಿಗಳು ಕಣದಲ್ಲಿದ್ದರು. ಬೌದ್ಧ ದೇವಾಲಯದ ಸಭಾಂಗಣಗಳು, ಶಾಲೆಗಳು ಮತ್ತು ಸಮುದಾಯ ಕೇಂದ್ರಗಳನ್ನೂ ಮತದಾನ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ 4 ಗಂಟೆಯವರೆಗೆ ನಡೆಯಿತು. ದ್ವೀಪ ರಾಷ್ಟ್ರದಲ್ಲಿ 2022ರಲ್ಲಿ ನಡೆದ ಜನತಾ ದಂಗೆಯು ಗೋಟಬಯ ರಾಜಪಕ್ಷ ಅವರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಿತ್ತು. ಅವರು ದೇಶಬಿಟ್ಟು ಪಲಾಯನ ಮಾಡಿದ ಬಳಿಕ 75 ವರ್ಷದ ರನಿಲ್ ವಿಕ್ರಮಸಿಂಘೆ ಅವರನ್ನು ಅಧ್ಯಕ್ಷರನ್ನಾಗಿ ಸಂಸತ್ತು ಆಯ್ಕೆ ಮಾಡಿತ್ತು.

ಲೋಕಾಯುಕ್ತ ವಿಚಾರಣೆಗೆ ಯಡಿಯೂರಪ್ಪ ಹಾಜರು

ಬೆಂಗಳೂರು: ಮತದಹಳ್ಳಿಯ ಗಂಗೇನಹಳ್ಳಿ ಬಡಾವಣೆಯಲ್ಲಿನ ಜಮೀನು ಅಕ್ರಮವಾಗಿ ಡಿನೋಟಿಫಿಕೇಷನ್ ಆರೋಪ ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರ ನೋಟಿಸ್ ಮೇರೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶನಿವಾರ ವಿಚಾರಣೆಗೆ ಹಾಜರಾದರು. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ಆರೋಪ ಮಾಡಿದ್ದರು. ಇದರ ಬೆನ್ನಲ್ಲೇ ಲೋಕಾಯುಕ್ತ ಪೊಲೀಸರ ಚುರುಕುಗೊಂಡಿದೆ. ಶನಿವಾರ ಮಧ್ಯಾಹ್ನ ತನಿಖಾಧಿಕಾರಿಗಳ ಮುಂದೆ ಹಾಜರಾದ ಬಿಎಸ್‌ವೈ, ಸುಮಾರು 1 ಗಂಟೆಗಳ ಕಾಲ ವಿಚಾರಣೆ ಎದುರಿಸಿದರು. ತನಿಖೆಗೆ ಅಗತ್ಯವಾದರೆ ಮತ್ತೆ ಕರೆದು ವಿಚಾರಣೆ ಕರೆಯಲಾಗುವುದು. ಅಲ್ಲದೆ, ಅಕ್ರಮ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದಂತೆ ಆರೋಪ ಕೇಳಿಬಂದ ಎಲ್ಲರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು ಎಂದು ಹಿರಿಯ ಲೋಕಾಯುಕ್ತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಖ್ಖರ ಜತೆ ಶ್ವೇತಭವನದ ಅಧಿಕಾರಿಗಳ ಸಭೆ

ವಾಷಿಂಗ್ಟನ್: ಸಿಖ್ ಕಾರ್ಯಕರ್ತರ ಗುಂಪನ್ನು ಶ್ವೇತಭವನದ ಅಧಿಕಾರಿಗಳು ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಮೂರು ದಿನಗಳ ಅಮೆರಿಕ ಪ್ರವಾಸಕ್ಕೂ ಮುನ್ನ ಈ ಸಭೆ ನಡೆದಿದೆ. ಅಮೆರಿಕ ನೆಲದಲ್ಲಿ ಯಾವುದೇ ದೇಶೀಯ ಆಕ್ರಮಣಕಾರಿ ಕೃತ್ಯಗಳಿಂದ ಅಮೆರಿಕನ್ನರನ್ನು ರಕ್ಷಿಸಲು ಸರಕಾರ ಬದ್ಧವಾಗಿದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಸಿಖ್ ನಾಯಕರೊಬ್ಬರು ತಿಳಿಸಿದ್ದಾರೆ. ಸಿಖ್ ಕಾರ್ಯಕರ್ತರು ಮತ್ತು ಸಿಖ್ ಪ್ರತ್ಯೇಕತಾವಾದಿಗಳ ಜತೆಗೆ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಭದ್ರತಾ ಮಂಡಳಿ ಸಭೆ ನಡೆಸಿತ್ತು.

{ **ಕೆ.ಟಿ.ರಾಮ ರಾವ್** } ಬಿಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ

ಕೇಂದ್ರ ಸರಕಾರದ ಅಮೃತ್ 2.0 ಯೋಜನೆಯ ಅಡಿಯಲ್ಲಿ ಟೆಂಡರ್ ಹಂಚಿಕೆಯಲ್ಲಿ ಅಕ್ರಮ ನಡೆದಿದೆ, ಮುಖ್ಯಮಂತ್ರಿ ರೆಡ್ಡಿ ಅವರು ತಮ್ಮ ಸ್ಥಾನವನ್ನು ತಮ್ಮ ಕುಟುಂಬದ ಸದಸ್ಯರಿಗೆ ಹಾಗೂ ಜೊತೆಗಾರರಿಗೆ ಲಾಭ ಮಾಡಿಕೊಡಲು ಬಳಸಿದ್ದಾರೆ.

ಭಾರತ–ಬಾಂಗ್ಲಾ ಟೆಸ್ಟ್ ಸರಣಿ | 515 ರನ್ ಗಳಿಸಿದ ಭಾರತ | 287ರ ಗಡಿಯಲ್ಲಿರುವ ಬಾಂಗ್ಲಾದೇಶ | ಬೌಲಿಂಗ್‌ನಲ್ಲಿ 3 ವಿಕೆಟ್ ಪಡೆದು ಕೈಚಳಕ ತೋರಿಸಿದ ಆರ್.ಅಶ್ವಿನ್

ಗಿಲ್–ಪಂತ್‌ಗೆ ಶತಕದ ವೈಭವ

ಚೆನ್ನೈ: ಶುಭಮನ್ ಗಿಲ್ ತಾವು ಮೂರನೇ ಕ್ರಮಾಂಕಕ್ಕೆ ಅತ್ಯಂತ ಸೂಕ್ತ ಬ್ಯಾಟರ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದರು. ಇನ್ನೊಂದೆಡೆ ರಿಷಭ್ ಪಂತ್ ದೀರ್ಘ ಸಮಯದ ನಂತರ ಟೆಸ್ಟ್ ಕ್ರಿಕೆಟ್‌ಗೆ ಮರಳಿರುವುದನ್ನು ಘೋಷಿಸಿದರು.

ಇವರಿಬ್ಬರೂ ಗಳಿಸಿದ ಶತಕಗಳ ಬಲದಿಂದ ಭಾರತ ತಂಡವು ಬಾಂಗ್ಲಾ ತಂಡಕ್ಕೆ 515 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಬೆನ್ನಟ್ಟಿರುವ ಪ್ರವಾಸಿ ಬಳಗವು ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ 4 ವಿಕೆಟ್‌ಗಳಿಗೆ 158 ರನ್ ಗಳಿಸಿದೆ. ನಾಯಕ ನಜ್ಮುಲ್ ಹುಸೇನ್ ಶಾಂತೊ (ಔಟಾಗದೆ 51) ಕ್ರೀಸ್‌ನಲ್ಲಿದ್ದಾರೆ. ಈ ಹಂತದಲ್ಲಿ ಬಾಂಗ್ಲಾದ ಬ್ಯಾಟರ್‌ಗಳು ಹೋರಾಟ ಮಾಡಿದರು. ಚುರುಕಾಗಿ ರನ್ ಗಳಿಸಲು ಗಮನ ನೀಡಿದರು. ಆದರೆ ಆತಿಥೇಯ ತಂಡದ ಬೌಲರ್‌ಗಳು ತಮ್ಮ ಅನುಭವ ಮತ್ತು ಶ್ರೇಷ್ಠ ಕೌಶಲವನ್ನು ಮೆರೆದರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿ ಮಿಂಚಿದ್ದ ಆರ್. ಅಶ್ವಿನ್ ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡಿ ಅವರು 3 ವಿಕೆಟ್ ಗಳಿಸಿ ತಮ್ಮ ಕೈಚಳಕ ತೋರಿಸಿದರು. ಇದರಿಂದಾಗಿ ನಾಲ್ಕನೇ ದಿನವಾದ ಭಾನುವಾರ ಭಾರತ ತಂಡವು ಗೆಲುವಿನ ಕೇಕೆ ಹಾಕುವ ಕನಸು ಕಾಣುತ್ತಿದೆ.

ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 227 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 64 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 287 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಗಿಲ್ (ಅಜೇಯ 119, 176ಎ) ಮತ್ತು ಪಂತ್ (109; 128ಎ) ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 167 ರನ್ ಸೇರಿಸಿದರು.

ಶುಕ್ರವಾರ ಎರಡನೇ ಇನಿಂಗ್ಸ್‌ನಲ್ಲಿ 81 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ಭಾರತ ತಂಡವು ಕುಸಿಯದಂತೆ ಗಿಲ್ ಮತ್ತು ಪಂತ್ ನೋಡಿಕೊಂಡರು. ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಪಂತ್ ತಮ್ಮ ಎಂದಿನ ಶೈಲಿಯಲ್ಲಿಯೇ ಬ್ಯಾಟಿಂಗ್ ಮಾಡಿದರು. ಗಿಲ್ ಮಾತ್ರ ಸ್ವಲ್ಪ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಐದನೇ ಶತಕ ಪೂರೈಸಿದರು. ರಿಷಭ್ ಪಂತ್ ಆರನೇಯ ಶತಕ ತಮ್ಮದಾಗಿಸಿಕೊಂಡರು. ಅದರೊಂದಿಗೆ ಮಹೇಂದ್ರಸಿಂಗ್ ಧೋನಿಯವರ ದಾಖಲೆಯನ್ನು ಸರಿಗಟ್ಟಿದರು.

3ನೇ ದಿನದಾಟದಲ್ಲಿ ಊಟದ ವಿರಾಮದವರೆಗೂ ಈ ಜೊತೆಯಾಟವನ್ನು ಮುರಿಯಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. 2022ರಲ್ಲಿ ಸಂಭವಿಸಿದ್ದ ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಪಂತ್ ಕಳೆದ ಐಪಿಎಲ್ ಸಂದರ್ಭದಲ್ಲಿ ಕ್ರಿಕೆಟ್‌ಗೆ ಮರಳಿದ್ದರು.

ಪಂತ್ ಭಾವುಕ

ರಿಷಭ್ ಪಂತ್ ವಿಕೆಟ್ ಕೀಪಿಂಗ್ ಮಾಡುವಾಗ ಮತ್ತು ಸಹ ಆಟಗಾರರೊಂದಿಗೆ ಇದ್ದಾಗ ತಮ್ಮ ಕೀಟಲೆ ಸ್ವಭಾವದಿಂದ ಗುರುತಿಸಿಕೊಂಡವರು. ಚಟಾಕಿ ಹಾರಿಸುತ್ತ ನಗುತ್ತ ಇರುವ ಲವಲವಿಕೆಯ ಹುಡುಗ. ಆದರೆ ಶನಿವಾರ ಅವರು ಚೆಪಾಕ್ ಅಂಗಳದಲ್ಲಿ ತಮ್ಮ ಟೆಸ್ಟ್ ಕ್ರಿಕೆಟ್ ಜೀವನದ ಆರನೇ ಶತಕ ಪೂರೈಸಿದಾಗ ಭಾವುಕರಾದರು. 124 ಎಸೆತಗಳಲ್ಲಿ 100ರ ಗಡಿ ಮುಟ್ಟಿದ ತಕ್ಷಣ ಅವರು ಕುಣಿದು ಕುಪ್ಪಳಿಸಿ ಸಂಭ್ರಮಿಸಲಿಲ್ಲ. ನಿಧಾನವಾಗಿ ತಮ್ಮ ಬ್ಯಾಟ್ ಮತ್ತು ಇನ್ನೊಂದು ಕೈ ಎತ್ತಿದರು. ನಂತರ ಹೆಲ್ಮೆಟ್ ತೆಗೆದರು. ಆಗ ಅವರ ಕಂಗಳಲ್ಲಿ ನೀರಾಡುತ್ತಿರುವುದು ಕಂಡಿತು. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡೇ ಆಗಸದತ್ತ ಮುಖ ಮಾಡಿ ತೋಳಗಲಿಸಿ ನಿಂತರು. ಇನ್ನೊಂದು ಬದಿಯಲ್ಲಿದ್ದ ಶುಭಮನ್ ಗಿಲ್ ಓಡಿ ಬಂದು ಪಂತ್ ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದರು. ಬೆನ್ನು ತಟ್ಟಿ ಸಂತೈಸಿದರು. ಎರಡು ವರ್ಷಗಳ ಹಿಂದೆ ಸಂಭವಿಸಿದ್ದ ಭೀಕರ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು ರಿಷಭ್. ಚಿಕಿತ್ಸೆ ಮತ್ತು ಆರೈಕೆಗಳ ನಂತರ ಅವರು ಆಡುತ್ತಿರುವ ಮೊದಲ ಟೆಸ್ಟ್ ಪಂದ್ಯ ಇದಾಗಿದೆ. ತಮ್ಮ ನೆಚ್ಚಿನ ರಿವರ್ಸ್ ಸ್ಕೂಪ್ ಪೆಡಲ್ ಸ್ವೀಪ್ ಸೇರಿದಂತೆ ವೈವಿಧ್ಯಮಯ ಹೊಡೆತಗಳನ್ನು ಪ್ರಯೋಗಿಸಿದರು. ಒಂದು ಎರಡು ರನ್‌ಗಳನ್ನೂ ಚುರುಕಾಗಿ ಪಡೆದರು. ಮೊದಲ ಇನಿಂಗ್ಸ್‌ನಲ್ಲಿ ಉತ್ತಮವಾಗಿ ವಿಕೆಟ್‌ಕೀಪಿಂಗ್ ಕೂಡ ಮಾಡಿದರು.

ಸುಮಾರು ಎರಡು ವರ್ಷಗಳ ನಂತರ ಈಗ ಟೆಸ್ಟ್ ಕ್ರಿಕೆಟ್ ಪಂದ್ಯವಾಡುತ್ತಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ ಪಂತ್ ಉತ್ತಮವಾಗಿ ವಿಕೆಟ್ ಕೀಪಿಂಗ್ ಮಾಡಿದ್ದರು. ಫುಲ್ ಲೆಂಥ್ ಡೈವಿಂಗ್ ಮಾಡಿ ಚೆಂಡು ತಡೆದಿದ್ದರು. ಬ್ಯಾಟಿಂಗ್‌ನಲ್ಲಿಯೂ ತಮ್ಮ ಹಳೆಯ ಆಕ್ರಮಣಕಾರಿ ಶೈಲಿಯನ್ನು ಮತ್ತೊಮ್ಮೆ ಇಲ್ಲಿ ತೋರಿದರು. ಇದರಿಂದಾಗಿ ರನ್ ಗಳಿಕೆಗೆ ವೇಗ ಲಭಿಸಿತು.

ಸ್ಪಿನ್ನರ್‌ಗಳಾದ ಶಕೀಬ್ ಅಲ್ ಹಸನ್ ಮತ್ತು ಮೆಹದಿ ಹಸನ್ ಮಿರಾಜ್ ಅವರ ಎಸೆತಗಳನ್ನೂ ಪಂತ್ ನಿರ್ದಯವಾಗಿ ದಂಡಿಸಿದರು. ಇನಿಂಗ್ಸ್‌ನ 49ನೇ ಓವರ್‌ನಲ್ಲಿ ಪಂತ್ ಅವರ ಕ್ಯಾಚ್ ಕೈಚೆಲ್ಲಿದ ಫೀಲ್ಡರ್ ಶಾಂತೋ ಪರಿತಪಿಸುವಂತಾಯಿತು. ಇದಾಗಿ ಏಳು ಓವರ್‌ಗಳ ನಂತರ ಪಂತ್ ವಿಕೆಟ್ ಗಳಿಸಿದ ಮೆಹದಿ ಹಸನ್ ಮಿರಾಜ್ ಜೊತೆಯಾಟವನ್ನೂ ಮುರಿದರು.

ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ 19 ಎಸೆತಗಳಲ್ಲಿ 22 ರನ್ ಗಳಿಸಿದರು. ಅದರಲ್ಲಿ ನಾಲ್ಕು ಬೌಂಡರಿಗಳಿದ್ದವು. ಈ ಸಂದರ್ಭದಲ್ಲಿ ತಂಡವು ಡಿಕ್ಲೇರ್ ಮಾಡಿಕೊಂಡಿತು.

ಬಾಂಗ್ಲಾದೇಶ ವಿರುದ್ಧ ಟೆಸ್ಟ್‌ನಲ್ಲಿ ಕೆ.ಎಲ್.ರಾಹುಲ್ ಮೈಲುಗಲ್ಲು

ತೆಂಡೂಲ್ಕರ್, ಧೋನಿ, ಕೊಹ್ಲಿಯ ಎಲೈಟ್ ಕ್ಲಬ್‌ಗೆ ರಾಹುಲ್ | ಟೆಸ್ಟ್ ಕ್ರಿಕೆಟ್‌ನಲ್ಲಿ 8000 ರನ್ ದಾಖಲು

ಬೆಂಗಳೂರು: ಸಚಿನ್ ತೆಂಡೂಲ್ಕರ್, ಎಂಎಸ್ ಧೋನಿ, ವಿರಾಟ್ ಕೊಹ್ಲಿ ಮತ್ತು ಅನೇಕ ಕ್ರಿಕೆಟ್ ದಂತಕಥೆಗಳನ್ನು ಒಳಗೊಂಡ ಎಲೈಟ್ ಕ್ಲಬ್‌ಗೆ ಭಾರತದ ಬ್ಯಾಟರ್ ಕೆ.ಎಲ್. ರಾಹುಲ್ ಈಗ ಸೇರಿದ್ದಾರೆ. ಚೆನ್ನೈನಲ್ಲಿ ನಡೆದ ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೊದಲ ಟೆಸ್ಟ್ ಪಂದ್ಯದಲ್ಲಿ ರಾಹುಲ್ ಈ ಸಾಧನೆ ಮಾಡಿದ್ದಾರೆ.

ಚೆನ್ನೈ ಟೆಸ್ಟ್‌ನ ಎರಡನೇ ಇನ್ನಿಂಗ್ಸ್‌ನಲ್ಲಿ ರಾಹುಲ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 8000 ರನ್ ಪೂರೈಸಿದ್ದು, ಈ ಸಾಧನೆ ಮಾಡಿದ ಭಾರತದ 17ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅರೆಕಾಲಿಕ ಎಡಗೈ ಸ್ಪಿನ್ನರ್ ಮೊಮಿನುಲ್ ಹಕ್ ಅವರ ಎಸೆತಕ್ಕೆ ಬೌಂಡರಿ ಬಾರಿಸಿದ ರಾಹುಲ್ ಈ ಮೈಲಿಗಲ್ಲು ತಲುಪಿದರು.

ರೋಹಿತ್ ಶರ್ಮಾ ಎರಡನೇ ಇನ್ನಿಂಗ್ಸ್‌ನಲ್ಲಿ 19 ಎಸೆತಗಳಲ್ಲಿ 4 ಬೌಂಡರಿಗಳೊಂದಿಗೆ ಅಜೇಯ 22 ರನ್ ಗಳಿಸಿದ್ದರು. ಈ ವೇಳೆ ನಾಯಕ ರೋಹಿತ್ ಶರ್ಮಾ ಡಿಕ್ಲೇರ್ ಘೋಷಿಸಿದರು. ಭಾರತ 4 ವಿಕೆಟ್‌ಗೆ 287 ರನ್ ಬಾರಿಸಿತ್ತು. ಶುಭ್ಮನ್ ಗಿಲ್ 176 ಎಸೆತಗಳಲ್ಲಿ ಅಜೇಯ 119 ರನ್ ಗಳಿಸಿದ್ದರು. ಗಿಲ್ 10 ಬೌಂಡರಿ ಹಾಗೂ 4 ಸಿಕ್ಸರ್ ಸಿಡಿಸಿದ್ದರು.

ರಾಹುಲ್ ಈ ಸಾಧನೆ ಮಾಡಿದರೂ, ಅವರು ಪಂದ್ಯದಲ್ಲಿ ಹೆಚ್ಚು ಸಾಧನೆ ಮಾಡಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ ಆಫ್ ಸ್ಪಿನ್ನರ್ ಮೆಹಿದಿ ಹಸನ್ ಮಿರಾಜ್ ಎಸೆತಕ್ಕೆ ಔಟಾಗಿದ್ದರು. ಅದಕ್ಕಿಂತ ಮೊದಲು ಅವರು 16 ರನ್ ಮಾತ್ರ ಮಾಡಿದ್ದರು. ಕುತೂಹಲಕಾರಿ ಸಂಗತಿಯೆಂದರೆ ರಾಹುಲ್ ಅವರ ಅತ್ಯುತ್ತಮ ಟೆಸ್ಟ್ ಸ್ಕೋರ್ ಕೂಡ ಇದೇ ಮೈದಾನದಲ್ಲಿ ಬಂದಿತು. 2016ರಲ್ಲಿ ಚೆಪಾಕ್‌ನಲ್ಲಿ ಇಂಗ್ಲೆಂಡ್ ವಿರುದ್ಧ 199 ರನ್ ಬಾರಿಸಿದ್ದರು.

ರಾಹುಲ್ ತಮ್ಮ ಟೆಸ್ಟ್ ವೃತ್ತಿಜೀವನವನ್ನು ಆರಂಭಿಕನಾಗಿ ಪ್ರಾರಂಭಿಸಿದ್ದರು. ಆದಾಗ್ಯೂ, ಟೀಮ್ ಮ್ಯಾನೇಜ್ಮೆಂಟ್ ಈಗ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿ ಆಡಿಸುತ್ತಿದೆ. ಈ ವರ್ಷದ ಆರಂಭದಲ್ಲಿ ಇಂಗ್ಲೆಂಡ್ ವಿರುದ್ಧದ ಭಾರತದ ತವರು ಟೆಸ್ಟ್ ಸರಣಿಯಲ್ಲಿ ಅವರು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದರು. ಈ ಬಾರಿ ರಾಹುಲ್ ಆರನೇ ಕ್ರಮಾಂಕದಲ್ಲಿ ಆಡುತ್ತಿದ್ದಾರೆ.

ಈ ಸರಣಿಗೂ ಮುನ್ನ ಕೆಎಲ್ ರಾಹುಲ್ ಹಾಗೂ ಸರ್ಫರಾಜ್ ಖಾನ್ ನಡುವೆ ಮಧ್ಯಮ ಕ್ರಮಾಂಕಕ್ಕಾಗಿ ಪೈಪೋಟಿ ನಡೆದಿತ್ತು. ಆದಾಗ್ಯೂ, ತಂಡದ ಮ್ಯಾನೇಜ್ಮೆಂಟ್ ರಾಹುಲ್ ಅವರನ್ನು ಈ ಪಾತ್ರಕ್ಕೆ ಆಯ್ಕೆ ಮಾಡಿತ್ತು.

ವೈಟ್‌ಬಾಲ್‌ನಲ್ಲಿ ರಾಹುಲ್ ಸಾಧನೆ

ಕೆ.ಎಲ್.ರಾಹುಲ್ ಭಾರತ ಪರ 72 ಟಿ20 ಹಾಗೂ 77 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 'ಟಿ20ಐ'ನಲ್ಲಿ 37.75ರ ಸರಾಸರಿಯಲ್ಲಿ 2265 ರನ್ ಗಳಿಸಿದ್ದು, 139.12ರ ಸ್ಟ್ರೈಕ್ ರೇಟ್‌ನಲ್ಲಿ 2 ಶತಕ ಹಾಗೂ 22 ಅರ್ಧಶತಕಗಳನ್ನು ಬಾರಿಸಿದ್ದಾರೆ. ಏಕದಿನ ಪಂದ್ಯಗಳಲ್ಲಿ, ಅವರು ಇಲ್ಲಿಯವರೆಗೆ 49.15 ಸರಾಸರಿ ಮತ್ತು 7 ಶತಕಗಳು ಮತ್ತು 18 ಅರ್ಧಶತಕಗಳೊಂದಿಗೆ 87.56 ಸ್ಟ್ರೈಕ್ ರೇಟ್‌ನೊಂದಿಗೆ 2851 ರನ್ ಗಳಿಸಿದ್ದಾರೆ. ರಾಹುಲ್ ತಮ್ಮ ಏಕದಿನ ವೃತ್ತಿಜೀವನವನ್ನು ಆರಂಭಿಕನಾಗಿ ಪ್ರಾರಂಭಿಸಿದ್ದರು. ಈಗ ಮಧ್ಯಮ ಕ್ರಮಾಂಕಕ್ಕೆ ಸ್ಥಳಾಂತರಗೊಂಡಿದ್ದಾರೆ.

ಜನವರಿಯಲ್ಲಿ ನಡೆದ ವೈದ್ಯಕೀಯ ಪದವಿ ಕೋರ್ಸ್ ಪರೀಕ್ಷೆ

5 ಗ್ರೇಸ್ ಅಂಕಗಳಿಗೆ ಕೋರಿದ್ದ ಅರ್ಜಿ ತಿರಸ್ಕರಿಸಿದ ಹೈಕೋರ್ಟ್

ಬೆಂಗಳೂರು: ಕಳೆದ ಜನವರಿ ತಿಂಗಳಲ್ಲಿ ನಡೆದ ವೈದ್ಯಕೀಯ ಪದವಿ ಕೋರ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನೆರವಾಗುವುದಕ್ಕಾಗಿ ಐದು ಗ್ರೇಸ್ (ಹೆಚ್ಚುವರಿ) ಅಂಕ ಮಂಜೂರು ಮಾಡಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡುವಂತೆ ಕೋರಿ ಹಲವು ಎಂಬಿಬಿಎಸ್ ಪದವಿ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಅಭಿನ್ ಥಾಮಸ್ ಸಭಾಸ್ಟಿಯನ್ ಎಂಬ ವಿದ್ಯಾರ್ಥಿ ಸೇರಿದಂತೆ ಹಲವರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್‌ದತ್ತ ಯಾದವ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೇ, ರಾಷ್ಟ್ರೀಯ ವೈದ್ಯಕೀಯ ಮಂಡಳಿ ಕಾಯಿದೆಯಡಿ ರಚಿಸಲಾದ ವೈದ್ಯಕೀಯ ಶಿಕ್ಷಣ ಮಂಡಳಿ 2023ರ ಆ. 1ರಂದು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಗ್ರೇಸ್ ಅಂಕಗಳನ್ನು ನೀಡುವುದನ್ನು ರದ್ದುಗೊಳಿಸಲಾಗಿದೆ. 2019ರ ನಿಯಮಗಳ ಅಡಿ ಗ್ರೇಸ್ ಅಂಕಗಳನ್ನು ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ಆದರೆ, ಈಗಾಗಲೇ ರೂಪಿಸಿರುವ ನಿಯಮಗಳಿಗೆ ವಿರುದ್ಧವಾಗಿ ನ್ಯಾಯಾಲಯಗಳು ನಿರ್ದೇಶನಗಳನ್ನು ನೀಡುವ ಮೂಲಕ ಶೈಕ್ಷಣಿಕ ಸಂಸ್ಥೆಗಳ ನಿಯಮಾವಳಿಗಳನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ ಎಂದು ಪೀಠ ತಿಳಿಸಿದೆ.

ಜತೆಗೆ, ಶಿಕ್ಷಣ ವ್ಯವಸ್ಥೆಯಲ್ಲಿ ಮೌಲ್ಯಮಾಪನದ ಮಾನದಂಡಗಳು ಮತ್ತು ವಿಧಾನಗಳನ್ನು ಬದಲಾಯಿಸುವುದು ಆಂತರಿಕ ವಿಚಾರವಾಗಿರಲಿದೆ. ಅಂತಹ ಅಂಶಗಳ ನಿರ್ವಹಣೆ ಶೈಕ್ಷಣಿಕ ಸಂಸ್ಥೆಗಳ ಸಂಪೂರ್ಣ ವಿವೇಚನೆಗೆ ಒಳಪಟ್ಟಿದ್ದಾಗಿರಲಿದೆ. ಪರೀಕ್ಷೆಯ ಮಾನದಂಡಗಳು ಮತ್ತು ಕೋರ್ಸ್‌ಗಳಲ್ಲಿನ ಬದಲಾಗುತ್ತಿರುವುದು ಕ್ರಿಯಾತ್ಮಕ ವ್ಯವಸ್ಥೆಯಾಗಿದ್ದು, ಈ ಅಧಿಕಾರವನ್ನು ಮೊಟಕುಗೊಳಿಸಲಾಗದು. ಪರೀಕ್ಷೆ ನಡೆಯುವ ದಿನಾಂಕದಂದು ಚಾಲ್ತಿಯಲ್ಲಿರುವ ಮೌಲ್ಯಮಾಪನ ಮಾನದಂಡಗಳು ಆ ಸಾಲಿಗೆ ಅನ್ವಯವಾಗಲಿದೆ ಎಂದು ಪೀಠ ಹೇಳಿದೆ.

ಗ್ರೇಸ್ ಅಂಕ ನೀಡಲಾಗುವುದಿಲ್ಲ

ಭಾರತೀಯ ವೈದ್ಯಕೀಯ ಮಂಡಳಿ ಕಾಯಿದೆ 1956ರ ಅಡಿ ರೂಪಿಸಿರುವ 2019ರಲ್ಲಿ ನಿಯಮಾವಳಿಗಳ ಪ್ರಕಾರ ಗ್ರೇಸ್ ಅಂಕಗಳನ್ನು ಒದಗಿಸಲು ಅವಕಾಶ ನೀಡಲಾಗಿತ್ತು. ಆದರೆ, ರಾಷ್ಟ್ರೀಯ ವೈದ್ಯಕೀಯ ಮಂಡಳಿ 2018ರ ಕಾಯಿದೆ ಸೆಕ್ಷನ್ 24(1)(ಸಿ)ನ ಅಧಿಕಾರವನ್ನು ಚಲಾಯಿಸಿ 2023ರಲ್ಲಿ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಹೊಸ ಮಾನದಂಡಗಳನ್ನು ರಚನೆ ಮಾಡಲಾಗಿದೆ. ಪ್ರಸ್ತುತ ಹೊಸ ಮಾನದಂಡಗಳು ಚಾಲ್ತಿಯಲ್ಲಿದ್ದು, ಅರ್ಜಿದಾರರ ಮನವಿಯಂತೆ ಗ್ರೇಸ್ ಅಂಕಗಳನ್ನು ನೀಡಲಾಗುವುದಿಲ್ಲ. ಅಲ್ಲದೆ, ಅರ್ಜಿದಾರರ ವಾದವನ್ನು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಕ್ವಾಡ್ ಶೃಂಗ, ವಿಶ್ವಸಂಸ್ಥೆ ಭವಿಷ್ಯದ ಶೃಂಗಸಭೆಯಲ್ಲಿ ಭಾಗಿ | ಲಾಂಗ್ ಐಲ್ಯಾಂಡ್‌ನಲ್ಲಿ ಭಾರತೀಯ ಸಮುದಾಯ ಭೇಟಿ

ಮೋದಿ 3 ದಿನಗಳ ಅಮೆರಿಕ ಪ್ರವಾಸ ಆರಂಭ

ಫಿಲಡೆಲ್ಫಿಯ: ಮೂರು ದಿನಗಳ ಅಮೆರಿಕ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಶನಿವಾರ ಬೆಳಗ್ಗೆ ವಿಶೇಷ ವಿಮಾನದಲ್ಲಿ ಫಿಲಡೆಲ್ಫಿಯಾ ವಿಮಾನ ನಿಲ್ದಾಣದಲ್ಲಿ ಬಂದಿಳಿದರು.

'ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸಮೃದ್ಧಿಗಾಗಿ ಕೆಲಸ ಮಾಡುವ ಪ್ರಮುಖ ಗುಂಪಾಗಿ ಕ್ವಾಡ್ ಹೊರಹೊಮ್ಮಿದೆ' ಎಂದು ಪ್ರಧಾನಿ ಮೋದಿ ಅವರು ಅಮೆರಿಕದಲ್ಲಿ ಬಂದಿಳಿದ ಸಂದರ್ಭ ಹೇಳಿದ್ದಾರೆ. ಈ ಬಾರಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಕ್ವಾಡ್ ಶೃಂಗಸಭೆಯ ಆತಿಥ್ಯ ವಹಿಸಿದ್ದಾರೆ. ಅಮೆರಿಕದ ವಿಲ್ಮಿಂಗ್ಟನ್‌ಗೆ ತೆರಳುವ ಪ್ರಧಾನಿ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ತವರು ರಾಜ್ಯ ಡೆಲವಾರೆಯಲ್ಲಿ ನಡೆಯಲಿರುವ ಕ್ವಾಡ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ನಂತರ, ಅಮೆರಿಕ, ಆಸ್ಟ್ರೇಲಿಯ ಮತ್ತು ಜಪಾನ್ ನಾಯಕರ ಜತೆ ಪ್ರಧಾನಿ ಮೋದಿ ಪ್ರತ್ಯೇಕವಾಗಿ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ

ನಾಲ್ಕು ರಾಷ್ಟ್ರಗಳ ನಾಯಕರ 'ಕ್ವಾಡ್' ಶೃಂಗಸಭೆಯಲ್ಲಿ ಭಾಗಿಯಾದ ಬಳಿಕ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯಲ್ಲಿ ಆಯೋಜಿತವಾಗಿರುವ 'ಸಮ್ಮಿಟ್ ಆಫ್ ದಿ ಫ್ಯೂಚರ್' ಸಭೆಯಲ್ಲಿ ಭಾಷಣ ಮಾಡಲಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿ 'ಎಕ್ಸ್' ಖಾತೆಯಲ್ಲಿ ಬರೆದಿದೆ. ಅಲ್ಲದೇ, ಪ್ರಧಾನಿ ಮೋದಿ ಭಾರತೀಯ ಸಮುದಾಯದ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದೆ. ನ್ಯೂಯಾರ್ಕ್‌ನ ಲಾಂಗ್ ಐಲ್ಯಾಂಡ್‌ನಲ್ಲಿರುವ ನಸ್ಸೌ ವೆಟರನ್ಸ್ ಮೆಮೋರಿಯಲ್ ಕೊಲಿಸಿಯಂನಿಂದ ಪ್ರಧಾನಿ ಮೋದಿ ಭಾನುವಾರ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಮಿತ್ರರಾದ ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯ ಪ್ರಧಾನಿ ಅಲ್ಬನೀಸ್ ಮತ್ತು ಜಪಾನ್ ಪ್ರಧಾನಿ ಕಿಶಿದಾ ಅವರನ್ನು ಕ್ವಾಡ್ ಶೃಂಗಸಭೆಯಲ್ಲಿ ಸಂದಿಸಲು ಎದುರು ನೋಡುತ್ತಿದ್ದೇನೆ. ಕ್ವಾಡ್ ವೇದಿಕೆ ಶಾಂತಿ ಉತ್ತೇಜಿಸುವ ಸಮಾನ ಮನಸ್ಕ ರಾಷ್ಟ್ರಗಳ ವೇದಿಕೆಯಾಗಲಿದೆ. ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಪ್ರಗತಿ, ಮತ್ತು ಸಮೃದ್ಧಿ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಿದ್ದೇವೆ.

–**ನರೇಂದ್ರ ಮೋದಿ** ಪ್ರಧಾನಿ

ದಸರಾ ಯುವ ಸಂಭ್ರಮ ಪೋಸ್ಟರ್ ಬಿಡುಗಡೆ

ಮೈಸೂರು: ದಸರಾ ಮಹೋತ್ಸವಕ್ಕೆ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿದ್ದು, ಶನಿವಾರ ಯುವ ಸಂಭ್ರಮದ ಪೋಸ್ಟರ್ ಬಿಡುಗಡೆ, ದಸರಾ ವೆಬ್ ಸೈಟ್ ಗೆ ಚಾಲನೆ ನೀಡಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹಾದೇವಪ್ಪ, ಪೋಸ್ಟರ್ ಹಾಗೂ ದಸರಾ ವೆಬ್‌ಸೈಟ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜು, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಮತ್ತೊಂದೆಡೆ 4 ಆರೋಗ್ಯ ಕಾರ್ಯಕರ್ತರ ಮೃತ್ಯು

ಗಾಜಾ ಶಾಲಾ ಕಟ್ಟಡ ಮೇಲೆ ಇಸ್ರೇಲ್ ದಾಳಿಗೆ 22 ಸಾವು

ಟೆಲ್‌ಅವಿವ್: ಗಾಜಾದ ದಕ್ಷಿಣ ಭಾಗದಿಂದ ಸ್ಥಳಾಂತರಗೊಂಡ ಜನರಿಗೆ ಆಶ್ರಯ ಒದಗಿಸಿದ್ದ ಶಾಲೆ ಮೇಲೆ ಇಸ್ರೇಲ್ ಸೇನೆ ಶನಿವಾರ ರಾಕೆಟ್ ದಾಳಿ ನಡೆಸಿದ್ದು, 13 ಮಕ್ಕಳು ಮತ್ತು 6 ಮಹಿಳೆಯರು ಸೇರಿ ಒಟ್ಟು 22 ಜನರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಪ್ಯಾಲೆಸ್ತೀನ್ ಆಡಳಿತ ಶಾಲೆ ಮೇಲಿನ ಇಸ್ರೇಲ್ ದಾಳಿಯನ್ನು ಖಂಡಿಸಿದೆ. ಆದರೆ, ತಾನು ಶಾಲೆ ಮೇಲೆ ದಾಳಿ ನಡೆಸಿಲ್ಲ. ಹಿಂದೆ ಶಾಲೆಯಾಗಿದ್ದ ಕಾಂಪೌಂಡ್‌ನಲ್ಲಿ ಹಮಾಸ್ ಕಮಾಂಡ್ ಸೆಂಟರ್ ನಡೆಸುತ್ತಿದ್ದು, ಅದರ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ. ಸ್ಫೋಟಗೊಂಡ ಗೋಡೆಗಳು, ಧ್ವಂಸಗೊಂಡ ಮತ್ತು ಸುಟ್ಟುಹೋದ ಪೀಠೋಪಕರಣಗಳು ಮತ್ತು ಒಂದು ಕೋಣೆಯ ಚಾವಣಿಯಲ್ಲಿ ರಂಧ್ರಗಳನ್ನು ತೋರಿಸುವ ಚಿತ್ರಗಳ ಸಮೇತ ರಾಯಿಟರ್ಸ್ ವರದಿ ಮಾಡಿದೆ.

ಮತ್ತೊಂದು ದಾಳಿ

ದಕ್ಷಿಣ ಗಾಝಾ ಪಟ್ಟಿಯ ರಾಫಾದಲ್ಲಿ ಸಚಿವಾಲಯದ ಗೋದಾಮುಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ನಾಲ್ವರು ಆರೋಗ್ಯ ಕಾರ್ಯಕರ್ತರು ಸಾವನ್ನಪ್ಪಿದ್ದಾರೆ. ಸತತ ದಾಳಿಯ ಕಾರಣ ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಆಂಬ್ಯುಲೆನ್ಸ್ ಸಿಬ್ಬಂದಿಗೆ ಸಾಧ್ಯವಾಗಲಿಲ್ಲ ಎಂದು ಗಾಝಾ ಆರೋಗ್ಯ ಸಚಿವಾಲಯ ತಿಳಿಸಿದೆ. ಮೇ ತಿಂಗಳಿನಿಂದ ರಾಫಾದಲ್ಲಿ ಇಸ್ರೇಲ್ ಸೇನಾಪಡೆ ಕಾರ್ಯಾಚರಣೆ ಯಲ್ಲಿ ಹತ್ತಾರು ಹಮಾಸ್ ಉಗ್ರರನ್ನು ಕೊಂದಿವೆ ಮತ್ತು ಹಮಾಸ್ ಉಗ್ರರ ಸುರಂಗ ನೆಲೆಗಳನ್ನು ನಾಶಪಡಿಸಿವೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ರಾಜ್ಯಾಧ್ಯಕ್ಷರ ವಿರುದ್ಧದ ಹೇಳಿಕೆಗೆ ಯತ್ನಾಳ ಬೆಂಬಲ

ಜಾರಕಿಹೊಳಿ ಸಿಟ್ಟು ಇಳಿದಿಲ್ಲ

ವಿಜಯಪುರ: ವಿಜಯೇಂದ್ರ ರಾಜಾಧ್ಯಕ್ಷ ಎಂದು ತಾವು ಒಪ್ಪುವುದಿಲ್ಲ ಎಂಬ ರಮೇಶ ಜಾರಕಿಹೊಳಿ ಹೇಳಿಕೆಗೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ವಿಜಯಪುರದಲ್ಲಿ ಶನಿವಾರ ಪ್ರತಿಕ್ರಿಯೆ ನೀಡಿದ ಅವರು, ತಮ್ಮ ವಿರುದ್ಧದ ಅತ್ಯಾಚಾರ ಪ್ರಕರಣ ದಲ್ಲಿ ಸಿ.ಡಿ. ಬಿಡುಗಡೆ ಹಿನ್ನೆಲೆಯಲ್ಲಿ ವಿಜಯೇಂದ್ರ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಇದ್ದಾರೆಂಬ ಸಿಟ್ಟು ರಮೇಶ್ ಜಾರಕಿಹೊಳಿ ಅವರಿಗಿದೆ. ಈ ಪ್ರಸಂಗದಿಂದ ತಮಗಾದ ಅಪಮಾನವನ್ನು ಅವರು ಮರೆತಿಲ್ಲ. ಜಾರಕಿಹೊಳಿ ತೆಗೆದುಕೊಂಡ ನಿರ್ಧಾರಕ್ಕೆ ನಾವು ಬದ್ಧ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ವರಿಷ್ಠರು ಇತ್ತೀಚೆಗೆ ನಡೆಸಿದ ಸಂಧಾನ ಸಭೆಯಲ್ಲಿ ನಮ್ಮ ಭಾವನೆಗಳನ್ನು ತಿಳಿದುಕೊಂಡಿದ್ದಾರೆ. ತಮ್ಮ ವಿರುದ್ಧ ನಡೆದ ಭಾರಿ ಷಡ್ಯಂತ್ರದ ಬಗ್ಗೆ ರಮೇಶ್ ಜಾರಕಿಹೊಳಿ ವಿವರಿಸಿದ್ದಾರೆ ಎಂದು ಯತ್ನಾಳ್ ತಿಳಿಸಿದರು.

ದೋಸ್ತಿ ಹೆಚ್ಚು: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಕುರ್ಚಿಯ ಕಾಲುಗಳು ಅಲ್ಲಾಡುತ್ತಿವೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ವಿಜಯೇಂದ್ರ ಜೊತೆ ನಮ್ಮ ಎಂ.ಬಿ.ಪಾಟೀಲರು ಆತ್ಮೀಯರಿದ್ದಾರೆ. ಅವರವರು ಮಾತನಾಡುತ್ತಿರಬಹುದು. ಯಾಕಂದ್ರೆ ಮೈತ್ರಿ ನಾಯಕರು ಬಿಜೆಪಿ–ಕಾಂಗ್ರೆಸ್ ನಲ್ಲಿದ್ದಾರೆ. ಎಂ.ಬಿ.ಪಾಟೀಲ್‌ಗೆ ವಿಜಯೇಂದ್ರ, ಹಾಗೂ ಯಡಿಯೂರಪ್ಪ ಜೊತೆ ಸ್ವಲ್ಪ ದೋಸ್ತಿ ಇದೆ. ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಗೆ ಒಂದೇ ವಿಮಾನದಲ್ಲಿ ಎಂ.ಬಿ. ಪಾಟೀಲ್, ಯಡಿಯೂರಪ್ಪ ಹೋಗಿದ್ದರು. ಅಲ್ಲೇ ನಾದರೂ ಮಾತನಾಡಿರಬಹುದು ಎಂದು ಮಾರ್ಮಿಕವಾಗಿ ನುಡಿದರು. ತಿರುಪತಿ ಲಡ್ಡುವಿನಲ್ಲಿ ಕಲಬೆರಕೆ ಮಾಡಿದ ಪ್ರಕರಣದ ಬಗ್ಗೆ ತನಿಖೆಯಾಗಿ ತಪ್ಪಿತಸ್ಥರಿಗೆ ಗಲ್ಲುಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ ಯತ್ನಾಳ್, ಹಿಂದೂಗಳ ಸನಾತನ ಪರಂಪರೆ ನಾಶಮಾಡುವ ಷಡ್ಯಂತ್ರ ನಡೆದಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆರೋಪ

ಹಿಂದೂಗಳ ಮೇಲೆ ಹೆಚ್ಚಿದ ದಬ್ಬಾಳಿಕೆ

ಶಿವಮೊಗ್ಗ: ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಪದೇ ಪದೇ ಹಿಂದು ಸಂಘಟನೆ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಗಂಭೀರ ಆರೋಪ ಮಾಡಿದ್ದಾರೆ.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಾದ್ಯಂತ ಗಣೇಶ ವಿಸರ್ಜನೆ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ನಾಗಮಂಗಲದಲ್ಲಿ ಅಹಿತಕರ ಘಟನೆ ನಡೆದಿದೆ, ಕಲ್ಲುತೂರಾಟ, ಪೆಟ್ರೋಲ್ ಬಾಂಬ್ ಎಸೆದಿದ್ದಾರೆ. ದಾವಣಗೆರೆಯಲ್ಲಿ ಘಟನೆ ನಡೆದಿದೆ, ಹಿಂದು ಸಂಘಟನೆ ಮೇಲೆ ಹಬ್ಬದ ದಿನ ದಾಳಿ ನಡೆಯುತ್ತದೆ ಎಂದು ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ಮಾಡಿದರು.

ಮೆರವಣಿಗೆಯಲ್ಲಿ ಭಾಗಿಯಾಗದಂತೆ ಒತ್ತಡ: ತುಮಕೂರಿನಲ್ಲಿ ಪೊಲೀಸರು ಕುಲಸಚಿವರಿಗೆ ಪತ್ರ ಬರೆಯುತ್ತಾರೆ. ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಡಿ ಎಂದು ತಾಕೀತು ಮಾಡುತ್ತಾರೆ. ಇವೆಲ್ಲಾ ಮುಖ್ಯಮಂತ್ರಿಗಳ ಕುಮ್ಮಕ್ಕಿನಿಂದ ನಡೆಯುತ್ತಿದೆ ಎಂದು ಅವರು ಆರೋಪಿಸಿದರು.ಕಾಂಗ್ರೆಸ್ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಹಿಂದು ಭಾವನೆಗಳಿಗೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ. ರಾಜ್ಯದಲ್ಲಿ ಯಾವುದೇ ಸರಕಾರ ಇಷ್ಟೊಂದು ಕೆಟ್ಟದಾಗಿ ನಡೆದುಕೊಂಡಿರಲಿಲ್ಲ ಎಂದು ವಿಜಯೇಂದ್ರ ಕಿಡಿಕಾರಿದರು.

ಹಿಂದೂಗಳ ಭಾವನೆಗೆ ಧಕ್ಕೆ

ಹಿಂದುಗಳ ಭಾವನೆಗೆ ಧಕ್ಕೆ ತರುತ್ತಿದೆ. ಕಾನೂನು ಸುವ್ಯವಸ್ಥೆ ಹಾಳಾಗಿದೆ.ಅಹಿತಕರ ಘಟನೆ ತಡೆಯಲು ಸರಕಾರ ಸಂಪೂರ್ಣ ವಿಫಲವಾಗಿದೆ. ಪ್ಯಾಲೆಸ್ತೀನ್ ಧ್ವಜ ಹಾರಿಸುತ್ತಾರೆ. ಮುಂದಿನ ದಿನಗಳಲ್ಲಿ ಪಾಕಿಸ್ತಾನದ ಧ್ವಜ ಹಾರಿಸುತ್ತಾರೆ. ಸರಕಾರದ ಧೋರಣೆಯಿಂದಲೇ ಇಂತಹ ಘಟನೆ ನಡೆಯುತ್ತಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷರು ವಾಗ್ದಾಳಿ ನಡೆಸಿದರು. ಮೊದಲೇ ಕ್ರಮ ಕೈಗೊಂಡಿದ್ದರೆ ಇಂತಹ ಘಟನೆ ನಡೆಯುತ್ತಿರಲಿಲ್ಲ, ಮುನಿರತ್ನ ಪ್ರಕರಣದಲ್ಲಿ ತನಿಖೆ ಸರಿಯಾದ ರೀತಿ ಆಗಬೇಕು. ತಪ್ಪು ಮಾಡಿದ್ದರೆ ಸೂಕ್ತ ತನಿಖೆಯಾಗಲಿ ನಾವು ಬೇಡ ಎನ್ನುವುದಿಲ್ಲ ಎಂದರು. ಸರಕಾರ ಪ್ರತಿಪಕ್ಷಗಳಿಗೆ ಬೆದರಿಕೆ ಹಾಕುವ ಕೆಲಸ ಮಾಡುತ್ತಿದೆ. ಕೇಸ್ ಹಾಕ್ತೇವೆ ಎಂದು ಬಹಿರಂಗವಾಗಿಯೇ ಬೆದರಿಸುತ್ತಾರೆ. ಮುನಿರತ್ನ ಪ್ರಕರಣದಲ್ಲಿ ಸರಕಾರ ರಾಜಕೀಯ ದ್ವೇಷ ಸಾಧಿಸಬಾರದು ಎಂದು ಕಿವಿಮಾತು ಹೇಳಿದರು.

ತುಮಕೂರಿನಲ್ಲಿ ದುರಹಂಕಾರದಿಂದ ಪೊಲೀಸರು ಕುಲಸಚಿವರಿಗೆ ಪತ್ರ ಬರೆದಿದ್ದಾರೆ, ದುರಹಂಕಾರ ಇಲ್ಲದಿದ್ದರೆ ಪತ್ರ ಬರೆಯುತ್ತಿರಲಿಲ್ಲ. ಹಿಂದು ಭಾವನೆಗೆ ಧಕ್ಕೆ ತರುವ ರೀತಿಯಲ್ಲಿ ಸರಕಾರ ನಡೆದುಕೊಳ್ಳುತ್ತಿದೆ. ಕುಲಸಚಿವರು ಈ ಸುತ್ತೋಲೆ ಹಿಂಪಡೆಯಬೇಕು. ರಾಜ್ಯ ಸರಕಾರದ ನಡವಳಿಕೆ ದೇಶದ್ರೋಹಿಗಳಿಗೆ ದೊಡ್ಡ ಶಕ್ತಿ ತಂದುಕೊಡುತ್ತಿದೆ.

–**ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ತಿರಂಗ ವಿರೂಪ: ಉ.ಪ್ರ ತಂದೆ-ಮಗನ ಬಂಧನ

ಬರೇಲಿ: ಉತ್ತರ ಪ್ರದೇಶದ ಬರೇಲಿಯ ನಿವಾಸಿಗಳಾದ ತಂದೆ-ಮಗನನ್ನು ರಾಷ್ಟ್ರಧ್ವಜ ವಿರೂಪ ಪ್ರಕರಣದಲ್ಲಿ ಪೊಲೀಸರು ಬಂಧಿಸಿದ್ದಾರೆ. ತಂದೆ-ಮಗ ಸೇರಿಕೊಂಡು ತಿರಂಗದಲ್ಲಿನ ಅಶೋಕ ಚಕ್ರದ ಜಾಗದಲ್ಲಿ ಅರೇಬಿಕ್ ಅಕ್ಷರಗಳನ್ನು ಬರೆದು ರಾಷ್ಟ್ರಧ್ವಜವನ್ನು ವಿರೂಪಗೊಳಿಸಿ ತಮ್ಮ ಮನೆಯ ಮೇಲೆ ಹಾರಾಡಿಸಿದ್ದರು. ಇದರ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಬಳಿಕ ಎಚ್ಚೆತ್ತ ಪೊಲೀಸರು, ಘಟನೆ ನಡೆದಿದ್ದ ಮೊಹಮ್ಮದ್ ಪುರಕ್ಕೆ ತೆರಳಿ ಆರೋಪಿಗಳಾದ ಮೊಹಮ್ಮದ್ ಖಾದಿರ್ ಮತ್ತು ಮಗ ಮೊಹಮ್ಮದ್ ಫಾಜಿಲ್‌ನನ್ನು ಬಂಧಿಸಿದರು.

ರಾಯಭಾರ ಕಚೇರಿಯ ಭಾರತ ಅಧಿಕಾರಿ ಸಾವು

ವಾಷಿಂಗ್ಟನ್: ಅಮೆರಿಕದಲ್ಲಿನ ರಾಯಭಾರ ಕಚೇರಿಯ ಅಧಿಕಾರಿಯೊಬ್ಬರು ಸೆ.18ರಂದು ನಿಗೂಢವಾಗಿ ಸಾವಿಗೀಡಾಗಿದ್ದಾರೆ. ರಾಯಭಾರ ಕಚೇರಿಯ ಆವರಣದಲ್ಲೇ ಘಟನೆ ನಡೆದಿದೆ. ಅಧಿಕಾರಿಯದು ಆತ್ಮಹತ್ಯೆಯೇ, ಆಕಸ್ಮಿಕ ಸಾವೇ, ಅಸಹಜ ಸಾವೇ ಎಂಬ ಕುರಿತು ತನಿಖೆ ನಡೆಯುತ್ತಿದೆ. ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ವಿಶೇಷ ತನಿಖಾ ದಳದ ಅಧಿಕಾರಿಗಳೂ ತನಿಖೆಯಲ್ಲಿ ನಿರತರಾಗಿದ್ದಾರೆ ಎಂದು ರಾಯಭಾರ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ. ಮೃತ ಅಧಿಕಾರಿಯ ವ್ಯಕ್ತಿಗತ ಮಾಹಿತಿಯನ್ನು ಕುಟುಂಬದವರ ಗೌಪ್ಯತೆ ಕಾಪಾಡುವ ದೃಷ್ಟಿಯಿಂದ ಬಹಿರಂಗಪಡಿಸಲು ಸಾಧ್ಯವಿಲ್ಲ. ಭಾರತದಲ್ಲಿನ ಕುಟುಂಬದವರ ಜತೆ ಸಂಪರ್ಕ ಸಾಧಿಸಲಾಗಿದೆ. ಮೃತದೇಹವನ್ನು ಭಾರತಕ್ಕೆ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ರಾಯಭಾರ ಕಚೇರಿ ಪ್ರಕಟಣೆ ತಿಳಿಸಿದೆ.

₹10-20-50 ನೋಟು ಮುದ್ರಿಸಿ: ಸಂಸದ ಪತ್ರ

ದೆಹಲಿ: ದೇಶದಲ್ಲಿನ ಕಡಿಮೆ ಮೌಲ್ಯದ ನೋಟುಗಳು ಸಮರ್ಪಕ ಪ್ರಮಾಣದಲ್ಲಿ ಚಲಾವಣೆಗೆ ಲಭ್ಯವಿಲ್ಲದೇ ಚಿಲ್ಲರೆ ವ್ಯಾಪಾರಿಗಳು, ತರಕಾರಿ ಮಾರಾಟಗಾರರು, ಬೀದಿಬದಿ ಮಾರಾಗಾರರು, ಬಡವರು, ಗ್ರಾಮೀಣ ಭಾಗದ ಜನತೆ ಬಹಳವಾಗಿ ಸಂಕಷ್ಟಕ್ಕೀಡಾಗಿದ್ದಾರೆ. ಹಾಗಾಗಿ, ರು. 10, ರು. 20 ಮತ್ತು ರು. 50 ನೋಟುಗಳನ್ನು ಹೆಚ್ಚಾಗಿ ಮುದ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ)ಗೆ ನಿರ್ದೇಶನ ನೀಡಿ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ವಿರುಧ ನಗರ ಕ್ಷೇತ್ರದ ಕಾಂಗ್ರೆಸ್ ಸಂಸದ ಮಾಣಿಕಂ ಟಾಗೋರ್ ಪತ್ರ ಬರೆದು ಮನವಿ ಮಾಡಿದ್ದಾರೆ. ಡಿಜಿಟಲ್ ಪೇಮೆಂಟ್ ಸೌಲಭ್ಯ ಬಳಸಿಕೊಳ್ಳುವವರಿಗೆ ಈ ಬಗ್ಗೆ ಚಿಂತೆ ಇಲ್ಲ. ಆದರೆ, ಈ ನವೀನ ಮಾದರಿ ಪಾವತಿ ವ್ಯವಸ್ಥೆ ಬಗ್ಗೆ ತಿಳಿಯದ, ಒಗ್ಗಿಕೊಳ್ಳಲಾಗದವರು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರಿಗಾಗಿ ನೋಟುಗಳ ಮುದ್ರಣ, ಚಲಾವಣೆ ಅತ್ಯಗತ್ಯ ಎಂದು ಸಂಸದರ ಸಮಸ್ಯೆಯ ಗಂಭೀರತೆಯನ್ನು ಸಚಿವರಿಗೆ ತಿಳಿಸಲೆತ್ನಿಸಿದ್ದಾರೆ.

ಬಂಗಾರದ ಮಾರುಕಟ್ಟೆ ಮಾರ್ಗ ಉಗ್ರರಿಗೆ ಹಣ

ದೆಹಲಿ: ಭಾರತದಲ್ಲಿ ಬಂಗಾರ-ಹರಳು ವ್ಯಾಪಾರ ಕ್ಷೇತ್ರದಿಂದ ಭಯೋತ್ಪಾದಕ ಸಂಘಟನೆಗಳಿಗೆ ಹಣ ಹರಿದುಹೋಗುವ ಸಾಧ್ಯತೆ ಇದೆ. ಭಾರತದಲ್ಲಿ ಚಿನ್ನ-ವಜ್ರ ಮಾರಾಟಗಾರರು 1.75 ಲಕ್ಷ ಮಂದಿ ಇದ್ದಾರೆ. ಉಗ್ರ ಸಂಘಟನೆಗಳಿಗೆ ಕೆಲವರು ಚಿನ್ನ- ವಜ್ರ ಖರೀದಿ ನೆಪದಲ್ಲಿ ಆರ್ಥಿಕ ನೆರವು ನೀಡುವ ಸಾಧ್ಯತೆಯಿದೆ. ಭಾರತ ಸರಕಾರ ಈ ಕ್ಷೇತ್ರಗಳ ಮೇಲೆ ಹೆಚ್ಚಿನ ನಿಗಾ ಇಡಬೇಕು ಎಂದು ಪ್ಯಾರಿಸ್‌ನಲ್ಲಿ ಕೇಂದ್ರ ಕಚೇರಿ ಇರುವ 'ಉಗ್ರರಿಗೆ ಆರ್ಥಿಕ ನೆರವು ತಡೆ ಕಾರ್ಯಪಡೆ'(ಎಫ್‌ಎಟಿಎಫ್) ಗಮನ ಸೆಳೆದಿದೆ.

ಉ.ಪ್ರ: ದಲಿತ ಬಾಲಕಿ ಸಾಮೂಹಿಕ ಅತ್ಯಾಚಾರ

ಮಥುರಾ: ಉತ್ತರ ಪ್ರದೇಶದಲ್ಲಿ ಮತ್ತು ಬರುವ ಜ್ಯೂಸನ್ನು ಬಲವಂತವಾಗಿ ಕುಡಿಸಿ 13 ವರ್ಷದ ದಲಿತ ಬಾಲಕಿಯನ್ನು ಅಪಹರಿಸಿದ ಮೂವರು ಕಾಮಾಂಧ ಯುವಕರು ಚಲಿಸುತ್ತಿದ್ದ ವ್ಯಾನ್‌ನಲ್ಲಿಯೇ ಒಬ್ಬರಾದ ಮೇಲೊಬ್ಬರಂತೆ ಅತ್ಯಾಚಾರ ನಡೆಸಿದ್ದಾರೆ. ಬಳಿಕ ಅಸ್ವಸ್ಥಗೊಂಡ ಬಾಲಕಿಯನ್ನು ಫ್ಲೈಓವರ್‌ನಡಿ ಎಸೆದು ಹೋಗಿದ್ದಾರೆ. ಪ್ರಜ್ಞೆ ಮರಳಿದ ಬಾಲಕಿ ಮನೆಗೆ ಬಂದು ಪೋಷಕರಿಗೆ ಮಾಹಿತಿ ನೀಡಿದ್ದಾಳೆ. ಬಾಲಕಿ ದಿನಸಿ ಖರೀದಿಗೆಂದು ಅಂಗಡಿಗೆ ಹೋಗಿದ್ದಾಗ ಯುವಕನೊಬ್ಬ ಮತ್ತು ಬರುವ ಜ್ಯೂಸನ್ನು ಬಲವಂತವಾಗಿ ಕುಡಿಸಿದ್ದಾನೆ. ಪ್ರಜ್ಞೆ ಕಳೆದುಕೊಂಡ ಬಾಲಕಿಯನ್ನು ವ್ಯಾನ್‌ನಲ್ಲಿ ಅಪಹರಿಸಿದ್ದಾರೆ. ಸಂತ್ರಸ್ತೆಯ ತಂದೆ ನೀಡಿದ ದೂರಿನ ಆಧಾರದ ಮೇಲೆ ಪೋಕ್ಸೊ ಕೇಸ್ ದಾಖಲಿಸಿದ ಛಾಟಾ ಠಾಣೆ ಪೊಲೀಸರು, ಮೂವರು ಕಾಮಾಂಧ ಯುವಕರಿಗಾಗಿ ಶೋಧ ನಡೆಸಿದ್ದಾರೆ.

{ ನಿತಿನ್ ಗಡ್ಕರಿ } ಕೇಂದ್ರ ಹೆದ್ದಾರಿ ಸಚಿವ

ಲೇಖಕರು, ಬುದ್ಧಿಜೀವಿಗಳು ನಿರ್ಭೀತಿಯಿಂದ ಅಭಿಪ್ರಾಯ ವ್ಯಕ್ತಪಡಿಸಲಿ. ಆಡಳಿತಗಾರ ತನ್ನ ವಿರುದ್ಧದ ತೀವ್ರ ಸ್ವರೂಪದ ಅಭಿಪ್ರಾಯವನ್ನು ಸಹಿಸಿಕೊಳ್ಳುವುದೇ ಪ್ರಜಾಪ್ರಭುತ್ವದ ದೊಡ್ಡ ಪರೀಕ್ಷೆ. ಇದು ಆತ್ಮಾವಲೋಕನಕ್ಕೆ ಕಾರಣವಾಗುತ್ತದೆ. ನಾವು ಬಲಪಂಥ-ಎಡಪಂಥ ಅಲ್ಲ, ಅಪ್ಪಟ ಅವಕಾಶವಾದಿಗಳು. ದೇಶದಲ್ಲಿ ಭಿನ್ನಾಭಿಪ್ರಾಯ ಸಮಸ್ಯೆ ಇಲ್ಲ. ಆದರೆ ಅಭಿಪ್ರಾಯ ಕೊರತೆ ಸಮಸ್ಯೆ ಇದೆ.

ತಿಮ್ಮಪ್ಪನ ಭಕ್ತರಿಗಿನ್ನು ಆತಂಕ ಬೇಡ: ದೇಗುಲ ಸ್ಪಷ್ಟನೆ | ದೇಗುಲ ಆವರಣದಲ್ಲೇ ಶುದ್ಧತೆ ಪರಿಶೀಲನಾ ಘಟಕ

ತಿರುಪತಿ ಲಡ್ಡು ಪ್ರಸಾದ ಪಾವಿತ್ರ್ಯ ಮರಳಿದೆ

ವಿಜಯವಾಡ: ಆಂಧ್ರಪ್ರದೇಶದ ಜಗತ್ ಪ್ರಸಿದ್ಧ ತಿರುಮಲದ ತಿರುಪತಿ ವೆಂಕಟರಮಣ ದೇವಸ್ಥಾನದ ಜನಪ್ರಿಯ 'ಲಡ್ಡು ಪ್ರಸಾದ'ದ ಪಾವಿತ್ರ್ಯ ಮರಳಿದೆ. ತಿಮ್ಮಪ್ಪನ ಭಕ್ತರು ಇನ್ನು ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಹೇಳಿದೆ.

ಲಡ್ಡು ತಯಾರಿಸಲು ಹಸುವಿನ ತುಪ್ಪ ಬಳಸುತ್ತಿಲ್ಲ. ಈ ಮೊದಲು 5 ವರ್ಷಗಳಿಂದ ಬಳಸಿದ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬು ಅಡಕವಾಗಿತ್ತು ಎಂಬುದು ಬಹಿರಂಗಗೊಂಡ ನಂತರ ಭಕ್ತರಲ್ಲಿ ಆತಂಕ ಉಂಟಾಗಿತ್ತು. ಲಡ್ಡು ಪ್ರಸಾದ ಖರೀದಿಗೇ ತಿಮ್ಮಪ್ಪನ ಭಕ್ತರು ಹಿಂದೇಟು ಹಾಕುವಂತಾಗಿತ್ತು.

ಶ್ರೀವಾರಿ ಲಡ್ಡುವಿನ ದೈವತ್ವ ಮತ್ತು ಪರಿಶುದ್ಧತೆ ಮರಳಿ ತರಲಾಗಿದೆ. ಲಡ್ಡು ಪ್ರಸಾದ ಈಗ ದೋಷರಹಿತವಾಗಿದೆ. ತಿರುಪತಿ ತಿಮ್ಮಪ್ಪನ ಭಕ್ತರಿಗೆ ತೃಪ್ತಿಯಾಗುವಂತೆಯೇ ಲಡ್ಡು ಪ್ರಸಾದವನ್ನು ಪರಿಶುದ್ಧತೆಯಿಂದ ತಯಾರಿಸಲಾಗುತ್ತಿದೆ. ಪ್ರಸಾದದ ಪಾವಿತ್ರ್ಯ ಕಾಪಾಡಲು ತಿರುಮಲ ತಿರುಪತಿ ದೇವಸ್ಥಾನದ(ಟಿಟಿಡಿ) ಆಡಳಿತ ಬದ್ಧವಾಗಿದೆ ಎಂದು ಟಿಟಿಡಿ ಮಂಡಳಿ 'ಎಕ್ಸ್' ಖಾತೆಯಲ್ಲಿ ಅಧಿಕೃತ ಹೇಳಿಕೆ ಪ್ರಕಟಿಸಿದೆ. ಎರಡು ದಿನಗಳ ಹಿಂದೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು, ತಿರುಪತಿ ಲಡ್ಡು ಗುಣಮಟ್ಟ ಪರೀಕ್ಷೆ ನಡೆಸಿದಾಗ ಪ್ರಾಣಿಗಳ ಕೊಬ್ಬಿನ ಅಂಶವಿರುವ ತುಪ್ಪ ಬಳಸಿರುವುದು ಕಂಡುಬಂದಿದೆ. ಇದು ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸರಕಾರದ ಅವಧಿಯಲ್ಲಾದ ಬಹುದೊಡ್ಡ ಪ್ರಮಾದವಾಗಿದೆ ಎಂದು ಆರೋಪಿಸಿದ್ದರು. ಇದು ದೇಶಾದ್ಯಂತದ ತಿರುಪತಿ ತಿಮ್ಮಪ್ಪನ ಭಕ್ತರು ಸೇರಿದಂತೆ ಕೋಟ್ಯಂತರ ಜನರಲ್ಲಿ ತೀವ್ರ ಆತಂಕ ಸೃಷ್ಟಿಸಿತ್ತು. ಕೇಂದ್ರ ಸರಕಾರ ಕೂಡಾ ಈ ವಿಷಯವಾಗಿ ಆಂಧ್ರ ರಾಜ್ಯ ಸರಕಾರದಿಂದ ಸಮಗ್ರ ವರದಿ ಕೇಳಿದೆ. ಕೇಂದ್ರದ ಆಹಾರ ಖಾತೆ ಸಚಿವ ಪ್ರಹ್ಲಾದ ಜೋಷಿ ಅವರು ರಾಜ್ಯ ಸರಕಾರಕ್ಕೆ ಪತ್ರ ಬರೆದು, ಆಂಧ್ರ ಮುಖ್ಯಮಂತ್ರಿ ಲಡ್ಡು ಪ್ರಸಾದ ಕುರಿತು ಹೇಳಿರುವುದು ದೇಶ-ವಿದೇಶಗಳಲ್ಲಿನ ಕೋಟ್ಯಂತರ ತಿಮ್ಮಪ್ಪ ಭಕ್ತರಲ್ಲಿ ಆತಂಕಕ್ಕೆ ಕಾರಣವಾಗಿದೆ. ಲಡ್ಡು ಪ್ರಸಾದದಲ್ಲಿ ಸಮಗ್ರ ತನಿಖೆ ಆಗಬೇಕಿದೆ . ಇಂಥ ಪ್ರಮಾದಕ್ಕೆ ಕಾರಣವಾದವರಿಗೆ ತಕ್ಕ ಶಿಕ್ಷೆಯಾಗುವಂತೆಯೂ ನೋಡಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ.

ದೇಗುಲದಲ್ಲೇ ಗುಣಮಟ್ಟ ಪರಿಶೋಧನಾ ಘಟಕ

ಜನಪ್ರಿಯ ತಿರುಪತಿ ಲಡ್ಡು ಪ್ರಸಾದದ ಪಾವಿತ್ರ್ಯವನ್ನು ಕಾಪಾಡುವ ದೃಷ್ಟಿಯಿಂದ ದೇಗುಲದ ಅವರಣದಲ್ಲೇ ಗುಣಮಟ್ಟ ಪರಿಶೋಧನಾ ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ. ಲಡ್ಡುವಿನಲ್ಲೇ ಕಲಬೆರಕೆ ಆಗುವುದನ್ನು ತಪ್ಪಿಸಲು, ಗುಣಮಟ್ಟ ಕಾಯ್ದುಕೊಳ್ಳಲು ಶುದ್ಧತೆ ಪರಿಶೀಲನೆಯನ್ನು ಈ ಘಟಕದಲ್ಲಿ ನಡೆಸಲಾಗುವುದು. ಹಸುವಿನ ತುಪ್ಪದ ಪರಿಶುದ್ಧತೆಯ ಪರೀಕ್ಷೆಯನ್ನೂ ನಡೆಸಲಾಗುವುದು. ಅದಕ್ಕಾಗಿಯೇ ಸುಧಾರಿತ ಪ್ರಯೋಗಾಲಯ ಪರಿಕರಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದು ತಿರುಪತಿ ದೇವಸ್ಥಾನಂ ಸಮಿತಿ ತಿಳಿಸಿದೆ. ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್ (ಎನ್‌ಡಿಡಿಬಿ)ಯು ಇದಕ್ಕಾಗಿಯೇ ಸುಧಾರಿತ ಯಂತ್ರವೊಂದನ್ನು ದೇಗುಲಕ್ಕೆ ದೇಣಿಗೆಯಾಗಿ ನೀಡಲಿದೆ. ಆ ಯಂತ್ರವು ವರ್ಷಾಂತ್ಯ ವೇಳೆಗೆ ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ ಎಂದು ಟಿಟಿಡಿ ಮುಖ್ಯಸ್ಥರಾದ ಜೆ.ಶ್ಯಾಮಲ ರಾವ್ ಸುದ್ದಿಸಂಸ್ಥೆಗೆ ಹೇಳಿದ್ದಾರೆ.

ತಿರುಪತಿ ಲಡ್ಡು ತಯಾರಿಕೆಗೆ ತುಪ್ಪ ಪೂರೈಸಿಲ್ಲ: ಅಮುಲ್

ಅಹಮದಾಬಾದ್: ಆಂಧ್ರಪ್ರದೇಶದ ತಿರುಪತಿ ತಿರುಮಲ ದೇವಸ್ಥಾನದಲ್ಲಿ ನೀಡಲಾಗುವ ಪ್ರಸಾದ 'ಲಡ್ಡು' ತಯಾರಿಸುವುದಕ್ಕೆ ಅಮುಲ್ ಸಂಸ್ಥೆಯಿಂದ ತುಪ್ಪ ಸರಬರಾಜು ಮಾಡಿರುವುದಿಲ್ಲ ಎಂದು ಗುಜರಾತ್ ಕ್ಷೀರೋದ್ಯಮ ಕ್ಷೇತ್ರದ ಬೃಹತ್ ಸಹಕಾರಿ ಸಂಸ್ಥೆ 'ಅಮುಲ್ ಇಂಡಿಯ' ಸ್ಪಷ್ಟನೆ ನೀಡಿದೆ. ತಿರುಪತಿ ದೇವಸ್ಥಾನಕ್ಕೆ ಅಮುಲ್ ಎಂದೂ ತುಪ್ಪ ಸರಬರಾಜು ಮಾಡಿಲ್ಲ. ನಮ್ಮ ಸಂಸ್ಥೆಯ ಬಗ್ಗೆ ತಪ್ಪು ವರದಿಗಳು ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟವಾಗಿವೆ. ಅವೆಲ್ಲವೂ ವದಂತಿ. ನಮ್ಮಲ್ಲಿ ಹಸುವಿನ ತುಪ್ಪವನ್ನು ಶುದ್ಧ ಹಾಲಿನಿಂದ ತೆಗೆದ ಜಿಡ್ಡಿನಂಶದಿಂದ ತಯಾರಿಸಲಾಗುತ್ತದೆ. ಅತ್ಯಾಧುನಿಕ-ಐಎಸ್‌ಐ ಪ್ರಮಾಣೀಕೃತ ಸ್ಥಾವರಗಳಲ್ಲಿ ತುಪ್ಪ ಸಿದ್ಧವಾಗುತ್ತದೆ. ಗುಣಮಟ್ಟ ಪರೀಕ್ಷೆ ನಂತರವೇ ಮಾರುಕಟ್ಟೆಗೆ ಬಿಡಲಾಗುತ್ತದೆ. ಯಾವುದೇ ರೀತಿ ಕಲಬೆರಕೆಗೆ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ದೂರು ದಾಖಲಿಸಿದ ಅಮುಲ್: ತಿರುಮಲದ ತಿರುಪತಿ ದೇಗುಲದ ಜನಪ್ರಿಯ ಪ್ರಸಾದ ಲಡ್ಡು ತಯಾರಿಕೆಗೆ ಪ್ರಾಣಿಗಳ ಕೊಬ್ಬು ಬೆರೆತ ತುಪ್ಪ ಬಳಸಲಾಗಿದೆ. ಆ ತುಪ್ಪ ಗುಜರಾತ್‌ನ ಅಮುಲ್ ಸಂಸ್ಥೆ ಸರಬರಾಜು ಮಾಡಿತ್ತು ಎಂದು ಸುಳ್ಳು ಸುದ್ದಿ ಹರಡಿದವರ ವಿರುದ್ಧ ಅಮೂಲ್ ಸಂಸ್ಥೆ ಅಹಮದಾಬಾದ್ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ.

ಸಿಎಂ ಹುದ್ದೆಗೇರಿದ ದೇಶದ 17ನೇ ಮಹಿಳೆ | ದೆಹಲಿಗೆ 3ನೇ ಮಹಿಳಾ ಸಿಎಂ

ದೆಹಲಿ ಮುಖ್ಯಮಂತ್ರಿಯಾಗಿ ಅತಿಶಿ ಮರ್ಲೇನಾ ಪ್ರಮಾಣ

ದೆಹಲಿ: ದೆಹಲಿ ಮುಖ್ಯಮಂತ್ರಿಯಾಗಿ ಆಮ್ ಆದ್ಮಿ ಪಕ್ಷದ(ಎಎಪಿ) ನಾಯಕಿ ಆತಿಶಿ ಮರ್ಲೇನಾ(43) ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದಲ್ಲಿ ಶನಿವಾರ ನಡೆದ ಸರಳ ಸಮಾರಂಭದಲ್ಲಿ ಲೆ. ಗವರ್ನರ್ ವಿ.ಕೆ.ಸಕ್ಸೇನಾ ಪ್ರತಿಜ್ಞಾ ವಿಧಿ ಬೋಧಿಸಿದರು.

ಅತಿಶಿ ದೆಹಲಿಗೆ 3ನೇ ಮಹಿಳಾ ಸಿಎಂ, ದೇಶದ 17ನೇ ಮಹಿಳಾ ಮುಖ್ಯಮಂತ್ರಿ ಎನಿಸಿಕೊಂಡಿದ್ದಾರೆ. ದೆಹಲಿ ಇತಿಹಾಸದಲ್ಲೇ ಅತಿ ಕಿರಿಯ ವಯಸ್ಸಿನ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಅತಿಶಿ ಅವರು ಈ ಮೊದಲು ಕೇಜ್ರಿವಾಲ್ ಸರಕಾರದಲ್ಲಿ ಹಣಕಾಸು, ಕಂದಾಯ, ಲೋಕೋಪಯೋಗಿ, ವಿದ್ಯುತ್ ಮತ್ತು ಶಿಕ್ಷಣ ಸೇರಿದಂತೆ ಹಲವು ಖಾತೆಗಳನ್ನು ನಿರ್ವಹಿಸಿ ಅನುಭವ ಪಡೆದಿದ್ದಾರೆ. ಇದೇ ವೇಳೆ ಗೋಪಾಲ್ ರೈ, ಕೈಲಾಶ್ ಗೆಹ್ಲೋಟ್, ಸೌರಭ್ ಭಾರದ್ವಾಜ್, ಇಮ್ರಾನ್ ಹುಸೇನ್ ಮತ್ತು ಮುಕೇಶ್ ಅಹ್ಲಾವತ್ ಸಚಿವರಾಗಿ ಪ್ರತಿಜ್ಞಾವಿಧಿ ಪೂರ್ಣಗೊಳಿಸಿದರು. ಸುಲ್ತಾನ್ ಮಿರ್ಜಾ ಕ್ಷೇತ್ರದ ಶಾಸಕ ಮುಕೇಶ್ ಅಹ್ಲಾವತ್ ಹೊಸ ಸಚಿವರಾಗಿದ್ದಾರೆ. ಸಿಎಂ ಆತಿಶಿ ಮತ್ತು 5 ಸಚಿವರ ಎಎಪಿ ಹೊಸ ಸರಕಾರ ಅಧಿಕಾರಕ್ಕೆ ಬಂದಿದ್ದು, 2025ರ ಫೆಬ್ರುವರಿ ವರೆಗಷ್ಟೇ ಅಧಿಕಾರ ಚಲಾಯಿಸಲಿದೆ. ಆ ಬಳಿಕ ಚುನಾವಣೆ ಎದುರಿಸಬೇಕಿದೆ. ಎಎಪಿ ಮುಖಂಡ, ದೆಹಲಿ ಮುಖ್ಯಮಂತ್ರಿಯಾಗಿದ್ದ ಅರವಿಂದ್ ಕೇಜ್ರಿವಾಲ್ ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಮತ್ತು ಭ್ರಷ್ಟಾಚಾರ ಪ್ರಕರಣಗಳಲ್ಲಿ ಬಂಧಿತರಾಗಿ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ದುರ್ಗಾ ಪೂಜೆ ವೇಳೆಗೆ 3,000 ಟನ್ ಹಿಲ್ಸಾ ಮೀನು: ಬಾಂಗ್ಲಾ

ಢಾಕಾ: ಭಾರತದ ಪಶ್ಚಿಮ ಬಂಗಾಳ ರಾಜ್ಯದಲ್ಲಿನ ಪ್ರಮುಖ ಹಬ್ಬ 'ದುರ್ಗಾ ಪೂಜೆ' ಸಂದರ್ಭ ವಿಶೇಷ ಹಿಲ್ಸಾ ತಳಿಯ 3,000 ಟನ್ ಮೀನನ್ನು ಕಳುಹಿಸಿಕೊಡಲು ಬಾಂಗ್ಲಾದೇಶ ಸಮ್ಮತಿಸಿದೆ. ಈ ಬಗ್ಗೆ ಬಾಂಗ್ಲಾದೇಶದ ಮಧ್ಯಂತರ ಸರಕಾರದ ವಾಣಿಜ್ಯ ಸಚಿವಾಲಯ ಶನಿವಾರ ತಿಳಿಸಿದೆ. ರಫ್ತು ವಹಿವಾಟಿಗೆ ಸರಕಾರದ ಅನುಮತಿ ಪಡೆಯಲು ಸಚಿವಾಲಯದ ರಫ್ತು ವಿಭಾಗ ಸಂಪರ್ಕಿಸುವಂತೆ ಸರಕಾರ ರಫ್ತುದಾರರಿಗೆ ಸೂಚಿಸಿದೆ. ಈ ಹಿಂದೆ, ದೇಶೀ ಮಾರುಕಟ್ಟೆಗೆ ಪೂರೈಕೆ ಹೆಚ್ಚಿಸುವ ಸಲುವಾಗಿ ಈ ವರ್ಷ ಭಾರತಕ್ಕೆ ಹಿಲ್ಸಾ ಮೀನುಗಳನ್ನು ರಫ್ತು ಮಾಡದಂತೆ ಬಾಂಗ್ಲಾದೇಶದ ಮಧ್ಯಂತರ ಸರಕಾರ ನಿರ್ಬಂಧಿಸಿತ್ತು. 2023ರಲ್ಲಿ ದುರ್ಗಾ ಪೂಜೆ ಸಂದರ್ಭ ಭಾರತಕ್ಕೆ ಹಿಲ್ಸಾ ಮೀನು ರಫ್ತು ಮಾಡಲು 79 ಕಂಪನಿಗಳಿಗೆ ಸರಕಾರ ಅನುಮತಿ ನೀಡಿತ್ತು. ತಲಾ 50 ಟನ್‌ನಂತೆ ಒಟ್ಟು 4 ಸಾವಿರ ಟನ್ ಹಿಲ್ಸಾ ಮೀನು ರಫ್ತು ಮಾಡಲು 79 ಕಂಪನಿಗಳಿಗೆ ಅವಕಾಶ ನೀಡಲಾಗಿತ್ತು.

ಪಾಕ್‌ನಲ್ಲಿ 4 ಐಸಸ್ ಉಗ್ರರ ಸೆರೆ

ಪಂಜಾಬ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ನಾಲ್ವರು ಐಎಸ್‌ಐಎಸ್ (ಐಸಸ್) ಉಗ್ರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ಹೇಳಿದ್ದಾರೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಂಜಾಬ್ ಪೊಲೀಸರ ಭಯೋತ್ಪಾದನೆ ನಿಗ್ರಹ ಇಲಾಖೆ (ಸಿಟಿಡಿ), ಪಂಜಾಬ್, ಲಾಹೋರ್, ಟೋಬಾ ಟೇಕ್ ಸಿಂಗ್, ಬಹಾವಲ್‌ಪುರ ಮತ್ತು ಮಿಯಾಂವಾಲಿಯಲ್ಲಿ ಅಡಗಿದ್ದ ನಾಲ್ವರು ಉಗ್ರರನ್ನು ಬಂಧಿಸಿದೆ. ಉಗ್ರರಿಂದ 2,570 ಗ್ರಾಂ ಸ್ಫೋಟಕ, 3 ಡೆಟೋನೇಟರ್ಸ್, ರೈಫಲ್, ಪಿಸ್ತೂಲ್, 20 ಬುಲೆಟ್, 4 ಗ್ರನೇಡ್‌ಗಳನ್ನು ಮತ್ತು ಐಎಸ್ ಐಎಸ್ ಬರಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ಉಗ್ರರು ಸರಕಾರಿ ಮತ್ತು ವಾಣಿಜ್ಯ ಕಟ್ಟಡಗಳು ಮತ್ತು ಪ್ರಮುಖ ವ್ಯಕ್ತಿಗಳ ಮೇಲೆ ದಾಳಿ ನಡೆಸಲು ಯೋಜಿಸಿದ್ದರು.

ರಾಹುಲ್ ಅಪಮಾನ: ಬಿಜೆಪಿ, ಆರೆಸ್ಸೆಸ್ ವಿರುದ್ಧ ಕೈ ಪ್ರತಿಭಟನೆ

ಜಮ್ಮು: ಕಾಂಗ್ರೆಸ್ ಸಂಸದ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಗೆ ಬೆದರಿಕೆಗಳನ್ನು ಒಡ್ಡುತ್ತಿರುವ ಆರ್‌ಎಸ್‌ಎಸ್ ಮತ್ತು ಬಿಜೆಪಿಯದ್ದು ಬಹಳ ವಿಷಕಾರಿ ಮನಸ್ಥಿತಿ. ಇಂಥ ಬೆದರಿಕೆಗೆಲ್ಲಾ ಕಾಂಗ್ರೆಸ್ ಹೆದರುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುಡುಗಿದ್ದಾರೆ. ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ದೇಶಾದ್ಯಂತ ಶೀಘ್ರವೇ ಆಂದೋಲನ ಆರಂಭಿಸಲಿದೆ ಎಂದು ಹೇಳಿದ್ದಾರೆ.

ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ಜಮ್ಮುವಿಗೆ ಆಗಮಿಸಿದ ಖರ್ಗೆ ಶನಿವಾರ ಸುದ್ದಿಗೋಷ್ಠಿ ನಡೆಸಿ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ, ಆರ್‌ಎಸ್‌ಎಸ್ ನಾಯಕರು ರಾಹುಲ್ ನಾಲಿಗೆ ಕತ್ತರಿಸುವ ಬಗ್ಗೆ ಮಾತನಾಡುತ್ತಾರೆ. ಸತ್ಯ ಹೇಳಿದ್ದಕ್ಕೆ ರಾಹುಲ್ ಮೇಲೆ ವಾಗ್ದಾಳಿ ನಡೆಯುತ್ತಿದೆ. ಅವರ ವಿರುದ್ಧ ದ್ವೇಷದ ವಾತಾವರಣ ಸೃಷ್ಟಿಸಲಾಗಿದೆ ಎಂದರು. ಲೋಕಸಭೆ ಪ್ರತಿಪಕ್ಷ ನಾಯಕರ ವಿರುದ್ಧವೇ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಬಿಜೆಪಿ ನಾಯಕರ ವಿರುದ್ಧ ಕ್ರಮ ಕೈಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ವಿಫಲರಾಗಿದ್ದಾರೆ ಎಂದು ಖರ್ಗೆ ಖಂಡಿಸಿದರು.

ರಾಹುಲ್ ಹೇಳಿಕೆ ವಾಪಸ್‌ಗೆ ಬಿಜೆಪಿ ಆಗ್ರಹ

ದೆಹಲಿ: ಅಮೆರಿಕ ಪ್ರವಾಸ ಕಾಲದಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ಸಿಖ್ ಸಮುದಾಯದ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ ಎಂದು ಕಿಡಿಕಾರಿರುವ ಬಿಜೆಪಿ, ಆ ಎಲ್ಲಾ ಹೇಳಿಕೆಗಳನ್ನೂ ರಾಹುಲ್ ಹಿಂತೆದುಕೊಳ್ಳಬೇಕು ಎಂದು ಶನಿವಾರ ಆಗ್ರಹಿಸಿದೆ. ಸಮುದಾಯದ ವಿರುದ್ಧ ರಾಹುಲ್ ಗಾಂಧಿ ಹೇಳಿಕೆ ನೀಡಿರುವುದಕ್ಕೆ ಸಿಖ್ ಸಂಘಟನೆಗಳೂ ಮತ್ತು ಗುರುದ್ವಾರ ನಿರ್ವಹಣಾ ಸಂಸ್ಥೆಗಳೂ ಸಿಡಿದೆದ್ದಿವೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೇಂದ್ರ ಗೃಹ ಸಚಿವಾಲಯಕ್ಕೂ ದೂರು ಸಲ್ಲಿಸಿವೆ ಎಂದು ಬಿಜೆಪಿ ನಾಯಕ ಮಂಜಿಂದರ್ ಸಿಂಗ್ ಸಿರ್ಸಾ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಾಸಾಂತ್ಯ ಅಧಿಕಾರ | ಐಎಎಫ್ 40 ವರ್ಷ ಸೇವೆ

ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್

ದೆಹಲಿ: ಪ್ರಸ್ತುತ ಭಾರತೀಯ ವಾಯುಪಡೆ ಉಪ ಮುಖ್ಯಸ್ಥರಾಗಿರುವ ಏರ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರನ್ನು ವಾಯುಪಡೆಯ ಮುಂದಿನ ಮುಖ್ಯಸ್ಥರನ್ನಾಗಿ ನೇಮಿಸಿ ಕೇಂದ್ರ ಸರಕಾರ ಶನಿವಾರ ಆದೇಶ ಹೊರಡಿಸಿದೆ. ಸಿಂಗ್ ಸೆ.30ರಂದು ಏರ್ ಚೀಫ್ ಮಾರ್ಷಲ್ ವಿವೇಕ್ ರಾಮ್ ಚೌಧರಿ ಅವರಿಂದ ವಾಯುಪಡೆ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

1964ರ ಅ.27ರಂದು ಜನಿಸಿದ ಅಮರ್ ಪ್ರೀತ್ ಸಿಂಗ್, ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ), ರಕ್ಷಣಾ ಸೇವೆಗಳ ಸಿಬ್ಬಂದಿ ಕಾಲೇಜು ಮತ್ತು ರಾಷ್ಟ್ರೀಯ ರಕ್ಷಣಾ ಕಾಲೇಜಿನ ಹಳೆಯ ವಿದ್ಯಾರ್ಥಿ. ರಕ್ಷಣಾ ವಿಭಾಗದಲ್ಲೇ ಉನ್ನತ ವ್ಯಾಸಂಗ ಪಡೆದ ಬಳಿಕ 1984ರ ಡಿಸೆಂಬರ್‌ನಲ್ಲಿ ಭಾರತೀಯ ವಾಯುಪಡೆಗೆ ಫೈಟರ್ ಪೈಲಟ್ ಅಗಿ ಸೇರ್ಪಡೆಯಾದರು. ಸಿಂಗ್ 40 ವರ್ಷಗಳಷ್ಟು ಸುದೀರ್ಘ ಕಾಲ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಏರ್ ಆಫೀಸರ್ ಅರ್ಹ ಫ್ಲೈಯಿಂಗ್ ಬೋಧಕ ಮತ್ತು ಪ್ರಾಯೋಗಿಕ ಪರೀಕ್ಷಾ ಪೈಲಟ್ ಆಗಿದ್ದರು. ವಿವಿಧ ಸ್ಥಿರದ ರೋಟರಿ-ವಿಂಗ್ ವಿಮಾನಗಳಲ್ಲಿ 5,000 ಗಂಟೆಗಳ ಹಾರಾಟದ ಅನುಭವ ಹೊಂದಿದ್ದಾರೆ. ಸಿಂಗ್ ವಿವಿಧ ಕಮಾಂಡ್‌ಗಳು, ಸಿಬ್ಬಂದಿ ಮತ್ತು ವಿದೇಶಿ ನೇಮಕ ಪ್ರಕ್ರಿಯೆಗಳಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಅವರದು ವಿಶಿಷ್ಟ ಹಾಗೂ ವೈವಿಧ್ಯಮಯ ಸ್ವರೂಪಗಳ ಸೇವಾ ಅನುಭವವಾಗಿದೆ. ಪರೀಕ್ಷಾ ಪೈಲಟ್ ಕೂಡಾ ಆಗಿ ಲಘು ಯುದ್ಧ ವಿಮಾನ ತೇಜಸ್‌ನ ಹಾರಾಟ ಪರೀಕ್ಷೆಯ ಜವಾಬ್ದಾರಿ ವಹಿಸಿದ್ದರು. ಫೈಟರ್ ಸ್ಕ್ವಾಡ್ರನ್ ಆಗಿದ್ದರು. ಮುಂಚೂಣಿ ವಾಯುನೆಲೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ರಷ್ಯಾದ ಮಾಸ್ಕೋದಲ್ಲಿ ಮಿಗ್-29 ಅಪ್‌ಗ್ರೇಡ್ ಪ್ರಾಜೆಕ್ಟ್‌ನ ಮ್ಯಾನೇಜ್ಮೆಂಟ್ ತಂಡ ಮುನ್ನಡೆಸಿದ್ದರು. ರಾಷ್ಟ್ರೀಯ ವಿಮಾನ ಪರೀಕ್ಷಾ ಕೇಂದ್ರದಲ್ಲಿ ಪ್ರಾಜೆಕ್ಟ್ ಡೈರೆಕ್ಟರ್ ಕೂಡಾ ಆಗಿದ್ದರು.

ಪಾಕ್‌ಗೆ ಮೋದಿ ಭಯ; ಗಡಿ ಶಾಂತ

ಶ್ರೀನಗರ: ಭಾರತದ ಪ್ರಧಾನಿ ಸ್ಥಾನದಲ್ಲಿ ಧೀಮಂತ ನಾಯಕ ನರೇಂದ್ರ ಮೋದಿ ಅವರು ಇರುವುದರಿಂದಲೇ ಪಾಕಿಸ್ತಾನ ಭಯದಲ್ಲಿದೆ. ಆ ಕಾರಣದಿಂದಾಗಿಯೇ ಈ ಭಾಗದಲ್ಲಿ ಭಯೋತ್ಪಾದನೆ ತಗ್ಗಿ ಶಾಂತಿ ನೆಲೆಸಿದೆ. ಅಭಿವೃದ್ಧಿಯ ಹೊಸ ಶಕೆ ಶುರುವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.



ಮೆಂಧಾರ್‌ನಲ್ಲಿ ಶನಿವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಶಾ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಕೇಂದ್ರದಲ್ಲಿ ಬಂದ ಬಳಿಕ ಇಲ್ಲಿ ಭಯೋತ್ಪಾದನೆ ಕೊನೆಯಾಗಿದೆ. ಇಲ್ಲಿನ ಯುವಕರ ಕೈಗೆ ಕಲ್ಲುಗಳ ಬದಲಾಗಿ ಲ್ಯಾಪ್‌ಟಾಪ್, ಪುಸ್ತಕ, ಪೆನ್ನು ನೀಡಲಾಗಿದೆ. ಉದ್ಯೋಗ ಪರ್ವ ಶುರುವಾಗಿದೆ. ಜಮ್ಮು-ಕಾಶ್ಮೀರ ಮತ್ತೆ ಪ್ರವಾಸಿಗರ ಪಾಲಿಗೆ ಆಕರ್ಷಣೆಯ ಕೇಂದ್ರವಾಗಿ ಬದಲಾಗಿದೆ ಎಂದು ಗಮನ ಸೆಳೆದರು.

ಆದರೆ, ಅಬ್ದುಲ್ಲಾ, ಮುಫ್ತಿ ಮತ್ತು ನೆಹರು-ಗಾಂಧಿ ಕುಟುಂಬ 90ರ ದಶಕದಿಂದಲೂ ಜಮ್ಮು- ಕಾಶ್ಮೀರದಲ್ಲಿ ಅಭಿವೃದ್ಧಿಯನ್ನು ಕಡೆಗಣಿಸಿತ್ತು. ಕೇವಲ ಭಯೋತ್ಪಾದನೆ ಹರಡುವುದಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಆ ಮೂರೂ ಕುಟುಂಬಗಳು ಈ ನೆಲದಲ್ಲಿ ಪ್ರಜಾಪ್ರಭುತ್ವವೇ ಇಲ್ಲದಂತೆ ಮಾಡಿದ್ದವು. ಈಗ ಕಾಲ ಬದಲಾಗಿದೆ. ಈಗ ನಡೆದಿರುವ ಚುನಾವಣೆ ಆ ಮೂರು ಸ್ವಾರ್ಥಪರ ಕುಟುಂಬಗಳ ಆಡಳಿತವನ್ನು ಇಲ್ಲಿ ಕೊನೆ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಇಲ್ಲಿ 35 ವರ್ಷ ಆಳಿದ್ದರೂ ಅಭಿವೃದ್ಧಿ ಮರೀಚಿಕೆಯಾಗಿತ್ತು. ಕೇವಲ ಭಯೋತ್ಪಾದನೆ, ರಕ್ತಪಾತವೇ ಹೆಚ್ಚಾಯಿತು. ಎಲ್ಲೆಲ್ಲೂ ಭಯವೇ ತಾಂಡವವಾಡುತ್ತಿತ್ತು. ಪರಿಣಾಮ, 40 ಸಾವಿರ ಜನರು ಹತ್ಯೆಯಾಯಿತು. 3 ಸಾವಿರ ದಿನಗಳ ಕಾಲ ಜಮ್ಮು-ಕಾಶ್ಮೀರ ಬಂದ್ ಆಗಿತ್ತು. 8 ವರ್ಷ ಕತ್ತಲಲ್ಲಿ ಮುಳುಗಿತ್ತು. ಇದಕ್ಕೆಲ್ಲ ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ನಾಯಕರೇ ಕಾರಣ ಎಂದು ದೂಷಿಸಿದರು.

2014 ರಲ್ಲಿ ಮೋದಿ ಸರ್ಕಾರ ಬರದಿದ್ದರೆ ಇಲ್ಲಿ ಬ್ಲಾಕ್ ಮತ್ತು ಜಿಪಂ ಚುನಾವಣೆ ನಡೆಯುತ್ತಿರಲಿಲ್ಲ. ಈಗ ಇಲ್ಲಿನ ಜನತೆಗೆ ತಮ್ಮದೇ ಆದ ಸರಕಾರವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಒದಗಿಬಂದಿದೆ ಎಂದು ಹೇಳಿದರು.

ಈದ್, ಮೊಹರಂಗೆ ಸಿಲಿಂಡರ್

ಜಮ್ಮು-ಕಾಶ್ಮೀರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಈದ್ ಮತ್ತು ಮೊಹರಂ ಹಬ್ಬಗಳ ಸಂದರ್ಭ ಅಡುಗೆ ಅನಿಲದ ಎರಡು ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

ಗಡಿಯಲ್ಲಿ ಇನ್ನಷ್ಟು ಬಂಕರ್ಸ್: ಪಾಕ್-ಭಾರತ ಗಡಿ ಭಾಗದಲ್ಲಿ ಭಾರತೀಯ ಸೇನೆ ಇನ್ನಷ್ಟು ಬಂಕರ್‌ಗಳನ್ನು ನಿರ್ಮಿಸಲಿದೆ. ಅದರಿಂದ ಜನರ ಸುರಕ್ಷತೆ ಸಾಧ್ಯವಾಗಲಿದೆ ಎಂದು ಶಾ ಭರವಸೆ ನೀಡಿದರು.

ಇಸ್ರೇಲ್ ಬಾಂಬರ್ ದಾಳಿಗೆ ರಾದ್ವಾನ್ ಪಡೆಗಳ ಮುಖ್ಯಸ್ಥ ಹತ

ಇಬ್ರಾಹಿಂ ಸಾವು, ಹಿಜ್ಬುಲ್ ದುರ್ಬಲ

ಜೆರುಸಲೇಂ: ಇಸ್ರೇಲ್‌ನ ವಾಯುಸೇನಾ ಪಡೆ ದಕ್ಷಿಣ ಬೈರೂತ್‌ನಲ್ಲಿನ ಹಿಜ್ಬುಲ್ಲಾ ಸಂಘಟನೆಯ ಭದ್ರಕೋಟೆಯ ಮೇಲೆ ಗುರಿಯಿಟ್ಟು ನಡೆಸಿದ ಬಾಂಬರ್ ದಾಳಿಯಲ್ಲಿ ಹಿಜ್ಬುಲ್ ಉಗ್ರ ಸಂಘಟನೆಯ ರಾದ್ವಾನ್ ಫೋರ್ಸ್ ಕಮಾಂಡರ್ ಇಬ್ರಾಹಿಂ ಆಕಿಲ್ ಹತನಾಗಿದ್ದಾನೆ.

ಹಿರಿಯ ಕಮಾಂಡರ್‌ಗಳ ಸಭೆ ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದ್ದು, ಹಿಜ್ಬುಲ್ ಉಗ್ರ ಸಂಘಟನೆಯ ಉನ್ನತ ಶ್ರೇಣಿಯ 10 ಉಗ್ರರು ಸೇರಿದಂತೆ 14 ಜನರು ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಮಾಧ್ಯಮ ವರದಿ ಮಾಡಿದೆ. ಈಗ ಅನೇಕ ವರ್ಷಗಳಿಂದ ಅಮೆರಿಕದ ಮೋಸ್ಟ್ ವಾಂಟೆಂಡ್ ಉಗ್ರಗಾಮಿ ಪಟ್ಟಿಯಲ್ಲಿದ್ದ. ಇಸ್ರೇಲ್‌ನ ಈ ಬಾಂಬರ್ ದಾಳಿಯಿಂದ ಹಿಜ್ಬುಲ್ಲಾ ಸಂಘಟನೆಯ ಪ್ರಮುಖ ಕೇಂದ್ರವಿದ್ದ ಜಾಗದಲ್ಲೀಗ ಬೃಹತ್ ಕುಳಿ ಉಂಟಾಗಿದೆ. ಬಾಂಬರ್‌ಗಳ ದಾಳಿಗೆ ಬಹುಮಹಡಿ ಕಟ್ಟಡ ಧರೆಗುರುಳಿದೆ. ಅವಶೇಷಗಳಡಿ ಬದುಕುಳಿದವರಿಗಾಗಿ ಹಿಜ್ಬುಲ್ಲಾ ಸದಸ್ಯರು ಹುಡುಕಾಟ ನಡೆಸಿದ್ದಾರೆ. ಇಬ್ರಾಹಿಂ ಸಾವನ್ನು ಹಿಜ್ಬುಲ್ಲಾ ಉಗ್ರ ಸಂಘಟನೆ ದೃಢಪಡಿಸಿದೆ. ಮಹಾನ್ ಜಿಹಾದಿ ನಾಯಕನ ಅಂತ್ಯ ಎಂದು ಉಲ್ಲೇಖಿಸಿದೆ. ಇಸ್ರೇಲ್‌ನ ಈ ವೈಮಾನಿಕ ದಾಳಿಗೆ ಪ್ರತಿಕಾರವಾಗಿ ಹಿಜ್ಬುಲ್ಲಾ ಸಂಘಟನೆಯೂ ಇಸ್ರೇಲ್‌ನ ಸೇನಾ ನೆಲೆಗಳ ಮೇಲೆ ನೂರಾರು ರಾಕೆಟ್ ಗಳನ್ನು ಹಾರಿಸಿದೆ.

ಹಿಜ್ಬುಲ್ಲಾ ಸಂಘಟನೆಗೆ ದೊಡ್ಡ ಪೆಟ್ಟು

ಲೆಬನಾನ್ ಪೂರ್ವದಲ್ಲಿರುವ ಬಾಲ್ಬೆಕ್‌ನಲ್ಲಿ ಜನಿಸಿದ್ದ ಇಬ್ರಾಹಿಂ ಆಕಿಲ್ 1980ರ ದಶಕದಲ್ಲೇ, ಸಂಘಟನೆಯ ಆರಂಭಿಕ ದಿನಗಳಲ್ಲೇ ಹಿಜ್ಬುಲ್ಲಾ ಸೇರಿಕೊಂಡಿದ್ದ. 2008ರಿಂದ ಹಿಜ್ಬುಲ್ಲಾದ ಉನ್ನತ ಸಶಸ್ತ್ರ ಪಡೆ ಜಿಹಾದ್ ಕೌನ್ಸಿಲ್ ಸದಸ್ಯನಾಗಿದ್ದ. ಅಲ್ಲದೇ, ರಾದ್ವಾನ್ ಪಡೆಗಳ ಮುಖ್ಯಸ್ಥನೂ ಆಗಿದ್ದ. 61 ವರ್ಷದ ಇಬ್ರಾಹಿಂ ಆಕಿಲ್, ಹಿಜ್ಬುಲ್ಲಾ ಉಗ್ರ ಸಂಘಟನೆಯ 2ನೇ ಉನ್ನತ ಕಮಾಂಡರ್. ಈತನ ಸಾವಿನಿಂದ ಹಿಜ್ಬುಲ್ಲಾ ಸಂಘಟನೆಯ ಕಮಾಂಡಿಂಗ್ ವ್ಯವಸ್ಥೆಗೇ ದೊಡ್ಡ ಪೆಟ್ಟು ಬಿದಂತಾಗಿದೆ.

ಅಮೆರಿಕದ ಮೋಸ್ಟ್ ವಾಟೆಂಡ್

1980ರ ದಶಕದಲ್ಲಿ ಅಮೆರಿಕನ್ ಮತ್ತು ಯುರೋಪಿಯನ್ ಪ್ರಜೆಗಳ ಅಪಹರಣ ಪ್ರಕರಣದಲ್ಲಿ ಇಬ್ರಾಹಿಂ ಭಾಗಿಯಾಗಿದ್ದ. ಅಲ್ಲದೇ, 1983ರಲ್ಲಿ ಬೈರೂತ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಮತ್ತು ಮೆರೈನ್ ಬ್ಯಾರಕ್‌ಗಳ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ಇಬ್ರಾಹಿಂ ಆಕಿಲ್, ಪ್ರಮುಖ ಪಾತ್ರ ವಹಿಸಿದ್ದ. ಈ ದಾಳಿಯಲ್ಲಿ ನೂರಾರು ಅಮೆರಿಕನ್ನರು ಸಾವಿಗೀಡಾಗಿದ್ದರು. ಅದೇ ಕಾರಣವಾಗಿ ಅಮೆರಿಕ ಇಬ್ರಾಹಿಂ ತಲೆಗೆ 70 ಲಕ್ಷ ಡಾಲರ್ ಬಹುಮಾನ ಘೋಷಿಸಿತ್ತು. ಇಬ್ರಾಹಿಂ ಅಮೆರಿಕದ ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿದ್ದ.

ಸರಕಾರಿ ಕಾರ್ಯಕ್ರಮಕ್ಕೆ ಪೆಟ್ ಬಾಟಲ್ ಇಲ್ಲ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ನಿರ್ದೇಶನದಂತೆ ಕೇಂದ್ರ ಸರಕಾರದ ಸಭೆ, ಸಮಾರಂಭಗಳಲ್ಲಿ ಪ್ಲಾಸ್ಟಿಕ್, ಪೆಟ್ ಬಾಟಲ್ ಬಳಕೆ ಪೂರ್ಣ ನಿಲ್ಲಿಸಲಾಗಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ದೆಹಲಿಯಲ್ಲಿ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎ ಸ್) ಆಡಳಿತ ಮಂಡಳಿಯ 8ನೇ ಸಭೆ ಅಧ್ಯಕ್ಷತೆ ವಹಿಸಿದ್ದ ಸಚಿವರು, ಪ್ಲಾಸ್ಟಿಕ್, ಪೆಟ್ ಬಾಟಲಿಗಳಲ್ಲಿ ಸಂಗ್ರಹಿಸಿಟ್ಟ ಆಹಾರ ಪದಾರ್ಥ ಸೇವನೆಯಿಂದ ಸೂಕ್ಷ್ಮ ಪ್ರಮಾಣದ ಪ್ಲಾಸ್ಟಿಕ್ ನಮ್ಮ ದೇಹ ಸೇರುತ್ತಿದ್ದು, ಆರೋ ಗ್ಯಕ್ಕೆ ಅಪಾಯಕಾರಿಯಾಗಿದೆ. ಫೈಬರ್ ಅಂಶ ಮತ್ತು ಪ್ಲಾಸ್ಟಿಕ್ ಪ್ಯಾಕೆಟ್‌ಗಳಲ್ಲಿನ ಆಹಾರ ಸೇವನೆಯಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿ ಸಿದ ರು. 112 ಕೋಟಿ ರು. ಉಳಿತಾಯ: ಜನ್ ಪೋಷಣ್ ಕೇಂದ್ರ, ಮೇರಾ ರೇಷನ್ 2.0 ಆ್ಯಪ್ ಬಿಡುಗಡೆ ಮತ್ತು ಪಿಡಿಎಸ್ ವ್ಯವಸ್ಥೆ ಉತ್ತಮಗೊಳಿಸಿದ್ದರಿಂದ 13 ರಾಜ್ಯಗಳಲ್ಲಿ ವಾರ್ಷಿಕ 112 ಕೋಟಿ ರು. ಉಳಿತಾಯವಾಗಿದೆ. ರಾಗಿ ದಾಖಲೆ ಸಂಗ್ರಹಣೆ ಮತ್ತು ಹೆಚ್ಚಿದ ಎಥೆನಾಲ್ ಉತ್ಪಾದನಾ ಸಾಮರ್ಥ್ಯವು ನಮ್ಮ ಆಹಾರ ಭದ್ರತೆಯನ್ನು ಮತ್ತಷ್ಟು ಬಲಪಡಿಸಿದೆ. ದೇಶದಲ್ಲಿ ಆಹಾರ ಉತ್ಪನ್ನಗಳ ಗುಣಮಟ್ಟ ಕಾಪಾಡಲು ಇರುವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಮುಕ್ತೇಶ್ ಕುಮಾರ್ ಭಾರತ ರಾಯಭಾರಿ

ದೆಹಲಿ: ಟರ್ಕಿ ದೇಶಕ್ಕೆ ಭಾರತದ ನೂತನ ರಾಯಭಾರಿಯಾಗಿ ಅನು ಭವಿ ರಾಜತಾಂತ್ರಿಕ ಅಧಿಕಾರಿ ಮುಕ್ತೇಶ್ ಕುಮಾರ್ ಪರದೇಶಿ ಅವರನ್ನು ನೇಮಿಸಿ ಕೇಂದ್ರ ಸರಕಾರ ಶನಿವಾರ ಆದೇಶ ಹೊರಡಿಸಿದೆ.

ಮುಕ್ತೇಶ್ 1991ನೇ ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವಾ ಅಧಿಕಾರಿ ಯಾಗಿದ್ದಾರೆ. ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕಾರ್ಯ ದರ್ಶಿ ಯಾಗಿದ್ದಾರೆ. ಶೀಘ್ರವೇ ಟರ್ಕಿ ರಾಯಭಾರ ಕಚೇರಿ ಯಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. 2023ರ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ನಡೆದ ಜಿ-20 ಶೃಂಗಸಭೆಯ ಯಶಸ್ಸಿನಲ್ಲಿ ಹಾಗೂ ಉಕ್ರೇನ್ ಸಂಘರ್ಷ ಬಗ್ಗೆ ಭಿನ್ನಾಭಿಪ್ರಾಯ ನಿವಾರಿಸುವ ನಾಯಕರ ಘೋಷಣೆಯ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಉನ್ನತ ಅಧಿಕಾರಿಗಳ ಗುಂಪಿನಲ್ಲಿ ಮುಕ್ತೇಶ್ ಪ್ರಮುಖರಾಗಿದ್ದರು. ಈವರೆಗೆ ಟರ್ಕಿ ರಾಯಭಾರಿಯಾಗಿದದ ವಿರೇಂದರ್ ಪೌಲ್ ಅವರು ದೀರ್ಘ ಕಾಲದಿಂದ ಅನಾರೋಗ್ಯಕ್ಕೀಡಾಗಿರುವುದರಿಂದ ಟರ್ಕಿ ರಾಯಭಾರಿ ಹುದ್ದೆ ಖಾಲಿ ಇದೆ. ಮುಕ್ತೇಶ್ 2016-19ರ ಅವಧಿಯಲ್ಲಿ ಮೆಕ್ಸಿಕೊದಲ್ಲಿ ಹಾಗೂ 2019-22ರ ಅವಧಿಗೆ ನ್ಯೂಜಿಲೆಂಡ್‌ನಲ್ಲಿ ಭಾರತದ ಹೈಕಮಿಷನರ್ ಆಗಿದ್ದರು.

ನಟಿ ಅತ್ಯಾಚಾರ: ಸುನಿ 7ವರ್ಷ ಬಳಿಕ ಹೊರಕ್ಕೆ

ತಿರುವನಂತಪುರ: ಕೇರಳದಲ್ಲಿ 2017ರಲ್ಲಿ ನಡೆದ ಬಹುಭಾಷಾ ನಟಿ ಅಪಹರಣ-ಕಾರಿನಲ್ಲೇ ಅತ್ಯಾಚಾರ ಪ್ರಕರಣದ ಪ್ರಮುಖ ಆರೋಪಿ ಸುನಿಲ್ ಎಸ್.ಅಲಿಯಾಸ್ ಪಲ್ಸರ್ ಸುನಿಗೆ ಸುಪ್ರೀಂ ಕೋರ್ಟ್ ಆರೋಪಿಗೆ ಜಾಮೀನು ಮಂಜೂರು ಮಾಡಿದೆ.

ಸಾಕ್ಷಿಗಳ ಮೇಲೆ ಪ್ರಭಾವ ಬೀರದಂತೆ, ಯಾವುದೇ ಸಾಕ್ಷ್ಯ ನಾಶಪಡಿಸದಂತೆ ಷರತ್ತು ವಿಧಿಸಿ ಜಾಮೀನು ಮಂಜೂರು ಮಾಡಲಾಗಿದೆ. ಅಲ್ಲದೇ, ಕೇರಳದ ಎರ್ನಾಕುಲಂ ಜಿಲ್ಲಾ ಪ್ರಧಾನ ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆ ನಿದಾನಗತಿಯಲ್ಲಿ ನಡೆಸುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ಟೀಕೆ ವ್ಯಕ್ತಪಡಿಸಿದೆ. ಪ್ರಕರಣದ ವಿಚಾರಣೆ ಸದ್ಯ ಕೇರಳ ವಿಚಾರಣಾ ನ್ಯಾಯಾಲಯ ದಲ್ಲಿ ನಿದಾನಗತಿಯಲ್ಲಿ ಸಾಗಿದೆ. ಪ್ರಕರಣದ ಉಳಿದ ಆರೋಪಿಗಳೆಲ್ಲಾ ಜಾಮೀನು ಪಡೆದು ಬಿಡುಗಡೆಗೊಂಡಿದ್ದಾರೆ. ಪ್ರಮುಖ ಆರೋಪಿ ಸುನಿಲ್ 7 ವರ್ಷಗಳಿಂದಲೂ ಜೈಲಿನಲ್ಲೇ ಇದ್ದ. ಸುನಿಲ್ ಕೂಡಾ ಜಾಮೀನು ಕೋರಿ ಕೇರಳ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಹೈಕೋರ್ಟ್ ಜಾಮೀನು ಅರ್ಜಿಯನ್ನು ಜೂ.6ರಂದು ತಿರಸ್ಕರಿಸಿತ್ತು. ಬಳಿಕ ಸುನಿಲ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ.

ಮಣಿಪುರಕ್ಕೆ ನುಸುಳಿದ 900 ಕುಕಿ ಉಗ್ರರು

ಇಂಫಾಲ್: ಭಾರತದ ಗಡಿಯಲ್ಲಿ ನುಸುಳಿಕೊಂಡು ಮ್ಯಾನ್ಮಾರ್‌ನ 900 ಕುಕಿ ಉಗ್ರರು ಬಂದಿದ್ದು, ಮಣಿಪುರದಲ್ಲಿ ಅಡಗಿಕೊಂಡಿದ್ದಾರೆ ಎಂದು ರಾಜ್ಯ ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ಮಾಹಿತಿ ನೀಡಿದ್ದಾರೆ.

3-4 ದಿನಗಳಿಂದ ಮಣಿಪುರದಲ್ಲಿ ಉಗ್ರರ ಚಲನವಲನದ ಬಗ್ಗೆ ಬಹಳ ವರದಿಯಾಗುತ್ತಿದೆ. ಮ್ಯಾನ್ಮಾರ್ ಕಡೆಯಿಂದ ಒಳನುಸುಳಿರುವ ಉಗ್ರರು ಡ್ರೋನ್‌ಗಳು, ಬಾಂಬ್‌ಗಳು, ಸ್ಫೋಟಕಗಳು, ಕ್ಷಿಪಣಿಗಳು ಮತ್ತು ಗೆರಿಲ್ಲಾ ಯುದ್ಧ ಸಾಧನಗಳನ್ನು ಬಳಸುತ್ತಿದ್ದಾರೆ. 30 ಜನರ ತಂಡವಾಗಿ ವಿವಿಧ ಪ್ರದೇಶಗಳಲ್ಲಿ ಅಡಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಸೆ.28ರ ವೇಳೆಗೆ ಈ ತಂಡ ಮೈತೆಯಿ ಗ್ರಾಮಗಳ ಮೇಲೆ ದಾಳಿ ನಡೆಸುವ ಮುನ್ಸೂಚನೆ ಸಿಕ್ಕಿದೆ. ದಾಳಿ ಭೀತಿ ಹಿನ್ನೆಲೆಯಲ್ಲಿ ಚುರಚಂದಾಪುರ, ತೆಂಗನೌಪಾಲ್, ಉಖ್ರುಲ್, ಕಾಮ್ಜಾಂಗ್ ಮತ್ತು ಫರ್ಜೌಲ್ ಸೇರಿ ಹಲವು ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿ ದೆ ಎಂದಿದ್ದಾರೆ. ಮಣಿಪುರ ಪೊಲೀಸ್, ಸಿಆರ್‌ಪಿಎಫ್ ಮತ್ತು ಬಿಎಸ್‌ಎಫ್ ಜಂಟಿ ಕಾರ್ಯಾಚರಣೆಯಲ್ಲಿ ಸೆ.12ರಂದು ಚುರಾಚಂದ್ಪುರದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ- ಮದ್ದು ಗುಂಡು ಮತ್ತಿತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ವಿರಾಮ

ಓಡುವ ಲೋಕಕ್ಕೆ ಓದುವ ನಿಲ್ದಾಣ

@vishwavaninews

ವಿಶ್ವವಾಣಿ

ಬೆಂಗಳೂರು
ಭಾನುವಾರ
22|09|2024

ಉಪ್ಪಿನಕಾಯಿಯಲ್ಲಿ ರಸ ಜಾಸ್ತಿ ಇರಬೇಕೋ ಅಥವಾ ಕಡಿಮೆ ಇರಬೇಕೋ? ಇದೊಂದು ಬಹು ಮೌಲ್ಯದ ಪ್ರಶ್ನೆ. ಇಪ್ಪತ್ತನೆಯ ಶತಮಾನದ ಜನರಿಗೆ ಉಪ್ಪಿನ ಕಾಯಿಯಲ್ಲಿ ಹೆಚ್ಚು ರಸ ಇರಬೇಕು, ಅದರಿಂದ ನಾನಾ ರೀತಿಯ ಉಪಯೋಗವಿದೆ ಎಂಬ ಭಾವನೆ ಇದೆ. ಊಟ ಮಾಡಲು ಸಾಂಬಾರು, ಚಟ್ನಿ ಇಲ್ಲದ ದಿನ, ಉಪ್ಪಿನ ಕಾಯಿ ರಸ ಇದ್ದರೆ ಸಾಕು, ತೃಪ್ತಿಯಿಂದ ಉಣ್ಣುತ್ತಿದ್ದರು. ಇಪ್ಪತ್ತೊಂದನೆಯ ಶತಮಾನದ ಆಧುನಿಕ ಜನರಿಗೆ ಉಪ್ಪಿನಕಾಯಿಯ 'ರಸಾಸ್ವಾದನೆ'ಯ ಅಭಿರುಚಿಯೇ ಇಲ್ಲ ಎಂದು ಹಿಂದಿನವರು ಹೇಳುವುದುಂಟು. ಇಂದಿನ ತಲೆಮಾರಿಗೆ ಉಪ್ಪಿನಕಾಯಿ ತಾನೆ, ಅದರಲ್ಲಿ ರಸ ಇದ್ದರೇನು, ನೀರಸವಾದರೇನು ಎಂಬ ಭಾವ : ಎಂತಿದ್ದರೂ ಊಟ ಬಡಿಸುವಾಗ ಎಲೆಯ ತುದಿಯಲ್ಲಿರುವ ಪುಟಾಣಿ ವ್ಯಂಜನ ಅದು ಎಂಬ ನಿರ್ಲಕ್ಷ್ಯ. ಆದರೆ, ಉಪ್ಪಿನಕಾಯಿಯ ರಸಕ್ಕೆ ಬಹಳ ಮೌಲ್ಯವಿದೆ, ಇಂದಿನ ಸಮಾಜವು ಕಳೆದುಕೊಂಡಿರುವ ಹಲವು ಮೌಲ್ಯಗಳ ಜತೆ, ಉಪ್ಪಿನ ಕಾಯಿ ರಸ ಮೌಲ್ಯವೂ ಒಂದು ಎನ್ನುತ್ತಾರೆ ಲೇಖಕಿ. ನಿಮಗೇನನ್ನಿಸಿತು? ಪ್ರತಿಕ್ರಿಯಿಸಿ.

ಉಪ್ಪಿನಕಾಯಿಯ ರಸಾಸ್ವಾದನೆ!

• ಡಾ. ಮಾನಸಾ ಕೀಳಂಬಿ

ಯಾವುದೋ ಕಾರ್ಯಕ್ರಮಕ್ಕೆಂದು ಊರಿನಿಂದ ಬಂದ ಅನೇಕರು ತಂದ ಸಣ್ಣ - ದೊಡ್ಡ ಗಾತ್ರಗಳ, ಹಳದಿ - ಹಸುರು ಬಣ್ಣಗಳ ಲಿಂಬೆಹಣ್ಣುಗಳು ಘಮ ಬೀರುತ್ತಾ, ಆಕರ್ಷಿಸುತ್ತಿದ್ದರೂ, ತಕ್ಷಣಕ್ಕೆ ಖಾಲಿಯಾಗುವುದು ಮತ್ತು ಹೆಚ್ಚು ದಿನ ಬದುಕುವುದು ಅನುಮಾನವಾದ ಕಾರಣ, ತಂಗಳು ಪೆಟ್ಟಿಗೆಗೆ ಸೇರಿಸುವುದು ಅನಿವಾರ್ಯವಾಗಿತ್ತು. ಈ ಮಧ್ಯೆ, ಊರಿಗೆ ಹೋಗಿ ಬರುವ ಅನಿವಾರ್ಯ ಬಂದು, ಆ ಲಿಂಬೆ ಹಣ್ಣುಗಳನ್ನು ಬಳಸುವ ಸಮಯ ಮುಂದೆ ಹೋಗಿ, ತಂಗಳು ಪೆಟ್ಟಿಗೆಯೂ ಕೈ ಚೆಲ್ಲುವ ಲಕ್ಷಣಗಳು ಕಂಡುಬಂದವು. ಹಾಗಾಗಿ, ತಣ್ಣಗೆ ಕೂತೂ, ಕೂತೂ ಮರಗಟ್ಟಿಹೋಗಿದ್ದ ಅವುಗಳಿಗೆ ಒಂದು ಗತಿ ಕಾಣಿಸದಿದ್ದರೆ ಅವುಗಳ ಜೀವನ ವ್ಯರ್ಥವಾಗುತ್ತದೆ ಎನ್ನುವ ಕಾರಣಕ್ಕೆ ಉಪ್ಪಿನಕಾಯಿ ಮಾಡುವುದೆಂದು ನಿರ್ಧರಿಸಿಬಿಟ್ಟೆ.

'ಉಪ್ಪಿನಕಾಯಿ ಎಂದರೆ ಅಪ್ಪೆಮಿಡಿ' ಎನ್ನುವ ಭಾವನೆ ಇರುವ ನನಗೆ ಈ ಉಪ್ಪಿನಕಾಯಿ ಅಷ್ಟೇನೂ ಪ್ರಿಯವಲ್ಲದಿದ್ದರೂ, ಯಾವುದೇ ಆಹಾರ ಪದಾರ್ಥವನ್ನು ವ್ಯರ್ಥ ಮಾಡಬಾರದು ಎನ್ನುವ ನನ್ನ ಸಿದ್ಧಾಂತದಿಂದಾಗಿ ಈ ನಿರ್ಧಾರಕ್ಕೆ ಬಂದಿದ್ದೆ. ಆದರೆ ಫ್ರಿಜ್ಜಲ್ಲಿ ಕೆಲವು ದಿನ ಇಟ್ಟ ಲಿಂಬೆಕಾಯಿಗಳನ್ನು ಉಪ್ಪಿನಕಾಯಿ ಮಾಡಿದರೆ ಬೇಗನೆ ಹಾಳಾಗುವುದು ಎಂಬ ಅರಿವಿದ್ದ ನಾನು, ಫೇಸ್ಬುಕ್ ಸ್ನೇಹಿತರ ಸಹಾಯ ಪಡೆದು ಬಿಸಿ ಉಪ್ಪಿನಕಾಯಿ ಮಾಡಿದೆ. ಅದರ ಫೋಟೋ ತೆಗೆದು ಫೇಸ್ ಬುಕ್ಕಿಗೆ ಹಾಕಿದೆ. ಗಂಭೀರ ಬರಹಗಳನ್ನು ಮೂಸಿಯೂ ನೋಡದ ಅನೇಕರನ್ನು ಅಡುಗೆಯ ಘಮ ಬೇಗ ಆಕರ್ಷಿಸುವುದರಿಂದ, ನಾನಾ ನಮೂನೆಯ ಪ್ರತಿಕ್ರಿಯೆಗಳು ಬರುವುದು ಅಲ್ಲಿ ಸಾಮಾನ್ಯ ವಿದ್ಯಮಾನ. ಹಾಗೆ ಬಂದ ಸಾಲು ಸಾಲು ಕಮೆಂಟುಗಳ ಮಧ್ಯೆ ಹಿರಿಯರೊಬ್ಬರ 'ರಸವೇ ಇಲ್ಲದ ಉಪ್ಪಿನಕಾಯಿ' ಎಂಬ ಕಮೆಂಟ್ ನನ್ನ ಗಮನ ಸೆಳೆಯಿತು.

ಆಗಲೇ ನೋಡಿ, ನನ್ನ ಮನಸ್ಸು ನೂರು ತರಹದ ಯೋಚನೆಗಳನ್ನು ಮಾಡಲು ಶುರುವಿಟ್ಟುಕೊಂಡದ್ದು! ಅಲ್ಲಾ, ಈ ಕಾಲದಲ್ಲಿ ಉಪ್ಪಿನಕಾಯಿಯಂತಹ ರಗಳೆಯ ಅಡುಗೆಗಳನ್ನು ಮನೆಯಲ್ಲಿ ಮಾಡುವವರ ಸಂಖ್ಯೆಯೇ ಕಡಿಮೆ. ಹಾಗಿರುವಾಗ ನಾನೇನೋ ಕಷ್ಟಪಟ್ಟು ಮಾಡಿದ್ದೇನೆ, ಇವರು ಹೀಗಂದುಬಿಟ್ಟರೇ? ನೋಡಲು ಇಷ್ಟು ಚೆನ್ನಾಗಿದೆ, ಬೆರಳ ತುದಿಯಲ್ಲಿ ರಸವನ್ನು ಎತ್ತಿ ನಾಲಿಗೆಯ ತುದಿಗೆ ತಾಗಿಸಿದರೆ ಆಹಾ! ಲೊಟ್ಟೆ ಹೊಡೆದು ಚಪ್ಪರಿಸುವಷ್ಟು ರುಚಿಯಾಗಿದೆ, ಇಂಗು ಜೀರಿಗೆ, ಸಾಸಿವೆ, ಮೆಂತ್ಯೆಗಳ ಮಸಾಲೆಯ ಘಮ, ಹಸಿವನ್ನು ಹೆಚ್ಚಿಸುವಷ್ಟು ಮೂಗಿಗೆ ಆಡರುತ್ತಿದೆ, ಇಷ್ಟಾದರೂ ನೀರಾದ ರಸ ಇಲ್ಲದಿರುವುದು ಒಂದು ಕೊರತೆಯೇ? ನಿಂಬೆಯ ಹೋಳು ಮತ್ತು ಚಟ್ನಿಯಷ್ಟು ಗಟ್ಟಿಯಾದ ರಸ ಸಾಕಲ್ಲವೇ? ಎಲ್ಲೋ ಅಪರೂಪಕ್ಕೆ ಮೊಸರನ್ನದೊಂದಿಗೆ ತಿನ್ನುವ ಉಪ್ಪಿನಕಾಯಿಗೆ ನೀರಾದ ರಸ ಏಕೆ ಬೇಕು? ಹೀಗೆ ಒಂದರಮೇಲೊಂದರಂತೆ ಪ್ರಶ್ನೆಗಳು ಮೂಡಿ, ತಲೆಯನ್ನು ಉಪ್ಪಿನಕಾಯಿ, ಅಲ್ಲಲ್ಲ ಚಿತ್ರಾನ್ನ ಮಾಡಿದ್ದವು.

ನೀರಾದ ರಸ ಬೇಕು!

ಒಂದು ಕಮೆಂಟಿಗೆ ಇಷ್ಟೆಲ್ಲ ತಲೆಕೆಡಿಸಿಕೊಳ್ಳಬೇಕೇ ಎನ್ನುವ ಪ್ರಶ್ನೆ ನಿಮ್ಮದಾಗಿದ್ದೀತು. ಫೇಸ್ಬುಕ್ ಎಂದರೆ ಹೀಗೆ, ಯಾರ್ಯಾರೋ ತಮಗೆ ಬೇಕಾದಂತೆ ಹೇಳುತ್ತಾರೆ, ಅದನ್ನೆಲ್ಲ ಮನಸ್ಸಿಗೆ ತೆಗೆದುಕೊಳ್ಳಬಾರದು, ಸುಮ್ಮನೆ ಟೈಮ್ ಪಾಸ್ ಮಾಡಿ ಮುಂದಕ್ಕೆ ಹೋಗಬೇಕು... ಇತ್ಯಾದಿ ಸಲಹೆಗಳನ್ನು ನೀವು ನೀಡಬಹುದು. ಆದರೆ, ಅದು ನನ್ನ ಸ್ವಭಾವಕ್ಕೆ ವಿರುದ್ಧವಾದದ್ದು. ಆ ಹಿರಿಯರ ಅನುಭವದ ಮಾತುಗಳಲ್ಲಿ ಏನೋ ವಿಷಯ ಇರಬೇಕೆಂದು ನಾನು ಸದಾ ಯೋಚಿಸುತ್ತೇನೆ. ಅದರಿಂದ ಇಷ್ಟೆಲ್ಲಾ ಯೋಚನೆ ಮಾಡುವಂತಾಯ್ತು. ಯೋಚನೆಯನ್ನೇನೋ ಮಾಡಿದೆ. ಆದರೆ, ಅದಕ್ಕೊಂದು ತಾರ್ಕಿಕ ಉತ್ತರ ಬೇಕಲ್ಲವೇ? ಹಾಗಾಗಿ ಅದೇ ಧ್ಯಾನದಲ್ಲಿದ್ದೆ. ಊಟಕ್ಕೆ ಕುಳಿತಾಗ ಉಪ್ಪಿನಕಾಯಿಯನ್ನು ನೋಡಿದ ಅಮ್ಮ, 'ನೀರಾದ ರಸ'ದ ಬಗ್ಗೆ ಮಾತನಾಡಿದಾಗ ನನ್ನ ಯೋಚನೆ ಮತ್ತಷ್ಟು ತೀವ್ರವಾಯಿತು.

ಉಪ್ಪಿನಕಾಯಿಯ ರಸದ ಕುರಿತೇ ಮಾತಿಗಿಳಿದೆ. ಆ ಮಾತಿನಲ್ಲಿ ಉಪ್ಪಿನಕಾಯಿ ರಸದ ಹತ್ತಾರು ಉಪಯೋಗಗಳ ಬಗ್ಗೆ ಅವರು ಮಾಹಿತಿ ನೀಡುತ್ತಾ ಹೋದರು. ಕೊನೆಯಲ್ಲಿ 'ಈಗ ನೀರಾದ ರಸದ ಉಪಯೋಗವಿಲ್ಲ ಬಿಡು' ಎಂದರು.

ನಮ್ಮ ಸಂಭಾಷಣೆಯ ಸಾರಾಂಶವಿಷ್ಟೇ. ಹಿಂದಿನ ಕಾಲದಲ್ಲಿ ಉಪ್ಪಿನಕಾಯಿಯ ರಸ ಬಹೂಪಯೋಗಿ ಆಗಿತ್ತು. ಅಂದು ಅನ್ನದೊಂದಿಗೆ ಉಪ್ಪಿನಕಾಯಿಯ ರಸ ಮತ್ತು ತೆಂಗಿನೆಣ್ಣೆಯೇ ಮೃಷ್ಟಾನ್ನವಾಗಿತ್ತು. ತೀರಾ ಬಡವರಿಗೆ ಉಪ್ಪಿನಕಾಯಿಯನ್ನು ತಯಾರಿಸುವುದು ಸಹ ಕೈಗೆಟುಕದ ವಿಷಯವಾಗಿತ್ತು. ಹಾಗಾಗಿ ಉಳ್ಳವರ ಮನೆಯಲ್ಲಿ ಉಪ್ಪಿನಕಾಯಿಯನ್ನು ಕೇಳಿ ತರುತ್ತಿದ್ದುದನ್ನು ನಾನೂ ಬಲ್ಲೆ. ಹಾಗೆ ಉಪ್ಪಿನಕಾಯಿಯ ರಸ ಸಿಕ್ಕರೆ ಕೆಲವು ದಿನಗಳ ಪದಾರ್ಥದ ಚಿಂತೆ ಕಳೆದಂತೆ ಅವರಿಗೆ. ನನ್ನ ಅಮ್ಮ ಅನೇಕರಿಗೆ ಉಪ್ಪಿನಕಾಯಿ ರಸವನ್ನು ಕೊಡುತ್ತಿದ್ದರು. ಕೆಲಸ ಮುಗಿಸಿ ಮನೆಗೆ ಹೋಗುವಾಗ ಹಿಂದಿನ ಬಾಗಿಲಲ್ಲಿ ಬಂದು ಅಮ್ಮನನ್ನು ಕರೆದು, ಉಪ್ಪಿನಕಾಯಿ ರಸವನ್ನು ಕೇಳಿ ಪಡೆದುಕೊಳ್ಳುತ್ತಿದ್ದ ಮನೆ ಕೆಲಸದವರನ್ನು ನೋಡಿದ್ದೇನೆ. ಹಾಗೆ ಈ ರಸ ಸಿಕ್ಕ ತಕ್ಷಣದಲ್ಲಿ ಅವರ ಮುಖದಲ್ಲಿ ಕಾಣುತ್ತಿದ್ದ ಸಂಭ್ರಮ, ತೃಪ್ತಿ ಈಗಲೂ ಕಣ್ಣಿಗೆ ಕಟ್ಟಿದಂತಿವೆ.

ಕನ್ನಡ ಚಿತ್ರರಂಗದ ಪ್ರಖ್ಯಾತ ಮತ್ತು ಯಶಸ್ವಿ ಸಿನಿಮಾ ಭೂತಯ್ಯನ ಮಗ ಅಯ್ಯು. ಊರಿನ ಜನರೆಲ್ಲ ಭೂತಯ್ಯನ ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಕೊಂಡೊಯ್ಯುತ್ತಿದ್ದರೆ, ಒಬ್ಬ ಮಾತ್ರ ಜಾಡಿಯಿಂದ ಉಪ್ಪಿನಕಾಯಿಯನ್ನು ತೆಗೆದುಕೊಂಡು ತಿನ್ನುತ್ತಾ, ಸ್ವರ್ಗ ಸುಖವನ್ನು ಅನುಭವಿಸುವ ದೃಶ್ಯವನ್ನು ಯಾರಾದರೂ ಮರೆಯಲು ಸಾಧ್ಯವೇ? ಆ ಕಾಲದಲ್ಲಿ ಹೆಚ್ಚಿನವರು ಭವಿಷ್ಯದ ಬಗೆಗೆ ಅತ್ಯಂತ ಕಾಳಜಿ ಉಳ್ಳವರಾಗಿದ್ದರು. ಅದಕ್ಕಾಗಿ ದುಡಿಮೆಯ ಲಾಭವನ್ನು ಬಳಸುವುದಕ್ಕಿಂತ ಹೆಚ್ಚು, ಉಳಿತಾಯ ಮಾಡಲು ಬಯಸುತ್ತಿದ್ದರು. ದೋಸೆ, ಇಡ್ಲಿ, ರೊಟ್ಟಿಗಳಿಗೆ ಚಟ್ನಿ ಮಾಡುವ ಸಂಪ್ರದಾಯ ಅಪರೂಪವಾಗಿತ್ತು. ಉಪ್ಪಿನಕಾಯಿ ರಸ, ಬೆಲ್ಲ, ತುಪ್ಪ, ಬೆಣ್ಣೆ ಇತ್ಯಾದಿಗಳಲ್ಲಿ ಮುಗಿಸಿಬಿಡುತ್ತಿದ್ದರು. ಇನ್ನು ಕೆಲವರಿಗೆ ಎಷ್ಟು ಬಗೆಯ ಪದಾರ್ಥಗಳಿದ್ದರೂ, ಅನ್ನದ ಜೊತೆಗೆ ಉಪ್ಪಿನಕಾಯಿಯ ರಸ ಮತ್ತು ಎಣ್ಣೆಯನ್ನು ಮಿಶ್ರ ಮಾಡಿ ತಿನ್ನುವುದು ಮತ್ತು ದೋಸೆ, ಇಡ್ಲಿಗಳ ಜೊತೆ ತಿನ್ನುವುದೊಂದು ಪ್ರೀತಿಯ ಅಭ್ಯಾಸ. ಮದುವೆಯಂತಹ ಸಮಾರಂಭಗಳಲ್ಲೂ ಇಡ್ಲಿಯ ಜೊತೆಗೆ ಉಪ್ಪಿನಕಾಯಿ ರಸವನ್ನು ಬಡಿಸುತ್ತಿದ್ದರು ಎಂದರೆ, ಅದರ ಬಗೆಗಿನ ಪ್ರೀತಿಯನ್ನು ಅರ್ಥಮಾಡಿಕೊಳ್ಳಬಹುದು. ಈ ಎಲ್ಲ ಕಾರಣದಿಂದ, ಒಂದು ಕಾಲದಲ್ಲಿ ಉಪ್ಪಿನಕಾಯಿ ರಸಕ್ಕೆ ಅತ್ಯಂತ ಗೌರವದ, ಮಹತ್ವದ ಸ್ಥಾನವಿತ್ತು.

ಯುಟ್ಯೂಬ್ ಲೋಕ

ಬದಲಾದ ಕಾಲಘಟ್ಟವನ್ನು ಗಮನಿಸಿ. ಈಗ ಎಲ್ಲರೂ ತರಕಾರಿಗಳನ್ನು ಕೊಂಡು, ಎರಡು ಬಗೆಯ ಅಡುಗೆ ಮಾಡಿ ಊಟ ಮಾಡುತ್ತಾರೆ. ಅನ್ನಕ್ಕೆ ಉಪ್ಪಿನಕಾಯಿಯ ಅಗತ್ಯವಿಲ್ಲ. ಇನ್ನು, ದೋಸೆ, ಇಡ್ಲಿ, ರೊಟ್ಟಿ ಮುಂತಾದವುಗಳಿಗೆ ಚಟ್ನಿ, ಪಲ್ಯ, ಸಾಗು, ಗ್ರೇವಿಗಳು ಕಡ್ಡಾಯ. ಯೂಟ್ಯೂಬ್ ಎಂಬ ಮಾಯಾಲೋಕದಲ್ಲಿ ನಾನಾ ನಮೂನೆಯ ಅಡುಗೆಯ ಛಾನೆಲ್‌ಗಳು ಬಗೆಬಗೆಯ ಅಡುಗೆ ಮಾಡುವುದನ್ನು ತೋರಿಸಿಕೊಡುತ್ತಾ, ಆಸಕ್ತಿ ಮತ್ತು ಬಿಡುವಿದ್ದವರಿಗೆ ಹೊಸದಾರಿಗಳನ್ನು ತೋರಿವೆ. ಬೇರೆಬೇರೆ ಪ್ರಾಂತ್ಯಗಳ, ದೇಶಗಳ ಚಿತ್ರವಿಚಿತ್ರ ಅಡುಗೆಗಳು ನಮ್ಮ ಅಡುಗೆಮನೆಗೂ ನುಗ್ಗಿ, ನಮ್ಮ ಸಾಂಪ್ರದಾಯಿಕ ಅಡುಗೆಗಳನ್ನೇ ಹೊರಹಾಕಿವೆ. ದೇಶೀಯ ತಿನಿಸುಗಳನ್ನು ಮೆಚ್ಚುವವರು 'ಅನಾಗರಿಕರಂತೆ' ಕಂಡು, ಅನಿವಾರ್ಯವೆಂಬಂತೆ ಈ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದಾರೆ. ಇದನ್ನೆಲ್ಲ ನೋಡುವಾಗ 'ಮನುಷ್ಯ ಕೇವಲ ತಿನ್ನುವುದಕ್ಕೇ ಹುಟ್ಟಿದ್ದಾನೇನೋ' ಎನಿಸುವುದು ಸುಳ್ಳಲ್ಲ. ಈ ಕ್ಷಣ ಮಾತ್ರ ಸತ್ಯ, ಎಂಜಾಯ್ ಎನ್ನುವ ಧಿಡೀರ್ ಉಪ್ಪಿನಕಾಯಿಯಂತಹ ಸಿದ್ಧಾಂತ ಗಟ್ಟಿಯಾಗಿ ನೆಲೆಯೂರುತ್ತಿದೆ. ಹೊಟ್ಟೆ - ಬಟ್ಟೆಯನ್ನು ಕಟ್ಟಿ, ಭವಿಷ್ಯಕ್ಕಾಗಿ ಕೂಡಿಡುವ ಮನಸ್ಥಿತಿ ದೂರವಾಗಿದೆ. ಹಾಗಾಗಿ ತಮಗೆ ಬೇಕಾದುದನ್ನು ಮಾಡಿ ತಿನ್ನುತ್ತಾರೆ. ಅಡುಗೆ ಮಾಡಲು ಸಮಯವಿಲ್ಲ ಎನ್ನುವಾಗಲೂ, ಕಲ್ಪನೆಯ ಹತ್ತಾರು ಅಡುಗೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಅಂಗಡಿಯಿಂದ ತಂದ ಪೊಟ್ಟಣವನ್ನು ಕುದಿಯುವ ನೀರಿನಲ್ಲಿ ಮುಳುಗಿಸಿಟ್ಟರೆ, ಬಿಸಿಬಿಸಿಯಾದ ಬಿಸಿಬೇಳೆ ಬಾತ್, ವಾಂಗಿಬಾತ್, ಉಪ್ಪಿಟ್ಟು, ತಿಳಿಸಾರು, ಇತ್ಯಾದಿಗಳು ಸಿದ್ಧವಾಗುತ್ತವೆ. ಅದೂ ಕಷ್ಟವೆನಿಸಿದರೆ, ನಮ್ಮ ಬೆರಳ ತುದಿಯ ಆದೇಶಕ್ಕೆ ಜೀವ ಪಣಕ್ಕಿಟ್ಟು, ಕಡಿಮೆ ಸಮಯದಲ್ಲಿ ನಮ್ಮ ಮನೆಗೆ ಆಹಾರ ಸರಬರಾಜು ಮಾಡಲು ವಿವಿಧ ಕಂಪೆನಿಗಳು ಪೈಪೋಟಿಗೆ ಇಳಿದಿವೆ. ಹೀಗಿರುವಾಗ ಉಪ್ಪಿನಕಾಯಿಯ ರಸ ತನ್ನ ಮಹತ್ವ ಕಳೆದುಕೊಳ್ಳುವುದರಲ್ಲಿ ವಿಶೇಷವೇನಿಲ್ಲ.

ಹೀಗಾದುದು ಸರಿಯೇ ಎಂದರೆ ಉತ್ತರವಿಲ್ಲ. ಬದಲಾದ ಕಾಲದ ಅಗತ್ಯಗಳಿಗೆ, ಅನಿವಾರ್ಯಗಳಿಗೆ ಹೊಂದಿಕೊಂಡು ಬದುಕಿದರೆ ಮಾತ್ರ ಕಾಲಚಕ್ರದ ಜೊತೆ ಸಾಗುತ್ತೇವೆ. ಆದರೆ, ಈ ಓಟದಲ್ಲಿ ಯಾವ್ಯಾವ ಸುಖಗಳನ್ನು ಕಳೆದುಕೊಳ್ಳುತ್ತೇವೋ, ಬದಲಾವಣೆಯ ಈ ಪರ್ವದಲ್ಲಿ ಯಾವ್ಯಾವ ವಸ್ತುಗಳು ಮಹತ್ವ ಕಳೆದುಕೊಂಡು ಮೂಲೆ ಸೇರುತ್ತವೋ ಗೊತ್ತಿಲ್ಲ. ಈ ನಡುವಿನಲ್ಲೇ ಬದುಕಿನ ಸಂಭ್ರಮಕ್ಕೆ, ಮಾನಸಿಕ ಸ್ವಾಸ್ಥ್ಯಕ್ಕೆ ಕಾರಣವಾಗುವ ಸಂಬಂಧಗಳು ಮಹತ್ವ ಕಳೆದುಕೊಳ್ಳದಂತೆ ಕಾಪಾಡಿಕೊಳ್ಳಬೇಕಿದೆ.

ಅಂದಹಾಗೆ, ಉಪ್ಪಿನಕಾಯಿ 'ರಸ'ದ ಮಹತ್ವ ಕಡಿಮೆಯಾದರೂ, ಉಪ್ಪಿನಕಾಯಿಯ ಮಹತ್ವ ಕಡಿಮೆಯಾಗದಿರುವುದು ವಿಶೇಷ. ಮೊನ್ನೆಮೊನ್ನೆಯಷ್ಟೇ ತಮಿಳುನಾಡಿನ ಗ್ರಾಹಕರ ನ್ಯಾಯಾಲಯ, ಊಟದ ಪಾರ್ಸೆಲ್ ಜೊತೆಗೆ ಉಪ್ಪಿನಕಾಯಿಯನ್ನು ಕಳಿಸಲು ಮರೆತ ಹೋಟೆಲ್ ಮಾಲೀಕರಿಗೆ, ಮೂವತ್ತೈದು ಸಾವಿರ ದಂಡ ವಿಧಿಸಿದ ಸುದ್ದಿ ಬಂದಿದೆ. ಸಿಕ್ಕಸಿಕ್ಕದ್ದರಲ್ಲೆಲ್ಲ ಉಪ್ಪಿನಕಾಯಿ ತಯಾರಿಸಿ, ಮಾರಿ ಬದುಕನ್ನು ಕಟ್ಟಿಕೊಂಡು, ದೇಶದ ಆರ್ಥಿಕತೆಗೆ ತಮ್ಮದೇ ಕೊಡುಗೆ ನೀಡುತ್ತಿರುವವರು, ಉಪ್ಪಿನಕಾಯಿಯ ಮಹತ್ವ ಕಡಿಮೆಯಾಗದಂತೆ ನೋಡಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಏನೇ ಆದರೂ, ಊಟದ ರುಚಿ ಹೆಚ್ಚಿಸುವ ಉಪ್ಪಿನಕಾಯಿ ಚಿರಾಯುವಾಗಲಿ ಎಂದೇ ನನ್ನ ಹಾರೈಕೆ.

(ಪ್ರತಿಕ್ರಿಯಿಸಿ: viramapost@gmail.com)

ಬಂಗಾರ ಬಣ್ಣದ ನಾಗ ಬಾಯ್ದೆರೆದು ನಿಂತಾಗ!

• ಗುರು ಸಕಲಮಾ ಜ್ಯೋತಿ ಪಟ್ಟಾಭಿರಾಮ್

ಒಂದು ಬೇಸಿಗೆಯ ಸಮಯದಲ್ಲಿ ಕಾಲೇಜಿಗೆ ರಜೆ ಇತ್ತು. ಹಾಗಾಗಿ ನನಗೆ ಹದಿನೈದು ದಿನಗಳ ಬಿಡುವಿತ್ತು. ಈ ಸಮಯವನ್ನು ಆಧ್ಯಾತ್ಮ ಸಾಧನೆಗಾಗಿ ಸದುಪಯೋಗ ಪಡಿಸಿಕೊಳ್ಳಲು ನಿರ್ಧರಿಸಿದ್ದೆ. ನಮ್ಮ ಮಂತ್ರೋಪದೇಶದ ಸಮಯದಲ್ಲಿ ಗುರುದೇವ ಸ್ವಾಮಿ ರಾಮ ಅವರು 'ಶ್ರೀವಿದ್ಯಾ ಸಮಯಾಚಾರ ಪರಂಪರೆ'ಯ ಸಾಧನಾ ಮಾರ್ಗಗಳಲ್ಲಿ ಪತಂಜಲಿ ಯೋಗಸೂತ್ರಗಳನ್ನು ಹೊರತುಪಡಿಸಿದರೆ ಸೌಂದರ್ಯ ಲಹರಿಯೇ ಅತ್ಯಂತ ಪ್ರಮುಖವಾದ ಪಠ್ಯ' ಎಂದು ಹೇಳಿದ್ದು ನನಗೆ ನೆನಪಿತ್ತು. ಬಾಬಾ ಸೌಂದರ್ಯ ಲಹರಿಯ ಮೊದಲ ಐದು ಶ್ಲೋಕಗಳನ್ನು ಮಂತ್ರಗಳಾಗಿ ನೀಡಿ ಪ್ರತಿದಿನ ಪಠಿಸಲು ಹೇಳಿದ್ದರು. ಅವು ಅತ್ಯಂತ ಶಕ್ತಿಯುತವಾದ ಮಂತ್ರಗಳು ಎಂಬುದನ್ನೂ ಹೇಳಿದ್ದರು. ಸೌಂದರ್ಯ ಲಹರಿಯ ಉಳಿದ ಭಾಗಗಳನ್ನೂ ನಿತ್ಯ ಓದಲು ಹೇಳಿದ್ದರು. ಹಾಗಾಗಿ ನಾನು ಆ ಪಠ್ಯವನ್ನು, ಅದರ ಹಲವು ವ್ಯಾಖ್ಯಾನಗಳನ್ನೂ ಸಾಕಷ್ಟು ಬಾರಿ ಅಧ್ಯಯನ ಮಾಡಿದ್ದೆ.

ಹೀಗಾಗಿ ಈ ಹದಿನೈದು ದಿನಗಳಲ್ಲಿ ಸೌಂದರ್ಯ ಲಹರಿಯ ಮಂತ್ರವೊಂದರ ಜಪಾನುಷ್ಠಾನ ಕೈಗೊಳ್ಳಲು ನಿರ್ಧರಿಸಿದೆ. ಸೌಂದರ್ಯ ಲಹರಿಯ ಮಂತ್ರಗಳ ಅನುಷ್ಠಾನಕ್ಕೆ ಪರಂಪರೆಯಲ್ಲಿ ಅತ್ಯಂತ ಮಹತ್ವವಿದೆ, ಯಾಕೆಂದರೆ ಸೌಂದರ್ಯ ಲಹರಿಯ ಮಂತ್ರಗಳು ಖಚಿತವಾಗಿ ಸಿದ್ಧಿದಾಯಕವೂ, ಫಲಪ್ರದಾಯಕವೂ ಆಗಿವೆ. ಸೌಂದರ್ಯ ಲಹರಿಯ ಪುಸ್ತಕದಲ್ಲೇ ಮಂತ್ರ ಫಲಗಳನ್ನೂ ಬರೆಯಲಾಗಿದೆ. ಅನುಷ್ಠಾನ ಮಾಡಿಯೂ ನಿಗದಿತ ಫಲ ಬರಲಿಲ್ಲವೆಂದಾದರೆ ಮಂತ್ರದಲ್ಲೇನೋ ಕೊರತೆ ಇದೆ ಎಂದಲ್ಲ, ಬದಲಾಗಿ ಸಾಧಕನ ಸಾಧನೆಯಲ್ಲೇ ಏನೋ ಕೊರತೆ ಇದೆ ಎಂದರ್ಥ! ಶ್ರದ್ಧೆಯ ಕೊರತೆ, ಏಕಾಗ್ರತೆಯ ಅಲಭ್ಯತೆ, ಮನಃಶುದ್ಧಿಯ ಇತಿಮಿತಿ ಅಥವಾ ಶಿಸ್ತಿನಲ್ಲಿ ಏರುಪೇರು, ಬೇಜವಾಬ್ದಾರಿತನ ಹೀಗೆ ಏನೂ ಇರಬಹುದು. ಹೀಗಾಗಿ ಕೆಲವೊಮ್ಮೆ ಸರಿಯಾದ ಫಲಪ್ರಾಪ್ತಿಯಾಗದೇ ಹೋಗಬಹುದು. ಆಗ ಸಾಧಕ ಏನು ಮಾಡಬೇಕು ಎಂದರೆ ಮತ್ತೊಮ್ಮೆ ಇಡೀ ಅನುಷ್ಠಾನವನ್ನು ಪುನರಾವರ್ತಿಸಬೇಕು. ಪೂರ್ಣ ಫಲ ಪ್ರಾಪ್ತಿಯಾಗುವವರೆಗೂ ಶಿಸ್ತು ಮತ್ತು ಛಲ ಹಿಡಿದು ಅನುಷ್ಠಾನ ಪೂರೈಸಬೇಕು. ಹಾಗೆ ಮಾಡಿದ್ದೇ ಹೌದಾದಲ್ಲಿ ಸಂಪೂರ್ಣ ಫಲ ಪ್ರಾಪ್ತಿ ನಿಶ್ಚಿತ!

ಇಂದು ಲೋಕಾರ್ಪಣೆಗೊಳ್ಳುತ್ತಿರುವ ಪುಸ್ತಕ 'ಹಿಮಾಲಯ ಋಷಿಗಳ ದಿವ್ಯ ಸಂದೇಶಗಳು' ಪುಸ್ತಕದ ಆಯ್ದ ಭಾಗ. ಇದನ್ನು ರಚಿಸಿದ ಗುರು ಸಕಲಮಾ ಜ್ಯೋತಿ ಪಟ್ಟಾಭಿರಾಮ್ ಅವರು ಸ್ವಾಮಿ ರಾಮ ಅವರ ಶಿಷ್ಯೆ.

ಹಾಗೆ ನಾನು ಯಾವ ಮಂತ್ರದ ಅನುಷ್ಠಾನ ಕೈಗೊಳ್ಳಬೇಕೆಂದು ಫಲ ಪ್ರಾಪ್ತಿ ವಿಭಾಗದಲ್ಲಿ ನೋಡುತ್ತಿದ್ದೆ. ನನ್ನ ಕಣ್ಣು ಅಪ್ರಯತ್ನ ಪೂರ್ವಕವಾಗಿ 'ಮೋಕ್ಷ ಪ್ರಾಪ್ತಿ'ಯ ಖಚಿತಫಲ ನೀಡುವ ಮಂತ್ರದ ಮೇಲೆ ನಿಂತಿತು. ಅದು ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾ ವಿರಚನ..... ಎಂಬ ಮಂತ್ರ. ಅದನ್ನೇ ಅನುಷ್ಠಾನ ಮಾಡಲು ನಿರ್ಧರಿಸಿದೆ.

ಮನೆಯಲ್ಲಿ ಸಾಕಷ್ಟು ಅಡಚಣೆಗಳು ಇದ್ದುದರಿಂದ ಮನೆಯ ಹೊರಗಡೆ ಒಂದು ಜಾಗದಲ್ಲಿ ಈ ಅನುಷ್ಠಾನ ಕೈಗೊಳ್ಳಲು ನಿರ್ಧರಿಸಿದೆ. ಮಿತ್ರರೊಬ್ಬರು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ತೋಟದ ಮಧ್ಯೆ ಪುಟ್ಟ ತೋಟದ ಮನೆಯೊಂದನ್ನು ನಿರ್ಮಿಸಿದ್ದರು. ಅಲ್ಲಿ ಬಹು ಎತ್ತರದಲ್ಲಿ ಬೃಹತ್ ನೀರಿನ ಟ್ಯಾಂಕೊಂದು ಇತ್ತು. ಸಾಕಷ್ಟು ಹಣ್ಣು ತರಕಾರಿಗಳ ಗಿಡ ಬಳ್ಳಿಗಳನ್ನೂ ಬೆಳೆಸಿದ್ದರು. ತೋಟ ನೋಡಿಕೊಳ್ಳಲು ಚಿಕ್ಕ ಕುಟುಂಬವೊಂದು ಅಲ್ಲಿ ವಾಸವಾಗಿತ್ತು. ತೀರ ಅತ್ಯಗತ್ಯ ವಸ್ತುಗಳು ಮಾತ್ರ ಅಲ್ಲಿ ಲಭ್ಯವಿದ್ದವು.

ನಾನು ವಾಸವಿದ್ದ ಚಿಕ್ಕ ಕೋಣೆಯಿಂದ ನೂರು ಹೆಜ್ಜೆಗಳ ದೂರದಲ್ಲಿ ಎತ್ತರದಲ್ಲಿ ಆ ದೊಡ್ಡ ನೀರಿನ ಟ್ಯಾಂಕ್ ಇತ್ತು. ಅದರ ನೆರಳಿನಲ್ಲಿ ಕೆಳಗಡೆ ಸಿಮೆಂಟಿನ ನೆಲ, ತಂಪಾಗಿತ್ತು. ಅಲ್ಲಿ ಚಾಪೆ ಹಾಸಿ ಕುಳಿತು ನನ್ನ ಮೊದಲ ದಿನದ ಜಪಾನುಷ್ಠಾನ ಆರಂಭ ಮಾಡಿದೆ. ನಾಲ್ಕು ಸಾಲಿನ ದೀರ್ಘ ಮಂತ್ರವದು. ಅದನ್ನು ಪ್ರತಿನಿತ್ಯ ಕನಿಷ್ಠ ಸಾವಿರ ಸಲ ಜಪ, ಶಾಸ್ತ್ರಗಳಲ್ಲಿ ಹೇಳಿರುವ ರೀತಿಯಲ್ಲಿ ಮಾಡುತ್ತಿದ್ದೆ. ಸುದೀರ್ಘ ಮಂತ್ರವಾದ್ದರಿಂದ ಜಪ ಮನೋಗತವಾಗುವುದು ಸುಲಭವೇನೂ ಇರಲಿಲ್ಲ. ಎರಡು ಮೂರು ದಿನಗಳ ನಿರಂತರ ತಪನೆಯ ನಂತರ ನಾಲ್ಕನೆಯ ದಿನದ ಹೊತ್ತಿಗೆ ಮಂತ್ರ ಮನೋಗತವಾಗಿತ್ತು. ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಹೀಗೆ ಮೂರೂ ಹೊತ್ತು ಅನುಷ್ಠಾನ ನಡೆಯುತ್ತಿತ್ತು.

ಕೆಲವೊಮ್ಮೆ ಮನಸ್ಸು ಹಟ ಹೂಡುತ್ತಿತ್ತು. ದಣಿದುಬಿಡುತ್ತಿದ್ದೆ. ಆಗ ಏಕಾಗ್ರತೆಯೂ ಕಡಿಮೆಯಾಗುತ್ತಿತ್ತು. ಮತ್ತೆ ಎಚ್ಚೆತ್ತುಕೊಂಡು, ಏಕಾಗ್ರತೆಯನ್ನು ಒಗ್ಗೂಡಿಸಿಕೊಂಡು ಮುಂದುವರೆಯುತ್ತಿದ್ದೆ. ಒಟ್ಟಿನಲ್ಲಿ ಎಲ್ಲ ಸವಾಲಿನ ನಡುವೆಯೂ ಅನುಷ್ಠಾನ ನಿಲ್ಲದೇ ಮುಂದುವರೆದಿತ್ತು.

ಐದಾರು ದಿನಗಳು ಕಳೆಯುತ್ತಿದ್ದಂತೆ ಮನಸ್ಸಿನಲ್ಲಿ ಅನುಮಾನಗಳು ಮೊಳೆಯತೊಡಗಿದವು. ಅನುಷ್ಠಾನ ಸರಿಯಾಗಿ ಆಗುತ್ತಿದೆಯೋ ಇಲ್ಲವೋ! ಹೀಗೆ..

ಆರರಿಂದ ಎಂಟು ಗಂಟೆ ಕುಳಿತು ಅನುಷ್ಠಾನ ಮಾಡುತ್ತಿದ್ದೆ. ಉಳಿದಂತೆ ಒಬ್ಬಳೇ ಇರುತ್ತಿದ್ದೆ. ಆಗ ಮನೆಯಲ್ಲಿ ಅತ್ತೆ ಮತ್ತು ಗಂಡನ ಆರೈಕೆಯಲ್ಲಿ ಬಿಟ್ಟು ಬಂದಿದ್ದ ಕೇವಲ ಮೂರು ವರ್ಷದ ನನ್ನ ಮಗಳ ಮುದ್ದು ಮುಖ ನೆನಪಾಗಿ ಅಳು



ಹೊಯ್ದಾಡತೊಡಗಿದವು. ಒಮ್ಮೆ ಮನಸ್ಸು ಇನ್ನು ಕೇವಲ ಎರಡೇ ದಿನಗಳಿವೆ, ಹೇಗೋ ಮುಗಿಸಿಬಿಡು ಎಂದರೆ, ಅದೇ ಮನಸ್ಸು ಮತ್ತೊಮ್ಮೆ ಇಲ್ಲ, ಏನು ಬೇಕಾದರೂ ಆಗಲಿ, ಇನ್ನೊಂದು ಕ್ಷಣವೂ ಇಲ್ಲಿರುವುದು ಸಾಧ್ಯವಿಲ್ಲ ಎಂದು ತೀವ್ರ ಗೊಂದಲಕ್ಕೆ ಬೀಳುತ್ತಿತ್ತು. ಮನಸ್ಸು ಬಲು ಮೋಸಗಾರ!.

ಇಷ್ಟೆಲ್ಲ ಗೊಂದಲ, ಸವಾಲುಗಳ ನಂತರ ಹತ್ತನೆಯ ದಿನ ಪೂರ್ಣಗೊಂಡಾಗ ನನ್ನಲ್ಲೊಂದು ಬಗೆಯ ಮಹತ್ತರ ಬದಲಾವಣೆ ಉಂಟಾಗಿದ್ದದ್ದು ನನ್ನ ಅರಿವಿಗೆ ಬಂತು. ನನ್ನ ಪ್ರಾರ್ಥನೆ ತಲುಪಬೇಕಾದಲ್ಲಿಗೆ ತಲುಪಿತ್ತು ಎನ್ನಿಸುತ್ತದೆ! ನನ್ನೊಳಗೆ ಅಪರಿಮಿತ ಆನಂದ ಹೊಮ್ಮುತ್ತಿತ್ತು.

ಹಗುರಗೊಂಡ ದೇಹ

ಹನ್ನೊಂದನೆಯ ದಿನ ಬೆಳಗ್ಗೆ ಬೇಗನೇ ಅನುಷ್ಠಾನಕ್ಕೆ ಹೊರಟು ಇನ್ನೇನು ಒಂದಷ್ಟು ಹೆಜ್ಜೆ ನಡೆದಿರಬೇಕು, ನನ್ನ ನಡಿಗೆ ಇದ್ದಕ್ಕಿದ್ದಂತೆ ಬಹಳ ಹಗುರಗೊಂಡಂತೆ ಅನ್ನಿಸತೊಡಗಿತು. ತೇಲುವಷ್ಟು ಹಗುರ. ನನ್ನ ಇಡೀ ಅಸ್ತಿತ್ವವೇ ಆನಂದದಿಂದ ತುಂಬಿತ್ತು. ಯಾವುದೋ



ಕ್ಷಣಕಾಲ ಮೃತ್ಯುವೇ ಎದುರು ಬಂದು ನಿಂತಂತಿತ್ತು! ಇನ್ನೇನು ಸತ್ತೇ ಹೋಗುತ್ತೇನೆ ಎನ್ನಿಸಿತು! ನನ್ನ ಹೃದಯ ಜೋರಾಗಿ ಬಡಿಯುವ ಶಬ್ದ ನನಗೇ ಕೇಳುತ್ತಿತ್ತು! ಉಸಿರಾಟ ತೀವ್ರವಾಗಿತ್ತು. ಇಡೀ ದೇಹ ಮರಗಟ್ಟಿದಂತೆ ನಿಂತಿದ್ದೆ! ನನ್ನ ದೃಷ್ಟಿ ಕೋರೈಸುವ ವಜ್ರಗಳಂತಿದ್ದ ಆ ಹಾವಿನ ಕಣ್ಣುಗಳಲ್ಲೇ ಸಿಕ್ಕಿಹಾಕಿಕೊಂಡುಬಿಟ್ಟಿದೆಯೇನೋ ಎಂಬಂತೆ, ಕಣ್ಣು ಕದಲಿಸಲಾಗಲಿಲ್ಲ. ಆಶ್ಚರ್ಯದ ವಿಷಯವೆಂದರೆ ಈ ಹಾವಿನಿಂದ ಪಾರಾಗುವುದರ ಯೋಚನೆಯಾಗಲೀ, ನನ್ನ ಜೀವ ಉಳಿಸಿಕೊಳ್ಳುವ ಯೋಚನೆಯಾಗಲೀ ನನ್ನ ಮನಸ್ಸಿಗೆ ಬರಲೇ ಇಲ್ಲ! ನನ್ನೆದುರು ಆ ಕ್ಷಣ ನನಗಿಂತಲೂ ಎರೆಡಡಿ ಎತ್ತರದಲ್ಲಿ ತನ್ನ ಅಗಾಧ ಹೆಡೆ ತೆರೆದು ನಿಂತಿದ್ದ ಬಂಗಾರದ ಬೆಳಕು ಸೂಸುತ್ತಿದ್ದ ಆ ನಾಗನ ಹೊರತಾಗಿ ಈ ಜಗತ್ತಿನ ಬೇರೇನೂ ಅಸ್ತಿತ್ವದಲ್ಲೇ ಇರಲಿಲ್ಲ!

ಸುವರ್ಣ ಪ್ರಭೆ

ಅದು ತನ್ನ ಹರಿತ ನಾಲಗೆಯನ್ನು ಅಗ್ನಿಯ ಕೆಂಬಣ್ಣದ ಕಿರು ಜ್ವಾಲೆಯಂತೆ ಆಗಾಗ ಹೊರ ಚಾಚುತ್ತಿತ್ತು!

ಬಂಗಾರದ ಬಣ್ಣದ ಆ ನಾಗ ತನ್ನ ದೇಹದಾದ್ಯಂತ ಹೊಮ್ಮಿಸುತ್ತಿದ್ದ ಸುವರ್ಣ ಪ್ರಭೆಗೆ ಸೂರ್ಯನೇ ಮಂಕಾದಂತೆ ಎನ್ನಿಸುತ್ತಿತ್ತು! ಅಂತಹ ಬೆಳಕು ಅದರ ದೇಹದಿಂದ ಹೊಮ್ಮುತ್ತಿತ್ತು. ಅದೆಷ್ಟು ನಿಶ್ಚಲವಾಗಿ ನಿಂತಿತ್ತೆಂದರೆ ಕೇವಲ ಅದರ ನಾಲಿಗೆಯ ಚಲನೆಯಿಂದ ಮಾತ್ರ ಅದು ಜೀವಂತ ಸರ್ಪ ವೆಂದು ತಿಳಿಯುತ್ತಿತ್ತು, ಅದಲ್ಲದಿದ್ದರೆ ಶಿಲ್ಪಿಯೊಬ್ಬ ಬಂಗಾರದಲ್ಲಿ ಕಡೆದ ನಾಗನ ಶಿಲ್ಪದಂತಿತ್ತು ಅದು. ಅದರ ಹೆಡೆ ನನಗಿಂತಲೂ ಸಾಕಷ್ಟು ಎತ್ತರದಲ್ಲಿ ಇದ್ದ ಕಾರಣ ನಾನು ಕತ್ತೆತ್ತಿ ಅದರ ಕಡೆ ನೋಡುತ್ತಿದ್ದೆ. ಅದೇನಾದರೂ ನನ್ನನ್ನು ಕಚ್ಚ ಬಯಸಿದ್ದರೆ ತಾನು ನಿಂತಲ್ಲಿಂದಲೇ ಬಾಗಿ ನನ್ನನ್ನು ಕಚ್ಚಿಬಿಡಬಹುದಿತ್ತು. ಅಷ್ಟು ಎತ್ತರ!

ಒಂದು ಕಡೆ ಸ್ವಲ್ಪ ಹೆದರಿಕೆ ಎನಿಸುತ್ತಿದ್ದರೂ ಆ ನಾಗ ನನ್ನನ್ನು ಮಂತ್ರಮುಗ್ಧಗೊಳಿಸಿತ್ತು! ಒಂದು ಬಗೆಯಲ್ಲಿ ಅದರೆಡೆಗೆ ಸಮ್ಮೋಹಿತಳಾಗಿಬಿಟ್ಟಿದ್ದೆ. ಅಷ್ಟು ಸುಂದರ! ನಿಶ್ಚಲ! ಆಗ ಅಲ್ಲಿ ಕಾಲ ಸ್ತಬ್ದಗೊಂಡಿತ್ತು! ಅದೆಷ್ಟು ಸಮಯ ನನ್ನ ಹಾಗೂ ಆ ನಾಗದ ನಡುವೆ ಹಾಗೆ ಕಳೆಯಿತೋ ಗೊತ್ತಿಲ್ಲ! ನಾ ಕಳೆದು ಹೋಗಿದ್ದೆ. ಮೂಕವಿಸ್ಮಿತಳಾಗಿದ್ದೆ! ನಂತರ ಆ ಹಾವು ಸಂಪೂರ್ಣ ನನಗೆ ಬೆನ್ನು ಮಾಡಿ ನೆಲದತ್ತ ಬಾಗಿ ಅದೃಶ್ಯವಾಯಿತು!

ನನಗೆ ಪ್ರಜ್ಞೆಯುಂಟಾದಾಗ ನನ್ನ ಕಾಲುಗಳು ನಡುಗುತ್ತಿದ್ದವು. ಇಡೀ ಮೈ ಒಂದು ಬಗೆಯ ಶಕ್ತಿಯ ಉತ್ಕರ್ಷದಲ್ಲಿ ಕಂಪಿಸುತ್ತಿತ್ತು! ಕೆಲ ಕ್ಷಣ ಅಲ್ಲಿಯೇ ಸುಧಾರಿಸಿಕೊಂಡೆ. ನನ್ನ ಮನಸ್ಸು ಅದೆಷ್ಟು ಸ್ತಂಭೀಭೂತವಾಗಿತ್ತೆಂದರೆ ಗುರುವಿನ ನೆನಪೂ ಬರಲಿಲ್ಲ. ಈಗ ಮತ್ತೆ ನೀರಿನ ಟ್ಯಾಂಕ್ ಬಳಿ ಹೋಗಿ ಕುಳಿತು ಅನುಷ್ಠಾನ ಮುಂದುವರೆಸಬೇಕೋ ಬೇಡವೋ ಎಂಬ ಬಗ್ಗೆ ಗೊಂದಲವುಂಟಾಯಿತು. ಅದು ಯಾಕೋ ಗೊತ್ತಿಲ್ಲ ಮನಸ್ಸಿನಲ್ಲಿ ಒಂದು ಬಗೆಯ ವಿಚಿತ್ರ ಆನಂದದ ಅನುಭೂತಿ ಇದ್ದರೂ ದೇಹಕ್ಕೆ ಮಾತ್ರ ತೀವ್ರವಾಗಿ ಸುಸ್ತಾಗಿತ್ತು! ದೇಹವನ್ನು ಹಿಂಡಿ ಹಾಕಿದ ಅನುಭವ. ನನ್ನ ಇಡೀ ನರಮಂಡಲವನ್ನು ಮೇಲಕ್ಕೆ ಜಗ್ಗಿದಂತೆನಿಸುತ್ತಿತ್ತು! ಆದರೂ ಅನುಷ್ಠಾನ ಮುಂದುವರೆಸಲೇಬೇಕೆಂಬ ಸಂಕಲ್ಪಕ್ಕೆ ಬದ್ಧಳಾಗಿ ಅತ್ಯಂತ ಕಷ್ಟಪಟ್ಟು ಹೆಜ್ಜೆ ಎತ್ತಿಟ್ಟು ನಡೆಯತೊಡಗಿದೆ. ನೀರಿನ ಟ್ಯಾಂಕ್ ನ ನೆರಳಿನಲ್ಲಿ ಎಂದಿನಂತೆ ಚಾಪೆ ಹಾಸಿ ಕುಳಿತು ಜಪ ಮುಂದುವರೆಸಿದೆ. ಅನುಷ್ಠಾನ ಮುಗಿಸಿ ಬಂದು ಊಟ ಮಾಡಿ ಕೊಂಚ ವಿರಮಿಸಿದೆ. ಒಂದು ಬಗೆಯ ಅರೆನಿದ್ರೆಯ ಅವಸ್ಥೆಯಲ್ಲಿದ್ದೆ.

ಆ ಸ್ಥಿತಿಯಲ್ಲಿ ಇದ್ದಕ್ಕಿದ್ದಂತೆ ಆ ನಾಗ 'ಕುಂಡಲಿನೀ ಭಗವತಿ'ಯಲ್ಲದೇ ಮತ್ಯಾರೂ ಅಲ್ಲ ಎಂಬುದು ಹೃದ್ಗೋಚರವಾಯಿತು! ಅದೇ ಕ್ಷಣದಲ್ಲಿ ಒಳಗಿನಿಂದ ಯಾರೋ ಜೋರಾಗಿ ನಿನ್ನ ಅನುಷ್ಠಾನ ಪೂರೈಸಿದೆ ಎಂದು ಬಲವಾಗಿ ಹೇಳಿದಂತಾಯ್ತು! ಧಿಗ್ಗನೆ ಎದ್ದು ಕುಳಿತೆ! ಹೌದು ಆ ಸಂತೃಪ್ತ ಭಾವ ಮನದುಂಬಿದೆ. ಹನ್ನೆರಡು ದಿನಗಳ ಸಂಕಲ್ಪ ಮಾಡಿದ್ದೆನಾದರೂ ಹನ್ನೊಂದನೆಯ ದಿನಕ್ಕೆ ಹೀಗನ್ನಿಸಿತು. ಆವತ್ತಿಗೆ ನನಗೆ ಕುಂಡಲಿನೀ ಜಾಗೃತಿಯ ಕುರಿತಾಗಿ ಯಾವ ಮಾಹಿತಿಯೂ ತಿಳಿದಿರಲಿಲ್ಲ. ಇಂದಿನಂತೆ ಮೊಬೈಲ್ ಯುಗವೂ ಅದಲ್ಲ.

ಸಂಜೆ ಹೈವೇಯಲ್ಲಿದ್ದ ಟೆಲಿಫೋನ್ ಬೂತಿಗೆ ಹೋಗಿ ಪಟ್ಟಾಭಿಯವರಿಗೆ ಕರೆ ಮಾಡಿದೆ. ನಾಳೆಯೇ ಮನೆಗೆ ಮರಳುತ್ತಿದ್ದೇನೆ, ಮನೆಗೆ ಬಂದು ಉಳಿದ ವಿಷಯಗಳನ್ನು ಮಾತನಾಡೋಣ ಎಂದು ಹೇಳಿದೆ.

ಈ ಘಟನೆ ನಡೆದು ಸುಮಾರು ಒಂದು ವರ್ಷಕ್ಕೂ ಕಡಿಮೆ ಸಮಯದಲ್ಲಿ ಅತೀಂದ್ರಿಯ ಶಕ್ತಿಗಳಿದ್ದ ಮಹಾಪುರುಷರೊಬ್ಬರು ಪಟ್ಟಾಭಿಯವರನ್ನು ಭೇಟಿಯಾಗಲು ಬಂದರು. ಅವರು ಹೇಳಿದರು, ಯಾವ ದೈವೀ ಶಕ್ತಿಯನ್ನು ಬೇಕಾದರೂ ತನ್ನಲ್ಲಿ ಆವಾಹಿಸಿಕೊಳ್ಳಬಲ್ಲ ಶಕ್ತಿ ಇದೆ ಎಂದು!

▸▸ 3ನೇ ಪುಟಕ್ಕೆ

ಪುಸ್ತಕ ವಿಮಾನ

ಒಳಿತನ್ನೇ ಹೇಳುವ ಪುಟ್ಟ ಕಥೆಗಳು

» ಡಾ. ಸಿ. ಸೋಮಶೇಖರ

ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ವಿಶಿಷ್ಟವಾದ ಪ್ರಕಾರ ಎಂದರೆ ಅದು ಅಂಕಣ ಬರಹಗಳು. ಒಂದು ನಿರ್ದಿಷ್ಟ ವಿಷಯದ ಬಗ್ಗೆ ತುಂಬಾ ಸಂಕ್ಷಿಪ್ತವಾಗಿ ಹಾಗೂ ಸೂಕ್ಷ್ಮವಾಗಿ ಬರೆಯಲ್ಪಡುವ ಅಂಕಣ ಬರಹಗಳು ನಾಡಿನ ಸಾಮಾನ್ಯ ಜನರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಶಕ್ತಿಯನ್ನು ಹೊಂದಿರುತ್ತದೆ.

ಶ್ರಿಮತಿ ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು' ಅಂಕಣ 'ವಿಶ್ವವಾಣಿ' ದಿನಪತ್ರಿಕೆಯ ಒಂದು ಸೃಜನಶೀಲ ಜನಪ್ರಿಯ ಅಂಕಣ. ಪ್ರತಿದಿನ ಅವರು ಒಂದೊಂದು ಪ್ರಮುಖ ವಿಷಯದ ಬಗ್ಗೆ ಬಹಳ ಆಕರ್ಷಕ ಶೈಲಿಯಲ್ಲಿ ಕಥೆಯೊಂದನ್ನೋ, ಘಟನೆಯೊಂದನ್ನೋ ಅಥವಾ ಸವಾಲುಗಳನ್ನೋ ಕೇಂದ್ರವನ್ನಾಗಿ ಇಟ್ಟುಕೊಂಡು ಅವರು ನಿರೂಪಿಸುವ ಹಾಗೂ ಅವುಗಳನ್ನು ತೆರೆದಿಟ್ಟು ಜನರನ್ನು ಎಚ್ಚರಗೊಳಿಸುವ ಶೈಲಿ ಅತ್ಯಂತ ಅಪರೂಪವಾದದ್ದು ಹಾಗೂ ಕಲಾತ್ಮಕವಾದದ್ದು. ರೂಪಾ ಗುರುರಾಜ್ ಅವರ ಮಾತುಗಳನ್ನು ಅನೇಕ ವೇದಿಕೆಗಳಲ್ಲಿ ಕೇಳಿ ಆಸ್ವಾದಿಸಿದ್ದೇನೆ. ಅವರ ಮಾತು ಮೋಹಕ ಹಾಗೂ ಬಹಳ ಪ್ರಭಾವಪೂರ್ಣ. ನಿರೂಪಣೆ ಒಂದು ಬಹುಮುಖ್ಯ ಕಲೆ. ಆ ಕಲೆ ರೂಪಾ ಗುರುರಾಜ್ ಅವರಿಗೆ ಬಹಳ ಚೆನ್ನಾಗಿ ಒಲಿದಿದೆ. ಅಂತೆಯೇ ಅವರ ಅಂಕಣಗಳನ್ನು ಓದುತ್ತಲೇ ನಾನು ಅವರ ಅಭಿಮಾನಿಯಾಗಿದ್ದೇನೆ. ಪ್ರತಿಯೊಂದು ಅಂಕಣಗಳಲ್ಲಿಯೂ ಹೊಸತನವಿದೆ, ಹೊಸ ಸಂದೇಶವಿದೆ, ಕೌತುಕ ಕಥಾನಕವಿದೆ. ಇವರ ಅಂಕಣಗಳು ಸಮಾಜದ ಎಲ್ಲಾ ವರ್ಗಗಳಿಗೂ ಹೃದಯಸ್ಪರ್ಶಿ ಆಗಿರುವುದರಿಂದಲೇ ಇವರ ಈ ಅಂಕಣಗಳು ಸಾಲು ಸಾಲಾಗಿ ಸಂಗ್ರಹ ರೂಪದಲ್ಲಿ ಕೃತಿಗಳಾಗಿ ಪ್ರಕಟಣೆಗೊಳುತ್ತಿವೆ.

ಅವರ 'ಒಂದೊಳ್ಳೆ ಮಾತು -3' ಮೂರನೇ ಕೃತಿಯಲ್ಲಿ ಪೌರಾಣಿಕ, ಐತಿಹಾಸಿಕ, ವರ್ತಮಾನ ಹಾಗೂ ಕಾಲದ ನೂರು ಅಂಕಣಗಳ ಚಿತ್ರಣವಿದೆ. ಪ್ರತಿಯೊಂದು ಅಂಕಣವನ್ನು ಓದಿದ್ದೇನೆ. ಸಾಂದರ್ಭಿಕ ಕಥಾನಕಗಳಲ್ಲದೆ ನಮ್ಮ ದೈನಂದಿನ ಜೀವನಕ್ಕೆ ಹತ್ತಿರವಾದ ಅವರ ಜೀವನಾನುಭವದ ನೆಲೆಯಲ್ಲಿ ಮೂಡಿ ಬಂದ ಇಲ್ಲಿನ ಅಂಕಣಗಳು ನಮ್ಮಲ್ಲಿ ಜೀವನೋತ್ಸಾಹವನ್ನು ಉಂಟು ಮಾಡುವಂಥದ್ದಾಗಿವೆ. ಸ್ವಂತಿಕೆ ಇಲ್ಲದೆ ನಕಲು ಮಾಡುವುದು ಯಶಸ್ಸಿಗೆ ಕಾರಣವಾಗಲಾರದು ಎಂಬ ಅಂಕಣ ಲೇಖನದಿಂದ ಅರ್ಜುನನ ಅಹಂಭಾವ ಭಗ್ನಗೊಳಿಸಿದ ಹನುಮಂತ, ವಾಸ್ತವತೆಗಿಂತ ಕಲ್ಪನೆ ಬಹಳ ಮುಖ್ಯ, ಜೀವನವನ್ನು ಎದುರಿಸಲು ಮುಖ್ಯವಾದದ್ದು ಸಾಮಾನ್ಯ ಜ್ಞಾನ, ದೃಷ್ಟಿ ಬದಲಾದರೆ ದೃಶ್ಯವೂ ಬದಲು, ಪ್ರಾರ್ಥನೆಯಿಂದ ಆಗುವ ಲಾಭ, ನಮ್ಮನ್ನು ಸದಾ ಕಾಯುವುದು ವಿವೇಕ ಪ್ರಜ್ಞೆ, ಸ್ವಾರ್ಥ ತೊರೆದಾಗ ಸಹಬಾಳ್ವೆಯಲ್ಲಿ ಸಿಗುವ ಸುಖ ಹೀಗೆ ಭಿನ್ನವಾದ ವಿಷಯಗಳ ಬಗ್ಗೆ ಅವರು ಬಹಳ ಸಂಕ್ಷಿಪ್ತವಾದ ನಿರೂಪಣೆ ಮೂಲಕ ತಮ್ಮ ಅಂಕಣದ ಆಶಯವನ್ನು ಓದುಗರಿಗೆ ಮುಟ್ಟಿಸುವಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ.

ಇಲ್ಲಿನ ಅಂಕಣಗಳು ದೀರ್ಘವಾಗಿಲ್ಲದೆ ಇರುವುದು ಅಂಕಣಗಳ ಮಹತ್ವವನ್ನು ಹೆಚ್ಚಿಸಿದೆ. ಇಂದಿನ ಆವೇಗ ಉದ್ವೇಗಗಳ ಕಾಲಘಟ್ಟದಲ್ಲಿ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ತುಂಬಾ ಆಘಾತಕಾರಿ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ 'ಒಂದೊಳ್ಳೆ ಮಾತು-3' ಕೃತಿ ಓದುಗರಿಗೆ ತುಂಬಾ ಆಪ್ತವಾಗುತ್ತದೆ.

ರೂಪಾ ಗುರುರಾಜ್ ಅವರು ಸದಾ ಹಸನ್ಮುಖಿಗಳು. ಎಂತಹ ಸಂದಿಗ್ಧ ಸನ್ನಿವೇಶಗಳಲ್ಲಿಯೂ ಸ್ಥಿತಪ್ರಜ್ಞೆ ಕಳೆದುಕೊಳ್ಳದ ಸ್ಥಿತವದನೆ. ಅವರು ನಿರೂಪಕಿಯಾಗಿ ತುಂಬಾ ಜನಪ್ರಿಯರಾಗಿದ್ದಾರೆ. ಸಮರ್ಥ ಹಾಗೂ ಸಮಗ್ರ ನಿರೂಪಕಿಯಾಗಿ ಅವರು ಮಾದರಿಯಾಗಿದ್ದಾರೆ. 'ಒಂದೊಳ್ಳೆ ಮಾತು' ಎಂಬ ಅಂಕಣಗಳ ಸರಮಾಲೆಯನ್ನು ಕನ್ನಡ ಓದುಗರಿಗೆ ಪ್ರೀತಿಯಿಂದ ತೊಡಿಸಿರುವ ರೂಪಾ ಗುರುರಾಜ್ ಅವರ ಪ್ರಯತ್ನ ತುಂಬಾ ಅಭಿನಂದನಾರ್ಹ. ರೂಪಾ ಗುರುರಾಜ್ ಅವರ ಅಂಕಣಗಳ ಕೃತಿ ಹೊರಬರುವಲ್ಲಿ 'ವಿಶ್ವವಾಣಿ' ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರು ನೀಡಿರುವ ಮಾರ್ಗದರ್ಶನವನ್ನು ಅವರು ಸದಾ ಸ್ಮರಿಸುತ್ತಿರುತ್ತಾರೆ. ಅಂಕಣ ಬರೆಯಬೇಕಾದರೆ ದೀರ್ಘ ಅಧ್ಯಯನ, ಮಾಹಿತಿಗಳ ಸಂಗ್ರಹ, ಸಮಯ ಪ್ರಜ್ಞೆ, ಶಿಸ್ತು ಹಾಗೂ ಕಠಿಣ ಪರಿಶ್ರಮ ತುಂಬಾ ಅತ್ಯಗತ್ಯ. ಅವರ ಕೌಟುಂಬಿಕ ಬದುಕು, ಸಾರ್ವಜನಿಕ ಕ್ಷೇತ್ರದ ಜವಾಬ್ದಾರಿಗಳ ನಡುವೆ ಇಷ್ಟೊಂದು ದೀರ್ಘಕಾಲದಿಂದ ಅಂಕಣಗಳನ್ನು ಬರೆಯುವ ಮೂಲಕ ಕನ್ನಡಿಗರಿಗೆ ಜ್ಞಾನದ ಮುತ್ತು ರತ್ನಗಳನ್ನು ಕೊಡುಗೆಯಾಗಿ ನೀಡುತ್ತಿರುವ ರೂಪಾ ಗುರುರಾಜ್ ಅವರಿಗೆ ವಾಗ್ದೇವಿ ಒಲಿದಿದ್ದಾಳೆ. ಅವರ ನಾಲಿಗೆಯ ಮೇಲೆ ಸರಸ್ವತಿ ನಲಿದಾಡುತ್ತಿದ್ದಾಳೆ. ಅಂಕಣ ಬರೆಯುವ ಅವರ ಹಸ್ತಗಳಿಗೆ ತಾಯಿ ಭುವನೇಶ್ವರಿ ದೇವಿ ವಿಶಿಷ್ಟವಾದ ಶಕ್ತಿ ಚೈತನ್ಯವನ್ನು ತುಂಬಿದ್ದಾಳೆ.

'ಒಂದೊಳ್ಳೆ ಮಾತು-3' ಎಂಬ ಅಂಕಣ ಕೃತಿಯ ಶೀರ್ಷಿಕೆಯೇ ತುಂಬಾ ಆಕರ್ಷಕವಾಗಿದೆ ಹಾಗೂ ಅರ್ಥಪೂರ್ಣವಾಗಿದೆ. ಸುಂದರ ಬದುಕನ್ನು ಕಟ್ಟಿಕೊಳ್ಳಲು ಸಾರ್ಥಕ ಜೀವನವನ್ನು ರೂಪಿಸಿಕೊಳ್ಳಲು, ಅಗತ್ಯವಾದ ಮೌಲಿಕ ಸಂದೇಶಗಳನ್ನು ಸಾರುವ ಈ ಕೃತಿಯ ಹಿಂದೆ ಲೇಖಕಿಯ ಅಪಾರವಾದ ಅಧ್ಯಯನ ಹಾಗೂ ಪ್ರಾಮಾಣಿಕ ಪರಿಶ್ರಮ ಇರುವುದು ಸ್ಪಷ್ಟವಾಗಿ ತಿಳಿಯುತ್ತದೆ. (ಒಂದೊಳ್ಳೆ ಮಾತು-3 ಕೃತಿಯ ಮುನ್ನುಡಿಯ ಆಯ್ದ ಭಾಗ.)



ಪುಟ್ಟ ಪುಟ್ಟ ಕಥೆಗಳ ಮೂಲಕ ಒಳಿತನ್ನು, ಒಳ್ಳೆಯದನ್ನು ಹೇಳುವ 'ಒಂದೊಳ್ಳೆ ಮಾತು-3' ಕೃತಿಯಲ್ಲಿ ನೂರು ಬರಹಗಳಿವೆ. ಆಗಾಗ ಓದಿ ಮನನ ಮಾಡಿಕೊಳ್ಳಲು ಸೂಕ್ತ ಎನಿಸುವ ಪುಸ್ತಕವಿದು. ಆ ಕೃತಿಯ ಮುನ್ನುಡಿಯ ಆಯ್ದ ಭಾಗಗಳು ಇಲ್ಲಿವೆ.

ಕರ್ಣನ ದೃಷ್ಟಿಯಿಂದ ಮಹಾಭಾರತ

» ಡಾ. ಬಿ. ಜನಾರ್ದನ ಭಟ್

ಯಕ್ಷಗಾನ ಅರ್ಥದಾರಿ, ವಿದ್ವಾಂಸ ರಾಧಾಕೃಷ್ಣ ಕಲ್ಚಾರ್ ಅವರು ಬರೆದಿರುವ ವಿಶಿಷ್ಟ ಕಾದಂಬರಿ 'ಕವಚ'. ಇದು ಮಹಾಭಾರತದ ಕರ್ಣನ ಬದುಕನ್ನು ಸ್ವಗತ ನಿರೂಪಣೆಯ ಮೂಲಕ ದಾಖಲಿಸಿರುವ ಕಾದಂಬರಿ. ಈ ಬಗೆಯ ಉತ್ತಮ ಪುರುಷ (ಫಸ್ಟ್ ಪರ್ಸನ್) ನಿರೂಪಣೆಯ ಕೃತಿಗಳಲ್ಲಿ ನೆನಪಿನಲ್ಲಿ ಉಳಿಯುವಂತೆ ಸಮಗ್ರತೆ (ಸರ್ವಸಾಕ್ಷೀ ನಿರೂಪಣೆಯಂತೆ) ತರುವುದು ಕಷ್ಟ. ಇಂಗ್ಲಿಷಿನಲ್ಲಿ 'ಟ್ರೆಷರ್ ಐಲಂಡ್', 'ಹಕ್ಲ್‌ಬೆರಿ ಫಿನ್' ಮುಂತಾದ ಕೃತಿಗಳು ಉತ್ತಮ ಪುರುಷದಲ್ಲಿಯೂ ಸಮಗ್ರ ದರ್ಶನ ನೀಡುವಂತೆ ನಿರೂಪಿಸಲ್ಪಟ್ಟಿವೆ. ಕಲ್ಚಾರ್ ಅವರು 'ಕವಚ' ಕೃತಿಯಲ್ಲಿ ಆ ಸಮಗ್ರತೆಯನ್ನು ತರಲು ಶಕ್ತರಾಗಿದ್ದಾರೆ. ಪ್ರಜ್ಞಾ ಪ್ರವಾಹಕ್ಕೆ ಅತಿಯಾದ ಪ್ರಾಮುಖ್ಯ ಕೊಡದಿರುವುದು ಈ ಕೃತಿಯ ಯಶಸ್ಸಿಗೆ ಒಂದು ಕಾರಣವಾಗಿದೆ. ಶ್ರೇಷ್ಠ ಕೃತಿಗಳಂತೆ ಘಟನೆಗಳ ನಿರೂಪಣೆಯಲ್ಲಿಯೆ ಅಂತರಾರ್ಥಗಳನ್ನು ಹೊರಡಿಸುವ ನಿರೂಪಣೆ ಈ ಕಾದಂಬರಿಯಲ್ಲಿದೆ. ಸಣ್ಣ ಸಣ್ಣ ಸರಳ ವಾಕ್ಯಗಳಲ್ಲಿ ಮಹತ್ವದ ಘಟನೆಗಳನ್ನು ಕಲ್ಚಾರ್ ಕಟ್ಟಿಕೊಟ್ಟಿದ್ದಾರೆ.

ಕರ್ಣನ ಬದುಕಿನ ವಿವರಗಳು, ಹಿನ್ನೆಲೆಗಳು ಇತ್ಯಾದಿಗಳನ್ನು ಹಲವು ಗ್ರಂಥಗಳ ಅಧ್ಯಯನ, ಮಥನದ ಮೂಲಕ ಯಕ್ಷಗಾನ ಅರ್ಥಗಾರಿಕೆಯಲ್ಲಿ ಪ್ರಸ್ತುತಪಡಿಸುವ ಲೇಖಕರು, ಕರ್ಣನ ಬದುಕಿನ ಸೂಕ್ಷ್ಮಗಳನ್ನು ತುಂಬಾ ಸಹಜ ವಾಗಿ ಹೆಣೆದುಕೊಂಡು ಹೋಗಿದ್ದಾರೆ. ಇದರಿಂದಾಗಿ ಇಡಿಯ ಮಹಾಭಾರತವೇ ಕರ್ಣನ ದೃಷ್ಟಿಕೋನದಿಂದ ನಿರೂಪಿತವಾದಂತಾಗಿದೆ. ವಿಶೇಷವೆಂದರೆ ಮಹಾಭಾರತ ಕಾಲದ ಜಾತಿ ವ್ಯವಸ್ಥೆಯ ಬಗೆಗೆ ಅಪರೂಪದ ಮಾಹಿತಿ ಯಿದೆ. ಅದು, ಸೂತ ಎನ್ನುವ ಜಾತಿಯ ಬಗೆಗೆ. ಆ ಭಾಗ ಹೀಗಿದೆ:

'ಸೂತರು ಎಂದು ಕೆಲವು ಗುಂಪುಗಳನ್ನು ಕರೆಯುತ್ತಿದ್ದರು. ಅವರು ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದರು. ಬುದ್ಧಿವಂತರಾದರೆ ಪುರಾಣದಿಗಳನ್ನು ಓದಿ ಅವುಗಳನ್ನು ಜನರಿಗೆ ಹೇಳುವ ಪುರಾಣಿಕರಾಗುತ್ತಿದ್ದರು. ಸೋತಪುರಾಣಿಕ ಎಂದು ಅವರನ್ನು ಕರೆಯುತ್ತಿದ್ದರು. ಇನ್ನು ಕೆಲವರು ಅಲ್ಪಸ್ವಲ್ಪ ವಿದ್ಯೆ ಇದ್ದವರು ಅರಮನೆಗಳಲ್ಲಿ ಅರಸರ ಹೊಗಳುಭಟರಾಗಿ ಸೇರಿಕೊಳ್ಳುತ್ತಿದ್ದರು. ಅಷ್ಟೆಲ್ಲ ಅವಕಾಶ ಇಲ್ಲದವರು ಅಧಿರಥನ ಹಾಗೆ ರಥ ಓಡಿಸುವ ಕೆಲಸ ಮಾಡುತ್ತಿದ್ದರು. ಏನೂ ಇಲ್ಲದವರು ದೋಣಿ ನಡೆಸುವುದು, ನದಿಗಳಲ್ಲಿ ಮೀನು ಹಿಡಿಯುವುದು ಇತ್ಯಾದಿ ವೃತ್ತಿ ಮಾಡುತ್ತಿದ್ದರು. ಇಂತಹವರ ಸಂಖ್ಯೆಯೇ ಅಧಿಕವಿತ್ತು. ಈ ಸೂತರು ನಿರ್ದಿಷ್ಟವಾಗಿ ಯಾವ ವರ್ಣಕ್ಕೂ ಸೇರುತ್ತಿರಲಿಲ್ಲ.

'ವರ್ಣಗಳ ಸಂಕರದಿಂದ ಈ ವರ್ಗದವರು ಉಂಟಾಗುತ್ತಿದ್ದರು. ಬೇರೆ ವರ್ಣಗಳಿಗಿದ್ದ ಖಚಿತವಾದ ಪರಿಧಿ ಇವರಿಗೆ ಇದ್ದ ಹಾಗಿರಲಿಲ್ಲ. ಅವರೊಳಗೆ ಪರಸ್ಪರ ಗಾಢವಾದ ಸಂಬಂಧಗಳೂ ಇರಲಿಲ್ಲ. ಒಮ್ಮೆ ಸೂತ ಎಂದು ಗುರುತಿಸಲ್ಪಟ್ಟ ಮೇಲೆ ಅವನ ಸಂತಾನದವರು ಸೂತರೇ ಆಗುತ್ತಿದ್ದರು. ಉನ್ನತ ಸ್ತರದಲ್ಲಿದ್ದ ಸೂತರು, ಅವರಿಗಿಂತ ಕನಿಷ್ಠರ ಜತೆ ಬೆರೆಯುವುದು ವಿರಳವಾಗಿತ್ತು. ವಿದುರ ಸೂತನಂತೆ ಇದ್ದರೂ, ಅವನು ಇತರ ಸೂತರ ಜತೆ ಸೇರುತ್ತಿರಲಿಲ್ಲ. 'ನಮ್ಮ ವರ್ಗದವನು ಮಂತ್ರಿಯಾಗಿದ್ದಾನೆ' ಎಂಬ ತೋರಿಕೆಯ ಹೆಗ್ಗಳಿಕೆ ಬಿಟ್ಟರೆ ಈ ಸಾಮಾನ್ಯ ಸೂತರಿಗೆ ಪ್ರಯೋಜನವೇನೂ ಇರಲಿಲ್ಲ. ಪುರಾಣಿಕನಾದ ಸೂತ, ಬೆಸ್ತನಾದ ಸೂತರ ಜತೆ ಸೇರಿಕೊಳ್ಳುತ್ತಿರಲಿಲ್ಲ. ಸಾರಥಿಯಾದ ಸೂತನಿಗೂ, ಸ್ತುತಿಪಾಠಕನಾದ ಸೂತನಿಗೂ ಸಂಬಂಧ ಇರಲಿಲ್ಲ. ಅಂದರೆ ಸೂತರ ವರ್ಗದ ಒಳಗೇ ತಾರತಮ್ಯ ಇತ್ತು. ಅದರಿಂದಾಗಿ ವರ್ಣ ನಿರ್ಣಯವೂ ಕೆಲವು ಸಲ ಗೊಂದಲಮಯವಾಗಿತ್ತು. ತಂದೆಯಿಂದ ವರ್ಣವೋ ಅಥವಾ ತಾಯಿಯಿಂದಲೋ ಎಂಬುದೂ ಸ್ಫುಟವಿರಲಿಲ್ಲ. ಎಲ್ಲವೂ ಆಯಾ ಸಂದರ್ಭಗಳಿಂದ ನಿರ್ಣಯವಾಗುತ್ತಿತ್ತು. ಸಾಮಾನ್ಯರ ವಿಚಾರದಲ್ಲಿ ಕಟ್ಟುಪಾಡುಗಳು ಬಲವಾಗಿದ್ದಷ್ಟು ಅರಮನೆಯ ಜನರ ವಿಚಾರದಲ್ಲಿ ಇರಲಿಲ್ಲ. ತಂದೆಯಿಂದ ವರ್ಣ ಅಥವಾ ಜಾತಿ ಬರುತ್ತದೆ ಅನ್ನುತ್ತಾರೆ. ಆದರೆ ಕೆಲವು ಸಲ ತಾಯಿಯಿಂದ ಅದು ಬರುತ್ತಿತ್ತು. ತಾಯಿಯಿಂದ ಅಂತ ಖಚಿತವಿರಲಿಲ್ಲ. ತಂದೆಯಿಂದಲೂ ಬರುತ್ತಿತ್ತು. ವೇದವ್ಯಾಸರು ವಿದುರನ ತಂದೆ. ಆದರೆ ಅವನಿಗೆ ವ್ಯಾಸರ ವರ್ಣ ಬರಲಿಲ್ಲ. ಅವನ ತಾಯಿ ದಾಸಿಯಾದ ಕಾರಣ ಅವನು ದಾಸೀಪುತ್ರನಾದ. ಸೂತನೂ ಆದ. ಅದೇ ವೇದವ್ಯಾಸರು ಸತ್ಯವತೀ ಅಥವಾ ಯೋಜನಗಂಧಿಯ ಮಗ. ಅವರಿಗೆ ತಾಯಿಯ ವರ್ಣ ಬರಲಿಲ್ಲ. ಅವರ ತಂದೆ ಪರಾಶರರ ವರ್ಣ ಬಂತು. ವಿವಾಹದಿಂದ ಹುಟ್ಟಿದ ಸಂತಾನಕ್ಕೆ ಈ ಸಮಸ್ಯೆ ಇರಲಿಲ್ಲ. ಅಲ್ಲಿ ತಂದೆಯ ವರ್ಣವೇ ಮಗುವಿಗೆ ಬರುತ್ತಿತ್ತು. ಅಂತೂ ಯಾವುದೇ ರೀತಿಯಲ್ಲಾದರೂ ಮಗುವಿಗೆ ಒಂದು ಜಾತಿಯೋ, ವರ್ಣವೋ ಇರುತ್ತಿತ್ತು. ತಂದೆ ಮತ್ತು ತಾಯಿ ಇವರು ಅಂತ ಗೊತ್ತಿದ್ದವನಿಗೆ ಅವರಲ್ಲಿ ಒಬ್ಬರ ಜಾತಿ ಬರುತ್ತಿತ್ತು.' (ಪುಟ 17-18).

ಕರ್ಣನ ಬದುಕಿನಲ್ಲಿ ನಡೆದ ಕೆಲವು ಅಪೂರ್ವ ಘಟನೆಗಳು ಇಲ್ಲಿ ಅನಾವರಣಗೊಂಡಿವೆ. ಉದಾಹರಣೆಗೆ, ಭಾನುಮತಿಯನ್ನು ಸ್ವಯಂವರದಲ್ಲಿ ಗೆದ್ದವನು ಕರ್ಣ. ದುರ್ಯೋಧನನಿಗಾಗಿ ಗೆದ್ದು ಅವನಿಗೆ ಮದುವೆ ಮಾಡಿಸುತ್ತಾನೆ. ಸೂರ್ಯದೇವ ಕನಸಿನಲ್ಲಿ ಹೇಳಿದ ತನ್ನ ದೇಹಕ್ಕೆ ರಕ್ಷಣೆಯಾಗಿದ್ದ ಸಹಜ ಕವಚದ ಬಗ್ಗೆ ಯೋಚಿಸುತ್ತ ಕರ್ಣನ ಮನಸ್ಸಿನೊಳಗಿನ ವಿಚಾರಮಥನ ಹೀಗಿದೆ: ನನ್ನನ್ನು ಮೊದಲು ರಕ್ಷಿಸುತ್ತಿದ್ದದ್ದು ಸತ್ಯವೆಂಬ ಕವಚ; ಪರಶುರಾಮರ ಎದುರು ಮಿಥ್ಯಾವಾದಿ ಎನಿಸಿದ್ದರಿಂದ ಆ ಕವಚವು ನಷ್ಟವಾಯಿತು. ಆದರೆ ಅವರು ಬ್ರಹ್ಮಾಸ್ತ್ರದಂತಹ ಮಂತ್ರಾಸ್ತ್ರಗಳನ್ನು ಉಪದೇಶಿಸಿದರು. ಅವುಗಳೂ ಒಂದು ಕವಚವೇ ತಾನೇ? ಅವರು ಮುನಿದು ಶಪಿಸಿದ್ದರಿಂದ ಆ ಕವಚವೂ ನಷ್ಟವಾಯಿತು. ಹುಟ್ಟಿನಿಂದ ಒದಗಿ ಬಂದ ಈ ಕವಚವನ್ನೂ ಈಗ ಕಳೆದುಕೊಂಡೆ.

ಈ ಕಾದಂಬರಿಯ ಶೀರ್ಷಿಕೆಯಾದ 'ಕವಚ' ಎನ್ನುವುದರ ಬಗ್ಗೆ ಲೇಖಕ ರಾಧಾಕೃಷ್ಣ ಕಲ್ಚಾರ್ ಬೆನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: ಜೀವನೊಬ್ಬನಿಗೆ ಅನೇಕ ಕವಚಗಳು. ಕರ್ಣನಂತೆ ಅವುಗಳನ್ನು ಕಳೆದುಕೊಳ್ಳುತ್ತ ಕಳೆದುಕೊಳ್ಳುತ್ತಾ ಸಾಗುವುದೇ ಅವನ ಪಾಡು. ಆ ಕವಚಗಳು ಲೋಹದ ಕವಚಗಳಲ್ಲ. ಕವಚ ಸಾಂಕೇತಿಕ ಅಷ್ಟೇ. ಕರ್ಣನ ಬದುಕು ಈ ಕವಚಗಳನ್ನು ಕಳೆದುಕೊಳ್ಳುವ ಪ್ರಕ್ರಿಯೆ. ಅದನ್ನೇ ಕಾದಂಬರಿಯೂ ಧ್ವನಿಸುತ್ತದೆ.

ಸಹಸ್ರ ಕವಚ ಮೋಕ್ಷ ಎಂಬ ಪೌರಾಣಿಕ ಕಥನದ ಒಂದು ಎಳೆಯನ್ನು ಕರ್ಣನಿಗೆ ಜೋಡಿಸಿ, ನರ - ನಾರಾಯಣರು ಕರ್ಣನ ಪೂರ್ವಜನ್ಮದಲ್ಲಿ 999 ಕವಚಗಳನ್ನು ಕತ್ತರಿಸಿದ್ದರೆಂದು, ಕೊನೆಯ ಕವಚವನ್ನು ಈ ಜನ್ಮದಲ್ಲಿ ಕತ್ತರಿಸಿದರೆಂಬ ಕಥೆ ಹೇಳುತ್ತಾರೆ. ಸಾಹಿತ್ಯಜ್ಞರಾದ ಕಲ್ಚಾರ್ ಈ ಕಥೆಯನ್ನು ಕಾದಂಬರಿಯಲ್ಲಿ ತಂದಿಲ್ಲ. ಇದು ಅವರಿಗೆ ತಮ್ಮ ವಸ್ತುವಿನ ನಿರ್ವಹಣೆಯ ಬಗ್ಗೆ ಖಚಿತವಾದ ತಿಳಿವಳಿಕೆ ಇರುವುದನ್ನು ಸೂಚಿಸುತ್ತದೆ. ಇದರ ಬದಲಿಗೆ ಆಧುನಿಕ ಮನುಷ್ಯನ ಮುಖವಾಡಗಳಾಗಿ ಕರ್ಣನ 'ಕವಚಗಳನ್ನು' ಅವರು ಚಿತ್ರಿಸಿದ್ದಾರೆ. ಉದಾಹರಣೆಗೆ, ಕರ್ಣನಿಗೆ ಸತ್ಯವೂ ಒಂದು ಕವಚವಾಗಿತ್ತು, ಆದರೆ ಪರಶುರಾಮ ಗುರುವಿನಲ್ಲಿ ವಿದ್ಯೆ ಕಲಿಯುವುದಕ್ಕಾಗಿ ಸುಳ್ಳು ಹೇಳಿದಾಗ ಆ ಕವಚ ಕಳಚಿಬಿದ್ದಿತ್ತು.... ಹೀಗೆ. ಈಡಿಪಸ್‌ನಂತೆ ತನ್ನ ತಪ್ಪು ಹೆಜ್ಜೆಗಳ, ದೋಷಗಳ ಅರಿವು ತನಗೆಯೆ ಆಗುವ ಕರ್ಣ ಇಲ್ಲಿ ಆಧುನಿಕ ಸಾಹಿತ್ಯ ಕೃತಿಯ ನಾಯಕನಾಗಿ ಮೂಡಿಬಂದಿದ್ದಾನೆ. ಹಾಗಾಗಿ ಇದೊಂದು ಯಶಸ್ವಿ ಕಾದಂಬರಿ ಎನಿಸುತ್ತದೆ.

ಕವಚ (ಕಾದಂಬರಿ)
ಲೇ.: ರಾಧಾಕೃಷ್ಣ ಕಲ್ಚಾರ್
ಪ್ರ: ವೀರಲೋಕ ಬೆಂಗಳೂರು
ಬೆಲೆ ರು.185/-

ಕರ್ಣನು ತನ್ನ ಕವಚಗಳನ್ನು ಕಳೆದುಕೊಳ್ಳುತ್ತಾನೆ; ಅದೇ ರೀತಿ ಎಲ್ಲಾ ಮನುಷ್ಯರೂ ಕವಚಗಳನ್ನು ಕಳೆದುಕೊಳ್ಳುವ ಪ್ರಕ್ರಿಯೆಯ ಸುತ್ತ ಈ ಕಾದಂಬರಿ ಬೆಳೆದಿದೆ.

ಪುಸ್ತಕ ಪ್ರೀತಿ ಬೆಳೆಸುವ ಕೃತಿ

» ಶ.ಹಾ.

ಇಲ್ಲಿನ ಬರಹಗಳ ಮೂಲಕ 'ನನ್ನ ಪುಸ್ತಕ ಪ್ರೀತಿ'ಯನ್ನು ವ್ಯಕ್ತಪಡಿಸಿರುವ ವಿಜಯಾ ಶ್ರೀಧರ್ ಅವರು, ಸ್ವತಃ ಲೇಖಕಿ, ಕಥೆಗಾರ್ತಿಯಾಗಿರುವುದರಿಂದ, ಅವರ ಪುಸ್ತಕಾಭಿಮಾನಕ್ಕೆ ವಿಶಾಲ ವ್ಯಾಪ್ತಿಯೂ ಒದಗಿದೆ. ಕಳೆದ ಹಲವಾರು ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಓದಿರುವ ಹಲವಾರು ಕೃತಿಗಳ ಪೈಕಿ, ಆಯ್ದ ಐವತ್ತು ಕೃತಿಗಳ ವಿಮರ್ಶೆಯನ್ನು ಈ ಪುಸ್ತಕದಲ್ಲಿ ಅಡಕಗೊಳಿಸಿದ್ದಾರೆ. ಬೆನ್ನುಡಿಯಲ್ಲಿ ಹೇಳಿರುವಂತೆ, ಅವರು ಕಳೆದ 'ಏಳು ದಶಕಗಳಲ್ಲಿ ಓದಿದ ಪುಸ್ತಕಗಳು ಸಾವಿರಾರು! ಆ ಪುಸ್ತಕಗಳ ಬಗ್ಗೆ ಅವರು ಬರೆದ ಲೇಖನಗಳು ಹಲವಾರು! ಪ್ರಕಟವಾದದ್ದು ಕೆಲವಾರು. ಸಂಸಾರ ಹೂಡಿದ ಮೊದಲ ಹತ್ತು ವರ್ಷಗಳಲ್ಲಿ ಕಳೆದು ಹೋದ ಲೇಖನಗಳು ಒಂದಷ್ಟು! ಈಗ ಅವರ ಬಳಿ ಸಂಗ್ರಹವಾಗಿರುವುದು ಇವಿಷ್ಟು. ವಿಜಯಾರಿಗೆ ಮೊದಲಿನಿಂದಲೂ ಪುಸ್ತಕಗಳೆಂದರೆ ಪ್ರೀತಿ. ಅದರ ಕುರಿತು ಸಮಾನ ಮನಸ್ಕರೊಡನೆ ಹಂಚಿಕೊಳ್ಳುವುದು ಇನ್ನೂ ಪ್ರಿಯ. ಲೇಖಕರಿಗೆ ಅಥವಾ ಕಲಾವಿದರಿಗೆ ತಮ್ಮ ಕೃತಿ ಸಹೃದಯರಿಗೆ ಮುಟ್ಟಿದೆ ಎಂದಾಗ, ಅಥವಾ ಆ ಕೃತಿಗಳ ಕುರಿತು ಒಂದೆರಡು ಮೆಚ್ಚುಗೆಯ ಮಾತನಾಡಿದಾಗ ಸಿಗುವ ಆನಂದ ಅರಿತವರಿಗಷ್ಟೇ ಗೊತ್ತು. ಕವಿ ಜನ್ನ ಹೇಳುವ ಹಾಗೆ ಮುಡಿವ ಭೋಗಿಗಳಿಲ್ಲದೇ ಕಟ್ಟಿದ ಹೊಸ ಬಾಸಿಂಗ ಬಾಡಿ ಹೋದರೆ ಕವಿಗಾಗುವ ವೇದನೆ ಹೇಳಲಸದಳ! ನಿಜವಲ್ಲವೆ? ಅಂತಹ ಪುಸ್ತಕ ಪ್ರೀತಿಯನ್ನು ಹಂಚುವ ಲೇಖನಗಳ ಮಾಲೆಯೇ 'ನನ್ನ ಪುಸ್ತಕ ಪ್ರೀತಿ''.

ಈ ಕೃತಿಯು ಸಹಜವಾಗಿಯೇ, ಎಲ್ಲರಲ್ಲಿ ಓದುವ ಪ್ರೀತಿಯನ್ನು, ಓದುವ ಹುಚ್ಚನ್ನು ಬೆಳೆಸುವ ಪುಸ್ತಕ. ಇಲ್ಲಿ ಅವಲೋಕನಕ್ಕೆ ಒಳಗಾಗಿರುವ ಕೃತಿಗಳಲ್ಲಿ, ಖ್ಯಾತನಾಮರ ಪುಸ್ತಕಗಳ ಜತೆಯಲ್ಲೇ, ಹೊಸದಾಗಿ ಬರೆದವರ ಕೃತಿಗಳೂ ಸೇರಿವೆ. ವಿಶೇಷವೆಂದರೆ, ಬಹು ಹಿಂದೆ ಹೊಸಬರ ಇಷ್ಟವಾದ ಕೃತಿ ಎಂದು ವಿಜಯಾ ಶ್ರೀಧರ್ ಅವರು ವಿಮರ್ಶೆಗೆ ಒಳಪಡಿಸಿದ ಕೃತಿಗಳ ಲೇಖಕರು, ಇಂದು ಖ್ಯಾತನಾಮರೂ ಆಗಿದ್ದಾರೆ! ಅಂದರೆ, ಉತ್ತಮ ಲೇಖಕರನ್ನು ಮುಂಚಿತವಾಗಿಯೇ ಗುರುತಿಸಿ, ಪ್ರೋತ್ಸಾಹಿಸುವ ಕೆಲಸವನ್ನೂ ವಿಜಯಾ ಶ್ರೀಧರ್ ಮಾಡಿದ್ದಾರೆ. ಗೋಪಾಲಕೃಷ್ಣ ಅಡಿಗರ ಕಾವ್ಯ, ಮೂಕಜ್ಜಿಯ ಅವಲೋಕನ, ತ್ರಿವೇಣಿಯವರ ಕೃತಿಗಳ ವಿಮರ್ಶೆ, ವೈದೇಹಿಯವರ ಕಾದಂಬರಿಯ ಪರಿಚಯ, ಕುವೆಂಪು ಕೃತಿ ಅವಲೋಕನ ಮೊದಲಾದ ವಿಶಾಲ ವ್ಯಾಪ್ತಿಯ ಇಲ್ಲಿನ ಬರಹಗಳು ಓದುಗರ ಗ್ರಹಿಕೆಯ ವ್ಯಾಪ್ತಿಯನ್ನೂ ಹಿರಿದುಗೊಳಿಸಬಲ್ಲವು. ಜತೆಯಲ್ಲೇ, ಹಲವು ಕೃತಿಗಳ ಪರಿಚಯವನ್ನೂ ಮಾಡಿಕೊಡಬಲ್ಲವು. ಕನ್ನಡಿಗರಲ್ಲಿ ಪುಸ್ತಕ ಪ್ರೀತಿಯನ್ನು ಬೆಳೆಸಲು, ಪುಸ್ತಕ ಓದುವ ಹವ್ಯಾಸವನ್ನು ಹೆಚ್ಚಿಸಲು, ಇಂತಹ ಕೃತಿಗಳು ಇನ್ನಷ್ಟು ಸಂಖ್ಯೆಯಲ್ಲಿ ಪ್ರಕಟವಾಗಬೇಕಾಗಿದೆ.

ನನ್ನ ಪುಸ್ತಕ ಪ್ರೀತಿ
ಲೇ: ವಿಜಯಾ ಶ್ರೀಧರ್
ಪ್ರ: ಸ್ನೇಹ ಪಬ್ಲಿಷಿಂಗ್ ಹೌಸ್, ಬೆಂಗಳೂರು
9845062549
ಬೆಲೆ ರು.220/-

ವಿವಿಧ ಪ್ರಕಾರಗಳ ಐವತ್ತು ಪುಸ್ತಕಗಳನ್ನು ಪರಿಚಯಿಸುವ ಈ ಪುಸ್ತಕವು, ಓದುಗರಲ್ಲಿ ಪುಸ್ತಕ ಪ್ರೀತಿಯನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ ನಡೆಸಿರುವುದು ವಿಶೇಷ.

ಅನನ್ಯ ಸಂಕಲನ

» ಶಶಾಂಕ್ ಮುದೂರಿ

ಕನ್ನಡ ಕಾವ್ಯ ಪ್ರಪಂಚದಲ್ಲಿ ಹೊಸ ದಾರಿ ತೆರೆದು, ಹೊಸ ಸಾಹಿತ್ಯಪ್ರಕಾರವನ್ನೇ ಸಮೃದ್ಧಗೊಳಿಸಿದ ಗೋಪಾಲಕೃಷ್ಣ ಅಡಿಗರನ್ನು ಓದುವುದು, ಅರ್ಥ ಮಾಡಿಕೊಳ್ಳುವುದು ತುಸು ಕಷ್ಟವೇ ಸರಿ. ಅದರಲ್ಲೂ, ಹೊಸ ತಲೆಮಾರಿನ ಓದುಗರು ಅಡಿಗರ ಕಾವ್ಯದ ರಸಾಸ್ವಾದ ಮಾಡಲು, ಮಾರ್ಗದರ್ಶನ ಬೇಕಾದೀತು; ಅಂತಹ ಮಾರ್ಗದರ್ಶನ ನೀಡುವ ಪುಸ್ತಕಗಳಲ್ಲಿ 'ಅನನ್ಯ' ನಿಜಕ್ಕೂ ಅನನ್ಯ! ಸುಮಾರು 794 ಪುಟಗಳ ಈ ಪುಸ್ತಕದಲ್ಲಿ ಅಡಿಗರ ಕಾವ್ಯ ಮತ್ತು ಇತರ ಸಾಹಿತ್ಯದ ಕುರಿತು ಕನ್ನಡದ ಖ್ಯಾತನಾಮರು ರಚಿಸಿದ ಸುಮಾರು 75ಕ್ಕೂ ಅಧಿಕ ಬರಹಗಳಿವೆ. ಡಿ.ಆರ್ .ನಾಗರಾಜ್, ಯು.ಆರ್.ಅನಂತಮೂರ್ತಿ, ಸುಮತೀಂದ್ರ ನಾಡಿಗ, ಜಿ.ಎಚ್.ನಾಯಕ್, ಮಾಧವ ಕುಲಕರ್ಣಿ, ಕಿ.ರಂ. ನಾಗರಾಜ, ಪಿ. ಲಂಕೇಶ್, ಕೆ.ನರಸಿಂಹ ಮೂರ್ತಿ, ದೇಶ ಕುಲಕರ್ಣಿ .. ಈ ರೀತಿ ಇಪ್ಪತ್ತನೆಯ ಶತಮಾನದ ಪ್ರಮುಖ ಲೇಖಕರ ವಿಮರ್ಶಾತ್ಮಕ ಬರಹಗಳಿಂದ ತುಂಬಿಕೊಂಡಿರುವ ಈ ಪುಸ್ತಕವು, ಅಡಿಗರ ಕಾವ್ಯವನ್ನು, ಅವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿರುವುದರಲ್ಲಿ ಸಂಶಯವಿಲ್ಲ. ಗೋಪಾಲಕೃಷ್ಣ ಅಡಿಗರ ಭೂಮಿಗೀತ, ಭೂತ, ಶ್ರೀ ರಾಮನವಮಿಯ ದಿನ, ಹಿಮಗಿರಿಯ ಕಂದರ .. ಈ ರೀತಿ ಎಲ್ಲಾ ಪ್ರಮುಖ ಕವನಗಳ, ಕೃತಿಗಳ ಆಳವಾದ ವಿಶ್ಲೇಷಣೆ, ವಿಮರ್ಶೆ ಇಲ್ಲಿದೆ. ಜತೆಯಲ್ಲೇ, ಅಡಿಗರ ಜೀವನದ ಕಿರು ಪರಿಚಯವನ್ನು ನೀಡುವ ಬರಹಗಳು ಅನುಬಂಧದ ರೂಪದಲ್ಲಿವೆ. ಕನ್ನಡದಲ್ಲಿ ಬಂಡಾಯ ಕಾವ್ಯ ಪ್ರಕಾರ ರೂಪುಗೊಳ್ಳಲು ಅಡಿಗರ ಕೊಡುಗೆಯೂ ಇದೆ ಎಂಬ ವಿಶ್ಲೇಷಣಾತ್ಮಕ ಬರಹವು, ಈಗಿನ ತಲೆಮಾರಿನ ಅಡಿಗರ ಕಾವ್ಯಸಾಹಸಗಳ ಪರಿಚಯವನ್ನು ಹೊಸ ರೀತಿಯಲ್ಲಿ ಮಾಡಿಕೊಡಲು ಯತ್ನಿಸುತ್ತದೆ. ಇಂತಹ ಹಲವು ಗಂಭೀರ ಲೇಖನಗಳನ್ನು ಹೊಂದಿರುವ ಈ ಬೃಹತ್ ಸಂಕಲನವು, ಎಲ್ಲಾ ಸಾಹಿತ್ಯಾಭ್ಯಾಸಿಗಳ, ಕಾವ್ಯಪ್ರೇಮಿಗಳ ಸಂಗ್ರಹದಲ್ಲಿ ಅವಶ್ಯ ಇರಬೇಕು ಎಂದರೆ ಅತಿಶಯೋಕ್ತಿ ಅಲ್ಲ.



ಅನನ್ಯ - ಗೋಪಾಲ ಕೃಷ್ಣ ಅಡಿಗರ ಸಮಗ್ರ ಕಾವ್ಯದ ಪರಿಶೀಲನೆ
ಸಂ: ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ
ಪ್ರ: ಸಮೃದ್ಧ ಸಾಹಿತ್ಯ, ಬೆಂಗಳೂರು
9880773027
ಪುಟಗಳು :794/-
ಬೆಲೆ ರು.350/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಶಿವನಿಗಾಗಿ ಕಾಯುತ್ತ
(ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ)
ಲೇ: ವಿಕ್ರಮ್ ಸಂಪತ್
ಅನು : ಜಿ.ಎಲ್.ಶೇಖರ್, ನರೇಂದ್ರಕುಮಾರ್ ಎಸ್,ಎಸ್.
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 475/-

2

ಸಾಕ್ಷಿ
(ನನ್ನ ಬದುಕಿಗೆ ನಾನೇ ಸಾಕ್ಷಿ)
ಲೇ: ಡಾ| ಗುರುರಾಜ ಕರಜಗಿ
ಪ್ರ: ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ
ಬೆಲೆ : ರೂ 499/-

3



ಉಳಿದಾವ ನೆನಪು
(ಪತ್ರಕರ್ತನ ವೃತ್ತಿ ಜೀವನದ ನೆನಪುಗಳು)
ಲೇ: ಪದ್ಮರಾಜ ದಂಡಾವತಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

4

ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

5



ವಚನ ದರ್ಶನ
ಸಂ : ಜನಮೇಜಯ ಉಮರ್ಜಿ ಮತ್ತು ಇತರರು
(ವಚನ ಸಾಹಿತ್ಯ ಕುರಿತು ವಿದ್ವತ್ಪೂರ್ಣ ಲೇಖನಗಳು)
ಪ್ರ: ಅಯೋಧ್ಯ ಪ್ರಕಾಶನ, ಬೆಂಗಳೂರು
ಬೆಲೆ : ರೂ 260/-

6



ತಿರುಪತಿ ತಿಮ್ಮಪ್ಪ
(ವೇಂಗಡದೊಡೆಯನ ಗುಡಿಯನ್ನು ಕುರಿತು ಒಂದು ಅಧ್ಯಯನ)
ಲೇ: ಸಾ.ಕೃ. ರಾಮಚಂದ್ರರಾವ್
ಪ್ರ: ಅಭಿಜ್ಞಾನ, ಬೆಂಗಳೂರು
ಬೆಲೆ : ರೂ 650/-

7



ಅಂಟದ ನಂಟಿನ ಕೊನೆ ಬಲ್ಲವರಾರು..
(ಕಥಾಸಂಕಲನ)
ಲೇ: ಎನ್. ಸಂಧ್ಯಾರಾಣಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 180/-

8



ಸತ್ತವರ ಸೊಲ್ಲು
(ನಕ್ಸಲ್ ನಾಡಿನ ಮರೀಚಿಕೆಗಳು)
ಮೂಲ ಹಿಂದಿ : ಅಶುತೋಷ್ ಭಾರದ್ವಾಜ್
ಅನು : ಕಾರ್ತಿಕ್ ಆರ್.
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ 380/-

9



ಸಾರಾ
(ಕಾದಂಬರಿ)
ಲೇ: ಅನುಷ್ ಎ.ಶೆಟ್ಟಿ
ಪ್ರ: ಅನುಗ್ರಹ ಪ್ರಕಾಶನ, ಮೈಸೂರು
ಬೆಲೆ : ರೂ 200/-

10



ವರ್ತಮಾನ ಭಾರತ
(ಪುಸ್ತಕ ಭಾರತ ಕುರಿತ ಪ್ರಬಂಧಗಳು)
ಲೇ: ಪುರುಷೋತ್ತಮ ಬಿಳಿಮಲೆ
ಪ್ರ: ಚಿರಂತ್ ಪ್ರಕಾಶನ, ಬೆಂಗಳೂರು
ಬೆಲೆ : ರೂ 325/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ನವ್ಯದ ವಿರುದ್ಧ ಈಜಿದವರು

512 ರಷ್ಟು ದೊಡ್ಡ ಸಂಖ್ಯೆಯ ಕಥೆಗಳನ್ನು ಬರೆದು ಒಂದು ಕಾಲದಲ್ಲಿ ನಾಡಿನ ಪತ್ರಿಕೆಗಳಿಗೆ ಕಲ್ಪತರು ಎನ್ನಿಸಿ ಕೊಂಡಿದ್ದ ಎನ್.ಎಸ್.ಚಿದಂಬರ ರಾವ್ ನನ್ನ ದೊಡ್ಡಪ್ಪ. ನಾನು ಚಿಕ್ಕವನಿದ್ದಾಗಲೇ ಅವರು ಹೆಸರು ಮಾಡಿದ್ದ ಕಥೆಗಾರರಾಗಿದ್ದರು. ನಾಡಿನ ಎಲ್ಲಾ ಪತ್ರಿಕೆಗಳಲ್ಲಿಯೂ ಅವರ ಕಥೆಗಳು ಬರುತ್ತಿದ್ದವು. ಈ ಕುರಿತು ಹೆಮ್ಮೆ ಇದ್ದರೂ ಅವರನ್ನು ಮಾತಾಡಿಸಲು ಭಯವಿತ್ತು. ದೂರದಿಂದಲೇ ಬೆರಗಿನಿಂದ ಅವರನ್ನು ನೋಡುತ್ತಿದ್ದೆ. ನಾನು ಎರಡನೆಯ

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಪಿಯುಸಿಯಲ್ಲಿದ್ದಾಗ 'ತರಂಗ'ದಲ್ಲಿ ಪ್ರಕಟವಾಗಿದ್ದ ಅವರ ಕಥೆಯ ಸಂಬಂಧ, ಅನುಮಾನಗಳು ಮೂಡಿ ನೇರವಾಗಿ ಅವರಿಗೆ ಬರೆಯುವ ಧೈರ್ಯವಾಗದೆ ಅವರ ಮಗಳು ಅಂದರೆ ನನ್ನ ಅಕ್ಕ ಮಂಜುಳಾಗೆ ಬರೆದ ಪತ್ರದಲ್ಲಿ ಸೇರಿಸಿದೆ. ಇದಕ್ಕೆ ದೊಡ್ಡಪ್ಪ ನೇರವಾಗಿ ನನಗೇ ಉತ್ತರಿಸಿದರು. ಅಲ್ಲಿಂದ ಮುಂದೆ ನನ್ನ ಅವರ ನೇರ ಸಂಬಂಧ ಬೆಳೆಯಿತು. ಅದು ಕೊನೆಯ ವರೆಗೂ ನಿಕಟವಾಗಿಯೇ ಇತ್ತು. ಈ ಮೂಲಕ ದೊಡ್ಡಪ್ಪ ನನ್ನನ್ನು ಬೆಳೆಸಿದರು.

ಹೇಗೆ ಎನ್ನುವುದನ್ನು ಒಂದೆರಡು ವಾಕ್ಯದಲ್ಲಿ ಹೇಳುವುದು ಕಷ್ಟ. ಅವರು ಜನಪ್ರಿಯ ಕಥೆಗಾರರಾಗಿದ್ದರೂ ಅವರ ಓದು ಮತ್ತು ಒಳನೋಟಗಳು ಅದಕ್ಕಿಂತಲೂ ಅಗಾಧವಾಗಿದ್ದವು. ಅವರ ಪ್ರತಿಭೆಯ ಹಲವು ಮುಖಗಳಲ್ಲಿ ಸಾಹಿತ್ಯ ಅದರಲ್ಲಿಯೂ ಬರವಣಿಗೆ ಒಂದಾಗಿತ್ತು ಅಷ್ಟೇ. ಮುಖ್ಯವಾಗಿ ಅವರು ಯಾರನ್ನೂ ಆರಾಧಿಸದೆ ವಿಮರ್ಶಾತ್ಮಕವಾಗಿ ನೋಡುವ ಮನೋಭಾವ ಕಲಿಸಿದರು. ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ'ಯ ಮಿತಿಗಳ ಕುರಿತು ಅವರು ತಿಳಿಸಿದಾಗ ನಿಜಕ್ಕೂ ಬೆರಗಾಗಿ ಹೋಗಿದ್ದೆ. ಅವರ ಪಾಶ್ಚಾತ್ಯ ಸಾಹಿತ್ಯದ ಓದು ಬಹಳ ಚೆನ್ನಾಗಿತ್ತು. ಎಡ್ಗರ್ ಅಲೆನ್ ಪೋ ಕವಿತೆಗಳ ಕುರಿತು ಮೋಹ ಹುಟ್ಟಿಸಿದಂತೆ, ಜೇಮ್ಸ್ ಹ್ಯಾಡ್ಲಿ ಚೇಸ್ ಕಾದಂಬರಿಗಳನ್ನೂ ಓದಿಸಿದರು. ಗ್ರೀಕ್ ನಾಟಕಗಳನ್ನು ವಿವರಿಸಿದರು. ಕುಮಾರ ವ್ಯಾಸನ ಭಕ್ತಿಯ ಹೊಳೆಯಲ್ಲಿ ತೇಲಿಸಿದರು. ಜೂಲಿಯಸ್ ಸೀಸರ್ ನಾಟಕವನ್ನು ಅವರಿಂದ ಕಲಿತಿದ್ದನ್ನು ನಾನು ಎಂದಿಗೂ ಮರೆಯಲಾರೆ. ಯುದ್ಧಭೂಮಿಯಲ್ಲಿ ಪುಸ್ತಕ ಓದುವ ಬ್ರೂಟಸ್‌ನ ಪಾತ್ರವನ್ನು ಅವರು ಬಹಳ ಆಕರ್ಷಣೀಯವಾಗಿ ವರ್ಣಿಸಿದ್ದರು.

ವಾಸ್ತವದಲ್ಲಿ ಇಂತಹ ನಿರುದ್ವಿಗ್ನತೆ ಅವರ ವ್ಯಕ್ತಿತ್ವದಲ್ಲಿಯೇ ಇತ್ತು. ಶಿರಸಿಯ ಲಿಂಗದ ಕೋಣ ಕಲ್ಯಾಣ ಮಂಟಪದಲ್ಲಿ ಇನ್ನೇನು ಕೆಲವೇ ಗಂಟೆಗಳಲ್ಲಿ ಮಗಳ ಮದುವೆ ನಡೆಯ ಬೇಕಾದ ಛತ್ರದ ಕಟ್ಟೆಯ ಮೇಲೆ ನಾಗರಸನ ಕನ್ನಡ ಭಗವದ್ಗೀತೆಯನ್ನು ವಿವರಿಸಿದ್ದನ್ನು ಮರೆಯುವುದು ಹೇಗೆ ಸಾಧ್ಯ! ಮನಶಾಸ್ತ್ರದ ಕುರಿತು ಅವರಿಗೆ ಒಳ್ಳೆಯ ಓದಿತ್ತು. ಎಡ್ಗರ್ ಕೇಸಿಯ ಕನಸಿನ ಲೋಕವನ್ನು ಅವರು ಕನ್ನಡಕ್ಕೆ ತಂದಿದ್ದರು. ಸಂಗೀತವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಸಿನಿಮಾ ಕುರಿತಂತೂ ಚರಿತ್ರೆಯ ಹಲವು ವಿಸ್ಮಯಗಳ ಕುರಿತು ನನ್ನಲ್ಲಿ ಮೊದಲು ಅರಿವನ್ನು ಮೂಡಿಸಿದ್ದು ಅವರೇ!

ಎನ್.ಎಸ್.ಚಿದಂಬರ ರಾವ್ ಅವರು ಹುಟ್ಟಿದ್ದು 1936ರ ಸೆಪ್ಟಂಬರ್ 28ರಂದು. ಅವರ ತಂದೆ ನುಲೇನೂರು ಶಂಕರಪ್ಪನವರು ಬಹುಮುಖಿ ಪ್ರತಿಭಾವಂತರು. ತಂದೆಗೆ ಅವರು ಕೈಯಾಗಿ ಕಣ್ಣಾಗಿ ನೆರವಾದವರು. 'ನೀನನ್ನಲ್ಲಿ ನ್ಯಾಸವಿರಿಸಿದೆಯಾ ಹೊನ್ನ' ಎಂದು ಅವರೇ ಈ ಸಂಬಂಧದ ಪರಿಯನ್ನು ವರ್ಣಿಸಿದ್ದಿದೆ. ಬಾಲ್ಯದಿಂದಲೂ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಚಿದಂಬರ ರಾಯರು ಎಸ್.ಎಸ್.ಎಲ್.ಸಿ.ಯಲ್ಲಿ ಏಳನೆಯ ರ‍್ಯಾಂಕ್ ಮತ್ತು ಇಂಟರ್ ಮೀಡಿಯಟ್‌ನಲ್ಲಿ ಎರಡನೇ ರ‍್ಯಾಂಕ್ ಪಡೆದರು. ಬಿ.ಎ(ಆನರ್ಸ್)ಗಾಗಿ ಮೈಸೂರಿಗೆ ಬಂದರು. ಆಗ ದಟ್ಟ ಸಾಹಿತ್ಯಿಕ ವಾತಾವರಣ. ನವ್ಯ ಸಾಹಿತ್ಯದ ದಿಗ್ಗಜರೆಲ್ಲರೂ ಅವರ ಹಿಂದು ಮುಂದಿನ ತರಗತಿಗಳಲ್ಲಿದ್ದರು. ಅವರ ಒಡನಾಟದಲ್ಲಿದ್ದರೂ ಅವರಿಗಿಂತ ಭಿನ್ನವಾಗಿ ಯೋಚಿಸುವುದನ್ನು ಚಿದಂಬರ ರಾಯರು ಆಗಲೇ ರೂಢಿಸಿ ಕೊಂಡಿದ್ದರು. ವಿದ್ವಾಂಸರ ಜೊತೆ ಒಡನಾಡಿ ಪರಂಪರೆಯ ಅರಿವನ್ನೂ ಬೆಳೆಸಿಕೊಂಡರು.

ಆದರೆ ಚಿದಂಬರ ರಾಯರ ವಿದ್ಯಾಭ್ಯಾಸ ಕ್ಯಾಂಪಸ್‌ನಲ್ಲಿ ಬಹಳ ಕಾಲ ನಡೆಯಲಿಲ್ಲ. ದೃಷ್ಟಿದೋಷದಿಂದ ಮೊಟಕುಗೊಳಿಸುವುದು ಅನಿವಾರ್ಯವಾಯಿತು. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ವೃತ್ತಿಯನ್ನು ಆರಂಭಿಸಿದರು. ಆದರೆ ಶಿಕ್ಷಣವನ್ನು ನಿಲ್ಲಿಸದೆ ಅಂಚೆ-ತೆರಪಿನ ಮಾರ್ಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ.ಪದವಿಯನ್ನು ಪಡೆದರು. ಬಿ.ಎಡ್. ಪದವಿಯನ್ನು ಐದನೇ ರ‍್ಯಾಂಕ್‌ನೊಂದಿಗೆ ಪಡೆದರು.

'ಪ್ರಬುದ್ಧ ಕರ್ನಾಟಕ'ದಲ್ಲಿ ಅಚ್ಚಾದ 'ತಂತ್ರಗಳ ಪಂಜರದಲ್ಲಿ' ಕಥನಎನ್ನುವ ಅವರ ಲೇಖನ ನವ್ಯ ಸಾಹಿತ್ಯದ ಕುರಿತು ಹಲವು ದಿಟ್ಟ ಪ್ರಶ್ನೆಗಳನ್ನೆತ್ತಿತ್ತು. ಅದು ಅವರು ವಿಮರ್ಶಕರ ಅವಕೃಪೆಗೆ ಪಾತ್ರರಾಗಲೂ ಕಾರಣವಾಯಿತು.

ಕಥಾ ಸ್ಪರ್ಧೆಯಲ್ಲಿ

ಚಿದಂಬರ ರಾಯರ ಬರವಣಿಗೆ ಆರಂಭವಾಗಿದ್ದು ನಾಟಕಗಳಿಂದ. ಶಿವರಾಮ ಕಾರಂತರನ್ನು ಒಮ್ಮೆ ಭೇಟಿಯಾದಾಗ ನಿಮ್ಮ ಶೈಲಿ ಸಣ್ಣಕಥೆಗೆ ಚೆನ್ನಾಗಿ ಹೊಂದುತ್ತದೆ ಎಂದು ಹೇಳಿದ್ದು ಸಣ್ಣಕಥೆಗಳ ಕಡೆಗೆ ಬರಲು ಕಾರಣವಾಯಿತು. ಮಲ್ಲಾಡಿ ಹಳ್ಳಿ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕರಾದ ಮೇಲೆ ಅದರಲ್ಲಿಯೂ ಎಚ್.ಎಸ್.ವೆಂಕಟೇಶ ಮೂರ್ತಿಯಂತಹವರು ಸಹೋದ್ಯೋಗಿಗಳಾಗಿ ದೊರೆತ ಮೇಲೆ ಬರವಣಿಗೆ ವೇಗವನ್ನು ಪಡೆಯಿತು. ಮೊದಲ ಕಥೆ 'ಅಲೆಗಳು' 1964ರಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಬರಹಕ್ಕೆ ಮುದ ಬಂದಿತು. ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ ಅವರ 'ಕನ್ನಡಿ' ಕಥೆ ಬಹುಮಾನಿತವಾಯಿತು. ಈ ಹಂತದಲ್ಲಿಯೇ ಅವರ ಮೊದಲ ಕಥಾ ಸಂಕಲನ 'ಸರಿಯುವ ತೆರೆಗಳು' ಪ್ರಕಟವಾಯಿತು. ಹೊಸ ಸಾಧ್ಯತೆಯನ್ನು ತೋರುವ ಕಥೆಗಳು ಅದರಲ್ಲಿದ್ದವು.

ಮುಂದೆ ಚಿದಂಬರ ರಾಯರು ಪ್ರವಾಹದ ವಿರುದ್ಧ ಈಜುವ ದಾರಿಯನ್ನು ಆರಿಸಿ ಕೊಂಡರು. 'ಪ್ರಬುದ್ಧ ಕರ್ನಾಟಕ'ದಲ್ಲಿ ಅಚ್ಚಾದ 'ತಂತ್ರಗಳ ಪಂಜರದಲ್ಲಿ' ಕಥನಎನ್ನುವ ಅವರ ಲೇಖನ ನವ್ಯ ಸಾಹಿತ್ಯದ ಕುರಿತು ಹಲವು ದಿಟ್ಟ ಪ್ರಶ್ನೆಗಳನ್ನೆತ್ತಿತ್ತು. ಅದು ಅವರು ವಿಮರ್ಶಕರ ಅವಕೃಪೆಗೆ ಪಾತ್ರರಾಗಲೂ ಕಾರಣವಾಯಿತು. ಅದು ಕನ್ನಡ ನಿಯತಕಾಲಿಕಗಳ ಪಾಲಿಗೆ ವರವಾಯಿತು. ಅದು ನಿಯತಕಾಲಿಕಗಳ ಸುವರ್ಣ ಯುಗ ಎಂದು ಕರೆಯಬಹುದಾದ ಕಾಲ. ಚಿದಂಬರ ರಾಯರು ಪತ್ರಿಕೆಗಳ ಪಾಲಿಗೆ ಅಲ್ಲಾವುದ್ದೀನನ ಅದ್ಭುತ ದೀಪವಾದರು. ಅವರ ಕಥೆಗಳು ಪ್ರಕಟವಾದರೆ ಪತ್ರಿಕೆಗಳ ಪ್ರಸಾರ ಸಂಖ್ಯೆ ಎಷ್ಟೋ ಪಟ್ಟು ಹೆಚ್ಚಾಗುತ್ತಿತ್ತು.

ಚಿದಂಬರ ರಾಯರ ಕಥೆಗಳಲ್ಲಿ ಬಹಳ ಮುಖ್ಯವಾಗಿ ಕಾಣಿಸುವುದು ಪರಂಪರೆಯ ಜೊತೆಗಿನ ಮುಖಾಮುಖಿ. ಸಹಮತ-ಸಂಘರ್ಷ ಎರಡೂ ಇಲ್ಲಿವೆ. 'ಅಷ್ಟಾಂಗ ಯೋಗ, ಆಯುಷ್ಯ, ಹೋಮ ಓಂತತ್ಸತ್, ಪಾದಪೂಜೆ ಎಡೆ' ಈ ನೆಲೆಯಲ್ಲಿ ಮುಖ್ಯವಾದ ಕಥೆಗಳು. ಮನಸ್ಸಿನ ವಿಶಿಷ್ಟ ಆಯಾಮಗಳು ಅವರ ಕಥೆಗಳ ಇನ್ನೊಂದು ನೆಲೆ ಕನ್ನಡಿ ಸರಿಯುವ ತೆರೆಗಳು ಇತಿಹಾಸ ಮುಖ್ಯವಾದಂತಹ ಕಥೆಗಳು. ಗಂಡು ಹೆಣ್ಣಿನ ಸಂಬಂಧದ ಬೇರೆ ಬೇರೆ ನೆಲೆಗಳನ್ನು ಚಿದಂಬರ ರಾಯರು ಪರಿಶೀಲಿಸಿದ್ದಾರೆ. ಅವರ 'ಬೆಂಕಿಯ ನೆರಳು' ಮತ್ತು 'ನಿರ್ದೇಶನ' ಎರಡೂ ಕಾದಂಬರಿಗಳು ಈ ಹಿನ್ನೆಲೆಯಲ್ಲಿ ಬಹಳ ಮುಖ್ಯವಾದವು. ಇವುಗಳು ಒಂದು ರೀತಿಯಲ್ಲಿ ತಮ್ಮ ಕಾಲಕ್ಕಿಂತಲೂ ಬಹು ಮುಂದಿದ್ದವು. 'ನಂಬಿಕೆ' ಪೌರಾಣಿಕ ಚಿತ್ರಣದ ಸಮಕಾಲೀನ ನೆಲೆಯಾದರೆ, 'ಸಿಗ್ನಲ್ ಬೀಳಲಿಲ್ಲ' ಬಹು ಆಯಾಮದ ಕಥೆ. ಕನ್ನಡ ಪರಂಪರೆಯಲ್ಲಿಯೇ ಮುಖ್ಯವೆನ್ನಿಸಬಲ್ಲ ಗಟ್ಟಿತನ ಇದ್ದಕ್ಕಿದೆ. ಜನಪ್ರಿಯ ಸೂತ್ರಗಳನ್ನು ಚಿದಂಬರ ರಾಯರು ಬಳಸಿದ್ದರೂ ಅದನ್ನು ಮೀರಿದ ಗಟ್ಟಿತನ ಮತ್ತು ಸಾವಯವ ಬಂಧ ಅವರ ಕಥೆಗಳಲ್ಲಿದ್ದವು. ಸದಾ ಹಲವು ಹೊಸತನಗಳ ಕುರಿತು ಚಿಂತಿಸುತ್ತಿದ್ದ ಚಿದಂಬರ ರಾಯರು ಕೊನೆಯ ದಿನಗಳಲ್ಲಿ ಬಹಳ ಮುಖ್ಯವಾದ ಸಾಂಸ್ಕೃತಿಕ ದಾಖಲಾತಿಯಲ್ಲಿ ತೊಡಗಿದ್ದರು. ನಿವೃತ್ತಿಯ ನಂತರ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಆಡಳಿತಾಧಿಕಾರಿಯಾಗಿ ಮುಂದುವರೆದಿದ್ದ ಅವರು ಈ ಕಾಲದಲ್ಲಿಯೇ ರಸ್ತೆಯ ಅಪಘಾತಕ್ಕೆ ಒಳಗಾದರು. ಅವರನ್ನು ನಾನು ಕೊನೆಯ ಸಲ ಭೇಟಿಯಾಗಿದ್ದು ಶಿವಮೊಗ್ಗೆಯ ನಂಜಪ್ಪ ಆಸ್ಪತ್ರೆಯಲ್ಲಿ, ವಿಪರ್ಯಾಸವೆಂದರೆ ಈ ಕೊನೆಯ ಭೇಟಿಯಲ್ಲಿ ನಾವು ಮಾತನಾಡಿದ್ದು ಸಾವಿನಾಚೆಗಿನ ಲೋಕದ ಕುರಿತು. ಇದಾದ ಕೆಲವೇ ದಿನಕ್ಕೆ ಅವರು 2001ರ ಜನವರಿ 6ರಂದು ಹೃದಯಾಘಾತದಿಂದ ನಮ್ಮನ್ನಗಲಿದರು. ಅವರ ಬದುಕಿಗೆ ಬೆಂಬಲವಾಗಿದ್ದ ರಮಾ ಈಗ ಎರಡು ವರ್ಷಗಳ ಹಿಂದೆ ನಮ್ಮನ್ನಗಲಿದರು. ದೊಡ್ಡಪ್ಪನ ಮೂವರ ಮಕ್ಕಳಲ್ಲಿ ಮಂಜುಳಾ, ಮಧು ಇಬ್ಬರಿಗೂ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದು, ಮಾಲಿನಿ ಗುರುಪ್ರಸನ್ನ ಅವರು ಸಾಹಿತ್ಯದ ಪರಂಪರೆಯನ್ನು ಮುಂದುವರೆಸಿದ್ದಾರೆ.

ಭ್ರಮೆ

ಎಂಬತ್ತು ವರುಷದ ಗೌರಮ್ಮನನ್ನು ನಾವೆಲ್ಲ ಗೌರಜ್ಜಿ ಎಂದೇ ಕರೆಯುತ್ತಿದ್ದದ್ದು. ಅವರೊಮ್ಮೆ ಬಚ್ಚಲು ಮನೆಗೆ ಹೋಗುತ್ತಿದ್ದಾಗ ತಲೆ ತಿರುಗಿ ಬಿದ್ದುಬಿಟ್ಟರು. ಅವರು ಬೀಳುವುದನ್ನೇ ದೂರದಿಂದ ನೋಡುತ್ತಿದ್ದ ಮಗ ಸುಬ್ಬು

ಹೊಸ ಕಥೆ

» ಶ್ರೀಧರಮೂರ್ತಿ ಎನ್.ಎಸ್.

ಓಡಿ ಬಂದು ತಾಯಿಯನ್ನು ಹಿಡಿದುಕೊಂಡಿದ್ದ. ಒಂದೊಮ್ಮೆ ತಾನು ಹಿಡಿದುಕೊಳ್ಳದಿದ್ದರೆ ತಲೆಗೆ ಬಲವಾದ ಏಟಾಗುತ್ತಿತ್ತು ಎಂದೆಲ್ಲ ಯೋಚಿಸುತ್ತಲೇ ಅಮ್ಮನನ್ನು ಆಸ್ಪತ್ರೆಗೆ ಸೇರಿಸಿದ್ದ. ಡಾಕ್ಟರ್ ಗೌರಜ್ಜಿಯನ್ನು ಹಲವು ವಿಧದಿಂದ ಪರೀಕ್ಷಿಸಿ ಇಂಜೆಕ್ಷನ್ ಕೊಟ್ಟು ಕಳುಹಿಸಿಕೊಟ್ಟಿದ್ದರು. ಒಂದು ವಾರ ಎಲ್ಲವೂ ಸರಿಯಾದಂತೆ ಅನಿಸಿತ್ತು. ಆದರೆ ಗೌರಜ್ಜಿ ಮನೆಯ ಅಂಗಳಲ್ಲಿ ಮತ್ತೊಮ್ಮೆ ಬಿದ್ದಿದ್ದರು. ಮತ್ತೆ ಅದೇ ಆಸ್ಪತ್ರೆ, ಡಾಕ್ಟರ್, ಇಂಜೆಕ್ಷನ್ ಎಂದೆಲ್ಲ ಕಂಡ ಮೇಲೆಯೇ ಅವರು ಗುಣವಾಗಿದ್ದರು.

ನಮ್ಮ ಸುಬ್ಬುವಿನ ಮನೆಯೆಂಬುದು ಹಳ್ಳಿ ಮೂಲೆಯಲ್ಲಿತ್ತು. ಅಲ್ಲಿಂದ ಆಸ್ಪತ್ರೆಗೆ ಹೋಗುವುದೆಂದರೆ ಎರಡು ಮೂರು ಕಿಲೋಮೀಟರ್ ನಡೆದು, ಅಲ್ಲಿಂದ ಹತ್ತು ಹನ್ನೆರಡು ಕಿ.ಮಿ. ದೂರಕ್ಕೆ ಬಸ್ ಹತ್ತಿ ಹೋಗಬೇಕಾಗಿತ್ತು. ಡಾಕ್ಟರ್ ರಂತೂ ಮನೆಗೆ ಬರುವುದಕ್ಕೆ ಸಾಧ್ಯವಿರಲಿಲ್ಲ. ಆ ಊರಿನಲ್ಲಿ ಯಾರಿಗೆ ಏನೇ ಆದರೂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರಬೇಕಿತ್ತು. ಹೀಗಿರುವಾಗ ಮತ್ತೆರಡು ಸಲ ಗೌರಜ್ಜಿ ಮನೆಯಲ್ಲಿ ಬಿದ್ದಿದ್ದರು. ಎದ್ದೆನೋ ಬಿದ್ದೆನೋ ಎನ್ನುತ್ತ ಅಮ್ಮನಿಗೆ ಏನೋ ಆಗಿದೆ ಎನ್ನುತ್ತ ಸುಬ್ಬು ಎಂದಿನಂತೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ಆದರೆ ಅಲ್ಲಿ ಆಗಿದ್ದೇ ಬೇರೆ. ಗೌರಜ್ಜಿಯನ್ನು ಹಲವಾರು ಪರೀಕ್ಷೆಗೆ ಒಳಪಡಿಸಿದ ಡಾಕ್ಟರ್, ಅವರಿಗೇನೂ ಕಾಯಿಲೆ ಇಲ್ಲ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿದ್ದರು. ಅವರಿಗೆ ಯಾವ ಚಿಕಿತ್ಸೆಯನ್ನೂ ನೀಡುವುದಕ್ಕೆ ಬರುವುದಿಲ್ಲ ಎನ್ನುತ್ತ ದೇಹದ ವಿಕ್ನೆಸ್‌ಗಾಗಿ ಇಂಜೆಕ್ಷನ್ ಒಂದನ್ನು ಕೊಟ್ಟು ಅವರನ್ನು ಮನೆಗೆ ಕಳುಹಿಸಿಕೊಡುತ್ತಿದ್ದರು. ಆದರೆ ಗೌರಜ್ಜಿಗೆ ಇದ್ಯಾವುದೂ ಅರ್ಥವೇ ಆಗಿರಲಿಲ್ಲ. ತಾನು ಬೀಳದಿರುವುದಕ್ಕೆ ಡಾಕ್ಟರ್ ಕೊಡುವ ಇಂಜೆಕ್ಷನ್ ಕಾರಣ ಎಂಬಂತೆ ಅಂದುಕೊಂಡಿದ್ದರು.

ದಿನ ಕಳೆದಂತೆ ಗೌರಜ್ಜಿಯ ರೋಗ ಇನ್ನಷ್ಟು ಹೆಚ್ಚಾಯಿತು. ಈಗ ತಾನು ಬೀಳದಿದ್ದರೂ ಬಿದ್ದೆ ಎಂದು ಅಂದುಕೊಳ್ಳುವುದಕ್ಕೆ ಪ್ರಾರಂಭಿಸಿದರು. ಹಾಗಾದಾಗೆಲ್ಲ ಅವರಿಗೆ ಇಂಜೆಕ್ಷನ್ ಕೊಡಿಸಬೇಕಿತ್ತು. ಇಲ್ಲವಾದಲ್ಲಿ ಮನೆಯೆಲ್ಲ ರಂಪ ಮಾಡಿಬಿಡುತ್ತಿದ್ದರು. ತನ್ನನ್ನು ನೋಡಿಕೊಳ್ಳುವವರು ಈ ಮನೆಯಲ್ಲಿ ಯಾರೂ ಇಲ್ಲವೆಂದು ಅಲವತ್ತುಕೊಂಡು ರೋದಿಸುತ್ತಿದ್ದರು. ಅತ್ತ ಸುಬ್ಬುವಿಗೆ ತಲೆಬಿಸಿಯಾಯಿತು. ಆಸ್ಪತ್ರೆಗೆ ಹೋದರೆ ಡಾಕ್ಟರ್ 'ಯಾಕೆ ಬಂದಿದ್ದೀರಿ? ಅವರಿಗೆ ಯಾವ ರೋಗವೂ ಇಲ'ವೆಂದು ಕಳುಹಿಸುತ್ತಿದ್ದರು. ಈ ಕಡೆ ಅಜ್ಜಿ ಇಂಜೆಕ್ಷನ್ ಇಲ್ಲದೇ ಇರುವುದಕ್ಕೆ ಬಿಲ್ ಕುಲ್ ಒಪ್ಪುತ್ತಿರಲಿಲ್ಲ. ಈ ಉಭಯ ಸಂಕಟದಲ್ಲಿ ಸಿಲುಕಿ ಸುಬ್ಬು ಪರಿಹಾರಕ್ಕೆಂದು ಚಡಪಡಿಸುತ್ತಿದ್ದ. ಆ ದಿನ ಗೌರಜ್ಜಿ ತಾನು ಬಿದ್ದಂತೆ ಅಂದುಕೊಂಡು ಇಂಜೆಕ್ಷನ್‌ಗಾಗಿ ಹಠಹಿಡಿದಿದ್ದರು. ಪಾಪ ಸುಬ್ಬುವಿಗೆ ಆ ದಿನ ಬೇರೊಂದು ಕೆಲಸವನ್ನು ತುರ್ತಾಗಿ ಮಾಡುವುದಿದ್ದಿದ್ದರಿಂದ ಆಸ್ಪತ್ರೆಗೆ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ಹಾಗಂತ ಗೌರಜ್ಜಿಯನ್ನು ಹಾಗೆಯೇ ಇಟ್ಟುಕೊಳ್ಳುವುದಕ್ಕೂ ಆಗುತ್ತಿರಲಿಲ್ಲ. ಏನು ಮಾಡುವುದೆಂದು ಚಿಂತಿಸುವಾಗಲೇ ಯೋಚನೆಯೊಂದು ತಲೆಯನ್ನು ಹೊಕ್ಕಿತು.

ಮನೆಯಲ್ಲಿ ಗೌರಜ್ಜಿ ಯಾವಾಗಲೂ ಕತ್ತಲ ಕೋಣೆಯಲ್ಲಿ ಮಲಗಿರುತ್ತಿದ್ದಳು. ಆ ಕೋಣೆಯೊಳಗೆ ಹೋದರೆ ಪಕ್ಕನೇ ಯಾರ ಮುಖವೆಂದು ತಿಳಿಯುತ್ತಿರಲಿಲ್ಲ. ಸುಬ್ಬು ತಮ್ಮ ಹಿರಿಯ ಮಗ ವೇಣುವಿಗೆ ಪ್ಯಾಂಟು ಶರಟು ಹಾಕಿಸಿ, ಮುಖಕ್ಕೆ ಮಾಸ್ಕ್ ತೊಡಿಸಿ, ಗೌರಜ್ಜಿಯನ್ನು ನೋಡುವುದಕ್ಕೆ ಡಾಕ್ಟರ್ ಬಂದಿದ್ದಾರೆ ಎಂಬಂತೆ ಕರೆದುಕೊಂಡು ಕೋಣೆಗೆ ಹೋದ. ವೇಣು ಬಹಳ ಚುರುಕಿನ ಹುಡುಗ. ಡಾಕ್ಟರ್‌ನಂತೆ ಗೌರಜ್ಜಿಯನ್ನು ಬೇಕಾದಂತೆ ಮಾತಾಡಿಸಿ ಅವರಿಗೆ ಇಂಜೆಕ್ಷನ್ ಕೊಟ್ಟಂತೆ ನಟಿಸಿಬಿಟ್ಟ. ಗೌರಜ್ಜಿಗೆ ಇಂಜೆಕ್ಷನ್ ಕೊಟ್ಟಿದ್ದಕ್ಕೆ ಬಹಳ ಖುಷಿಯಾಯಿತು. ಮತ್ತೆ ಒಂದೇ ಗಂಟೆಯಲ್ಲಿ ಎದ್ದು ಮನೆಯೆಲ್ಲ ಓಡಾಡಿ ಮೊದಲಿನಂತೆ ಆಗಿದ್ದರು.

ಯಾವಾಗ ಈ ನಟನೆ ಅಜ್ಜಿಯ ಕಾಯಿಲೆಗೆ ಪರಿಹಾರವಾಯಿತೋ ಸುಬ್ಬು ಇದನ್ನೇ ಮತ್ತೆ ಮತ್ತೆ ಮುಂದುವರೆಸಿದ್ದ. ಅವರು ಬದುಕಿದ ಆ ಒಂದು ವರುಷದಲ್ಲಿ ಹಲವು ಬಾರಿ ಸುಬ್ಬುವಿನ ಈ ಇಂಜೆಕ್ಷನ್ ನಾಟಕದಿಂದ ಗೌರಜ್ಜಿ ಗುಣವಾಗಿದ್ದರು. ತನ್ನನ್ನು ಮನೆಯವರು ನೋಡಿಕೊಳ್ಳುವುದಕ್ಕೆ ಮನಸ್ಸು ತುಂಬಿಬರುತ್ತ ಮನೆಗೆ ಬಂದವರಲ್ಲಿ ನನ್ನ ಮಗ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಬೇಸರ ಮಾಡಿಕೊಳ್ಳದೇ ಡಾಕ್ಟರ್ ಕರೆಯಿಸಿ ಔಷಧ ಕೊಡಿಸುತ್ತಾನೆ ಎಂದು ಬಾಯಿ ತುಂಬ ಹೊಗಳುತ್ತಿದ್ದರು. ಅದನ್ನು ಕೇಳುವಾಗಲೆಲ್ಲ ಸುಬ್ಬು ಮೀಸೆಯ ಕೊನೆಯಲ್ಲಿ ಹುಸಿ ನಗೆಯಾಡುತ್ತ, ಗೆದ್ದ ಬಗ್ಗೆ ಸಂತೋಷಗೊಂಡಿದ್ದ!

ನನಗೂ ಈಗ ವಯಸ್ಸಾದ ನಂತರ, ನಿಶಕ್ತಿ ಕಾಡುತ್ತಿದೆ. ಮೊನ್ನೆ ನಮ್ಮ ಮನೆಯಲ್ಲಿ ನಾನು ತಲೆ ತಿರುಗಿ ಬಿದ್ದೆ; ಗೊತ್ತೇ ಆಗಿರಲಿಲ್ಲ. ಆಗ, ಆಸ್ಪತ್ರೆಗೆ ಕರೆದೊಯ್ಯುವ ಬದಲು, ಮಗ ಡಾಕ್ಟರ್‌ನ್ನೇ ಮನೆಗೆ ಕರೆಸಿ ಇಂಜೆಕ್ಷನ್‌ನ್ನು ಕೊಡಿಸಿದ್ದ. ಅಷ್ಟರ ಮೇಲೆ ಯಾಕೋ ನನಗೆ ಗೌರಜ್ಜಿಯ ಕಥೆ ಹೆಚ್ಚು ನೆನಪಾಗುವುದಕ್ಕೆ ಪ್ರಾರಂಭವಾಗಿದೆ.

ದಿಗ್ದಿಗಂತಕ್ಕೆ ರಂಗೇರಿಸುವವರು

ಮುಂಬೈಯ ದಾರಿಯಲ್ಲಿ ಪ್ರಯಾಣಿಸುವಾಗ ಇಕ್ಕೆಲಗಳಲ್ಲಿ ದೃಷ್ಟಿ ಹಾಯಿಸಿದರೆ ದಿನ ದಿನವೂ ಕಾಣುವುದು ನಮ್ಮ ನಿರೀಕ್ಷೆಗಿಂತ ಭಿನ್ನವಾದ ಒಂದು ವಿಸ್ಮಯ ಪ್ರಪಂಚ. ಮಾಮೂಲಿನಂತೆ ಸ್ಕೂಟರ್ ಚಲಾಯಿಸುವವರಲ್ಲಿಯೂ ಕೆಲವರು ಒಳ ಕುದಿಯನ್ನು ಅದುಮಿಟ್ಟುಕೊಂಡ ಸರ್ಕಸ್

ಮುಂಬಾಪುರಿ

» ಕಲಾ ಭಾಗ್ವತ್

ಪಾತ್ರಧಾರಿಯಂತೇ, ಇನ್ನು ಕೆಲವರು ಆಧುನಿಕತೆಯ ಬೆನ್ನುಹತ್ತಿದ ಏಲಿಯನ್‌ಗಳಂತೇ ಭಿನ್ನವಾಗಿ ಕಾಣುತ್ತಾರೆ. ಇದು ಬೇರೆ ಎನ್ನುವ ಅರ್ಥದ ಭಿನ್ನತೆಯಲ್ಲ, ಬದಲಾಗಿ ನಮ್ಮನ್ನು ಬದುಕಿನ ನಿಜ ದರ್ಶನದೆಡೆಗೆ ಸೆಳೆಯುವ ಭಿನ್ನತೆ. ಅರಬ್ಬೀ ಸಮುದ್ರದ ಮಗುವಾಗಿ ನಿಂತ ಮುಂಬಾಪುರಿಯಲ್ಲಿ ಜನಸಾಗರದ ಅಂತ್ಯವಿಲ್ಲದ ಅಲೆಗಳದೇ ದೊಡ್ಡ ಆರ್ಭಟ. ಹೇಗೋ ಬಂದು ಸೇರಿಕೊಳ್ಳುವ ಜನಗಳು ಬಂದ ಹೊಸತರಲ್ಲಿ ಇಲ್ಲಿ ಜೀವಿಸಲು ಹೆಣಗಾಡಬೇಕು. ಹೊಸ ದಂಧೆಯನ್ನು ಕಲಿಯಬೇಕು, ಎಲ್ಲರೊಡನೆ ಬೆರೆತು ತಮ್ಮದೇ ಆದ ಹಾದಿಯನ್ನು ಕಂಡುಕೊಳ್ಳಬೇಕು. ಈ ಕಂಡುಕೊಳ್ಳುವಿಕೆಯು ಇಲ್ಲಿ ಸಾರ್ವತ್ರಿಕವಾಗಿ ಅನ್ವಯವಾಗುವಂತೆ ಅವರವರ ಬುದ್ಧಿಮಟ್ಟ, ಕೌಶಲ್ಯ, ಸೃಜನಶೀಲತೆ ಹಾಗೂ ದೈಹಿಕ ಕ್ರಿಯಾಶೀಲತೆಯ ಮೇಲೆಯೇ ಅವಲಂಬಿತವಾಗಿದೆ. ಅದಕ್ಕನುಗುಣವಾಗಿ ನಡೆಯುವ ವ್ಯಾಪಾರ ವಹಿವಾಟುಗಳ ನಮೂನಿಯೇ ಭಿನ್ನವಾಗಿದೆ. ಹೊಸ ಹೊಸ ತಂತ್ರಗಳನ್ನು ಉಪಯೋಗಿಸಿ ಎಲ್ಲ ವರ್ಗಗಳ ಆಸೆ ಆಕಾಂಕ್ಷೆಗಳಿಗೆ ಎಟಕುವ ರೀತಿಯಲ್ಲಿ ವ್ಯವಹರಿಸುವ ಈ ಜನಗಳೊಳಗೊಂದಾಗಿ ಜೈಸಿ ಬರುವುದು ಮಹಾಸಾಹಸವೇ ಸರಿ.

ರಸ್ತೆಯ ಬದಿಯಲ್ಲಿ ಹವಾನಿಯಂತ್ರಿತ ಸೂಪರ್ ಮಾರ್ಕೆಟ್ಟು, ಬಟ್ಟೆ ಮಳಿಗೆಗಳು, ಫ್ಯಾನ್ಸಿ ಅಂಗಡಿಗಳ ಗಲ್ಲಾಪೆಟ್ಟಿಗೆಯಲ್ಲಿ ಕುಳಿತು ಹೊಸ ಹೊಸ ನೋಟುಗಳನ್ನು ಎಣಿಸುತ್ತಾ ಕುಳಿತಿರುವ ಮಾಲಿಕರು ಕಾಲನ ಕೈಹಿಡಿದು ಮುಂದೆ ಬಂದು ಗತ್ತು ಗಮ್ಮತ್ತಿನಲ್ಲಿ ಕುಳಿತಿರುತ್ತಾರೆ. ಅಲ್ಲೇ ಬದಿಯ ಕಾಲ್ದಾರಿಯಲ್ಲಿ ಮರುಬಳಕೆಯ ಬಟ್ಟೆಗಳನ್ನು ಗಟ್ಟಿ ಮುಟ್ಟಾಗಿಸಿ, ಘಮ್ಮೆನ್ನುವ ಸುಗಂಧವನ್ನು ಸಿಂಪಡಿಸಿ 'ಕೇವಲ ನೂರು ರೂಪಾಯಿ' ಎಂದು ಕೂಗಿ ಗಿರಾಕಿಗಳನ್ನು ಕರೆಯುವ ವ್ಯಾಪಾರಿಗಳಿರುತ್ತಾರೆ. ಕೊಂಡ ಬಟ್ಟೆಗಳನ್ನು ಮೈ ಅಳತೆಗೆ ತಕ್ಕಂತೆ ಐದು ನಿಮಿಷದಲ್ಲಿ ಗರ‍್ರನೆ ಮಿಷನ್ ಒತ್ತಿ ಹೊಂದಿಸಿಕೊಟ್ಟು ಖುಷಿಪಡಿಸುವ, ಹರಿದಲ್ಲಿ ತೇಪೆ ಹಚ್ಚಿ ಸರಿಪಡಿಸುವ ಹೊಲಿಗೆ ಮಾಸ್ತರ್‌ಗಳು, ಬದಲಿ ಚಾವಿಗಳನ್ನು ಮಾಡಿಕೊಡುವ ಭಯ್ಯಾ, ಇಂತಹ ಅನೇಕರು ಇಲ್ಲಿನ ಸಾಮಾನ್ಯ ಜನರ ಜೀವನವನ್ನು ಸುಲಭಗೊಳಿಸಿರುವುದಂತೂ ಸತ್ಯ.

ಮರದ ಪೆಟ್ಟಿಗೆಯೇ ಇವರೆಲ್ಲರ ಅಂಗಡಿ. ನಂಬಿಕೆಯೆಂಬ ಕೀಲಿಯನ್ನು ಜೊತೆಯಲ್ಲಿಟ್ಟುಕೊಂಡು ಎಲ್ಲೋ ದೂರದ ಉಪನಗರಗಳಲ್ಲಿರುವ ತಮ್ಮ ನೆಲೆಗಳಿಗೆ ಹೋಗಿ ಮರುದಿನ ಬೆಳಿಗ್ಗೆ ಬಂದು ನಿಲ್ಲುವವರೆಗೂ ಈ ಪೆಟ್ಟಿಗೆಯು ಅಲ್ಲಾಡುವುದಿಲ್ಲ ಅಕ್ಕುಮುಕ್ಕಾಗುವುದಿಲ್ಲ.

'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎನ್ನುವ ಸತ್ಯದ ನೆಲೆಯಲ್ಲಿ ಮುಂಬೈಯ ಜನಜೀವನವು ಸಾಗಿದೆ. ಹೊಸದಾಗಿ ಬಂದವರಿಗೆ, ವಲಸೆಯೊಳಗೊಂದು ವಲಸೆ ಮಾಡುವವರಿಗೆ ಬಾಡಿಗೆ ಮನೆಯನ್ನು, ಹೊಸತಾಗಿ ಖರೀದಿಸುವವರಿಗೆ ಅವರವರ ಬಜೆಟ್ಟಿಗೆ, ಅಭಿರುಚಿಗೆ ತಕ್ಕ ಮನೆಗಳನ್ನು ತೋರಿಸಿ, ಲಕ್ಷಗಟ್ಟಲೆ ದುಡಿಯುವ ಏಜೆಂಟರು ಮಾರು ಮಾರಿಗೆ ಇಲ್ಲಿ ಕಾಣ ಸಿಗುತ್ತಾರೆ. ಓಮಿನಿ ಕಾರಲ್ಲಿ ಮಿಣಿ ಮಿಣಿ ವೈದ್ಯನೊಬ್ಬ ಆಯುರ್ವೇದ ತೈಲಗಳನ್ನು, ಸಣ್ಣಪುಟ್ಟ ದೈಹಿಕ ನೋವುಗಳಿಗೆ ಔಷಧಿಯನ್ನು ಇಟ್ಟುಕೊಂಡು ನಿರ್ದಿಷ್ಟ ಜಾಗದಲ್ಲಿ ಕಾರನ್ನು ನಿಲ್ಲಿಸಿ ಹಾಯಾಗಿ ಕುಳಿತಿರುತ್ತಾನೆ. ಅದರ ಉಪಯುಕ್ತತೆಯ ಬಗೆಗೆ ಹೇಳಿ ರೆಕಾರ್ಡ್ ಮಾಡಿದ ಧ್ವನಿಯನ್ನು ಆತ ಆ ದಾರಿಯಲ್ಲಿ ಸಾಗುವವರಿಗೆಲ್ಲ ಶ್ರವಣ ಮಾಡಿಸುತ್ತಾನೆ. ನೋವಿನಿಂದ ನರಳುವವರಿಗೆ ಆತನ ಕಡೆಗೆ ಹೆಜ್ಜೆ ಹಾಕಲು ಆ ಧ್ವನಿಯೇ ಸಾಕು. ಹೀಗೆ ಜನದಟ್ಟಣೆಯಿರುವ ಪ್ರದೇಶಗಳಲ್ಲಿ ಗೃಹ ಕೈಗಾರಿಕೆಯಲ್ಲಿ ತಯಾರಿಸಿದ ತಿಂಡಿ ತಿನಿಸುಗಳು, ಪೂಜಾ ಸಾಮಗ್ರಿಗಳು ಹಣ್ಣು ತರಕಾರಿಗಳು ಇತ್ಯಾದಿಗಳನ್ನು ಮಾರುವ ನಾಲ್ಕು ಚಕ್ರದ ವಾಹನಗಳು ಸಾಕಷ್ಟು ಸಿಗುತ್ತವೆ. ಬಣ್ಣ ಬಣ್ಣದ ಸಕ್ಕರೆ ಪಾಕವನ್ನು ಬಾಟಲಿಯಲ್ಲಿ ತುಂಬಿಟ್ಟುಕೊಂಡು ಗಿರಾಕಿಗಳು ಬಂದರೆ ಅದನ್ನು ಗ್ಲಾಸಿಗೆ ಸುರಿದು ನೀರು ಹಾಕಿ ನಿಂಬೆಹಣ್ಣು ಹಿಂಡಿ, ಪುದಿನಾ ಸೊಪ್ಪು, ಚಾಟ್ ಮಸಾಲ ಇತ್ಯಾದಿ ರುಚಿಕಾರಕ ಸಾಮಗ್ರಿಗಳನ್ನು ಸೇರಿಸಿ ಶರಬತ್ತು ಮಾಡಿ ಕುಡಿಸುವ ಅಂಗಡಿಗಳು ಅಲ್ಲಲ್ಲಿ ನಿಂತಿರುತ್ತವೆ. ಎಲ್ಲದಕ್ಕೂ ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ. ಕಟಿಂಗ್ ಚಾಯ್ ಅಂಗಡಿಯವನಿಗಂತೂ ಗಿರಾಕಿಗಳ ಮುಖವನ್ನು ಕಣ್ತೆರೆದು ನೋಡಲಿಕ್ಕೂ ಪುರುಸೊತ್ತಿರುವುದಿಲ್ಲ. ಆದಾಗ ಕೈ ಮೇಲೆ ಬಸಿದು ನೆಕ್ಕಿ ನೋಡಿ ರುಚಿಯನ್ನು ಹದಗೊಳಿಸುವುದರಲ್ಲಿ ಆತ ತಲ್ಲೀನನಾಗಿರುತ್ತಾನೆ. ಅದರಿಂದಲೇ ತನ್ನ ಬದುಕನ್ನೂ ಹದಗೊಳಿಸುವ ಕಲೆಯನ್ನು ಆತ ಚೆನ್ನಾಗಿ ಕಲಿತಿರುತ್ತಾನೆ.

ಅವರು ಇವರು ಸೇರಿಯೇ ಈ ಮಹಾ ಊರು. ಇದಂತೂ ಸತ್ಯ

ಮುಂಬೈಯಲ್ಲಿ ಇಟಾಲಿಯನ್ ಬಾರ್ಬರ್‌ಗಳ ಸೇವೆ ವಿಶೇಷ. ಇಟ್ಟಿಗೆಯ ಕಟ್ಟೆಯ ಮೇಲೆ ಕ್ಷೌರದಂಗಡಿ ನಡೆಸುವುದರಿಂದ ಅವರಿಗೆ ಈ ಹೆಸರಂತೆ. ಇವರೆದುರು ಹಾಯುವ ದಾರಿಹೋಕರು ತಮ್ಮ ತಲೆಯನ್ನು, ಗಡ್ಡವನ್ನು ಆ ಕ್ಷಣದಲ್ಲಿ ಒಮ್ಮೆ ಮುಟ್ಟಿ ನೋಡಿಕೊಳ್ಳುತ್ತಾರೆ. ನೂರರಲ್ಲಿ ಒಬ್ಬನಿಗೆ ಯಾವುದೋ ಪ್ರಿಯತಮೆಯು ಮೂಂಚ್ ನಿಕಾಲೋ (ಮೀಸೆ ತೆಗಿ) ಎಂದದ್ದು ನೆನಪಾಗುತ್ತದೆ. ತಕ್ಷಣ ಅವನೆದುರಿಗೆ ಕುಳಿತುಬಿಡುವ ಆತ ಹತ್ತೇ ನಿಮಿಷದಲ್ಲಿ ಬಾಲಿವುಡ್, ಕ್ರಿಕೆಟ್ ತಾರೆಯರಂತಾದ ಭಾವದಲ್ಲಿ ಅಲ್ಲಿಂದ ಏಳುತ್ತಾನೆ. ಕಾಂಪೌಂಡ್ ಗೋಡೆಗೆ ಒಂದು ಕನ್ನಡಿಯನ್ನು ನೇತು ಹಾಕಿ ಅವರಿಗೆ ಅವರವರನ್ನು ಕಾಣಿಸುತ್ತಾನೆ. ಇಟ್ಟಿಗೆಯ ಕಟ್ಟೆಮೇಲಿಟ್ಟ ಕ್ಷೌರದ ಪರಿಕರಗಳು, ಒಂದು ಕ್ಯಾನ್ ನೀರು, ಒಂದು ಪ್ಲಾಸ್ಟಿಕ್ ಕುರ್ಚಿ ಇವಿಷ್ಟು ಅವನ ಆಸ್ತಿ. ಹವಾನಿಯಂತ್ರಿತ ಸಲೂನುಗಳ ಕೇಶವಿನ್ಯಾಸಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ದಿನವೂ ಬದಲಾಗುವ ಟ್ರೆಂಡ್ ಗಳಿಗೆ ಅನುಗುಣವಾಗಿ ಆತ ಅಭಿಮಾನದಿಂದ ಕ್ಷೌರ ಮಾಡಿಕೊಡುತ್ತಾನೆ. ಅವರಿಂದ ಇವನ ಕೈ ಸೇರುವುದು ಐವತ್ತು ರೂಪಾಯಿ. ಮುಂಬೈಯ ನಡೆದಾಡುವ ದೇವರು ಸಂತೆಯಲ್ಲಿ ಹೊತ್ತು ಮಾರುವ ಹಣ್ಣು ಹಂಪಲು, ಕುರುಕಲು ತಿಂಡಿ, ಸಮೋಸ, ಶೇಂಗಾ, ಕುಲ್ಫಿ, ಚಾ ಇತ್ಯಾದಿಗಳು ಒಂದೇ ಎರಡೇ..?

ಆಶೆ-ಪಾಶಗಳಿಲ್ಲದ ಇವರಿಗೆಲ್ಲ ರಟ್ಟೆ ಇದ್ದರೆ ರೊಟ್ಟಿ. ಹಬ್ಬ ಹರಿದಿನಗಳಲ್ಲಿ ಮದ್ಯ ಕುಡಿದು ಮತ್ತಿನಲ್ಲಿ ಕುಣಿದು ಕುಪ್ಪಳಿಸುವವರಿಗೆಲ್ಲ ಅನಾಥ ಪ್ರಜ್ಞೆಯ ಮೂಕ ಅಳುವಿನಿಂದ ಬಿಡುಗಡೆ ಎಂದರೆ ಅದೇ. ದಿನದ ಅಂತ್ಯದಲ್ಲಿ ಕಾಣದಂತೆ ಮಾಯವಾಗುವ ಎಲ್ಲ ದುಡಿಮೆಗಾರರು ಮುಂಬೈಯ ಹೃದಯ ಬಡಿತವನ್ನು ಹದವಾಗಿ ಇಡುವಲ್ಲಿ ಮುಂಬಾ ಆಯಿಯ ದಿಕ್ಕು ದಿಗಂತವನ್ನು ರಂಗಾಗಿಸುವಲ್ಲಿ ಮುಖ್ಯರಾಗುತ್ತಾರೆ. ಅವರು ಇವರು ಸೇರಿಯೇ ಈ ಮಹಾ ಊರು. ಇದಂತೂ ಸತ್ಯ.

ಬಂಗಾರ ಬಣ್ಣದ ನಾಗ ಬಾಯ್ದೆರೆದು ನಿಂತಾಗ!

▸▸ ಮೊದಲ ಪುಟದಿಂದ

ನಮ್ಮ ಆಶ್ರಮದ ಜಾಗದಲ್ಲಿ ಹನುಮಂತ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದರಿಂದಾಗಿ ಆ ಜಾಗದ ಕುರಿತಾಗಿ ಕೇಳಲೆಂದು ಪಟ್ಟಾಭಿಯವರು ಹನುಮಂತನನ್ನು ಆವಾಹಿಸಿರೆಂದು ಕೇಳಿಕೊಂಡರು. ಆ ವ್ಯಕ್ತಿ ಹಾಗೆಯೇ ಮಾಡಿದರು. ಅವರ ಮುಖ, ಚರ್ಯೆಗಳು, ಸಂಪೂರ್ಣ ಬದಲಾದವು. ನಿಜಕ್ಕೂ ಹನುಮಂತನ ಉಪಸ್ಥಿತಿಯ ಅನುಭೂತಿ ಅಲ್ಲಿದ್ದವರಿಗೆಲ್ಲ ಆಗತೊಡಗಿತು. ಹಾಗೆಯೇ ಇತರರೂ ತಮಗೆ ಬೇಕಾದ ಪ್ರಶ್ನೆಗಳನ್ನು ಅವರೆದುರು ಇಟ್ಟು ಉತ್ತರಗಳನ್ನು ಪಡೆದುಕೊಂಡರು.

ಸ್ವಾಮಿ ರಾಮರು ಬಂದಾಗ

ಆದರೆ ನನಗೆ ಮಾತ್ರ ಅವರ ಬಗ್ಗೆ ಇನ್ನೂ ಅಷ್ಟಾಗಿ ನಂಬಿಕೆ ಬಂದಿರಲಿಲ್ಲ. ನಂತರ ಆ ಮಹಾ ಪುರುಷರು ನನ್ನೆಡೆಗೆ ತಿರುಗಿ ನಿಮಗಾಗಿ ಯಾರನ್ನು ಕರೆಸಲಿ? ಎಂದು ಕೇಳಿದರು. ನನಗೆ ದೇವರುಗಳಿಗಿಂತಲೂ ನನ್ನ ಗುರುದೇವರೆಂದರೆ ಹೆಚ್ಚು ಪ್ರೀತಿ. 'ನನ್ನ ಗುರುದೇವ ಸ್ವಾಮಿ ರಾಮರನ್ನು ಕರೆಸಬಲ್ಲಿರಾ?' ಕೇಳಿದೆ. ಅವರು, ನನ್ನ ಗುರು ಯಾರು, ಎಲ್ಲಿ ವಾಸಮಾಡುತ್ತಿದ್ದರು, ಇತ್ಯಾದಿ ಕೊಂಚ ವಿವರ ಕೇಳಿದರು. ಅಷ್ಟೊತ್ತಿಗೆ ಗುರುದೇವ ಸ್ವಾಮಿ ರಾಮರು ದೇಹ ತ್ಯಜಿಸಿದ್ದರು. ಆ ಮಹಾಪುರುಷರು ಅಂತೆಯೇ ಸ್ವಾಮಿರಾಮರನ್ನು ಆವಾಹಿಸಿಕೊಂಡರು. ನಾನು, ಪಟ್ಟಾಭಿಯವರು ಇಬ್ಬರಿಗೂ ಬಾಬಾ ಅಲ್ಲಿ ಬಂದುದರ ಅನುಭವವಾಯಿತು!

ಬಾಬಾ ನಿಜಕ್ಕೂ ಇವರ ದೇಹದಲ್ಲಿ ಬರುವರೇ ಎಂಬ ಬಗ್ಗೆ ನನಗೆ ಅನುಮಾನವಿತ್ತು. ಆದರೆ ಬಾಬಾರನ್ನು ಆವಾಹಿಸಿದ ನಂತರ ಬಾಬಾ ಅಲ್ಲಿ ಬಂದಿರುವುದರ ಸ್ಪಷ್ಟ ಅನುಭವವಾಯಿತು! ಅವರ ಧ್ವನಿ, ಮಾತಿನ ಶೈಲಿ, ದೇಹ ಭಾಷೆ ಎಲ್ಲವೂ ಥೇಟ್ ಬಾಬಾರಂತೆಯೇ!

ಅದನ್ನು ನೋಡಿ ನಾನು ನಡುಗಲಾರಂಭಿಸಿದೆ. ನಾ ಹೀಗೆ ಇವರನ್ನು ಪರೀಕ್ಷೆ ಮಾಡಬಾರದಿತ್ತು, ಮತ್ತೂ ಬಾಬಾರನ್ನೂ ಹೀಗೆ ಕರೆಸಬಾರದಿತ್ತು ಎಂದು ನನ್ನಲ್ಲಿ ತೀವ್ರ ತಪ್ಪಿತಸ್ಥ ಭಾವನೆ ಉಂಟಾಯಿತು. ಬಾಬಾ ನನ್ನ ಮೇಲೆ ಕೋಪಗೊಂಡಿರುವುದೂ ತಿಳಿಯಿತು!

ಇಷ್ಟೆಲ್ಲ ನಡೆಯುತ್ತಿದ್ದಾಗ ಆ ವ್ಯಕ್ತಿಯ ಕಂಠದಿಂದ ಬಾಬಾರ ಧ್ವನಿ ಕೇಳಿತು. "There was no need for you to go to a farm and do Sadhana!!". Why do you think Bhagavathi comes only when you suffer like this? I am already with you. You can do your Sadhana where ever you are! ಇತನಾ ಕಷ್ಟ್ ಲೇನೇಕಿ ಕ್ಯಾ ಝುರೂರತ್ ಥೀ?' ಎಂದರು ಬಾಬಾ. ಇದನ್ನು ಕೇಳಿ ಪಟ್ಟಾಭಿಯವರಿಗೆ ಖುಷಿಯಾಯಿತು. ಯಾಕೆಂದರೆ ನಾನು ಅಷ್ಟೆಲ್ಲ ಕಷ್ಟ ಸಹಿಸಿ, ಹಾಗೆಲ್ಲ ಎಲ್ಲೆಲ್ಲೋ ಕಾಡು ಜಾಗಗಳಲ್ಲಿ ಹೋಗಿ ಒಬ್ಬಳೇ ಸಾಧನೆ ಮಾಡುತ್ತೇನೆಂದು ಹೊರಡುವುದು ಪಟ್ಟಾಭಿಯವರಿಗೂ ಇಷ್ಟವಿರಲಿಲ್ಲ. ನನ್ನ ಸುರಕ್ಷತೆಯ ಬಗ್ಗೆ ಅವರಿಗೂ ಚಿಂತೆಯಾಗುತ್ತಿತ್ತು. ಈಗ ಬಾಬಾ ಕಡೆಯಿಂದ ಹೀಗೆ ಬೈಗುಳ ತಿಂದ ಮೇಲೆ ಇನ್ನ್ಯಾವತ್ತೂ ನಾನು ಅಂತಹ ಸಾಹಸಗಳನ್ನು ಮಾಡಲಾರೆ ಎಂದು ಅವರಿಗೆ ಸಮಾಧಾನ ಉಂಟಾಯಿತು! ಅದು ಅವರ ಪ್ರೀತಿ. ಯೋಗಿಗಳೆಲ್ಲ ಅಷ್ಟೆತ್ತರದ ಪರ್ವತ ಹತ್ತಿಳಿದು ಚಳಿಮಳೆ ಲೆಕ್ಕಿಸದೇ ಸಾಧನೆ ಮಾಡಿದಂತೆ, ನಾನೂ ಏಕಾಂತದ ಸಾಧನೆಯನ್ನಾದರೂ ಮಾಡೋಣ ಎಂಬ ಈ ಪ್ರಯತ್ನದಿಂದ ಏಕಾಂತ ಸಾಧನೆಯ ಭ್ರಮೆ ಕಳಚಿತು.

ಕಡೆಯದಾಗಿ ಬಾಬಾ ಹೇಳಿದರು 'ಬೇಟೀ ಕಭೀಬೀ ಏಸಾ ಮತ್ ಕರನಾ. ಏ ಸಬ್ ಕರನೇ ಕೀ ಜರೂರತ್ ತುಮ್ಹೆ ನಹೀ ಹೈ. ಐ ಚಿಞ ಚ್ಞಿಡಿಚಿಢಿಂ ಡಿಜಿರಿಜ ಢಿಟ್ಠ' ಹೀಗಂತ ಬಾಬಾ ನನಗೆ ಬ್ಲಾಂಕ್ ಚೆಕ್ ಕೊಟ್ಟು ಬಿಟ್ಟರು!

» ರವಿಶಂಕರ್ ಎಸ್. ಎಲ್.

ಯಾರಿಲ್ಲಿ ಸೂತ್ರಧಾರಿ?

ನಾಟಕವ ನೋಡದು ಬ್ರಹ್ಮಾಂಡರಂಗಸ್ಥಲದಿ।
ಕೋಟಿ ನಟರಾಂತಿಹರು ಚಿತ್ರಪಾತ್ರಗಳ॥
ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ
ನೋಟಕರು ಮಾಟಕರೆ ಮಂಕುತಿಮ್ಮ

ಇತ್ತೀಚೆಗೆ ತೊಗಲುಬೊಂಬೆ ಆಟ ನೋಡುವ ಸಂದರ್ಭ ಒದಗಿ ಬಂತು. ನೋಡುತ್ತಾ ತಲ್ಲೀನನಾಗಿದ್ದನನಗೆ ಹಾಗೇ ಹರಿದುಬಂದ ಪ್ರಶ್ನೆ-ಉತ್ತರ-ಚಿಂತನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಪ್ರಶ್ನೆ - ಬೊಂಬೆಯಾಟದಲ್ಲಿ ಸೂತ್ರಧಾರಿಯಾರು? ಪಾತ್ರಧಾರಿ ಯಾರು? ಸೂತ್ರಧಾರಿಯಂತೂ ಎಲ್ಲರಿಗೂ ತಿಳಿದ ವಿಧಿಲೀಲೆ ಅಥವಾ ದೈವಲೀಲೆ. ಇಂತಹ ಬೊಂಬೆಯಾಟವನ್ನು ನೋಡಿ ತನ್ಮಯನಾಗಿ ಆಸ್ವಾದಿಸುವವನೇ ಪಾತ್ರಧಾರಿ! ಏಕೆಂದರೆ, ವಾಚ ಕರ ಅಥವಾ ನೋಡುಗರ, ಮನಸ್ಸನ್ನು ಪರಿಪಾಕಗೊಳಿಸುವುದೇ ಕಲೆಯ ಮುಖ್ಯಕಾರ್ಯ. ದೇಶ-ಕಾಲ ಇವುಗಳನ್ನು ನೋಡು ಗರು ಅನುಭವಿಸಲು ಅನುವು ಮಾಡಿಕೊಡುವ ಕಲಾಪ್ರಸ್ತುತಿ ಯು, ನೋಡುಗರೂ ಮುಖ್ಯಪಾತ್ರಗಳೊಡನೆ ಐಕ್ಯಹೊಂದಿ, ಆ ಪಾತ್ರಗಳ ಶತ್ರುಮಿತ್ರರನ್ನು ತಮ್ಮ ಸ್ವಂತ ಶತ್ರುಮಿತ್ರರಂತೆ ಕಂಡು, ಆ ಪಾತ್ರಗಳು ಅಳುವಾಗ ತಾವೂ ಅತ್ತು, ಅವರು ನಗುವಾಗ ತಾವೂ ನಕ್ಕು, ಅವರ ಮನೋಧರ್ಮವನ್ನು ನೋಡುಗರು ಅಭ್ಯಸಿಸಿ ತಮ್ಮದಾಗಿಸಿಕೊಳ್ಳವಂತೆ ಮಾಡುತ್ತದೆ. ಹೀಗೆ ಮಾಡಿಸು ವುದೇ ಕಲೆಯ ಚಾತುರ್ಯ. ನೋಡುಗರನ್ನು ಬೇರೊಂದು ಪ್ರಪಂಚಕ್ಕೆ ಕರೆದೊಯ್ದು, ರಸಾನುಭವದ ಪರಾಕಾಷ್ಠೆಯ ಪರಿಚಯ ಮಾಡಿಸಿ, ಕ್ರಮೇಣ ರಸಾನುಭವದ ನಿರಂತರ ವರ್ಷದಲ್ಲಿ ಅವರನ್ನು ತೋಯಿಸಿ, ಕಡೆಗೆ ನೋಡುಗನು - ತಾನು

ಬೇರೆ, ತಾನು ಅನುಭವಿಸುತ್ತಿರುವ ಪಾತ್ರ ಬೇರೆ ಎಂಬುದನ್ನೇ ಮರೆತು ಆ ರಸಾಸ್ವಾದನೆಯಲ್ಲಿಯೇ ಲೀನವಾಗುವಂತೆ ಮಾಡು ವುದು. ಈ ತಲ್ಲೀನತೆಯಿಂದ ದೊರೆತ ರಸಾನುಭವವು, ನೋಡು ಗರ ಹೃನ್ಮಗಳನ್ನು ಸಾಮಾಜಿಕವಾಗಿ ಹಾಗೂ ವಯ್ಯಕ್ತಿಕವಾಗಿ ನಿಸ್ಸಂದೇಹವಾಗಿ ಸ್ವಚ್ಛಗೊಳಿಸುತ್ತದೆ. ಅದುದರಿಂದಲೇ ಡಿವಿಜಿ ಯವರು ನೋಟಕರನ್ನು ಮಾಟಕರು ಎಂದು ಕರೆದರು. ಇಪ್ಪತ್ತ ನೆಯ ಶತಮಾನದ ಕೊನೆಯ ತನಕವೂ ತೊಗಲು ಗೊಂಬೆಯಾ ಟವು ಗ್ರಾಮೀಣ ಪ್ರದೇಶದಲ್ಲಿ ಮನರಂಜನೆಯ ಪ್ರಮುಖ ಮಾಧ್ಯಮವಾಗಿತ್ತು. ಇಂದು ತೊಗಲು ಗೊಂಬೆಯಾಟವು ಕಡಿಮೆಯಾಗಿದೆ; ಅದನ್ನು ಆಡಿಸಬಲ್ಲ ಗ್ರಾಮೀಣ ಕಲಾವಿದರೂ ಕಡಿಮೆಯಾಗಿದ್ದಾರೆ. ಇದೂ ಸಹ, ಈ ಜಗದ ನಾಟಕರಂಗದ ವಿದ್ಯಮಾನಗಳಲ್ಲಿ ಒಂದು ಎನ್ನಬಹುದಲ್ಲವೆ!

ಚಿನ್ನದಂತಹ ಮಾತು!

» ನಾರಾಯಣ ಯಾಜಿ

ಹಣ ಹೂಡಿಕೆಯು ಒಂದು ಕ್ಲಿಷ್ಟ ವಿಚಾರ. ಬ್ಯಾಂಕಿನ ಠೇವಣಿಯು ಅತಿ ಸುಭದ್ರ, ನಿಜ; ಆದರೆ, ಅದರಲ್ಲಿ ಬಡ್ಡಿ ಆದಾಯವು ತುಸು ಕಡಿಮೆ ಮತ್ತು ಅದು ತೆರಿಗೆ ಕಡಿತಕ್ಕೆ ಒಳಪಟ್ಟಿದೆ. ಮ್ಯೂಚುವಲ್ ಫಂಡ್, ಶೇರು, ಸರಕಾರಿ ಬಾಂಡ್‌ಗಳು ಮೊದಲಾದ ವಿನಿಯೋಜನೆಗಳಲ್ಲಿ ಸಾಕಷ್ಟು ರಿಸ್ಕ್ ಇದೆ, ಲಾಭ ದೊರಕಲೂ ಬಹುದು. ಇವೆಲ್ಲವುಗಳಿಗೆ ಪರ್ಯಾಯವಾಗಿ, ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನೀಡುವ ಸೊವೆರಿನ್ ಚಿನ್ನದ ಬಾಂಡ್‌ಗಳು ಮತ್ತು ಇದರಲ್ಲಿನ ಹೂಡಿಕೆಯ ಮೌಲ್ಯವು ಚಿನ್ನದ ಬೆಲೆ ಏರಿಕೆಯಾದಂತೆಲ್ಲಾ ಹೆಚ್ಚಾಗುತ್ತದೆ ಎನ್ನುತ್ತಾರೆ, ಲೇಖಕರು.

ಇಂದು ಮಧ್ಯಮ ವರ್ಗ ಸುರಕ್ಷಿತ ಉಳಿತಾಯಕ್ಕಾಗಿ ಅನೇಕ ಮಾರ್ಗವನ್ನು ಹುಡುಕುತ್ತಿದೆ. ಇವತ್ತಿನ ದಿನಗಳಲ್ಲಿ ಬ್ಯಾಂಕು ಮುದ್ದತ್ತು ಠೇವಣಿಯ ಆಕರ್ಷಕ ತಾಣವಾಗಿ ಉಳಿದಿಲ್ಲ. ಸಂಬಳ ಮತ್ತು ಇನ್ನಿತರ ದಿನನಿತ್ಯದ ಬಳಕೆಗಾಗಿ ಚಾಲ್ತಿಖಾತೆಯನ್ನು ಉಳಿಸಿಕೊಂಡು ಭವಿಷ್ಯದ ಭದ್ರತೆಗಾಗಿ ಇನ್ನಿತರ ಅವಕಾಶಗಳನ್ನು ಹುಡುಕುವ ನವ ಮಧ್ಯಮ ವರ್ಗವನ್ನು ಗಮನಿಸಬಹುದಾಗಿದೆ. ಯುವ ಜನತೆಯಂತೂ ಎಸ್‌ಐಪಿ ಇಲ್ಲವೇ ಶೇರು ಮಾರುಕಟ್ಟೆಯ ಆಕರ್ಷಣೆಯಲ್ಲಿ ಹೂಡಿಕೆಯನ್ನು ಮಾಡುತ್ತಿದ್ದಾರೆ. ಬ್ಯಾಂಕಿನ ಠೇವಣಿಯ ದರ ಕಡಿಮೆ, ಜೊತೆಗೆ ವಾರ್ಷಿಕ ಬಡ್ಡಿ 40000/- (50000/- ಹಿರಿಯ ನಾಗರಿಕರಿಗೆ) ರೂಪಾಯಿ ದಾಟಿದರೆ ಅದರ ಮೇಲೆ ಶೇ 10% ತೆರಿಗೆ ಕೊಡಬೇಕಾಗುತ್ತದೆ. ಇನ್ನು ಶೇರು ಮಾರುಕಟ್ಟೆಯ ಸರಿಯಾಗಿ ಅರಿವಿಲ್ಲದೇ ಹೋದರೆ ಎಲ್ಲವೂ ಫೊಟಕ್. ಪರಸ್ಪರ ನಿಧಿಗಳು ಒಳ್ಳೆಯ ಹೂಡಿಕೆಯಾದರೂ ಇಲ್ಲಿಯೂ ಅಪಾಯ ಇದ್ದೇ ಇದೆ. ಈಗಂತೂ ಕ್ಯಾಪಿಟಲ್ ಗೈನ್ ಬೆಂಬಿಡದ ಭೂತವಾಗಿ ಕಾಡುತ್ತಿದೆ.

ಇವೆಲ್ಲಾ ಚರ್ಚೆ ಚಿಂತನೆಗಳಿಗೆ ಪರ್ಯಾಯವಾಗಿ ಇರುವ ಮತ್ತೊಂದು ಹೂಡಿಕೆ ಸೊವೆರಿನ್ ಚಿನ್ನದ ಬಾಂಡಗಳು ಎನ್ನುವುದು ಹೆಚ್ಚಿನವರಿಗೆ ತಿಳಿದಿಲ್ಲ. ಭಾರತ ಸರಕಾರದ ಪರವಾಗಿ ರಿಸರ್ವ್ ಬ್ಯಾಂಕ್ ಹೊರಡಿಸುವ ಈ ಬಾಂಡಗಳ ಮೊದಲನೆಯ ಸರಣಿ 2015 ನವಂಬರ ತಿಂಗಳಿನಲ್ಲಿ ಬಂದಿತ್ತು. ಅದರ ಮುಖಬೆಲೆ 2,684 ರೂಪಾಯಿಗಳಾಗಿದ್ದವು. ಸರಕಾರದ ಈ ಹೊಸ ಯೋಜನೆಗೆ ಸಾರ್ವಜನಿಕರು ಅಷ್ಟೇನೂ ಸ್ಪಂದಿಸಲಿಲ್ಲ. ಆದಾಗ್ಯೂ ಒಟ್ಟೂ 240 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಸಮರ್ಥವಾಯಿತು.

ಇದರ 67ನೆಯ ಸರಣಿಯ ಚಿನ್ನದ ಬಾಂಡ್ 2024ರ ಫೆಬ್ರುವರಿ 21 ರಂದು 6263/- ರ ಮುಖಬೆಲೆಯಲ್ಲಿ

ಬಂದಾಗ ಸುಮಾರು 8000 ಕೋಟಿ ರೂಪಾಯಿಗೂ ಮಿಕ್ಕಿ ಹಣ ಸಂಗ್ರಹವಾಯಿತು. ಈ ಯೋಜನೆ ಪ್ರಾರಂಭವಾದಂದಿನಿಂದ ಇದುತನಕ ಒಟ್ಟೂ 72,274/- ಕೋಟಿ ರೂಪಾಯಿಗಳನ್ನು ಇದುತನಕ ಸಂಗ್ರಹಿಸಲಾಗಿದೆ. ಸುರಕ್ಷಿತ ಮತ್ತು ಭದ್ರತೆಯ ದೃಷ್ಟಿಯಿಂದ ಬ್ಯಾಂಕು, ಅಂಚೆ ಕಛೇರಿಯ

ಠೇವಣಿಯ ನಂತರದ ಸ್ಥಾನದಲ್ಲಿರುವ ಚಿನ್ನದ ಬಾಂಡಿನ ವಿವರವನ್ನು ಗಮನಿಸೋಣ.

ಭಾರತೀಯರಿಗೂ ಚಿನ್ನಕ್ಕೂ ಬಿಡಿಸಲಾರದ ನಂಟಿದೆ. ಬೇರೆ ಎಲ್ಲಾ ದೇಶಗಳಲ್ಲಿ ಚಿನ್ನವನ್ನು ಉಳಿತಾಯಕ್ಕೆ ಪರ್ಯಾಯವಾಗಿ ನೋಡಿದರೆ ಏಷ್ಯಾದ ಅದರಲ್ಲಿಯೂ ನಮ್ಮ ದೇಶದಲ್ಲಿ ಚಿನ್ನ ಅಲಂಕಾರಿಕವಾಗಿ ಆಭರಣ ರೂಪದಲ್ಲಿ ಇರಿಸಿಕೊಂಡವರೇ ಹೆಚ್ಚು. ಇಲ್ಲಿ ಚಿನ್ನವನ್ನು ಮಾರುವುದು ಅವಮಾನವೆಂದೇ ಭಾವಿಸುತ್ತಾರೆ. ಬ್ಯಾಂಕಿನಲ್ಲಿ ಚಿನ್ನವನ್ನು ಅಡವಿಡುವವ ಸಲುವಾಗಿ ತರುವಾಗಲೂ ಪರಿಚಯದವರು ಯಾರಾದರೂ ಇದ್ದಾರೆನೋ ಎಂದು ನೋಡಿಕೊಂಡು ಬರುತ್ತಾರೆ. ಇಲ್ಲಿನ ಬೇಡಿಕೆಯ ಪ್ರಮಾಣದಲ್ಲಿ ಚಿನ್ನ ಉತ್ಪಾದನೆಯಾಗದ ಕಾರಣ ಚಿನ್ನವನ್ನು ಆಮದುಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ಬಂದಿದ್ದೇವೆ. ಪೆಟ್ರೋಲಿಯಮ್ ನಂತರ ಅತೀ ಹೆಚ್ಚಿನ ವಿದೇಶಿ ವಿನಿಮಯ ಬೇಕಾಗಿರುವುದು ಚಿನ್ನದ ಆಮದಿಗಾಗಿ.

ರಿಸರ್ವ ಬ್ಯಾಂಕ್ ಪ್ರಕಟಿಸಿರುವಂತೆ 2011 ರಿಂದ 2023ರ ತನಕ ನಮ್ಮ ದೇಶ ಒಟ್ಟಾರೆಯಾಗಿ ರೂ. 30.40 ಲಕ್ಷ ಸಾವಿರ ಕೋಟಿ ಮೊತ್ತದ ಚಿನ್ನವನ್ನು ಆಮದುಮಾಡಿಕೊಂಡಿದೆ. ಕಳೆದ ಒಂದು ವರ್ಷದಲ್ಲಿಯೇ ಸುಮಾರು ರೂ. 2.80 ಲಕ್ಷಕೋಟಿಯಷ್ಟು ಚಿನ್ನವನ್ನು ಆಮದು ಮಾಡಿಕೊಂಡಿದ್ದು, ಅದರ ಹಿಂದಿನ ವರ್ಷದ ರೂ.3.44 ಲಕ್ಷಕೋಟಿಗೆ ಹೋಲಿಸಿದರೆ ಕಡಿಮೆ ಎನ್ನಬಹುದು. ಇದಕ್ಕೆ ಪ್ರಮುಖ ಕಾರಣ ಚಿನ್ನದ ಬಾಂಡಗಳು ನಿಧಾನವಾಗಿಯಾದರೂ ಚಿನ್ನಕ್ಕೆ ಪರ್ಯಾಯವಾಗಿ ಜನರನ್ನು ಸೆಳೆಯುತ್ತಿದೆ.

ಚಿನ್ನವನ್ನು ಮನೆಯಲ್ಲಿಟ್ಟುಕೊಳ್ಳುವುದು ಎಂದರೆ ಅಪಾಯಕ್ಕೆ ಆಹ್ವಾನವಿತ್ತಂತೆ. ಬ್ಯಾಂಕಿನ ಲಾಕರ್ ಇದೆಯಾದರೂ ಅಲ್ಲಿನ ಬಾಡಿಗೆ ಹೆಚ್ಚು, ಜೊತೆಗೆ ನಮಗೆ ಬೇಕಾದ ಸೈಜಿನ ಲಾಕರುಗಳ ಕೊರತೆಯಿದೆ. ಇನ್ನು ಆಭರಣಗಳ ಮಾದರಿಗಳು ವರ್ಷದಿಂದ ವರ್ಷಕ್ಕೆ ಬದಲಾಗುವುದರಿಂದ ಅದನ್ನು ಮುರಿಸಿ ಹೊಸದನ್ನು ಮಾಡಿಸಿಕೊಳ್ಳುವಾಗ ತ್ಯಾಮಾನಾ (ವೇಸ್ಟೇಜ್) ಹೆಸರಿನಲ್ಲಿ ಕಳೆದುಕೊಳ್ಳುವುದೇ ಹೆಚ್ಚು. ಜೊತೆಗೆ ಮೇಕಿಂಗ್ ವೆಚ್ಚ ಬೇರೆ. ಇವೆಲ್ಲವುದಕ್ಕೆ ಪರ್ಯಾಯವಾಗಿ ಚಿನ್ನದ ಬಾಂಡಗಳ ವಿವರವನ್ನು ಗಮನಿಸೋಣ.

1. ಸಾಮಾನ್ಯವಾಗಿ ರಿಸರ್ವ ಬ್ಯಾಂಕ್ ವರ್ಷಕ್ಕೆ ನಾಲ್ಕು ಸಾರಿ ಸೊವೆರಿನ್ ಚಿನ್ನದ ಬಾಂಡಗಳನ್ನು ಬಿಡುಗಡೆ ಮಾಡುತ್ತದೆ. ಇದನ್ನು ಅಂಚೆಕಛೇರಿಯಲ್ಲಾಗಲೀ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಎಚ್‌ಸಿಐಎಲ್) ಅಥವಾ ನಿಗದಿತ ಏಜೆಂಟರಿಂದಾಗಲೀ ಖರೀದಿಸಬಹುದು. ಡಿಮ್ಯಾಟ್ ಖಾತೆ ಹೊಂದಿದ್ದರೆ ಖರೀದಿ ತುಂಬಾ ಸುಲಭ.
2. ಓರ್ವ ವ್ಯಕ್ತಿ ಕನಿಷ್ಟ ಒಂದು ಗ್ರಾಮ್‌ನಿಂದ ವರ್ಷಕ್ಕೆ ಗರಿಷ್ಟ ನಾಲ್ಕು ಕೆಜಿಯ ತನಕದ ಬಾಂಡ್ ಖರೀದಿಸಬಹುದು. ಟ್ರಸ್ಟಗಳಾದರೆ 20 ಕಿಲೋ ತನಕ ಖರೀದಿ ಮಾಡಬಹುದು. ರಿಸರ್ವ ಬ್ಯಾಂಕ್ 999 ಶುದ್ಧತೆಯ ಬಾಂಡ್‌ಗಳನ್ನು ಬಾಂಡ್ ಬಿಡುಗಡೆಗೂ ಮೂರುದಿನದ ಮೊದಲಿನ ಸರಾಸರಿ ಬೆಲೆಯ ಮೇಲೆ ನಿರ್ಧರಿಸುತ್ತದೆ. ಅರ್ಜಿ ಹಾಕಿದವರಿಗೆಲ್ಲರಿಗೂ ಬಾಂಡಗಳನ್ನು ನೀಡಲಾಗುತ್ತದೆ.
3. ಇದು 8 ವರ್ಷಗಳ ಅವಧಿಯದಾಗಿದ್ದು. ವಾರ್ಷಿಕ 2.5% ಬಡ್ಡಿಯನ್ನು ನೀಡಲಾಗುತ್ತದೆ. ವರ್ಷಕ್ಕೆ ಎರಡು ಸಾರಿ ಬಡ್ಡಿಯನ್ನು ಹೂಡಿಕೆದಾರರ ಬ್ಯಾಂಕಿನ ಖಾತೆಗೆ ಜಮಾ ಮಾಡಲಾಗುತ್ತದೆ. ಬಡ್ಡಿ ಹಣದಲ್ಲಿ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ಆದರೆ ವ್ಯಕ್ತಿಗಳ ಆದಾಯಕ್ಕೆ ಅನುಗುಣವಾಗಿ ಆದಾಯಕರದ ವ್ಯಾಪ್ತಿಗೆ ಬರುತ್ತದೆ. ನಾಮನಿರ್ದೇಶನವನ್ನು ಅತ್ಯಗತ್ಯವಾಗಿ ಮಾಡಲೇಬೇಕು.
4. ಎಂಟು ವರ್ಷದ ನಂತರ ಹೂಡಿಕೆದಾರನಿಗೆ ಚಿನ್ನವನ್ನು ಕೊಡಲಾಗುವುದಿಲ್ಲ; ಬದಲಿಗೆ ಅಂದಿನ ಮಾರುಕಟ್ಟೆಯ ಮೌಲ್ಯದ ಆಧಾರದಲ್ಲಿ ಮರುಪಾವತಿ ಮಾಡಲಾಗುತ್ತದೆ. 2015ರ ಮೊದಲ ಬಾಂಡ್ 2684/- ರೂ ಇದ್ದಿದ್ದು ಎಂಟುವರ್ಷಗಳ ನಂತರ ಪ್ರತೀ ಗ್ರಾಮಿಗೆ 6232/- ರೂಪಾಯಿಯಂತೆ ವಾರ್ಷಿಕವಾಗಿ ಶೇ 12 ರಂತೆ ತಿರುಗಿ ಕೊಡಲ್ಪಟ್ಟಿದೆ. ಹೂಡಿದ ಹಣ ಎರಡೂವರೆ ಪಟ್ಟು ಹೆಚ್ಚಾಗಿದೆ. 'ಮಹತ್ವದ ವಿಷಯವೆಂದರೆ ಈ ಹಣಕ್ಕೆ ಕ್ಯಾಪಿಟಲ್ ಗೇಯ್ನ್ ಲಾಗೂ ಆಗುವುದಿಲ್ಲ'. ನಿಮ್ಮ ಮಕ್ಕಳ ಮದುವೆಗೋ ಇನ್ನಿತರ ಉದ್ದೇಶಗಳಿಗೂ ಹೂಡಿಕೆ ಮಾಡಿದ್ದರೆ ಆ ಹಣದಿಂದ ಆಭರಣಗಳನ್ನು ಕೊಳ್ಳಬಹುದು.
5. ಅವಧಿಗೆ ಮುನ್ನವೇ ಹೂಡಿಕೆದಾರರಿಗೆ ಹಣ ಬೇಕಾದರೆ ಈ ಬಾಂಡುಗಳನ್ನು ಚಿನ್ನದ ಆಭರಣಗಳಂತೆ ಅಡವು ನೀಡಿ ಬ್ಯಾಂಕಿನಿಂದ ಸಾಲ ಪಡೆಯಬಹುದು ಇಲ್ಲವೇ ಸಾಲಕ್ಕೆ ಭದ್ರತೆಯಾಗಿ ನೀಡಬಹುದಾಗಿದೆ.
6. ಈ ಬಾಂಡುಗಳನ್ನು ಶೇರುಗಳ ರೀತಿ ಮಾರಬಹುದಾಗಿದೆ. ಐದು ವರ್ಷಗಳಾದ ಮೇಲೆ ಇದನ್ನು ರಿಸರ್ವ ಬ್ಯಾಂಕಿನಿಂದಲೇ ಮುರಿಸಬಹುದಾಗಿದೆ. ಆದರೆ ಅವಧಿಗೆ ಮುನ್ನ ಮುರಿಸಿದರೆ 'ಕ್ಯಾಪಿಟಲ್ ಗೇಯ್ನ್' ಕಟ್ಟಬೇಕಾಗುತ್ತದೆ.
7. ಕಳ್ಳರು ಕದಿಯುವ ಭಯವಿಲ್ಲ; ಡಿಮ್ಯಾಟ್ ಖಾತೆಯಲ್ಲಿರುವ ಕಾರಣ ಲಾಕರಗಳ ರಗಳೆಯಿಲ್ಲ. ಉಡುಗೊರೆಯ ರೂಪದಲ್ಲಿಯೂ ಇದನ್ನು ಬೇರೆಯವರಿಗೆ ನೀಡಬಹುದು.

ಹೂಡಿಕೆ ಎನ್ನುವಲ್ಲಿ ಅಪಾಯ ಇರುವುದರಿಂದ ಅವಧಿಮುಗಿದ ಮೊತ್ತ ಆಯಾಸಂದರ್ಭದ ಚಿನ್ನದ ಬೆಲೆಯನ್ನು ಅಧರಿಸಿರುತ್ತದೆ ಎನ್ನುವುದನ್ನು ಗಮನಿಸಬೇಕು. ಒಂದುವೇಳೆ ಚಿನ್ನದ ಬೆಲೆ ಪಾತಾಳಕ್ಕೆ ಕುಸಿದರೆ ಆಗ ತೊಂದರೆಯಾಗಬಹುದು. ಈ ಸಾಧ್ಯತೆ ಬಲು ಕಡಿಮೆ. ಬ್ಯಾಂಕ್ ಠೇವಣಿಗೆ ಪರ್ಯಾಯವಾಗಿ ಉಳಿದ ಹೂಡಿಕೆಗಳನ್ನು ಗಮನಿಸಿದರೆ ಹೆಜ್ ಫಂಡ್ ಆಗಿ ಇದು ಒಳ್ಳೆಯ ಯೋಜನೆ.

ಸೊವೆರಿನ್ ಚಿನ್ನದ ಬಾಂಡುಗಳಿಗಿಂತ ಮೊದಲೂ ಇದೇ ರೀತಿಯ ಬಾಂಡುಗಳನ್ನು ಮ್ಯುಚುವಲ್ ಫಂಡ್‌ಗಳು ನಿರ್ವಹಿಸುತ್ತಿದ್ದವು. ಇದಕ್ಕೆ ಬಡ್ಡಿ ಇಲ್ಲ, ಆದರೆ ಮಾರುಕಟ್ಟೆಯಲ್ಲಿ ಮಾರಬಹುದಾಗಿದೆ. ಕ್ಯಾಪಿಟಲ್ ಗೇಯ್ನ್ ಲಾಗೂ ಆಗುತ್ತದೆ. ಈಗಲೂ ಅದರಲ್ಲಿ ಹೂಡಿಕೆಮಾಡಬಹುದಾಗಿದೆ. ಸೊವೆರಿನ್ ಬಾಂಡುಗಳು ರಿಸರ್ವ ಬ್ಯಾಂಕಿನದ್ದಾಗಿರುವ ಕಾರಣ ಭದ್ರತೆ ಹೆಚ್ಚು.

ಸರಕಾರದ ಉದ್ದೇಶ ಈಡೇರಿದೆಯೇ?

ಸೊವೆರಿನ್ ಬಾಂಡ್ ತಂದಿರುವ ಉದ್ದೇಶ ಚಿನ್ನದ ಬದಲಿಗೆ ಪೇಪರ್ ಚಿನ್ನವನ್ನು ಜನಪ್ರಿಯ ಗೊಳಿಸುವುದಾಗಿದೆ. ಹಾಗಂತ ಖರೀದಿ ಮಾಡಿದ ಹಣಕ್ಕೆ ಬದಲಿಯಾಗಿ ರಿಸರ್ವ ಬ್ಯಾಂಕಿನಲ್ಲಿ ಆ ಮೊತ್ತಕ್ಕೆ ಒಂದೂ ಗ್ರಾಮೂ ಚಿನ್ನವಿರುವುದಿಲ್ಲ. ಮ್ಯೂಚುವಲ್ ಫಂಡ್‌ಗಳ ಬಾಂಡ್‌ಗಳ ಬದಲಿಯಾಗಿ ಅಷ್ಟು ಮೊತ್ತದ ಚಿನ್ನವನ್ನು ಪರಸ್ಪರ ನಿಧಿಗಳು ಇರಿಸಲೇ ಬೇಕಾಗುತ್ತದೆ. ಸರಕಾರ ಹೊರಡಿಸುವ ಡಿರವೇಟಿವ್ ಇನ್‌ಸ್ಟ್ರುಮೆಂಟ್ (ಸಾಲ ಪತ್ರ) ಇದಾಗಿದೆ. ನಿರ್ದಿಷ್ಟ ಮೊತ್ತದ ಎಸ್‌ಜಿಬಿ ಯಲ್ಲಿ ಹೂಡಿಕೆ ಮಾಡಿದ ತಕ್ಷಣ ಹೂಡಿಕೆದಾರರ ಸಂಗಡ ಸರಕಾರದ ಆ ಮೊತ್ತಕ್ಕೆ ಸರಿಸಮನಾದ ಮಾರುಕಟ್ಟೆ ಬೆಲೆಯ ಚಿನ್ನದ ಬೆಲೆಯನ್ನು ಜೊತೆಗೆ ಶೇ 2.5 ವಾರ್ಷಿಕ ಬಡ್ಡಿಯನ್ನು ಕೊಡುವುದಾಗಿ ಹಣಕಾಸಿನ ಕಾಂಟ್ರಾಕ್ಟ್ ಮಾಡಿಕೊಳ್ಳುತ್ತದೆ.

ಚಿನ್ನದ ಆಮದಿನ ವಿಷಯದಲ್ಲಿ ಭಾರತ ವಿಶ್ವದ ಐದು ಪ್ರಮುಖ ದೇಶಗಳಲ್ಲಿ ಒಂದಾದ ಕಾರಣ ಚಿನ್ನವನ್ನು ಆಮದನ್ನು ನಿಯಂತ್ರಿಸುವ ಉದ್ದೇಶದಿಂದ ಈ ಯೋಜನೆಯನ್ನು ತರಲಾಯಿತು. ಇದರಿಂದ ವಿದೇಶಿ ವಿನಿಮಯ ಉಳಿಸಬಹುದು. ಆದರೆ ಚಿನ್ನದ ಆಮದಿನ ಪ್ರಮಾಣ ಹೆಚ್ಚುತ್ತಲೇ ಇರುವುದು ಕಳವಳಕಾರಿ. ಭಾರತೀಯರಿಗೆ ಹಳದೀ ಲೋಹದ ಮೇಲಿನ ಮೋಹ ಅಷ್ಟು ಸುಲಭದಲ್ಲಿ ಹೋಗುವುದಿಲ್ಲ. ಇದೊಂದು ಸರಕಾರ ಕಾಲಕಾಲಕ್ಕೆ ಹೊರಡಿಸುವ ಸಾಲಪತ್ರಗಳಲ್ಲಿ ಒಂದಾಗಿದೆಯೇ ಹೊರತೂ ಆಮದನ್ನು ನಿಯಂತ್ರಿಸುವಲ್ಲಿ ಸಫಲವಾಗಿಲ್ಲ. ಆದರೆ 2022 ಕ್ಕೆ 3440 ಬಿಲಿಯನ್ ರೂಪಾಯಿಯಷ್ಟು ಚಿನ್ನವನ್ನು ಆಮದು ಮಾಡಿಕೊಂಡರೆ 2023ರಲ್ಲಿ ಈ ಪ್ರಮಾಣ 2804 ಬಿಲಿಯನ್ ರೂಪಾಯಿಗಳಷ್ಟು ಇಳಿದಿದೆ.

ಅದೇ ಕಾಲಕ್ಕೆ ಚಿನ್ನದ ಬಾಂಡಿನ ಹೂಡಿಕೆಯ ಪ್ರಮಾಣ ಹೆಚ್ಚಾಗಿರುವುದರಿಂದ ನಿಧಾನವಾಗಿಯಾದರೂ ಜನರು ಚಿನ್ನಕ್ಕೆ ಪರ್ಯಾಯವಾಗಿ ಚಿನ್ನದ ಬಾಂಡಗಳತ್ತ ಆಕರ್ಷಿತರಾಗುತ್ತಿದ್ದರೆನ್ನಬಹುದು. ಇದು ತನಕದ ವಿಚಾರಕ್ಕೆ ಬರುವುದಾದರೆ ಈ ಬಾಂಡುಗಳು ಸಹ ಸರಕಾರ ಬಜೆಟ್ ಕೊರತೆಯನ್ನು ತುಂಬಲು ತಂದ ಮತ್ತೊಂದು ಸಾಲಪತ್ರ ಗಳಾಗಿವೆಯೇ ಹೊರತೂ ಚಿನ್ನದ ಆಮದು ಆ ಪ್ರಮಾಣದಲ್ಲಿ ಕಡಿತವಾಗಿಲ್ಲವೆನ್ನುವುದನ್ನು ಗಮನಿಸಬೇಕು. ಈ ವರ್ಷದ ಪೆಬ್ರುವರಿ ತಿಂಗಳ ವರೆಗೆ ಸರಕಾರದ ಸಾಲಪತ್ರಗಳ (ಗವರ್ನ ಮೆಂಟ್ ಸೆಕ್ಯುರಿಟಿಸ್) ನಿವ್ವಳ ಮೊತ್ತ ರೂ. 1,02,36,458 ಕೋಟಿರೂಪಾಯಿಗಳಷ್ಟಾಗಿದೆ. ಅದಕ್ಕೆ ಮತ್ತೊಂದು ಸೇರ್ಪಡೆಯಾಗಿ ಇದುತನಕದ ಸೊವರಿನ್ ಚಿನ್ನದ ಬಾಂಡ್ ಗಳಾಗಿವೆ.

ಇನ್ನೇನು ರಿಸರ್ವ ಬ್ಯಾಂಕ್ ಈ ವರ್ಷದ ಅಕ್ಟೋಬರ್ ತಿಂಗಳಲ್ಲಿ ಹೊಸ ಬಾಂಡಗಳನ್ನು ತರಲಿದೆ. ದೀಪಾವಳಿಯ ಶುಭ ಮುಹೂರ್ತಕ್ಕೆ ಸೊವರಿನ್ ಚಿನ್ನದ ಬಾಂಡಗಳನ್ನು ಖರೀದಿಸುವ ವರು ಸಿದ್ಧರಾಗಬಹುದು. (ಯಾವುದೇ ಬಾಂಡ್ ಮೇಲಿನ ಹಣ ಹೂಡಿಕೆಯು ರಿಸ್ಕ್ ಹೊಂದಿದೆ. ಅದನ್ನು ತಿಳಿದು ಮುಂದುವರಿಯುವುದು ವಿಹಿತ. ಈ ಬರಹವು ಮಾಹಿತಿಯನ್ನು ನೀಡುತ್ತದೆಯೇ ಹೊರತು ಆರ್ಥಿಕ ಹೂಡಿಕೆಗೆ ಶಿಫಾರಸು ಮಾಡುತ್ತದೆ ಎನ್ನಲಾಗದು.)

ಇಲ್ಲಿದೆ ಬದುಕಿನ ಪಾಠ!

» ಅಶ್ವಿನಿ ಸುನಿಲ್

ಸೇನೆಯ ಶಿಸ್ತನ್ನು ಹೊಂದಿರುವ ಎನ್ ಸಿ ಸಿ, ಪ್ರತಿ ವರ್ಷ ತನ್ನ ಕೆಡೆಟ್‌ಗಳಿಗಾಗಿ ವಾರ್ಷಿಕ ಟ್ರೆಕ್ಕಿಂಗ್ ಕ್ಯಾಂಪನ್ನು ಆಯೋಜಿಸುತ್ತದೆ. ಸಾಮಾನ್ಯವಾಗಿ ಮಹಿಳಾ ಕೆಡೆಟ್‌ಗಳಿಗೆ ಪ್ರತ್ಯೇಕ ಕ್ಯಾಂಪ್ ಆಯೋಜಿಸಲಾಗುತ್ತದೆ. ಆಲ್ ಇಂಡಿಯಾ ವುಮನ್ ಟ್ರೆಕ್ಕಿಂಗ್ ಕ್ಯಾಂಪ್ ಈ ವರ್ಷ ಕೇರಳದ ಇಡುಕ್ಕಿಯ ಕುಲಮಾವಿನಲ್ಲಿ ಸೆಪ್ಟೆಂಬರ್ 7 ರಿಂದ 17ರ ವರೆಗೆ ನಡೆಯಿತು. ದಕ್ಷಿಣ ಭಾರತದ ರಾಜ್ಯಗಳ ಜೂನಿಯರ್ ಮತ್ತು ಸೀನಿಯರ್ ಮಹಿಳಾ ಕೆಡೆಟ್‌ಗಳಿಗಾಗಿ ಎಂಟು ದಿನಗಳ ಕಾಲ ಈ ಟ್ರೆಕ್ಕಿಂಗ್ ಕ್ಯಾಂಪ್ ಆಯೋಜಿಸ ಲಾಗಿತ್ತು. ಅಷ್ಟಕ್ಕೂ ಈ ಟ್ರೆಕ್ಕಿಂಗ್‌ನಿಂದ ಸಾಧಿಸುವುದಾದರೂ ಏನು ಎಂದು ಕೊಂಡಿರಾ? ನಾಲ್ಕು ವಿವಿಧ ಮಾರ್ಗಗಳಲ್ಲಿ ನಡೆಯುವ ಈ ಟ್ರೆಕ್ಕಿಂಗ್‌ನಲ್ಲಿ ಸುಲಭದಿಂದ ಕಠಿಣ ಹಂತ ಇರುತ್ತದೆ. ಚಾರಣವು ಕೆಡೆಟ್‌ಗಳಲ್ಲಿ ಸಾಹಸ, ಅನ್ವೇಷಣೆ, ಪ್ರಾಯೋಗಿಕ ಸಂವಹನದ ಜೊತೆಗೆ ಆತ್ಮವಿಶ್ವಾಸ ಬೆಳೆಸಿ

ಕೊಳ್ಳಲು ಸಹಾಯವಾಗುತ್ತದೆ. ಪರಿಸರದ ಬಗ್ಗೆ ಅರಿವು ಮೂಡಿಸುತ್ತದೆ. ಈ ಎಂಟು ದಿನಗಳ ಅವಧಿಯಲ್ಲಿ ಕಲಿಯುವ ಪಾಠ ಒಂದೆರಡಲ್ಲ, ಹೊಸ ಪರಿಚಯ, ಆರೋಗ್ಯದ ರಕ್ಷಣೆ, ತಮ್ಮ ವಸ್ತುಗಳ ಬಗ್ಗೆ ಕಾಳಜಿ ವಹಿಸಿಕೊಳ್ಳುವುದು, ಶಿಸ್ತಿನ ಬದುಕು, ಇತರರೊಂದಿಗೆ ವಸ್ತುಗಳನ್ನು ಹಂಚಿಕೊಂಡು ಬದುಕುವ ಪಾಠ ಕಲಿಸುತ್ತದೆ. ಕೆಡೆಟ್‌ಗಳ ಆಯ್ಕೆಗೆ ನಿಯಮಗಳಿರುತ್ತದೆ. ದೈಹಿಕ ಕ್ಷಮತೆ, ಉತ್ಸಾಹ , ಆಸಕ್ತಿಯ ಜೊತೆಗೆ ವಿವಿಧ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದವರನ್ನು ಆಯ್ಕೆ ಮಾಡಲಾಗುತ್ತದೆ. ಸಂಖ್ಯೆಗೆ ಮಿತಿ ಇರುವ ಕಾರಣ ಆಯ್ಕೆ ಸುಲಭವಲ್ಲ. ಚಾರಣದ ಜತೆ,ಒಂದು ದಿನದ ಶೈಕ್ಷಣಿಕ ಪ್ರವಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು ಆಯೋಜಿಸುತ್ತಾರೆ. ಕೇವಲ ಚಾರಣವಷ್ಟೇ ನಡೆಯುವುದಲ್ಲ ಬದುಕಿನ ಪಾಠ ಗಳನ್ನು ಕಲಿಯಲು ಒಳ್ಳೆಯ ಅವಕಾಶ.

ಟೀ-ಶರ್ಟ್ ಮೇಲಿನ ಬರಹವನ್ನು ಓದುವುದು ತಪ್ಪೇ?

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಎನ್.ಎಂ.ವಿನೋದ ರಾಜ್, ಬೆಂಗಳೂರು

- **ಸಾರ್, ಕೆಲವು ಹುಡುಗಿಯರು ಎಂತೆಂತದ್ದೋ ಸ್ಲೋಗನ್ ಬರೆದಿರುವ ಟೀ-ಶರ್ಟ್ ತೊಡುತ್ತಾರೆ. ಅವುಗಳನ್ನು ಓದುವಾಗ, ಅವರ ಎದೆ ಭಾಗವನ್ನು ದಿಟ್ಟಿಸಿ ನೋಡಬೇಕಾಗುತ್ತದೆ. ಅದು ಸಭ್ಯ ನಡೆಯಾ? ತಿಳಿಸುತ್ತೀರಾ?**

- ವಿನೋದ ರಾಜ್ ಅವರೇ, ಇದು ನಿಮ್ಮದೊಂದೇ ಸಮಸ್ಯೆ ಅಲ್ಲ, ಎಲ್ಲಾ ಹುಡುಗರೂ, ಗಂಡಸರೂ ಅನುಭವಿಸುವ ಸಮಸ್ಯೆ ಸಹ ಹೌದು. ಟೀ-ಶರ್ಟ್ ಮೇಲೆ ಏನು ಬರೆದಿದೆ ಅನ್ನೋದನ್ನು ಓದಲು, ಆ ಭಾಗವನ್ನು ದಿಟ್ಟಿಸಿ ನೋಡಲೇಬೇಕು. ಟೀ-ಶರ್ಟ್ ಮೇಲೆ Dont look at here ಎಂದು ಬರೆದಿದ್ದರೂ, ಆ ಭಾಗವನ್ನು ನೋಡಲೇ ಬೇಕಲ್ಲ! ಆ ರೀತಿ ಸ್ಲೋಗನ್ ಬರೆದ ಟೀ-ಶರ್ಟ್ ಧರಿಸುವ ಹುಡುಗಿಯರು ಅಥವಾ ಹೆಂಗಸರು ತಪ್ಪು ಭಾವಿಸಲಿಕ್ಕಿಲ್ಲ. ಹಾಗೆ ಭಾವಿಸುವುದಿದ್ದರೆ, ಅವರು ಅಂಥ ಟೀ-ಶರ್ಟ್ ಧರಿಸುತ್ತಿರಲಿಲ್ಲ. ಅವರಿಗೇ ಮುಜುಗರ ಆಗದಿದ್ದಾಗ, ನಿನಗೇಕೆ ಮುಜುಗರ? ಅಸಲಿಗೆ ಅವರಿಗೂ ಬೇರೆಯವರು ದಿಟ್ಟಿಸಲಿ ಎಂಬ ಒಳ ಇಂಗಿತ ಇರಬಹುದು. ಟೀ-ಶರ್ಟ್ ಮೇಲಿನ ಸ್ಲೋಗನ್ ಓದುವುದು ನಿಮ್ಮ ಉದ್ದೇಶ ವಾಗಿದ್ದರೆ, ಯಾರೂ ತಪ್ಪು ಭಾವಿಸುವುದಿಲ್ಲ. ಆದರೆ ಭೂತಗನ್ನಡಿ ಥರಾ ಭೂತಗಣ್ಣಲ್ಲಿ, ಜಾಸ್ತಿ ಹೊತ್ತು ದಿಟ್ಟಿಸಬಾರದು. ಇಂಥ ಸಂದರ್ಭದಲ್ಲಿ ತಂಪು ಅಥವಾ ಕಪ್ಪು ಕನ್ನಡಕ ಧರಿಸುವುದು ಒಳ್ಳೆಯದು. ಆಗ ಒಂದು ಸಲವಲ್ಲ, ಹತ್ತಾರು ಸಲ ಓದಿದರೂ, ದಿಟ್ಟಿಸಿದರೂ, ಯಾರೂ ತಪ್ಪು ಭಾವಿಸುವುದಿಲ್ಲ.

ಶ್ರೀರಾಮು, (ಇಮೇಲ್ ಮೂಲಕ)

- **ಭಟ್ರೇ, ನೀವು ಎಲ್ಲರೊಂದಿಗೂ ಒಂದು diplomatic relationshipನ್ನು ಚೆನ್ನಾಗಿ ಇಟ್ಟುಕೊಳ್ಳುತ್ತೀರ. ನೋಡಿ ನೀವು ಪಕ್ಕಾ ಬಿಜೆಪಿ, ಆರೆಸ್ಸೆಸ್ ಆಗಿದ್ದರೂ, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರುಗಳೊಂದಿಗೂ ಉತ್ತಮ ಸಂಬಂಧ ಹೊಂದಿದ್ದೀರಿ. ಇದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ನೀವು ಮೊದಲಿನಿಂದಲೂ ಈ ಥರ ಇದ್ರಾ? ಇಲ್ಲ ವೃತ್ತಿ ಸಂಬಂಧವಾಗಿ ಮೈಗೂಡಿಸಿ ಕೊಂಡಿದ್ದಾ? ಎಲ್ಲರೊಂದಿಗೂ ಒಂದು ಉತ್ತಮವಾದ diplomatic relationship ಚೆನ್ನಾಗಿ ಇಟ್ಟುಕೊಳ್ಳಲು ನಿಮ್ಮ tipsಗಳು ಏನು?**

- ಶ್ರೀರಾಮು ಅವರೇ, ಒಬ್ಬ ವ್ಯಕ್ತಿ ಜತೆ ಉತ್ತಮ ಸಂಬಂಧ ಅಥವಾ ನೀವೇ ಹೇಳಿದಂತೆ diplomatic relationship ಇಟ್ಟುಕೊಳ್ಳಲು ನನ್ನ ನಂಬಿಕೆ, ಸಿದ್ಧಾಂತ, ಪಕ್ಷಪಾತತನ ಹೇಗೆ ಕಾರಣವಾಗುತ್ತದೆ? ನನಗೆ ಅರ್ಥವಾಗುವುದಿಲ್ಲ. ನಾನು ಬೇರೆ ಯಾರ ಜತೆಗಾದರೂ ಉತ್ತಮ ಸಂಬಂಧ ಹೊಂದಬೇಕೆಂದರೆ ಅವರ ಬಗ್ಗೆ ನನಗೆ ಗೌರವ, ವಿಶ್ವಾಸ ಇರಬೇಕು. ನನ್ನ ಮನಸ್ಸಿನಲ್ಲಿ ಹೊಲಸು ಭಾವ ಇಟ್ಟುಕೊಂಡು ಬೇರೆಯವರ ಜತೆ ಉತ್ತಮ ಬಾಂಧವ್ಯ ಹೊಂದಲು ಸಾಧ್ಯವಿಲ್ಲ. ನನ್ನ ವೃತ್ತಿಯೇ ಬೇರೆ, ವೈಯಕ್ತಿಕ ಸಂಬಂಧವೇ ಬೇರೆ. ದಿನವೂ ಪತ್ರಿಕೆಯಲ್ಲಿ ಹಲವು ಅಪ್ರಿಯವಾದ ಸತ್ಯ, ವರದಿಯನ್ನು ಪ್ರಕಟಿಸಲೇ ಬೇಕಾಗುತ್ತದೆ. ಅಷ್ಟಾಗಿಯೂ ಒಳ್ಳೆಯ ಸಂಬಂಧ ಇಟ್ಟುಕೊಳ್ಳಲು ಸಾಧ್ಯವಿದೆ. ನಾನು ರಾಜಕಾರಣಿಗಳ ಜತೆ ಜಗಳವಾಡುತ್ತೇನೆ, ಆದರೆ ಅವರ ಜತೆಗಿನ ಸಂಬಂಧವನ್ನು ಕಡಿದುಕೊಳ್ಳುವುದಿಲ್ಲ. ಮಾನವೀಯ ಸಂಬಂಧಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಅದಕ್ಕೆ ಪತ್ರಿಕೋದ್ಯಮವೂ ಹೊರತಲ್ಲ.ಮನುಷ್ಯರನ್ನು ದ್ವೇಷಿಸುವಷ್ಟು ಕಟುಕರಾಗಬಾರದು. ಹಾಗಾದಾಗ ನಮ್ಮಲ್ಲಿ ಮಾನವೀಯ ಗುಣ ಕಮ್ಮಿಯಾಗಿದೆ ಎಂದೇ ಅರ್ಥ. ಬೇರೆಯವರೊಂದಿಗೆ ನಮ್ಮ ಭಿನ್ನಮತವನ್ನು ಪ್ರಕಟಪಡಿಸುತ್ತಲೇ, ಅವರೊಂದಿಗೆ ಉತ್ತಮ ಸಂಬಂಧ ಹೊಂದುವುದು ಸಾಧ್ಯವಿದೆ ಎಂಬುದು ನನ್ನ ನಿತ್ಯ ಅನುಭವ. ಹೀಗಾಗಿ ನನಗೆ ಎಲ್ಲಾ ಪಕ್ಷಗಳಲ್ಲೂ ಸ್ನೇಹಿತರಿದ್ದಾರೆ. ಹಾಗಂತ ಅವರ ತುತ್ತೂರಿ ಊದುತ್ತಿದ್ದರೆ, ನನ್ನ ಓದುಗರು ಸುಮ್ಮನಿರುವುದಿಲ್ಲ. ಒಬ್ಬರ ವಿರುದ್ಧ ಬರೆದಾಕ್ಷಣ ಅವರ ವಿರುದ್ಧ ವೈರತ್ವ ಸಾಧಿಸಬೇಕಿಲ್ಲ. ಒಂದು ವೇಳೆ ಅವರು ಸಾಧಿಸಿದರೂ, ನಮ್ಮ ವೃತ್ತಿಯಲ್ಲಿ ಬೇರೆಯವರ ವಿರುದ್ಧ ಬರೆಯಲೇಬೇಕಾಗುತ್ತದೆ. ಅದು ಅನಿವಾರ್ಯ. ಹಾಗೆಂದು ಇಡೀ ಲೋಕದ ದ್ವೇಷ ಕಟ್ಟಿಕೊಳ್ಳಬೇಕಿಲ್ಲ.

ಇತ್ತೀಚೆಗೆ ವಿಮಾನದಲ್ಲಿ ಉದ್ಯಮಿ-ರಾಜಕಾರಣಿಯೊಬ್ಬರು ಸಿಕ್ಕಿದರು. ಅವರು ನನ್ನ ವಿರುದ್ಧ ಹತ್ತು ಕೋಟಿ ರುಪಾಯಿ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಅಂದು ವಿಮಾನದಲ್ಲಿ ನನ್ನದು ಮತ್ತು ಅವರದು ಅಕ್ಕ-ಪಕ್ಕದ ಸೀಟು. ಹುಬ್ಬಳ್ಳಿಯಿಂದ ಬೆಂಗಳೂರು ತನಕ ಒಟ್ಟಿಗೇ ಬಂದೆವು. ನಾನು ಅವರನ್ನು ನೋಡಿ ಸ್ವಾಟೆ ತಿರುವಿಕೊಂಡು ಹೋಗುತ್ತೇನೆ ಅಂದುಕೊಂಡಿದ್ದರು. ನಾನಾಗಿಯೇ ಅವರನ್ನು ಮಾತಾಡಿಸಿದೆ. ಅದನ್ನು ಅವರು ನಿರೀಕ್ಷಿಸಿರಲಿಲ್ಲ. ನಾವಿಬ್ಬರೂ ಭೇಟಿ ಆಗದೇ, ಸುಮಾರು ಹನ್ನೆರಡು ವರ್ಷಗಳಾಗಿದ್ದವು.

ಮಾನನಷ್ಟ ಮೊಕದ್ದಮೆ ವಿಷಯವೊಂದನ್ನು ಬಿಟ್ಟು ಸೂರ್ಯನ ಅಡಿಯಲ್ಲಿನ ಎಲ್ಲ ವಿಷಯಗಳ ಬಗ್ಗೆ ಸುಮಾರು ಎರಡು ಗಂಟೆ ಮಾತಾಡಿದೆವು. ಅವರು ಸದಾಶಿವನಗರದಲ್ಲಿ ಡ್ರಾಪ್ ತೆಗೆದುಕೊಂಡು ಅವರ ಕಾರಿನಲ್ಲಿಯೇ ನನ್ನ ಮನೆ ತನಕ ಡ್ರಾಪ್ ಕೊಡಿಸಿದರು. ಇದರಲ್ಲಿ ಡಿಪ್ಲೊಮ್ಯಾಟಿಕ್ ಏನು ಬಂತು? ಮಾನವೀಯ ಸಂಬಂಧದಲ್ಲಿ ನಮಗೆ ನಂಬಿಕೆ ಇದ್ದರೆ, ಕ್ಷುಲ್ಲಕ ವೈರತ್ವಕ್ಕಿಂತ ಸ್ನೇಹವೇ ಮೇಲು ಎಂದು ನಂಬಿದ್ದರೆ, ಯಾರನ್ನಾದರೂ ಮಾತಾಡಿಸಬಹುದು. ಯಾವ ಸಂಬಂಧವನ್ನೂ ಕಳೆದುಕೊಳ್ಳುವಷ್ಟು ಲಘುವಾಗಿರುವುದಿಲ್ಲ. ಈ ಮಧ್ಯೆ ನಮ್ಮ ವೃತ್ತಿನಿಷ್ಠೆಯನ್ನು ಮರೆಯುವಂತೆಯೂ ಇರುವುದಿಲ್ಲ. ಇವೆರಡರ ನಡುವೆ ಸಮತೋಲನ ಬೇಕು. ಅಷ್ಟಕ್ಕೂ ಪತ್ರಿಕೋದ್ಯಮದ ಉದ್ದೇಶ ಜೀವನಪ್ರೀತಿಯೇ ಹೊರತು ದ್ವೇಷ ಬಿತ್ತುವುದಲ್ಲ. ಇದನ್ನು ಅರ್ಥ ಮಾಡಿಕೊಂಡರೆ ಸಾಕು.

ರೂಪಿಕಾ ಭಾಸ್ಕರ, ಬೆಂಗಳೂರು

- **ಸಂಪಾದಕರೇ, ನಾನು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದೇನೆ. ಹಾಸ್ಟೆಲ್‌ನಲ್ಲಿರುವ ನನ್ನ ರೂಮಿನಲ್ಲಿ ಒಂದು ಪುಟ್ಟ ಪುಸ್ತಕ ಸಂಗ್ರಹಾಲಯವಿದೆ. ನನ್ನ ಕೆಲವು ಗೆಳತಿಯರು ರೂಮಿಗೆ ಬಂದು ಪುಸ್ತಕ ತೆಗೆದುಕೊಂಡು ಹೋಗುತ್ತಾರೆ, ಆದರೆ ವಾಪಸ್ ಕೊಡು ವುದಿಲ್ಲ. ಹೀಗೆ ನಾನು ಹತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಕಳೆದು ಕೊಂಡಿದ್ದೇನೆ. ಈ ಕಾರಣಕ್ಕೆ ಕೆಲವರ ಜತೆ ಸ್ನೇಹ ಕಡಿದುಕೊಂಡಿದ್ದೇನೆ. ಸ್ನೇಹಿತೆಯರು ಪುಸ್ತಕ ಕೇಳಿದರೆ ಕೊಡಬೇಕಾ, ಬೇಡವಾ?**

- ರೂಪಿಕಾ ಅವರೇ, ಇದು ನಿಮ್ಮದೊಂದೇ ಅಲ್ಲ, ಪುಸ್ತಕ ಇರುವವರ ಎಲ್ಲರ ಸಮಸ್ಯೆಯೂ ಹೌದು. ಹಣವಿರುವವರಲ್ಲಿ ಸಾಲ ಕೇಳುತ್ತಾರೆ, ಪುಸ್ತಕ ಇರುವವರಲ್ಲಿ ಪುಸ್ತಕ ಕೇಳುತ್ತಾರೆ. ನೂರರಲ್ಲಿ ತೊಂಬತ್ತೊಂಬತ್ತರಷ್ಟು ಸಲ ಹಣವನ್ನು ವಾಪಸ್ ಕೊಡಬಹುದು. ಆದರೆ ಇದೇ ಪ್ರಮಾಣದಲ್ಲಿ ಜನರು ಪುಸ್ತಕವನ್ನು ವಾಪಸ್ ಕೊಡುವುದಿಲ್ಲ. ಹೀಗಾಗಿ ಹಣವನ್ನಾದರೂ ಕೊಡಬಹುದು, ಆದರೆ ಪುಸ್ತಕವನ್ನು ಕೊಡಬಾರದು. ಪುಸ್ತಕ ಕೊಡುವಾಗ ಅದು ವಾಪಸ್ ಬರುವುದಿಲ್ಲ ಎಂದು ಭಾವಿಸಿಯೇ ಕೊಡಬೇಕು. ಆಗ ಬೇಸರವಾಗುವುದಿಲ್ಲ.

ಕೆಲವು ಪುಸ್ತಕಗಳಿರುತ್ತವೆ, ಭೈರಪ್ಪನವರೋ, ಪುಟ್ಟಪ್ಪನವರೋ, ಪ್ರಿಯತಮನೋ, ಪ್ರೇಯಸಿಯೋ ಸಹಿ ಹಾಕಿ ಕೊಟ್ಟಿರುತ್ತಾರೆ. ಕ್ಲಾಸಿನಲ್ಲಿ ಫಸ್ಟ್ ಬಂದಾಗ ಮೇಷ್ಟ್ರು ಹಸ್ತಾಕ್ಷರ ಬರೆದು ಕೊಟ್ಟಿರುತ್ತಾರೆ. ಇಲ್ಲವೇ ಯಾವುದೋ ವಿಶೇಷ ಸಂದರ್ಭದಲ್ಲಿ ಖರೀದಿಸಿದ್ದಾಗಿರುತ್ತದೆ. ಕೆಲವು ಔಟ್ ಆಫ್ ಪ್ರಿಂಟ್ ಪುಸ್ತಕವನ್ನು ಕಷ್ಟಪಟ್ಟು ಸಂಗ್ರಹಿಸಿರುತ್ತೇವೆ. ಅಂಥ ಪುಸ್ತಕವನ್ನು ಎರವಲು ತೆಗೆದುಕೊಂಡು ಹೋದಾಗ, ಅದು ಹಿಂದಿರುಗಿ ಬರದಿದ್ದಾಗ ಬಹಳ ಬೇಸರವಾಗುತ್ತದೆ. ಇನ್ನುಳಿದಂತೆ, ಯಾವ ಪುಸ್ತಕ ಕಳೆದುಕೊಂಡರೂ ತಲೆಕೆಡಿಸಿಕೊಳ್ಳಬೇಕಿಲ್ಲ. ಅವನ್ನು ಖರೀದಿಸಬಹುದು. ಹಾಗೆ ನೋಡಿದರೆ ಕನ್ನಡದ ಓದುಗರು ಅದೃಷ್ಟವಂತರು; ಕನ್ನಡ ಪುಸ್ತಕಗಳ ಬೆಲೆ ಕಡಿಮೆ. ಹೆಚ್ಚಿನ ಕನ್ನಡಗಳ ಬೆಲೆ ನಾನೂರು ರುಪಾಯಿಗಳಿಗಿಂತ ಕಡಿಮೆ ಇರುತ್ತದೆ. ಉತ್ತಮ ಗುಣಮಟ್ಟದ, ಪ್ರಸಿದ್ಧ ಇಂಗ್ಲಿಷ್ ಪುಸ್ತಕಕ್ಕೆ ಹೆಚ್ಚು ಬೆಲೆ ಕೊಡಬೇಕಾದೀತು.

ಇನ್ನು ಬೇರೆಯವರಿಗೆ ಪುಸ್ತಕ ಕೊಡುವುದು ನಿಮಗೆ ಇಷ್ಟವಿಲ್ಲದಿದ್ದರೆ, ಎಲ್ಲರಿಗೂ ಕಾಣುವ ಹಾಗೆ I can lend you my money not my books ಅಥವಾ' ಈ ಪುಸ್ತಕ ನನ್ನನ್ನು ಬಿಟ್ಟು ಇರಲಾರವು, ಇವು ನನ್ನ ಸಂಗಾತಿ. ಹೀಗಾಗಿ ದಯವಿಟ್ಟು ಕೇಳಬೇಡಿ, ಕೇಳಿಯೂ ನನ್ನಿಂದ ಇಲ್ಲ ಎಂದು ಹೇಳಿಸಿಕೊಳ್ಳಬೇಡಿ', ಅಥವಾ Before borrowing book from a friend, it's best to decide which you need most ಎಂಬ ಫಲಕ ನೇತು ಹಾಕಿಬಿಡಿ. ಆಗ ಯಾರೂ ಸುಲಭಕ್ಕೆ ಪುಸ್ತಕ ಕೇಳುವುದಿಲ್ಲ. ಅಷ್ಟಾಗಿಯೂ ಪುಸ್ತಕ ಕೇಳಿದರೆ ನಗುತ್ತಲೇ ಕೊಟ್ಟು ಬಿಡಿ, ಆದರೆ ಎಳ್ಳು-ನೀರು ಬಿಟ್ಟೇ ಕೊಟ್ಟುಬಿಡಿ. ಅದರ ಬಗ್ಗೆ ಇನ್ನೊಮ್ಮೆ ಯೋಚಿಸಬೇಡಿ. ಒಂದು ವೇಳೆ ಪುಸ್ತಕ ವಾಪಸ್ ಬಂದರೂ ಮೊದಲಿನ ಒಳ್ಳೆಯ ಸ್ಥಿತಿಯಲ್ಲಿರುವುದಿಲ್ಲ. ಇಷ್ಟಾಗಿಯೂ ಹೇಳುವುದೇನೆಂದರೆ, ಪುಸ್ತಕಕ್ಕಾಗಿ ಸ್ನೇಹವನ್ನು ಬಲಿಕೊಡಿ ಎಂದು ಯಾವ ಪುಸ್ತಕದಲ್ಲೂ ಬರೆದಿಲ್ಲ.

ರಜನಿ, (ಇಮೇಲ್ ಮೂಲಕ)

- **ಭಟ್ರೇ, ನಾನು ಅವನನ್ನು ಪ್ರೀತಿಸುತ್ತಿದ್ದೇನೆ, ಅವನೂ ನನ್ನನ್ನು ಪ್ರೀತಿಸುತ್ತಿದ್ದಾನೆ. ಆದರೂ ನನಗೆ ಸಣ್ಣ ಡೌಟು. ಆತ ಮತ್ತೊಬ್ಬಳನ್ನೂ ಪ್ರೀತಿಸುತ್ತಿರಬಹುದಾ ಅಂತ. ಅದನ್ನು ತಿಳಿದುಕೊಳ್ಳುವುದು ಹೇಗೆ?**

- ರಜನಿ ಅವರೇ, ಪ್ರೀತಿಯಲ್ಲಿರುವವರಿಗೆ ಈ ಸೂಕ್ಷ್ಮಗಳೆಲ್ಲಾ ಗೊತ್ತಾಗುತ್ತದೆ, ಇಷ್ಟೊತ್ತಿಗೆ ನಿಮಗೂ ಗೊತ್ತಾಗಬೇಕಿತ್ತು. ಅದಕ್ಕೆ ಬೇರೆಯವರ ನೆರವು ಬೇಕಾಗಿಲ್ಲ. ನಿಮಗೆ ಅನಿಸಿದ ಹಾಗೆ, ನಿಮ್ಮನ್ನು ಪ್ರೀತಿಸುವ ಹುಡುಗನೂ ಯೋಚಿಸಿದರೆ? ವಿನಾಕಾರಣ ಒಬ್ಬರನ್ನು ಸಂದೇಹದಿಂದ ನೋಡುವುದು ಒಳ್ಳೆಯದಲ್ಲ, ಬಲವಾದ ಕಾರಣ ವಿದ್ದರೆ ಅಥವಾ ಸಣ್ಣ ಸಾಕ್ಷ್ಯವಿದ್ದರೆ ಬೇರೆ ಮಾತು. ಪ್ರೀತಿ ಅಂದ್ರೆ ಮೂಲಭೂತವಾಗಿ ನಂಬಿಕೆ ಮತ್ತು ವಿಶ್ವಾಸ. ಅದರ ತಳಹದಿಯಲ್ಲೇ ಪ್ರೀತಿ ಅರಳುತ್ತದೆ. ನಂಬಿಕೆ ಅಂದರೆ ನೂರಕ್ಕೆ ನೂರರಷ್ಟು ಎಂದರ್ಥ. ಅದರಲ್ಲಿ ಒಂದು ಕಡಿಮೆಯಾದರೂ, ಅಷ್ಟು ಪ್ರಮಾಣದ ಅಪನಂಬಿಕೆ ಸೇರಿಕೊಂಡಿದೆ ಅಂತಾಯಿತು. ಹೀಗಾಗಿ ನಿಮ್ಮನ್ನು ಪ್ರೀತಿಸುವ ಹುಡುಗನ ಪ್ರಾಮಾಣಿಕತೆಯನ್ನು ಸುಖಾಸುಮ್ಮನೆ ಸಂದೇಹದಿಂದ ನೋಡಬೇಡಿ. ನಿಮ್ಮ ಮನಸ್ಸಿನಲ್ಲಿ ಹೊಕ್ಕಿದ ಪಿಶಾಚಿಯನ್ನು ಈಗಲೇ ಓಡಿಸಿಬಿಡಿ.

ಇನ್ನು ಆತ ನಿಮ್ಮನ್ನು ನಿಜಕ್ಕೂ ಪ್ರೀತಿಸುತ್ತಿದ್ದಾನಾ ಇಲ್ಲವಾ ಎಂದು ತಿಳಿದುಕೊಳ್ಳುವ ವಿಚಾರ. ಅದಕ್ಕೆ ಮತ್ಯಾರ ಸಹಾಯವನ್ನೂ ನೀವು ಅಪೇಕ್ಷಿಸಬೇಕಿಲ್ಲ. 'ನಿನ್ನ ಮೊಬೈಲ್ ಕೊಡು. ಒಂದು ಸಲ ನೋಡಿ ಕೊಡ್ತೇನೆ' ಎಂದು ನೀವು ಪ್ರೀತಿಸುವ ಹುಡುಗನಿಗೆ ಹೇಳಿ. ಆತ ಕೊಟ್ಟರೆ ಸರಿ. ಕೊಡಲಿಲ್ಲ ಎಂದಾಕ್ಷಣ ಆತ ಬೇರೆಯವಳನ್ನು ಪ್ರೀತಿಸುತ್ತಿದ್ದಾನೆ ಎಂಬ ನಿರ್ಧಾರಕ್ಕೆ ತಕ್ಷಣ ಬಂದುಬಿಡಬೇಡಿ. ಆತನ ಮನವೊಲಿಸಿ ಮೊಬೈಲ್ ಗಿಟ್ಟಿಸಿಕೊಳ್ಳಿ. ನೀವು ಮೊಬೈಲ್ ಕೇಳಿದ್ದಕ್ಕೆ ಕಾರಣ ಕೊಡಿ. ಆಗ ಆತನೇ ಕೊಡುತ್ತಾನೆ. ಅಷ್ಟು ಹೇಳಿದ ನಂತರವೂ ಕೊಡದಿದ್ದರೆ, ಶತಾಯ ಗತಾಯ ಪಾಸ್ ಕೋಡ್ ಗಿಟ್ಟಿಸಿ ನೀವೇ ತೆರೆದು ನೋಡುವ 'ಸಾಹಸ' ಮಾಡಬಹುದು. ಎಲ್ಲರ ಗುಟ್ಟೂ ವಾಟ್ಸಾಪ್‌ನಲ್ಲಿ ರಟ್ಟು!

ಪಿ.ಜಾಹ್ನವಿ , ಬೆಂಗಳೂರು

- **ಭಟ್ರೇ, ನನಗೆ ಹೋಟೆಲಿನಲ್ಲಿ ತಿನ್ನುವಾಗ ಸ್ಪೂನ್ ಬಳಸುವುದೆಂದರೆ ಆಗಿಬರುವುದಿಲ್ಲ. ಸಾವಿರಾರು ಜನ ಬಾಯಲ್ಲಿ ಹಾಕಿಕೊಂಡಿದ್ದನ್ನು ನಾನೂ ನನ್ನ ಬಾಯಲ್ಲಿಟ್ಟುಕೊಳ್ಳಬೇಕಾ ಎನಿಸುತ್ತದೆ. ವಾಂತಿ ಬಂದಂತಾಗುತ್ತದೆ. ಹೀಗಾಗಿ ಕೈಯಲ್ಲಿ ತಿನ್ನುತ್ತೇನೆ. ಕೆಲವೊಮ್ಮೆ ಕೈಯಲ್ಲಿ ತಿನ್ನುವುದು ಶಿಷ್ಟಾಚಾರವಲ್ಲ ಅಂತಾರೆ. ಇಂಥ ಸಂದರ್ಭದಲ್ಲಿ ಏನು ಮಾಡಬೇಕು?**

- ಜಾಹ್ನವಿ ಅವರೇ, ಸ್ವಚ್ಛತೆ ಬಗ್ಗೆ ಅತಿಯಾಗಿ ತಲೆ ಕೆಡಿಸಿಕೊಂಡವರ ಫಜೀತಿಯಿದು. ಮನಶ್ಶಾಸ್ತ್ರಜ್ಞರನ್ನು ಕೇಳಿದರೆ ಇದನ್ನೂ ಒಂದು ಮಾನಸಿಕ ಸಮಸ್ಯೆ ಅಂದಾರು. ನಿಮಗೆ ಸ್ಪೂನ್ ಹೇಗೋ ನನಗೆ ಹೋಟೆಲ್ ಟಾವೆಲ್ ಮತ್ತು ಬೆಡ್ ಶೀಟ್. ಅದೆಷ್ಟೋ ಜನ ಬಳಸಿದ ಟಾವೆಲ್‌ನಲ್ಲಿ ಮೈ ಒರೆಸಿಕೊಳ್ಳುವುದುಂಟಾ ಎಂದು ನಾನು ಮುಖ ಕಿವುಚಿಕೊಳ್ಳುತ್ತೇನೆ. ಆ ಟಾವೆಲ್‌ನ್ನು ಅದೆಷ್ಟೇ ಸ್ವಚ್ಛವಾಗಿ ತೊಳೆದಿರಬಹುದು, ಆದರೂ ಬೇರೆಯವರು ಬಳಸಿದ್ದು ಎಂಬುದು ನೆನಪಾದರೆ ಅಸಹ್ಯವಾಗುತ್ತದೆ. ಹೀಗಾಗಿ ನಾನು ಎಲ್ಲಿಗೆ ಹೋದರೂ ನನ್ನ ಟಾವೆಲ್, ಬೆಡ್ ಶೀಟ್ ಮತ್ತು ಚಾದರಗಳನ್ನು ತೆಗೆದುಕೊಂಡು ಹೋಗುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಇದು ವ್ಯತ್ಯಾಸವಾದಾಗ ನಿದ್ದೆಯೇ ಬರುವುದಿಲ್ಲ. ಇದನ್ನು ನೋಡಿ ನನ್ನ ಸ್ನೇಹಿತರು ನಗುತ್ತಾರೆ, ವ್ಯಂಗ್ಯವಾಡುತ್ತಾರೆ. 'ಹೋಟೆಲ್ ಟಾವೆಲ್ ಕ್ಲೀನಾಗಿರುತ್ತದೆ, ಚೆನ್ನಾಗಿ ತೊಳೆದಿರುತ್ತಾರೆ' ಎಂದು ಸಮಜಾಯಿಷಿ ನೀಡಿ ನನ್ನನ್ನು ಒಪ್ಪಿಸಲು ಪ್ರಯತ್ನಿಸುತ್ತಾರೆ. ಕ್ಲೀನಾಗಿ ತೊಳೆದಿದ್ದಾರೆಂದು ಬೇರೆಯವರು ಬಳಸಿದ ನಿಕ್ಕರ್, ಟೂತ್ ಬ್ರಶ್‌ನ್ನು ನೀವು ಬಳಸುತ್ತೀರಾ ಎಂದು ಕೇಳಿದರೆ ಸುಮ್ಮನಾಗುತ್ತಾರೆ.

ನಾನು ಈಗಲೂ ಟಾವೆಲ್, ಬೆಡ್ ಶೀಟ್ ಮತ್ತು ಚಾದರದ ವಿಷಯದಲ್ಲಿ ಅಷ್ಟೇ ಮೊಂಡ. ಹಿಂಸೆಯಾದರೂ ಪರವಾಗಿಲ್ಲ, ಕೆಲವು ಮೊಂಡು ಗುಣಗಳನ್ನು ಬಿಡಬಾರದು, ಪ್ರೀತಿಯಿಂದ ಪೊರೆಯಬೇಕು. ಸ್ಪೂನ್ ವಿಷಯದಲ್ಲಿ ನನಗೂ ಎಷ್ಟೋ ಸಲ ಹಾಗೆ ಅನಿಸಿದ್ದಿದೆ. ಅದೆಷ್ಟೇ ಸ್ವಚ್ಛವಾಗಿದ್ದರೂ, ಮತ್ತೊಮ್ಮೆ ಲೋಟದಲ್ಲಿರುವ ನೀರಿನಲ್ಲಿ ಅದ್ದಿ, ಟಿಶ್ಯೂ ಕಾಗದದಲ್ಲಿ ಒರೆಸಿಕೊಂಡು, ಸ್ಪೂನನ್ನು ನಾಲಗೆಗೆ ತಾಕಿಸದೇ ಆಹಾರ ಸೇವಿಸುತ್ತೇನೆ. ಸಮಯ, ಸಂದರ್ಭ ನೋಡಿ ಕೈಯಲ್ಲೂ ಸೇವಿಸುತ್ತೇನೆ. ಬಾಚಣಿಕೆ ಇಲ್ಲವೆಂದು ಬೇರೆಯವರದ್ದನ್ನು ಬಳಸಬಾರದು. ಆ ದಿನ ಕೂದಲು ಬಾಚಿಕೊಳ್ಳದಿದ್ದರೂ ಪರವಾಗಿಲ್ಲ. ಅಷ್ಟಕ್ಕೂ ನಮ್ಮ ಸ್ವಚ್ಛತೆ, ನಮ್ಮ ವ್ಯಕ್ತಿತ್ವ, ನಮ್ಮ ಹೆಮ್ಮೆ, ನಮ್ಮ ಸಂತೋಷ. ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಾರದು, ಲೂಸು ಅಂದ್ರೂ ಪರವಾಗಿಲ್ಲ. ಈ ವಿಷಯದಲ್ಲಿ ನಾನು ನಿಮ್ಮ ಪರ.

ಆದರ್ಶ ನಾಗರಾಜ, ಮೈಸೂರು

- **ಭಟ್ ಸರ್, ಇತ್ತೀಚೆಗೆ ನಾನು ನನ್ನ ಸ್ನೇಹಿತನಿಗೆ ಆರು ಸಲ ಮೊಬೈಲ್‌ನಲ್ಲಿ ಕಾಲ್ ಮಾಡಿದೆ. ಆತ ನನ್ನ ಕರೆಯನ್ನು ಸ್ವೀಕರಿಸಲಿಲ್ಲ. ಎರಡು ದಿನಗಳಾದರೂ ಕಾಲ್ ರಿಟರ್ನ್ ಮಾಡಲಿಲ್ಲ, ಇದರಿಂದ ಅವನ ಬಗ್ಗೆ ನನಗೆ ಬಹಳ ಬೇಸರವಾಗಿದೆ. ಆತ ಕಾಲ್ ರಿಟರ್ನ್ ಮಾಡುವ ತನಕ ಆತನನ್ನು ಸಂಪರ್ಕಿಸಬಾರದು ಎಂದು ನಿರ್ಧರಿಸಿದ್ದೇನೆ. ನೀವು ಏನು ಹೇಳ್ತೀರಾ?**

-ಆದರ್ಶ ಅವರೇ, ಯಾರಾದರೂ ಕರೆ ಮಾಡಿದಾಗ, ಎಲ್ಲಾ ಸಂದರ್ಭಗಳಲ್ಲೂ ಅದನ್ನು ಸ್ವೀಕರಿಸಲು ಆಗುತ್ತದೆ ಎನ್ನಲಾಗುವುದಿಲ್ಲ. ಫೋನ್ ರಿಂಗ್ ಆದಾಗ ಆಚೆ ಕಡೆಯಲ್ಲಿರುವ ವ್ಯಕ್ತಿ ಸ್ನಾನ ಮಾಡುತ್ತಿದ್ದರೆ, ಸ್ವೀಕರಿಸಲು ಹೇಗೆ ತಾನೆ ಸಾಧ್ಯ. ಆದರೆ, ಕರೆಯನ್ನು ಸ್ವೀಕರಿಸಲಾಗದಿದ್ದರೆ, ಸ್ವಲ್ಪ ಹೊತ್ತಿನ ನಂತರ ಕಾಲ್ ರಿಟರ್ನ್ ಮಾಡಬೇಕು. ಇದು ಸೌಜನ್ಯ ಮತ್ತು ಉತ್ತಮ ನಡಾವಳಿ. ಅದರಲ್ಲೂ ನೀವು ಆರು ಸಲ ಕರೆ ಮಾಡಿದಾಗ, ನಿಮ್ಮ ಸ್ನೇಹಿತನಾದವನು ಕಾಲ್ ರಿಟರ್ನ್ ಮಾಡಲೇಬೇಕು. ಆರು ಸಲ ಕರೆ ಮಾಡಿದ್ದೇಕೆ ಎಂದು ವಿಚಾರಿಸುವ ಸೌಜನ್ಯವಿರಬೇಕು. ಆದರೆ ನೀವು ಸಾಲ ಕೇಳಲು ಅಷ್ಟು ಸಲ ಕರೆ ಮಾಡಿದ್ದೀರಿ ಅಥವಾ ಇಂದೇ ಸಾಲ ವಾಪಸ್ ಮಾಡು, ಇಲ್ಲದಿದ್ದರೆ ನೋಡ್ಕೋತೀನಿ ಎಂದು ಬೆದರಿಸಲು ಫೋನ್ ಮಾಡಿದ್ದೀರಿ ಎಂಬುದು ಸ್ನೇಹಿತನಿಗೆ ಗೊತ್ತಿದ್ದರೆ, ನೀವು ಆತನಿಗೆ ನೂರು ಸಲ ಕರೆ ಮಾಡಿದರೂ 'ಜಪ್ಪಯ್ಯ' ಎನ್ನುವುದಿಲ್ಲ. ಹೀಗಾಗಿ ಕರೆ ಮಾಡಿದ್ದರ ಹಿನ್ನೆಲೆ ಮುಖ್ಯವಾಗುತ್ತದೆ. ಈ ಯಾವ ಹಿನ್ನೆಲೆಯೂ ಇಲ್ಲದಿದ್ದಾಗ, ಆತ ಕಾಲ್ ರಿಟರ್ನ್ ಮಾಡದಿರುವುದು ಒಳ್ಳೆಯ ಲಕ್ಷಣವಲ್ಲ.

ಆದರ್ಶ್, ಇಷ್ಟಾಗಿಯೂ ಒಂದು ಮಾತು ಹೇಳುತ್ತೇನೆ. ಸ್ನೇಹಿತರ ಜತೆ ಇಂಥ ಸಣ್ಣ-ಪುಟ್ಟ ಕಾರಣಗಳಿಗೆ ಕ್ಯಾತೆ ತೆಗೆದು ಮಾತು ಬಿಡಬಾರದು. ಕರೆ ಸ್ವೀಕರಿಸಲಿಲ್ಲ ಎನ್ನುವುದೇ ವಿರಸಕ್ಕೆ ಕಾರಣವಾಗಬಾರದು.

ನನಗೊಬ್ಬ ಮೇಷ್ಟ್ರಿದ್ದರು. ಅವರು ಆಗಾಗ Not only the footwear, wear also the courtesy, respect, and gratitude in your heart while stepping out of home ಎಂದು ಹೇಳುತ್ತಿದ್ದರು. ಸಣ್ಣ ಸಂಗತಿಗಳು ನಮ್ಮ ಮನಸ್ಸಿನಲ್ಲಿ ದೊಡ್ಡದಾಗಲು ಬಿಡಬಾರದು. ಒಂದು ದಿನ ಬಿಟ್ಟು ನಿಮ್ಮ ಸ್ನೇಹಿತನಿಗೆ ಫೋನ್ ಮಾಡಿ, 'ನಿನ್ನೆ ಆರು ಸಲ ಕರೆ ಮಾಡಿದರೂ ನೀನು ಸ್ವೀಕರಿಸಲಿಲ್ಲ, ನಿನ್ನ ಆರೋಗ್ಯ ವಿಚಾರಿಸಲು ಕರೆ ಮಾಡಿದೆ. ಹೇಗಿದ್ದೀಯಾ? ಆರೋಗ್ಯ ಚೆನ್ನಾಗಿದೆಯಾ?' ಎಂದು ಕೇಳಿ. ಮುಂದೇನಾಯಿತು ಎಂದು ನನಗೆ ತಿಳಿಸಿ.